Kannada Journals

ಕನ್ನಡ ಪತ್ರಿಕೆಗಳು

1921 to
1930

ಬೆಂಗಳೂರು ಕರ್ನಾಟಕ ಭಕ್ತಮಂಡಲದ

ಸಂಪುಟ ೨ ರಾಧ್ರಿ

ಭಕ್ತಬಂಧು.

ಸಂಚಿಕೆ ೨ ಕಾರ್ತಿಕ.

Bibliothèque Nationale Kamanahalli
PRESENTED BY THE GOVERNMENT OF INDIA

ವಿಷಯ.			ಪುಟ.
ಶ್ರೀರಾಮಸ್ತೋತ್ರ	....	....	೧
ವೇದಾಂತವೇ ಗತಿ	....	....	೩
ಶಾಂತಿಯ ಸಾಧನ	....	...	೪
ಸಮಾಲೋಚನೆ	....	....	೧೨
ಧರ್ಮಪ್ರಸಂಗ	....	....	೧೪
ಪ್ರೇಮತರಂಗ	....	....	೧೬
ಕಾಲದೇಶಕಾರಣವಿಚಾರ		...	೧೭
ಧ್ರುವಾಖ್ಯಾನ (ಮುಂದೆನಾಗಿದೆ ಗ್ರಂಥ)			೫-೧೨
ರಾಸಕ್ರೀಡೆ (,,)			೫-೧೨

ಸಂಪಾದಕ:—ಚಿದಂಬರಯ್ಯ.

ಭಕ್ತಬಂಧುಕಾರ್ಯಾಲಯ, ಬೆಂಗಳೂರು ಸಿಟಿ.

ವಾರ್ಷಿಕ ವರ್ಗಣೆ ೨-೦-೦. ಒಂದು ಸಂಚಿಕೆಗೆ ೦-೪-೦

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಜೇಳುಗಳ ವಿಷಧ್ವಂಸಿನಿ

ಜೇಳು ಹೊಡೆದ ಸ್ಥಳದಲ್ಲಿ ಸರ್ವ ಜೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನಕೊಡುವೆವು. ಕ್ರಯ ಶೀಸೆ ೧ಕ್ಕೆ ೪ ಆಣೆ. ಡಜ್ ೧ಕ್ಕೆ ರೂ. ೫.

ವಿ. ಎ. ಎಸ್. ಪಾಣಿ ಅಂಡ್ ಕಂಪನಿ, ಸಾಹುಕಾರಪೇಟೆ, ಮದರಾಸು.





ಅಮೇರಿಕಾದೇಶದ ೪ ಮೂಲೆ ರೇಡಿಯಂ ರಿಸ್ಟ್‌ವಾಚ್

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆನೋಡಬೇಕಾದರೆ ಬೆಳಕುಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೇರಿಕಾದೇಶದ ಗಡಿಯಾರಗಳು ಬಹುದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾರಗಳಿಂದ ಬಹು ಬೇಗನೆಗಂಟೆಯನ್ನು ಗುರುತುಹಿಡಿಯಬಹುದು. ಕ್ರಯ ಸರಪಣಿಸಹಿತ ೮-೦-೦ ಸೀಮೆ ಚಕ್ಕಳದ ಪಟ್ಟಿ ಸಹಿತ ೭—೦—೦;

ರೌಂಡು ರೇಡಿಯಂ ರಿಸ್ಟ್ ವಾಚು.

ಕ್ರಯ ಸರಪಣಿಸಹಿತ ೭-೦-೦; ಸೀಮೆಚಕ್ಕಳದ ಪಟ್ಟಿಸಹಿತ ೬-೦-೦ ರೇಡಿಯಂ ಇಲ್ಲದ ಸಾದಾರಿಸ್ಟ್ ವಾಚು ೫-೦-೦, ಸರಪಣಿ ಸಹಿತ ೭-೮-೦.

ವಿಳಾಸ:—ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದ್ರಾಸು.

ಶ್ರೀಗುರುಭ್ಯೋ ನಮಃ.

ಭಕ್ತಬಂಧು

ಭಕ್ತಬಂಧುಶ್ಚಭಾವೇನ ಬೀಯಾತ್ಕರ್ಣಾಟನಾಡ್ಡಿಲಮ್
ಸ್ವಧರ್ಮ ದೀಕ ಧಾಸಾಗಾವಮುಧಿಮಾನೇನ ಭೂಯಸಾ ।

ಸಂಪುಟ ೨] ರೌದ್ರಿ—ಕಾರ್ತಿಕ [ಸಂಚಿಕೆ ೨.

ಶ್ರೀ ರಾ ಮ ಸ್ತೋ ತ್ರ.

ಕವಿ:-ಮಾ॥ ವಿ. ಸೀತಾರಾಮಶಾಸ್ತ್ರಿಗಳು.

ದರ್ಬಾರು. ಆದಿತಾಳ.

ಭಾಗ್ಯವನೆಂದಿಗೆ ಕೊಡುವೆ । ಯೋಗ್ಯನನೆಂದಿಗೆ ಗೈವೆ ॥ಪ॥ ಭಾಗ್ಯ ಗಳೊಳ್ಳೀಲಹ ಮೈ। ರಾಗ್ಯಭಕ್ತಿಗಳಿಂಬ ॥ ಅ. ಪ ॥ ಬೆಳಗಿನ ಸ್ನಾನವ ಮಾಡಿ ಬೆಳಗುವ ನಿನ್ನನು ಪಾಡಿ । ತುಲಸೀ ಹೂಗಳ ಕೂಡಿ । ನಲಿಯುತೆ ಪೂಜಿಸು ವಂಥ ॥ ೧ ॥ ನೆರೆ ತಂಬೂರಿಯ ನುಡಿಸಿ। ಕರದೊಳು ತಾಳವ ಧರಿಸಿ। ಪರಮ ಭಕ್ತರ ಬೆರಸಿ । ನಿರುತವು ಕೀರ್ತನೆ ಮಾಳ್ಪ ॥ ೨ ॥ ಸರ್ವಭೂತಂಗಳೊಳು ಸರ್ವೇಶ ನೀನಿರುತ । ಸರ್ವವಗ್ಯಸುವೆಯೆಂಬ ಮರ್ಮವನಾಂ ತಿಳಿ ॥ ೩ ॥ ಪ್ರೇಮಸಹೋದರರೆಂದು । ಕಾಮಕ್ರೋಧರ ಜರೆದು । ಸ್ವಾಮಿಯೆ ಮೋಕ್ಷವ ಹೊಂದೆ । ರಾಮನೆ ನೀ ಕೈಬಿಡದೆ ॥ ೪ ॥ ಶ್ರೀ ರಘುರಾಮನೆ ನಿನ್ನ । ಚಾರಿತ್ರಾಮೃತವನ್ನು । ಸಾರುತಲಾನಂದವನಾ ಸೂರೆಗೊಳ್ಳುವ ದಿವ್ಯ ॥ ೫ ॥

ಆಹ್ಲಾದಿನಿ.

ಇದು ಕೆಮ್ಮು ವಾಂತಿ ತಲೆಸುತ್ತುವುದು. ಅಜೀರ್ಣ. ವೋಕರಿಕೆ ಬಾಯಿ ದುರ್ಗಂಧ ಬಾಯಾರಿಕೆ ವಾಯುನೋವು ನೆಗಡಿ ಎದೆನೋವು ಪ್ಲೇಗು, ಕಾಲರಾ, ಇನ್‌ಫ್ಲೂಯೆಂಜಾ ಯೆಂಬ ಇವುಗಳಿಗೆ ಅತ್ಯುತ್ತಮವಾದ ಮಾತ್ರೆ.

೧೫	ಮಾತ್ರೆ ಪ್ಯಾಕೆಟ್ಟು	೧ಕ್ಕೆ	೦—೦—೬
೧೨೦	ಮಾತ್ರೆ ಸೀಪೆ	೧ಕ್ಕೆ	೦—೨—೦
೩೦೦	ಮಾತ್ರೆ ಸೀಪೆ	೧ಕ್ಕೆ	೦—೪—೦

ಅಡ್ರೆಸ್ಸು—**ಟಿ. ಯಲ್. ಯನ್. ಅಂಡ್ ಕಂಪೆನಿ,** ತಿಪಟೂರು.

'ಬಾಲಮಿತ್ರ'

ಈ ಮಾಸಪತ್ರಿಕೆಯಲ್ಲಿ ಬಾಲಬಾಲಿಕೆಯರನ್ನು ಮನರಂಜಿಸುವಂತೆಯೂ ಅವರನ್ನು ಸಹಜವಾಗಿಯೇ ಸನ್ಮಾರ್ಗಕ್ಕೆ ಹಚ್ಚುವಂತೆಯೂ ಸರಸವಾದ ಸುಲಲಿತ ಲೇಖನಗಳೂ ಯಾವತ್ತೂ ದೇಶಗಳಲ್ಲಿ ನಡೆದ ಬಾಲಬಾಲಿಕೆಯರ ವೃತ್ತಾಂತಗಳೂ ಅವರವರ ಆಯಾ ಪರಿಸ್ಥಿತಿಯ ಜೀವನ ಚರಿತ್ರಗಳೂ ಅವರು ಆಯಾಕಾಲದಲ್ಲಿ ಅವಲಂಬಿಸತಕ್ಕ ಸುದಪದೇಶಗಳೂ, ಅನುಕರಣೀಯವಾದಂಥ ಮಹಾತ್ಮರ ನಡೆನುಡಿಗಳೂ ಪ್ರಕಟಿಸಲ್ಪಡುವವು.

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ ೨—೦—೦.

ವ್ಯವಸ್ಥಾಪಕ. **ಬಾಲಮಿತ್ರ, ಹನುಮಾನಬೀದಿ ಬೆಳಗಾಂವಿ.**

ಬಿ. ಬಿ. ಡಿ. ಪವರ್ ಪ್ರೆಸ್‌ನಲ್ಲಿ ಮುದ್ರಿತವಾದುದು.

ಾಕಿ ಎಲ್ಲಾ ಮೆಂಬರುಗಳು ಚೇಳ್‌ಕಮಿಷನರವರಿಂದ (Nominate) ನೇಮಕಮಾಡಲ್ಪಟ್ಟವರು. ಹೀಗೆ ಏಳು ಜನರು ಮಾತ್ರ ಎಲ್ಲಾ ರೈತರ ಪ್ರತಿನಿಧಿಗಳಾಗಿಯೂ, ಬಾಕಿ ನಾಲ್ವರು ಜನ ಮೆಂಬರುಗಳು ಸರಕಾರದ ಪಕ್ಷವಾಗಿಯೂ, ಹೆಚ್ಚಿನ ಸೆಟ್ಲಮೆಂಟ್ ಆಫೀಸರರವರು ಸರಕಾರದ ಪಕ್ಷದಲ್ಲಿರುವುದ ರಿಂದಲೂ ಈ ಹನ್ನೆರಡು ಜನರು ಕಮಿಷನರವರ (ಪ್ರೆಸಿ ಡೆಂಟ್) ಕೈಬಿಗಿನ ಉದ್ಯೋಗಸ್ಥರಾದುದರಿಂದಲೂ, ಪ್ರಜಾಪಕ್ಷದವರ ಯಾವ ವರಾವೂ ನಡಿಯುವಂತಿಲ್ಲ. ಪ್ರೆಸಿಡೆಂಟರಾದ ಕಮಿಷನರವರು ತಮ್ಮ ಇಚ್ಛಾನುಸಾರ ಎಲ್ಲ ವನ್ನೂ (Dictate) ಮಾಡಿಯೇ ಮಾಡುತ್ತಾರೆ. ಎಲ್ಲಾ ವಿಷಯದಲ್ಲಿಯೂ ಖರ್ಚಿಗೆ ಹಣ ಮಂಜೂರಾ ಮಾಡುವುದು ಇವರ ಕೈಯಲ್ಲಿಯೇ ಇರುತ್ತೆ. ಎಲ್ಲಾ ಮೆಂಬರುಗಳು ಅವರು ಹೇಳಿದುದಕ್ಕೆಲ್ಲಾ ಸಮ್ಮತಿಸಿ ತಮ್ಮ ತಮ್ಮ ಪ್ರಯಾಣದ ಭತ್ಯವನ್ನು ಮಾತ್ರ ತಪ್ಪದೆ ಹೊಂದಿಕ್ಕೊಂಡು ಬರುವವರಾಗಿದ್ದಾರೆ

ಈ ವಿಷಯದಲ್ಲಿ ಸರಕಾರದವರನ್ನು ನಾವು ಯಾವ ಬಾಯಿನಲ್ಲಿಯೂ ದೂರಕೂಡದು. ಆಯಾಯ ತಾಲ್ಲೂಕಿಗೆ ನೇಮಕವಾದಂತ ಮೆಂಬರುಗಳು ಸದರಿ ಬೋರ್ಡಿನ ಕೆಲಸದಲ್ಲಿಯೂ, ಮಾಟಿಂಗಿನಲ್ಲಿಯೂ, ತಮ್ಮ ಯೋಗ್ಯತೆಯನ್ನು ಕಾರ್ಯನಿರ್ವಾಹಕ ಶಕ್ತಿಯನ್ನು ತೋರಿಸಿ ಡಿಸ್ಟ್ರಿಕ್ಟ್ ಬೋರ್ಡಿನ ವಿಷಯ ರೈತರಿಗೆ ಜೆನ್ನಾಗಿ ಶಿಕ್ಷಣಕೊಟ್ಟು, ಇದರ ಸಂಪೂರ್ಣ ಅಧಿಕಾರವನ್ನು ಪ್ರಜೆಗಳ ಪಕ್ಷದವರು, ಜನಾನಾಶೆಯಾಗಲ್ಪಟ್ಟ ಹೆಚ್ಚಿನ ಮೆಂಬರುಗಳ ಮೆಜಾರಿಟೀಯಿಂದ ನಡಿಸುವುದಕ್ಕೆ, ಅನುಕೂಲಮಾಡಿ ಕೊಡಬೇಕೆಂದು ಜಳವಳ ಎಬ್ಬಿಸಿದ್ದ ಪಕ್ಷದಲ್ಲಿ ಸರಕಾರದವರು ಇದನ್ನು ಕೊಡದೆ ಬಾಕಿ ಮಾಡುತ್ತಿರಲಿಲ್ಲ 1918 ನೇ ಇಸವಿಯಲ್ಲಿ ಇಂಡಿಯಾ ಸರಕಾರದಲ್ಲಿ ವರಾವು ಆದರೀತಿ ಎಲ್ಲಾ ದೇಶಗಳಿಗೂ ಸ್ಥಳೀಕಸ್ವರಾಜ್ಯವನ್ನು ನಡಿಸುವ ಹಕ್ಕು ದೊರೆತಿರುವಾಗ ನಮ್ಮ ದೇಶದವರು ನಾಲ್ಕೈದು ವರ್ಷದಿಂದೀಚೆಗೆ ಕೊಡಗು ಜಮಾನುದಾರರ ಸಂಘದವರ ಮೂಲಕ ಈ ಅಧಿಕಾರವನ್ನು ಕೊಡಬೇಕೆಂತ ಕೇಳಿದರೂ ನಮಗೆ ಕೊಡಲಿಲ್ಲ.

ಇಂಚಿಗೆ ಕಳೆದ ಜನವರಿ ತಿಂಗಳಲ್ಲಿ ಚೇಳ್‌ಕಮಿಷನರ್ ಮೆ|| ಬಾರ್ಟನ್ ಸಾಹೇಬರವರಲ್ಲಿ ಡೆಪ್ಯುಟೇಷನ್ ಹೋದ ಜಮಾನು ಸಂಘದ ಪ್ರತಿನಿಧಿಗಳು ಬಡಜನರಿಗೆ ಡಿಸ್ಟ್ರಿಕ್ಟ್ [illegible] ಬಾಗಲಾರದು.

ನಮ್ಮ ಡಿಸ್ಟ್ರಿಕ್ಟ್‌ಬೋ [illegible] ಅಭಿವೃದ್ಧಿಯಾಗಬೇಕಾ [illegible] ದರೆ ಸರಕಾರದವರು ಇಂಪೀ [illegible] ಲ್ ಘಂಡಿನಿಂದ ಮೇಲೆ ನಮೂದಿಸಿರುವ ಎರಡು ಖ [illegible] ಗಳನ್ನು ಮಾಡಬೇಕು. ಈ ವಿಷಯ ಪ್ರತಿ ಸೆಸ್‌ತೆಗುವ [illegible] ಊರು ತನ್ನ ಊರು, ನಾಡು ತಾಲ್ಲೂಕುಗಳಲ್ಲಿ ಮಾಟಿಂಗ್ [illegible] ಮಾಡಿ ಡಿಸ್ಟ್ರಿಕ್ಟ್‌ಬೋರ್ಡು ಎನೆಂದು ತಿಳಿಯದವರಿಗೆ ತಿಳಿಯುವವರು ಶಿಕ್ಷಣಕೊಟ್ಟು ಮಾಟಿಂಗಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡಿನ ಸಂಪೂರ್ಣ ಅಧಿಕಾರವನ್ನು ಪ್ರಜಾಪಕ್ಷದ ಪ್ರೆಸಿಡೆಂಟರಿಗೂ ಜುನಾಯಿಸಲ್ಪಟ್ಟ ಪ್ರಜೆಯ ಪ್ರತಿನಿಧಿಗಳ ಮೆಜಾರಿಟೀಗೂ ಕೊಡುವಂತೆಯೂ, ಸರಕಾರದಿಂದ ಪ್ರತಿವರ್ಷವೂ ಐವತ್ತುಸಾವಿರ ರೂಪಾಯಿಗೆ ಕಮ್ಮಿ ಇಲ್ಲದ ಗ್ರ್ಯಾಂಟನ್ನು ಕೊಡುವ ಹಾಗೆ ವರಾವು ಮಾಡಿ ನ್ಯಾಯವಾದ ರೀತಿಯಲ್ಲಿ ಮುಂದರಿಸಬೇಕಾದುದು ಸೆಸ್‌ತೆರುವ ಜನರ ಕರ್ತವ್ಯ.

1919—1920 ರ ಕೊಡಗು ಅಡ್‌ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಕೊಟ್ಟಿರುವ ಜಮಾ ಖರ್ಚನ್ನು ಎಲ್ಲರ ತಿಳುವಳಿಕೆಗೆ ಈ ಕೆಳಗೆ ಕಾಣಿಸಿರುತ್ತೆ. ಅದನ್ನು ಎಲ್ಲರೂ ಓದಿ ಜಮಾ ಮತ್ತು ಖರ್ಚು ಹೇಗೆ, ಎಷ್ಟು, ಎಂಬುದನ್ನು ತಿಳಿಯಬೇಕಾಗಿ ಕೋರಿಕೆ.

1919—1920

ಜಮಾ

	ರೂ.	ಆ.	ಪೈ.
ಕಳೆದ ವರ್ಷದ ಸಿಲುಕು ಬಾಕಿ	11301	0	0
ಮನೆಹಣ ತೆರಿಗೆಯಿಂದ	7216	0	0
ಸೆಸ್‌ರೂಪದಲ್ಲಿ ವಸೂಲಾಗುವ ಹಣ	31973	0	0
ಸರಕಾರದಲ್ಲಿರುವ ಹಣದ ಬಡ್ಡಿ	298	0	0
ದೊಡ್ಡಿಯ ಜಾಬ್ತು	5030	0	0
ಪ್ರೈಮರೀ ಸ್ಕೂಲ್ ಫೀಜು	3136	0	0
ಸರಕಾರದ ಮತ್ತು ಇತರ ಗ್ರ್ಯಾಂಟು	12721	0	0
ಆಸ್ಪತ್ರೆಯಿಂದ ಹುಟ್ಟುವಳಿ	2604	0	0
ಮಾರ್ಕಟ್ಟಿನ ಸುಂಕ	3588	0	0
ಕಸ್ಸೆ ದೋಣಿ ಸುಂಕಗಳು	21366	0	0

ದಿಂದ [illegible] ಫಲವತ್ತಿನಿಂದ ಸಾಲ್ಜ [illegible] ಮಾದ ಪಸ್ತಾಮಲಕದಂತೆ ಸ್ಥಿರಚಿತ್ತ್ಯದಿಂದಡಗಿರುವ ಚಕ್ಕೆ ಈ ರಾಷ್ಟ್ರವು ಧಾರ್ಮಿಕಸಂಸ್ಥಾಪನೆಯ ಮೂಲಸ್ಥಾನವಾಗಿರುವ ಈ ದೇಶದ ಜನರು ತಮ್ಮೊಳಗೆ ಎಷ್ಟು ವೈಷಮ್ಯವಿದ್ದರೂ ಒಗ್ಗಟ್ಟಿನ ವಿಷಯದಲ್ಲಿ ತುಂಬಾ ಅನುರಾಗವುಳ್ಳವರು. "ದೇಶದ ಏಳಿಗೆಗೆ" ಎಂಬ ಸುದ್ದಿ ಕಿವಿಯಲ್ಲಿ ಬಿದ್ದಕೂಡಲೆ ಯಾವ ಸಭೆಗಾದರು ಆಬಾಲವೃದ್ಧರಾದಿಯಾಗಿ ಹೋಗಿ ಉಪನ್ಯಾಸಕರು ಅನುವರ್ತಿಸುವ ಸಾತ್ವಿಕರಾಗಿರುವ ನಮ್ಮ ದೇಶಬಾಂಧವರನ್ನು ಈ ದುರ್ಮತಿ ಸಂವತ್ಸರದ ವರ್ಷಫಲವೋ, ಆಗಮಕಾರ್ಯವೋ ಎಂಬಂತೆ ಒಂದುಕಡೆ ಸ್ವರಾಜ್ಯಸಭೆ ಇನ್ನೊಂದುಕಡೆ ಕೊಡಗು ಮುಸ್ಲಿಂ ಮದರಾಸು ಒಂದುಸೇರಿಸುವ (ಅಮಾಲ್ಗಮೇಷನ್) ಸಭೆ ಇತ್ಯಾದಿಗಳಿಂದ ಒನರು ಕೋಲಾಹಲಾನ್ವಿತರಾಗಿ ಇದೆಲ್ಲಾ ನಮಗೆ ಒಳ್ಳೆದೆಂದೇ ನಂಬಿ ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟಿರುವ ಸಭೆ ಸಿಕ್ಕರಿದ್ದರೆ (ಅಮಾಲ್ಗಮೇಷನ್) ಕೊಡಗು ಮತ್ತು ಮದರಾಸು ಒಂದುಮಾಡಬಹುದೆಂದು ಅಧಿಕಪ್ರಾಯ ಕೊಟ್ಟಿರುವದಾಗಿ ತಿಳಿಯುತ್ತೇನೆ. "ಕಬ್ಬಿನಮೇಲೆ ಜೇನುಕಟ್ಟಿತು" ಎಂಬ ಗಾದೆಯಂತೆ ಸ್ವತಂತ್ರ ಕಳಚಲಿಕ್ಕೆ ಮೂಲವಾದ ಈ ಜಳವಳಿಕೆಯಿಂದ ಎಲ್ಲಾ ಭಾಗದಲ್ಲಿಯೂ ಕೊಡಗು ದೇಶದ ಜನಾಂಗಗಳಿಗೆ ತುಂಬಾ ವ್ಯಾಕುಲವನ್ನುಂಟುಮಾಡದೆ ಇರಲಾರದು.

ಯಾವ ವಸ್ತುವಿಗೆ ಇನ್ನೊಂದು ವಸ್ತು ಸಮ್ಮಿಳಿತವಾಯಿತೋ ಪ್ರಾಬಲ್ಯದ ಭ್ರಾಂತಿಹೊಂದುವದೇ ತಿವಾಯಿ ಸ್ವಶಕ್ತಿ ನಾಲದೆಂಬದು ಸರ್ವರಿಗೂ ಗೊತ್ತಿರುವ ಅಂಶವಾಗಿದೆ ಸಮುದ್ರಕ್ಕೆ ಬಹಳ ನದಿಗಳು ಸೇರಿದಾಗ್ಯೂ ಸಮುದ್ರದಲ್ಲಿ ಆ ನದಿಗಳು ಹ್ಯಾಗೆ ವಿಗಡಿಸಕೂಡದೆ ಸಮುದ್ರದ ಗುಣ ಹೊಂದುತ್ತವೆಯೋ ತದ್ರೀತಿ ನಮ್ಮ ಗುಣಾವುಗುಣಗಳಿಗೆ ಪಾರವೇ ಇಲ್ಲದಂತಾಗುವದು. "ತೋಡುದಾಟದವ ಹೊಳೆ ದಾಟಿಯಾನೇ" ಎಂಬಂತೆ ಚಿಕ್ಕ ಮನೆ ಶುಚಿ ಮಾಡದವನು ಅರಮನೆ ಶುಚಿ ಮಾಡಿಯಾನೇ. "ಪಾಪ ಸಮುದ್ರಕ್ಕೆ ಹೋದರೆ ಹೊಳಕಾಯುದ್ದ ನೀರು" ಎಂಬಂತೆ ನಮ್ಮ ಅತ್ಯಲ್ಪಬಲವಿಲ್ಲದೆ ಎಲ್ಲಿಹೋದೆವೂ ಏನುಮಾಡಿದರೂ ಪರಿಶುದ್ಧರಾಗುವೆವಿಲ್ಲ. "ಜೋಸ ವೈದ್ಯನಿಗಿಂತ ಚೆನ್ನಾಗಿ ರೋಗವಾಸ್ತು ಮತ್ತು ಜೆಡಿಕತಿಯಲ್ಲಿ ಜಾಣ ಗುಂಡೆ ಬಿಗಿದ" ಎಂಬಂತೆ ಜನರ ಹೇಳಿಕೆಗೆ ಮಾಡಿದಬ್ಬರಿ. ನಮ್ಮ ಬಲ [illegible] ಕೂಲಗಬೇಕಾದರೆ ನಾವು ಯಾವ ಸಮು ಉತ್ಪತ್ತಿ

ಕೊಡಗು.

ಸತ್ಯೇನ ಭೂಮಿರ್ಜಯತೆ ಯಮೂ ವಿದ್ಯಾನೀತಿಪ್ರಯತ್ನತಃ । ಧರ್ಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿಶನಿವಾರವೂ ಪಾತ್ಯಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸರ್ ೧೯೨೧ ನೇ ಇಸವಿ ಜೂನ್ ತಾರೀಖು ೧೧ ನೆಯ ಶುಕ್ರವಾರ [ಸಂಖ್ಯೆ ೨

"ಕೊಡಗು"

೧೯೨೧ ನೇ ಇಸವಿ ಜೂನ್ ತಾ|| ೧೦ ನೇ ಶುಕ್ರವಾರ

ಕೊಡಗು ಡಿಸ್ಟ್ರಿಕ್ಟ್ ಬೋರ್ಡು.

ಕೊಡಗಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡು 1900 ನೇ ಇಸವಿಯಲ್ಲಿ ಇಂಡಿಯಾ ಸರಕಾರದ ನ್ಯಾಯನಿರ್ಣಾಣಕ ಡಿಪಾರ್ಟ್‌ಮೆಂಟಿನ ನೋಟಿಫಿಕೇಶನ್ ಪ್ರಕಾರ ರೆಗ್ಯುಲೇಷನ್ ಸ್ಥಾಪಿಸಲ್ಪಟ್ಟಿತು.

ಡಿಸ್ಟ್ರಿಕ್ಟ್‌ಬೋರ್ಡು ಕೀಳ ಕಮಿಷನರರಿಮುಂದ ನಾಮಕರ್ಷಣೆಯಿಟ್ಟ ಒಬ್ಬ ಯೂರೋಪಿಯನ್ ಪ್ರೆಸಿಡೆಂಟರಿಂದಲೂ ಹನ್ನೆರಡು ಜನರು ಸರಕಾರದ ಬೇರೆ ಬೇರೆ ಇಲಾಖೆಯ ಗವರ್ನ್‌ಮೆಂಟ್ ಆಫೀಸರ್ಸ್‌ಗಳಿಂದಲೂ ಪ್ರೈವೇಟರ ಪ್ರತಿನಿಧಿಗಳೆಂದೆನ್ನಿಸಿಕೊಳ್ಳುವ ಎಳು ಮೆಂಬರುಗಳಿಂದಲೂ ನಡಿಸಲ್ಪಡುತ್ತೆ.

ಹೀಗೆ ನಮೂದಿಸಿರುವ ಮೆಂಬರುಗಳಲ್ಲಿ ಇಬ್ಬರು ವುದು ಯಾವಾಗ? ಡಿಸ್ಟ್ರಿಕ್ಟ್‌ಬೋರ್ಡಿನ ಅಧಿಕಾರವು ಯಾವಾಗ ಲಭಿಸುವುದೆಂಬ ಸಂಗತಿ, ಇನ್ನು ಕೆಲವು ದಿನ ನೋಡಿ ಆಮೇಲೆ ಹೇಳಬೇಕಾಗಿದೆ.

ನಮ್ಮ ದೇಶದ ಡಿಸ್ಟ್ರಿಕ್ಟ್‌ಬೋರ್ಡು ಬಹಳ ಬಡಸ್ಥಿತಿಯಲ್ಲಿದೆ ಉತ್ಪತ್ತಿಯು ಬಹಳ ಕಮ್ಮಿ, ಖರ್ಚು ಜಾಸ್ತಿ. ಸರಕಾರದವರು ಕನಿಷ್ಠಪಕ್ಷ ಡಿಸ್ಟ್ರಿಕ್ಟ್‌ಪಂಡು ಸ್ಕೂಲ್‌ಗಳಿಗೂ ಆಸ್ಪತ್ರೆಗಳಿಗೂ ಖರ್ಚಾಗುವ ಪಣವನ್ನು (ರಿಕರಿಂಗ್ ಗ್ರಾಂಟ್) ಪ್ರತಿ ವರ್ಷವೂ ಕೊಡಲ್ಪಡುವ ಗ್ರಾಂಟ್‌ಕೊಡುವದಲ್ಲಿ ಕೊಡುವ ಏರ್ಪಾಡನ್ನು ಮಾಡಿದ ಹೊರ್ತು ಡಿಸ್ಟ್ರಿಕ್ಟ್‌ಬೋರ್ಡು ಅಭಿವೃದ್ಧಿಯಾಗುವುದು ಕಷ್ಟ. ಅಥವಾ ಈ ಎರಡು ಬಾಬಿನ ಖರ್ಚುಗಳನ್ನು ಇಂಪೀರಿಯಲ್ ಫಂಡಿಗೆ ತೆಗೆದುಕ್ಕೊಂಡು ಅದರಿಂದಲೇ ನಡಿಸಿಕ್ಕೊಂಡ ಪಕ್ಷದಲ್ಲಿ ಇನ್ನೂ ಉತ್ತಮವಾಗಿರುತ್ತೆ. ಹೀಗಾದರೆ ನಮ್ಮ ದೇಶದಲ್ಲಿನ ಒಳ ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿ ದುರುಸ್ತುಮಾಡಿ, ಪ್ರಯಾಣಿಕರಿಗೂ ಮತ್ತು ಗಾಡಿ ವಗೈರೆ ಪ್ರತಿ ಮೂಲೆಗೂ ಬರಲಿಕ್ಕೆ ಅನುಕೂಲವಾಗಿ, ನಾವು ಬೆಳೆಸುವ ಎಲ್ಲಾ ಪದಾರ್ಥಗಳಿಗೆ ತಕ್ಕುದಾದ ಬೆಲೆ ದೊರೆತು, ಬಡ ರೈತರ ಸ್ಥಿತಿಯು ಅಭಿವೃದ್ಧಿಯಾಗುವಲ್ಲು ಸಂಶಯವಿಲ್ಲ. ಹಣಸಾಲದವರಿಂದ್ದ ಪುನಃ ಸಸ್ಯಹಾಕುವುದು ಕೊಡಗಿನವರಿಗೆ ಹಿತವಲ್ಲ. ಯಾವಂದರ ಸೆಸ್ ಹೇಗೂ ರೂಪಾಯಿಗಿಂತ ಮಿಗಕೂಡದು. ಇಂಥಾದ್ದರಲ್ಲಿ ಜಮೆ ಬಳಿದ್ದಲ್ಲಾ ಎರಡಾ ಕೆಯಂತೆಯೂ [illegible]

ಖರ್ಚು

ಆಫೀಸು ಸಿಬ್ಬಂದಿ ಇತ್ಯಾದಿ	2000	0	0
ರೊಡ್ಡಿ ಖರ್ಚು	1457	0	0
ಪ್ರೈಮರೀ ವಿದ್ಯಾಭ್ಯಾಸದ ಖರ್ಚು	3247	0	0
ಆಸ್ಪತ್ರೆಗೆ ಖರ್ಚು	18381	0	0
ಬೇರೆ ಖರ್ಚುಗಳು	2471	0	0
ಕಟ್ಟಡ ರಿಪೇರಿ ವಗೈರೆ	2130	0	0
ರಸ್ತೆ ರಿಪೇರಿ ಮತ್ತು ಇದಕ್ಕೆ ಸಂಬಂಧಪಡುವ ಖರ್ಚು	28482	0	0
ಜುಮ್ಲಾ	87394	0	0
ಖರ್ಚು ಕಳೆದು ಜಾಸ್ತಿ ಬಾಕಿ	18839	0	0
ಡಿವಾಜಿಟ್ಟು	7000	0	0
ಜುಮ್ಲಾ ಬಾಕಿ	25839	0	0

ಆನಂದಚಂದ್ರಿಕೆ.
ಸಂಪುಟ ೮. ಸಂಚಿಕೆ ೩. (1924 ಮಾರ್ಚಿ.)

ಓಮ್!

ಶ್ರೀರಾಮಚಂದ್ರಪರಬ್ರಹ್ಮಣೇನಮಃ

ರಾಮಕೋಟಿ

ಮೂರನೆಯ ಸಂಚಿಕೆ

ಶ್ರೀರಾಮಭಕ್ತಿ ಸಾಮ್ರಾಜ್ಯವು

ಶ್ಲೋ॥ ಮಂದಸ್ಮಿತ ಮುಖಾಂಭೋಜಂ, ರತ್ನಾಲಂಕೃತ ವಕ್ಷಸಂ।
ವಂದಾರುಜನಮಂದಾರಂ, ವಂದೇಹಂ ರಘುನಂದನಂ॥

ಗ್ರಂಥಕರ್ತ ಮತ್ತು ಪ್ರಕಾಶಕ:
ಪರಿವ್ರಾಜಿಕ ಕಾ. ಶಿವರಾಮದಾಸ್.

ಪ್ರಕಾಶ:—ರಾಮಕೋಟಿ (ಆನಂದಚಂದ್ರಿಕಾ ಆಫೀಸ್),
ಹೊಸೂರು (ಶೇಲಂ ಜಿಲ್ಲಾ).
Address:—**Ramakoti, (Ananda Chandrika Office)**
P.O. Hosur (Salem Dt. India).

(All Rights Reserved)

REGISTERd NO. M. 1259.

ಶ್ರೀಃ

ಶ್ರೀಮತ್

ಮಧ್ವಸಿದ್ಧಾಂತ ಪ್ರಕಾಶಿನೀ

ಮಾಸಪತ್ರಿಕೆ

ಸಂಪುಟ ೫.] ಮೇ—೧೯೦೧. [ಸಂಚಿಕೆ ೫.

ದುರ್ಮತಿ—ವೈಶಾಖ ಮಾಸ.

ಮೈಸೂರು

ಶ್ರೀ ಜಯಾಲಯ ಯಂತ್ರದಲ್ಲಿ

ಎಡಿಟರಾದ ವಿ॥ ರಾ॥ ಎಚ್. ನರಸಿಂಗರಾಯರಿಗೋಸ್ಕರ

ಮುದ್ರಿಸಲ್ಪಟ್ಟತು.

WORLD NEWS
Shimoga Dist, K
ವಿಜಯವಾಹಿನಿ---ಕರ್ನಾಟಕ ಪ್ರ

ಏಳು ದಿನಸದ ನೋಟೀಸು.

ಮಹಾತ್ಮರು ಸ್ಥಾಯಿಸರಾಯರಿಗೆ ಬರೆದ ಪತ್ರವು.

ಮುಂಬಯಿ ಶಾಸನಸಭೆಯ ಸುರತ ಜಿಲ್ಲಾ ಬೋರ್ಡೋಲಿಯು ಬಂದು ತಾಲೂಕಿನ ಇರುಸ್ತದೆ ಅಲ್ಲಿ ಲಜಾಂಯ ಜನವಸ್ತಿಯು ಇರುತ್ತದೆ ಕ್ಯಾ॥ ಶಿನೇ ಜನೇಪರಿ ದಿಪಸ್ರ ಶ್ರೀ ವಿಠ್ಠಭಾಯಿ ಪಟೇಲ ಇವರ ಅಧ್ಯಕ್ಷತೆಯ ಕೆಳಗೆ ಕೂಡಿದ ಸಭೆಯಲ್ಲಿ ಸಾಮುದಾಯಕ ಕಾಯಿದೆ ಭಂಗವನ್ನು ಪ್ರಾರಂಭಿಸಬೇಕೆಂದು ಗೊತ್ತು ಮಾಡಿಸುತ್ತಾರೆ ಸೋದ ನವಂಬರಪಲ್ಲಿ ಕೂಡಿದ್ದ ಅಖಿಲಭಾರತ ಕಾಂಗ್ರೆಸ ಕಮಿಟಿಯು ಹೇಳಿದ ಎಲ್ಲ ಕಾರುಗಳನ್ನು ಬರಡೋಲಿಯು ಪಾಲಿಸಿ ಕಾಯಿದೆ ಭಂಗವನ್ನು ಪ್ರಾರಂಭಿಸಲಿಕ್ಕೆ ಯೋಗ್ಯವಾಗಿರುತ್ತದೆ. ಬರಡೋಲಿಯು ಈ ಪ್ರಕಾರ ನಿಶ್ಚಯಮಾಡಲಿಕ್ಕೆ ಮುಖ್ಯ ಕಾರಣನಿರುವದರಿಂದ ಯಾವ ಪರಿಸ್ಥಿತಿಯಲ್ಲಿ ಈ ನಿಶ್ಚಯವು ಮಾಡಲ್ಪಟ್ಟಿತ್ತೆಂಬವನ್ನು ಜನರಿಗೂ ನಿಮಗೂ ತಿಳಿಸಿಹೇಳುವದು ನನ್ನ ಕರ್ತವ್ಯವಿರುತ್ತದೆ.

ಖಿಲಾಫತ, ಪಂಜಾಬು, ಮತ್ತು ಸ್ವರಾಜ್ಯ ಪ್ರಕರ್ಣಗಳ ವಿಷಯವಾಗಿ ಹಿಂದೀ ರಾತ್ರಿ ಪ್ರತೋರಿಸಿದ ಧೃಢನಿಶ್ಚಯ ಮಹತ್ವನನ್ನು ಈ ಪರೆಗೂ ಸರಕಾರದವರು ಕಂಡುಹಿಡಿಯಲಿಲ್ಲಿ. ಸರಕಾರದವರು ಮಾಡಿದ ಅನ್ಯಾಯದ ಸಲು ವಾಗಿ ಅವರನ್ನು ಪ್ರಾಯುಶ್ಚಿತ್ತ ತೆಗೆದುಕೊಳ್ಳಲಿಕ್ಕೆ ಹಚ್ಚಿದ್ದರ ದೆಶೆಸೆಯಿಂದ ಶಾಂತತೆಯು ಬಂಡಾಯವನ್ನು ಓರಡೋಲಿಯಲ್ಲಿ ಪ್ರಾ [illegible] ಗೊತ್ತುಮಾಡಲ್ಪಟ್ಟಿರುತ್ತ ದಿಂದ ನವಂಬರ ತಿಂಗಳ ಗೆಯಾವದ್ದರಿಂದ ಈವರೆ [illegible] ರದ ಸಮ್ಮತಿ ಯಸ್ತ್ಯಾಗ ಓಹಾ ದ, ಓರಿ ಅಕ್ಕಿಯು ಗು ರು ಸೂಡಿರು ಸರ ಕೃತಿಗಳ ವರು ಹೇಳಿದ ಕಾರುಗಳನ್ನು ಪಾಲಿಸಲಿಕ್ಕೆ ಪರ್ಕಿಂಗ ಕಮಿಟಿಯವರಿಗೆ ಹೇಳಿಕೊಂಡಿನು. ಮಹಾಲವೀಯ ಪರಿಷತ್ತಿನವರು ಹಾಕಿದ ಒಪ್ಪಂದ ಕಾರುಗಳಿಗೂ ನೀವು ಕಲಕತ್ತಾ ಮತ್ತು ಇತರ ಸ್ಥಳಪಳಿಗೆ ಆಡಿದ ತೋರಿಸಿದ ಕರಾರಗಳಿಗೂ ಏನೂ ಭೇದನಿರುವದಿಲ್ಲವೆಂದು ನನ್ನ ಮನಶವಿರುತ್ತದೆ ಇಷ್ಟಾದರೂ ನೀವು ಪರಿಷತ್ತಿನ ಸೂಚನೆಯನ್ನು ನಿರಾಕರಿಸಿದರಿ.

ಸರಕಾರದ ಧೋರಣವು

ಸಾಫ ಸ್ವಾತಂತ್ರ್ಯ, ಭಾಷಣಸ್ವಾತಂತ್ರ್ಯ ಮುದ್ರಣ ಸ್ವಾತಂತ್ರ್ಯ ಮುಂತಾದ ಹಕ್ಕುಗಳಿಗೆ ದಾಳಿಬಂದಾಗ ಕಾಯದೆಭಂಗದ ಹೊರತು ಎರಡನೇ ಉಪಾಯವಿಲ್ಲ. ಅಸಹಕಾರ ಚಳವಳಿಯು ಶಾಂತತಾಮಯವಿರುವತನಕ ಅದಕ್ಕೆ ಕೈ ಹಚ್ಚುವದಿಲ್ಲವೆಂದು ನೀವು ವಚನ ಕೊಟ್ಟಿದ್ದಿರಿ. ಆಕರೆ ಆ ಧೋರಣವನ್ನು ಈಗ ನೀವು ಬಿಟ್ಟಿರುತ್ತೀರೆಂದು ಈಗ ದೇಶದಲ್ಲಿ ನಡೆವ ಸಂಗತಿಯೆ ಮೇಲಿಂದ ಗೊತ್ತಾಗುತ್ತದೆ ಸರಕಾರದವರು ತಪ್ಪಸ್ಥ ವೃತ್ತಿಯನ್ನು ಧಾರಣ ಮಾಡಿದರೆ ದೇಶದಲ್ಲಿ ಅನಶ್ಯಾಚಾರಮಯವಾಗುವತನಕ ಸಾಮುದಾಯಕ ಕಾಯಿದೆ ಭಂಗವನ್ನು ಮುಂದೆ ಹಾಕುವದರಲ್ಲಿ ಬರುವದು. ಆದರೆ ದುರ್ದೈವದಿಂದ ಅಪೂರ್ವ ದಡಪಶಾಹಿಯನ್ನು ದೇಶದಲ್ಲಿ ಪ್ರಾರಂಭಿಸಿದ್ದರಿಂದ ಸಾಮುದಾಯಕ ಕಾಯಿದೇಭಂಗವನ್ನು ಮಾಡುವದು ನಮ್ಮ ಕರ್ತವ್ಯವಾಗಿದೆ ಸತ್ಯಕ್ಕೆ ಬರಡೋಲಿಯಲ್ಲಿಷ್ಟೇ ಕಾಯಿದೆ ಭಂಗವನ್ನು ಪ್ರಾರಂಭಿಸಬೇಕೆಂದು ಗೊತ್ತಾಗಿರುತ್ತದೆ ಗುಂತಾ ಚಿಲ್ಲೆಯಲ್ಲಿರು ಕೆಲವ್ಯ ಹಳ್ಳಿಸ್ಥರು ಅಸ್ಪೃಶ್ಯತಾ ನಿವಾರಣ, ಶಾಂತಿವ್ಯವಸ್ಥೆ ಮುಂತಾದ ಕಾರುಗಳನ್ನು ಪಾಲಿಸುವಂತೆ ನಿಮ್ಮನ್ನು ಅವ್ಯಕಾಯಿದೆ ಭಂಗವನ್ನು ಪ್ರಾರಂಭಿಸಲಿಕ್ಕೆ ಕಾಯುತ್ತೇನೆ.

ಒಂದೇ ಕಲಕತ್ತಾ ಮಾತ್ರ ಕಾಯಿದೆ ಭಂಗವನ್ನು ಪ್ರಾರಂಭಿಸಲಿಕ್ಕೆ [illegible] ಆಂಗ ಮತತಿಯನ್ನೇ ಸ್ವೀಕರಿಸಿದ್ದರಿಂದ ಎಲ್ಲಾ ಕಾರ್ಯಗಳು ಬಾಕಿ ಹೋಲ್ಟರು. ಪ್ರಜಾಪ್ರತಿನಿಧಿಗಳಿಗೆ ಆ ನಂತರ

ಮಿಯು ವಿಹಿತವಾದ್ದೆಲ್ಲವನ್ನೂ ಸಲ್ಲಿಸಲು ಲಭ್ಯವಾಗುವುದು.

ಉಪಾಯ.

ಆದ್ದರಿಂದ ಹೆಂಗಸರಾಗಲೀ ಅಥವಾ ಗಂಡಸರಾಗಲೀ ಸ್ವಯಂ ಸೇವಕರಾಗುವದಿದ್ದರೆ ಈ ಕೆಳಗಿನ ವಿಷಯಗಳಲ್ಲಿ ತಮ್ಮ ಸ್ವಂತ ಪರೀಕ್ಷೆಯನ್ನು ಮಾಡಿಕೊಳ್ಳತಕ್ಕದ್ದು.

೧ ಪ್ರತಿಯೊಬ್ಬನು ದಿನಾಲು ಬೆಳಿಗ್ಗೆ ಬೇಗ ಎದ್ದು ಪ್ರಾರ್ಥನೆ ಮಾಡಿ ತಮ್ಮ ಶಾರೀರಿಕ ಸ್ಥಿತಿಯನ್ನು ಸುಧಾರಿಸುವದಕ್ಕೆಷ್ಟರ ವಾಯುಸೇವನವನ್ನು ಮಾಡತಕ್ಕದ್ದು.

೨ ಪ್ರತಿಯೊಬ್ಬನು ಕೈನೂಲಿನ ಅರಿವೆಯನ್ನು ಉಪಯೋಗಿಸಬೇಕು. ಮತ್ತು ಅವನ್ನು ಸ್ವದೇಶೀ ಉತ್ಪನ್ನಗಳನ್ನೇ ಉಪಯೋಗಿಸಬೇಕು. ನೂಲು ಬಿಚ್ಚುವದಕ್ಕೆ ಅವರಿಗೆ ಅವಶ್ಯವಾಗಿ ಬರಲಿಕ್ಕೆ ಬೇಕು. ಮತ್ತು ಇತರರಲ್ಲಿಯೂ ಪ್ರಚಾರ ಮಾಡಬೇಕು.

೩ ಹಿಂದುಸ್ತಾನದ ಮತ್ತು ಬ್ರಿಟಿಷ್ (ಆಂ) ನ ಭೂಗೋಳ ಇತಿಹಾಸವನ್ನು ಅವರಿಗೆ ಗೊತ್ತಿರಲಿಕ್ಕೆ ಬೇಕು.

ಇಮ್ಮ,
ನಾ. ಸುಬ್ಬಾರ್ಕರ.

ವಿಜಾಪೂರ.

ಗಣ್ಯ, ಗೈರ್‌ಕಾಯಿದೇಶೀರ ಅತಂಕ ಮೊದಲಾದ ಅಪರಾಧದ ಮೇಲಿಂದ್ದು ನಡೆದ ಖಟ್ಲೆಯಲ್ಲಿ ಮೊನ್ನೆ ೩ನೇ ತಾರೀಖಿನ ದಿವಸ ಶ್ರೀ. ಜಯರಾವ ಇವರಿಗೆ ೩ ವರುಷಗೆಡೆಯಾಯಿತು. ಆರೆ ಶ್ರೀ. ಮಲ್ಲಪ್ಪರಾವ ಕೆಂಭಾವಿ ವೆಂಕಟೇಶ ಶ್ರೀನಿವಾಸಕೌಜಲಗಿ, ಬಾಜೀರಾವ ಗೋಪಬಿಂಡಿ ಮೊದಲಾದ ೧೫ ಮಂದಿ ವೇಲೆ ಮ್ಯಾಜಿಸ್ಟ್ರೇಟರು ಖುಲಾಸು ಮಾಡಿದರು. ಶ್ರೀ. ಜಯರಾಯರನ್ನು ಬಿಡುಗಡೆ ಮಾಡಿಸಲಿಕ್ಕೆ ಹೈಕೋರ್ಟಿನಲ್ಲಿ ಕೋಲಿಸರು ತಂದ ಪುರಾವೆಯು ಒಗ್ಗೆ ಅನುಕೂಲ ಇಲ್ಲವೆಂಬ ಪ್ರತಿಕೂಲ ವಿಚಾರಗಳನ್ನು ಸದ್ಯಕ್ಕೆ ಪ್ರಸ್ತಾಪ ಮಾಡದೇ ಸರಕಾರೀ ವಕೀಲರು ಹೇಳಿಕೆಯ ವೇಳೆಗೆ ಇವರ ಮೇಲೆ ಸಾಕಷ್ಟು ಪುರಾವೆಯು

ಸ್ವಗೌರವಿಕವಾದ ಳಿಸಿ ಒಂದು ಜೀವನ
ಡಕ್ಕೆ ಶ್ರೀಗಣ್ಣಾತಿಸರು ಊಟಕ್ಕೆವಾತ್ರ ನ
ದವೆ ವಿತ್ತಿದ್ದರು ರಾತ್ರಿಯಲ್ಲಿ ಕತ್ತಲೆಕೋ
ಣೆಯಲ್ಲಿ ಮಲಗಿದ್ದರು!

(೫) ಮಿರತದ ಸುದ್ದಿಗಳು ಜನ್ನಾಗಿಗೊ
ಟ್ಟಲ್ಲಿ. ಅದರ ಅಲ್ಲಿಯ ಮಕ್ಕೇಲಸಂಭವದವರು
ಪಾಸುಮಾಡಿದ ಎರಡು ಠರಾವುಗಳಿಂದ ಅಲ್ಲಿ
ನಿನ ನಡೆಯುವಪದ್ಧತಿಯನ್ನು ಊಹಿಸುವಂತೆ
ದೆ. ೧೫-೧೬ನೇ ದಿವಸ ಪೋಲೀಸರು ನಿ
ರಪರಾಧಿಗಳಾದ ಜನರನ್ನು ಸಿಕ್ಕುಸಿಕ್ಕುಂತೆ ಹಿಡಿಸಿ
ಬಂಧಿಸಿ ಪೋಲೀಸ ಚಾವಣಿಯ ಹತ್ತರಿರು
ವ ಅರಮನೆಯಲ್ಲಿ ಇಟ್ಟು ಪೆಡಿಪಡಿಸಿದರೆಂದೂ ಈ
ಪಕ್ಷಿಲ ಸಂಗತಿಗಳನ್ನು ಬೇರೆ ಈ ವೃತ್ತಗಳನ್ನು
ನಿಜೀಪಸಿದ್ದಾಗಿ ಪಬ್ಲಿಕ್ ಪ್ರಾಸಿಕ್ಯೂಟರ ಬಿಳ್ಟಿಯು
ರೋಪಿಯನ್ನು ಮೂಲಿಸ್ಟ್ರೇಟರ ಸಮಕ್ಷಮವು ಹೋ
ಲಿಸರು / ರಾಜದ್ರೋ ಶದಿಂ
ದಲೂ ಂತೆ!
(೬) ಜಿನೆ
ಪರಹ ನಳಿಗೆ
ಬೆಲ್ಲ ಉಣ್ಣಿನಲ್ಲಾದ್ದೂ ಇರಬೇಕೆಂದು ಹುಕು
ಕೊಟ್ಟರು.

(೭) ಸರಸಿಂಗಮರೆ ಬೆಲ್ಲಾ ಪರಿಷತ್ತು ಸೆರೆ
ದಾಗ ಮೂರುಸಾವಿರ ಜನರು ಕೂಡಿದ್ದರು. ಆಗ ಪೋಲಿಸ ಗದಿಗೆಯು ಸದ್ಭಾಹಸ್ತರ ಮೇ
ಲೆ ಒಗೆಯಲ್ಪಟ್ಟಿತು ಸ್ವತಃ ಡೆನ್ಯೂಟಿ ಕಮಿಶ
ನರೇ ಇದನ್ನು ಮಾಡಿಸಿದೆಂದು ಸಜ್ಜ ಸಂಶಯ
ಪಡುತ್ತಾರೆ.

ಧಾರ್ವಾಡಿಯ ಸ್ವದೇಶಿ ಸೇವಕರು

...ಷ್ಟಿಮೂ ನಮ
...ನಾಷ್ಟಿಗಾಗಿ ವ
...ಮಿಂತ ತಂಡದವರ
...ಮೀಯೂ ರಾ
...ಷ್ಟಿಯ ಸೇವೆಯ

ಕಾದಂಬರೀ ಸಂಗ್ರಹ.

(ತಿಳಿಗನ್ನಡದ ಮಾಸಪತ್ರಿಕೆ)

ವಾರ್ಷಿಕ ಚಂದಾ 1—8—0.

ಸಂಪುಟ. 9. } 1921 ನೇ ಜುಲ್ಯೈ, ಆಗಸ್ಟ್, ಸೆಪ್ಟಂಬರ್ ಅಕ್ಟೋಬರ್ ಸಪ } ಸಂಚಿಕೆ. 1-2-3-4.

ವಿಷಯಾನುಕ್ರಮಣಿಕೆ.

ಮದುವೆಯ ಗಲಿಬಿಲಿ ... 41 ನೇ ಪುಟದಿಂದ ಪೂರ್ತಿ.

ಸ್ವವಿಷಯ ... ಮುಖಪತ್ರ

ಸಿ. ವೆಂಕಟರಮಣಶಾಸ್ತ್ರಿ.

ಎಡಿಟರ್.

WORK NEWS PRINTING

Note:—ಮುಖಪತ್ರವನ್ನು ಮನಸ್ಸಿಟ್ಟು ಪುನಃ ಪುನಃ ಓದಿನೋಡಿ!

ಚಾಮರಾಜನಗರದ ಕಾದಂಬರೀಸಂಗ್ರಹ ಕಾರ್ಯಶಾಲೆಯಲ್ಲಿ
ಪ್ರಕಟವಾಯಿತು.

1921

ರಾಯಲ್ ಪ್ರೆಸ್, ಮೈಸೂರು

0—4—0] [Sample 0—4—0

1922



ಶ್ರೀ ಶಿವಯೋಗಿಪ್ರಭುವಂದ್ಯಂ ।

ಸ್ವಪರ ಧರ್ಮೋಜ್ಜೀವಕ ಸಭೆಯ ಮಾಸಿಕ ವೀರಶೈವ

ಧರ್ಮತರಂಗಿಣಿ.

ವರ್ಷ ೧೦. ಮಾರ್ಚ ೧೯೨೨. ಸಂಚಿಕೆ ೪

ಧರ್ಮದಸಾರಮಂ ಗಳಿಸಿಶೈವರಿಗಾಸೆ, ಲೋಕಪೂಜ್ಯಂ ।
ಮರ್ಮವನೆಚ್ಚಿತೋರಿ, ಮುಲಿನಾಗಮಜೀವನಿಶುದ್ಧಿಗೆಯ್ಯುತೀ ।
ಕರ್ಮದಭೂಮಿಯಲ್ಲಿ ಪರಂ ವಿಕಟೋಪ್ಯವೆಯಾವಕಾರಣಂ ।
ಧರ್ಮತರಂಗಿಣೀ ವೆಸರು ಸಾರ್ಥಕವಪ್ಪುದೆ? ನಿಶ್ಚಯಾಪಿಗೆ ॥ ೧ ॥

ಎಚ್. ಎಸ್. ಶಿವಲಿಂಗಪ್ಪ ಇವರಿಂದ ಪ್ರಕಟಿತ ಧರ್ಮತರಂಗಿಣಿ
ಮಾಸ್ಟರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು ಸಿಟಿ.

1922

REGISTERD NO. M. 1259.

ಶ್ರೀಃ

ಶ್ರೀಮತ್ಕೃ

ಮಧ್ವಸಿದ್ಧಾಂತ ಪ್ರಕಾಶಿನೀ

ಮಾಸಪತ್ರಿಕೆ

ಸಂಪುಟ ೫.] ಏಪ್ರಿಲ್—ಗ್ಮೈ ೧೧. [ಸಂಚಿಕೆ ೪.

ರೌದ್ರಿ—ಚೈತ್ರ ಮಾಸೆ.

ಮೈಸೂರು

ಶ್ರೀ ಜಯಾಲಯ ಯಂತ್ರದಲ್ಲಿ

ಎಡಿಟರಾದ ಪಂ॥ ರಾ॥ ಎಚ್. ನರಸಿಂಗರಾಯರಿಗೋಸ್ಕರ

ಮುದ್ರಿಸಲ್ಪಟ್ಟಿತು.

ರುದ್ರಜ ಕಂಪನಿ

ಜಾ ಡ.

—:(೦):—

ಗುರು ಪಂಚಾಚಾರ್ಯರ ಲಿಂಗೋತ್ಪತ್ತಿಯ ಭಾವಪಟಗಳು ಸಗು
ನದ ಒಬ್ಬೊಬ್ಬರೂ ಕೊಡಿದ್ದವು ಮತ್ತು ಬೇರೆ ಬೇರೆ ಒಬ್ಬೊಬ್ಬರವು ಪ್ರತ್ಯೇಕವಾ
ದೊರೆಯುತ್ತವೆ. ವೀರಶೈವ ಬಂಧುಗಳು ಇತ್ತ ಲಕ್ಷ ಕೊಡಬೇಕು.

ರುದ್ರಜ ಮೆಣಸಿನಕಾಯಿ, ಮತ್ತು ಕಂಪನಿ, ಧಾರವಾಡ.

ಸುಪ್ರಸಿದ್ಧ. **ಶಾಂತವೀರ** ಸುವಾಸಿಕ.

—:(೦):—

				ರು.	ಅ.	ಪೈ.
೧	ಹುರುಕಿನ ಔಷಧ	ಚೀಟು ೧೦೦ಕ್ಕೆ		೪	೮	೦
೨	ಹೇನು, ಶೀರು ನಾಶಕ	ಸದರ		೧	೧೨	೦
೩	ಕಣ್ಣುಬೇನೆಯ ಔಷಧ	ಸದರ		೧	೦	೦
೪	ಜ್ವರಹರ ಚೂರ್ಣ	ಸದರ		೧	೦	೦
೫	ನೀಲಿ ಕಪ್ಪು ಮಶೀಪುಡಿ ...	ಸದರ		೪	೦	೦
೬	ಪಿತ್ತ ವಾಂತಿಯಾಗುವದಕ್ಕೆ ...	ಸದರ		೪	೮	೦
೭	ಕ್ರಿಮಿನಾಶಕ (ಜಂತಿನ ಪುಡಿ)	ಸದರ		೩	೦	೦
	ಪ್ಲೇಗಪ್ರತಿಬಂಧ ಗುಳಿಗೆ ...	ಡಬ್ಬಿ ೧ಕ್ಕೆ		೦	೪	೦
೯	ಕಜಿಯ ಮಲಮು	ಸದರ		೦	೪	೦
೧೦	ಗಜಕರ್ಣ ಮಲಮು ...	ಸದರ		೦	೪	೦
೧೧	ಇಸಬಿನ ಮಲಮು ...	ಸದರ		೦	೪	೦
೧೨	ಮೊಳಕೆ ಮೂಲವ್ಯಾಧಿಗೆವಲಮು ...	ಸದರ		೧	೦	೦
೧೩	ರಕ್ತಮೂಲವ್ಯಾಧಿ ನಾಶಕ ಚೂರ್ಣ	ಸದರ		೧	೦	೦
೧೪	ಪಶುಸಂಜೀವಿನೀ (ದನಗಳಔ.) ಚೂರ್ಣ	ಸದರ		೧	೦	೦
೧೫	ಬಾಣಂತಿ ಗುಳಿಗೆಗಳು	ಸದರ		೬	೦	೦

ಇವುಗಳಿಗೆಲ್ಲ ಟಪಾಲ ಖರ್ಚು ದೇನೆ

ಸೂಚನೆ:—ಪ್ರತಿನಿತ್ಯ ಸಾವಿರಾರು ಚೀಟುಗಳು ಖರ್ಚಾಗುವವು. ಎಲ್ಲ ಪ್ರಸಿದ್ಧವ್ಯಾ
ಪಾರಸರಲ್ಲಿ ಮಾರಲಿಕ್ಕೆ ಶಿಗುವವು. ಹೋಕ ತೆಗೆದುಕೊಂಡರೆ ಭರವೂರ ಕಮಿಶನ್ ೧೫ ರೂ
ಪಾಯಿಗಿಂತ ಹೆಡಿಮೇ ಔಷಧವನ್ನು ವಿ. ಪಿ. ಯಿಂದ ಕಳುಹಿಸಲಿಕ್ಕಾಗುವದಿಲ್ಲ. ಔಷಧವನ್ನು
ಬೇಡುವವರು ಒಂದು-ನಾಲ್ಕಾಂಶ ರಕಮನ್ನು ಮುಂಗಡ ಕಳುಹಿಸಬೇಕು

---

೫. ಕಾಲರಾಪಿಲ – ೧೦೦ಕ್ಕೆ – ೨ – ೮ ರೂ ... ಸಾಜರ ೫॥ ಜರಪ್ರತಿಲ
೬. ತರ, ಚಳಿಜ್ವರ, ಪ್ಲೇಗಜ್ವರ ಇನ್‌ಫ್ಲುಯೆಂಜಾ ... ೦ಕ್ಕೆ – ೨ – ೮ – ೧೦೦೦ ಕ್ಕೊಂದಿವರು.
೪ – ೮ – ೧೦೦೦ ಕ್ಕೆ ೪೦ ರೂ
೨೦ಕ್ಕೆ – ೧ – ೮ ೧೦೦೦ಕ್ಕೆ ೨ ರೂ
೨ – ೮ – ೧೦೦೦ ಕ್ಕೆ ೨೦ ರೂ
೧ ರೂ – ೧೦ ಕೊ – ೯ ರೂ

೭. ಸುವಾಶಿಕ ಹುರಕಿನಜಿಟು –
೮. ಕಣುಬೇನೆಯ ಮೇಲೆ ೯ ಕಠಿಣ ಶಿಕ್ಷೆ
೯. ಹೇನೂ ಸಿರೂ ನಾಶಕಚೂ ದಂಡಕೊಡ
೧೦. ಆದದಂಶವಟ – ಕೊಟ್ಟೂ ಆಗಿದೆ.

ಸೂಚನಾ :– ಈ ಕ್ರಿಯೆಗು ೩ನೇ ಲೈಲೆ ಕಮಿಶನ್ ದೊರಕಲಾರದು. ವ್ಯಾಕಿಂಗ ಖರ್ಚಾಗುವದು. ಸದ್ಯ ಅಂಜೇಹಾಸಲು ಹೆಚ್ಚಿ
ಮತ್ತು ಅಂಜೇಹಾಸಲು ಗ್ರಾ... ಆಮೂಲು ತರಿಸಿಕೊಳ್ಳುವದು ಲಾಭದಾಯಕವು.
ಗಾಗಿದೆ. ಕಾರಣಾ ಒಂದೇ ಸಲಕ್ಕೆ ಹೆ...

ಶ್ರೀ. ಶ್ರೀ. ಭಾರತ ವನೌಷಧೀ ಸಂಗ್ರಹಾಲಯ.

ಪೊ. ಕಿತ್ತೂರ, ಡಿ. ಬೆಳಗಾಂವ.

ಚೇಂಬರಲೇನ.

—(೦)—

ಈ ಔಷಧದ ಕೆದಿಮ್ಮುಧಂಡಿಯು ವಿಕಾರ ಬೇನೆಗಳ ಹಾ ಗೂ ಬೇನೆಯಿಂದ ಕೋಡಿಗೆಮ್ಮು ಕುತ್ತಿಗೆಯಲ್ಲಿಯು ಮತ್ತು ಯದಿ ಯಲ್ಲಿಯು ನೋವು ಮುಂತಾದವುಗಳು ಪೂರ್ಣವಾಗಿ ಇಲ್ಲದಂ ಗುವವು. ಕೆಮ್ಮಿನ ವಿಷಯಕ್ಕೆ ನಿರ್ಲಕ್ಷ್ಯಭಾವಗಬೇಡಿರಿ. ಕೆಮ್ಮು ಹಳೇ ಭಯಂಕರ ಬೇನೆ ಇದರಿಂದ ಮುಂದೆ ಯೆಂದಾದರೂ ನ್ಯೂ ಮೋನಿಯಾ (ರಕ್ತ ಕಾರೋಣ) ಅಥವಾ ಕ್ಷಯರೋಗ ಹುಟ್ಟುವ ಸಂಭವವು. ಚೇಂಬರಲೇನರ ಕೆಮ್ಮಿನ ಮೇಲಿನ ಔಷಧವನ್ನು ತೆಗೆ ದುಕೊಳ್ಳುವದರಿಂದ ಗಂಟಲದಲ್ಲಿಯು ಕಫವು ಸಾಫ ಇಲ್ಲದಂತಾಗು ವದು, ಶ್ವಾಸೋಚ್ಛ್ವಾಸ ಮಾಡುವಾಗ್ಗೆ ಆಗುವ ತಾರ ಸಪ್ಪಳವು ಪೂರ್ಣ ನಿಂತುಹೋಗುವದು. ಪುಪ್ಪುಸು ಕೊಳೆಯುವದಿಲ್ಲ. ಮತ್ತು ಯ ಔಷಧದಿಂದ ಅದು ಒಮ್ಮಿಗೇಲೇ ನಿಲ್ಲುತ್ತದೆ. ಇದನ್ನು ತಕ್ಕೊಳ್ಳುವದ ರಿಂದ ರಾತ್ರಿಯಲ್ಲಿ ಚನ್ನಾಗಿ ನಿದ್ರೆಹತ್ತಿ ನಿನ್ನ ಮನಸಿಗೆ ಸಮಾಧಾ ನವಾಗುವದು.

ಇದು ಬರೀ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟದ್ದು.

Registered No. B84
ನೋಂದಣಿ ಪುಸ್ತಕದಲ್ಲಿ ಪ್ರಕಟಿಸಲ್ಪಟ್ಟಿದೆ.
ಪೋಸ್ಟಲ್ ಇಂಡಿಯಾದಲ್ಲಿ ಪ್ರಕಟಿಸಲ್ಪಟ್ಟಿದೆ.

ಕರ್ನಾಟಕವೃತ್ತ

ಮತ್ತು

ಧನಂಜಯ.

ಪ್ರತಿ ಮಂಗಳವಾರ ಪ್ರಕಟವಾಗುವದು.

ಸಂಪಾದಕರುಗಳು– ಕೃಷ್ಣಾಜಿ ಹಣಮಂತ ಮುದವೇಡಕರ.

ಚಂದಾದಾರರು– ಮುಂಗಡ ವರ್ಷಕ್ಕೆ ಮಂಗ
ಳೂರಾಯಿ ೫॥ ಉಳಿದ ಪಟ್ಟಣ ೫.
೧ ಸಂಚಿಕೆ ೬ ರೊ. ೯ ಆಣೆ ಬೆಲೆಯುಳ್ಳದ್ದು.

ವರ್ಷ ೩೨ ಧಾರವಾಡ— ಕರ್ನಾಟಕವೃತ್ತ ಮತ್ತು ಧನಂಜಯ ತಾರೀಖು ೨೧ನೇ ಆಗಷ್ಟ ಸನ್ ೧೯೨೩ ಇಸವಿ. ಸಂಚಿಕೆ ೩೪.

ಶ್ರೀ ಧೂತಪಾಪೇಶ್ವರ ಆಯುರ್ವೇದೌಷಧಾಲಯ ಪನವೇಲ

—(೦)—

ಜಗಪ್ರಸಿದ್ಧವಾದ ಪನವೇಲದ ಶ್ರೀ ಧೂತಪಾಪೇಶ್ವರ ಔಷಧಾಲಯದಲ್ಲಿ ಶಾಸ್ತ್ರೋಕ್ತ ರೀತಿಯಾ ತಯಾರಿಸಲ್ಪಟ್ಟಿ ಎಲ್ಲ ಬಗೆಯ ಔಷಧಗಳು ನಮ್ಮಲ್ಲಿ ದೊರೆಯುವವು. ಭಪಕೇದಾರಿ ಜಾಹೀರಾತುಗಳನ್ನು ನೋಡಿ ಮೋಸ ಹೋಗದೆ ಲೋಕಮಾನ್ಯವಾಗಿರುವ ಈ ಪಾತ್ರಿಯ ಔಷಧಗಳನ್ನು ತಿಗೆದುಕೊಳ್ಳಿರಿ.

ಸಹಸ್ರಪುಟ ಆಭ್ರಕ ತಾಮ್ರ ಮುಂತಾದ ಎಲ್ಲ ಬಗೆಯ ಭಸ್ಮಗಳೂ, ಶಾಸ್ತ್ರೋಕ್ತವಾಗಿ ತಯಾರಿಸಿದ ರಸಾಯನಗಳೂ, ಹೇಮಗರ್ಭ, ಶಾಕ್ತಿಕ ಮುಂತಾದ ಮಾತ್ರೆಗಳೂ, ಕುಪೀಪಕ್ವ ರಸಾಯನಗಳೂ, ಗುಗ್ಗುಲ ಗುಟಿಕಾದಿಗಳೂ, ಆವಲೇಹ ಮತ್ತು ಪಾಕಗುಗಳೂ, ಆಸವಾರಿಷ್ಟಗಳೂ ಘೃತತೈಲಗಳೂ, ಮಲಾಮುಗಳೂ, ಅರ್ಕಗಳೂ, ಸತ್ವಹ್ಸಾರ ಮತ್ತು ದ್ರಾವಸತ್ವಗಳೂ, ಮಿತ್ರಹ್ಸಾರಗಳೂ, ಔಷಧೀ ಗುಲಕಂದ ಮತ್ತು ಗುಳುಂಬಗಳೂ, ಕಷಾಯಗಳೂ ಮತ್ತು ತ ಘಾರೀ (ಪೇಟೆಂಟು) ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ೨ ಆಣೇದ. ಅಂಚೇ ಚೀಟನ್ನು (ಪೋಸ್ಟೇಜ್ ಕೇಟು) ಕಳುಹಿಸಿಕೊಟ್ಟರೆ ಎಲ್ಲ ಔಷಧಗಳ ಯಾದಿ ಮತ್ತು ಅವ್ಯ ಯಾವ ಯಾವ ಬೇನೆಗೆ ಉಪಯೋಗಿಸಬೇಕೆಂಬ ಚಿಕ್ಕ ಅನುಪಾನ ಪುಸ್ತಕ (ಮರಾಠಿ ಅಥವಾ ಕನ್ನಡ) ವನ್ನು ಕಳಿಸಿಕೊಡುವೆವು. ವ್ಹಿ. ಪಿಯಿಂದ ತರಿಸಿಕೊಳ್ಳತಕ್ಕವರು ೫ ರೂಪಾಯಿಗಳ ಪರೆಗೆ ೧ ರೂಪಾಯಿಯನ್ನು ೧೦ ಗಳ ನರೆಗೆ. ೨ ರೂಪಾಯಿಗಳನ್ನು ಮುಂಗಡ ಮನಿಆರ್ಡರದ್ವಾರ ಕಳುಹಿಸಿಕೊಡಬೇಕು.

ಎಚ್ಚರಿಕೆ! ಎಚ್ಚರಿಕೆ!!

ಮಹಾತ್ಮಾಗಾಂಧಿ

—೦—

ನಮ್ಮ ದೇಹದಲ್ಲಿಯ ಹವೆ, ನೀರು, ವನಸ್ಪತಿ, ಇತ್ತಗಳಿಗನುಸರಿಸಿಯೇ ದೇವರು ನಮ್ಮ ಪ್ರಕೃತಿಯನ್ನು ನಿರ್ಮಾಣ ಮಾಡಿದ್ದಾನೆ. ಆದರಿಂದ ಪ್ರತಿಯೊಬ್ಬರು ನಮ್ಮ ದೇಶದಲ್ಲಿಯೇ ಹುಟ್ಟುವ ಆರಿವೆ, ಆಹಾರ, ವನಸ್ಪತಿ, – ಔಷಧಗಳನ್ನೇ ಉಪಯೋಗಿಸ ಬೇಕಲ್ಲದೆ ವಿದೇಶೀ ವಾಲಿನ ಮೋಹ ಜಾಲಕ್ಕೆ ಬಿಲುಕಿ ದೇಶದ ಪ್ರಾಣ ಹಾಗೂ ಧನವನ್ನು ಮಾಡಿಕೊಳ್ಳ ಜಾರದು. *

ಮಹಾತ್ಮರ ಆಜ್ಞಾ ಪಾಲಿಸುವದು ಸುಲಭವಾಗಬೇಕೆಂದು ಸಾಂಪ್ರತ ನಮ್ಮ ಔಷಧವ ಬೆಲೆತೀರ ಕಡಿಮೆ ಮಾಡಿರುತ್ತೇವೆ. ಗ್ರಾಹಕರು ತ್ವರೆಮಾಡಿ ಸಂಗ್ರಹಿಸದೇಕು.

೧. ಜ್ವರದಗುಳಿಗೆ– ತೊ. ೧(ಮಾತ್ರಾ) ೩೦೦) ಕ್ಕೆ ನೆಲೆ –೧ ರೂ ೧೦ ತೊಲಿಗೆ– ೮– ರೂ
೨ ಜುಲಾಬಿಗೆ ಗುಳಿಗೆ– ತೊ. ೧(ಮಾ – ೩೦೦)ಕ್ಕೆ ೧ ರೂ ೧೦ B– ೮ – ರೂ
೩ ಜೆಕೆಜವದಗುಳಿಗೆ– ೧೦೦ಕ್ಕೆ ೨

5 ರೂ. ಗಳು ಬಹುಮಾನವಿಲ್ಲ

ಸ್ಯಾಂಪಲ್ 3 ತಿಂಗಳು ಮಾತ್ರ ಕೊಂಡುಕೊಳ್ಳಬೇಡಿರಿ.

ಫ್ರೀ! ಫ್ರೀ! ಸರ್ವರೋಗ ನಿವಾರಿ ಫ್ರೀ

ಎಂಬ ಈ ಔಷಧವನ್ನು ಸ್ವಲ್ಪ ತಣ್ಣೀರಿನಲ್ಲಿ ಗಂಧವನ್ನು ತೆಗೆದು ಆರುಕ
ಕಚ್ಚಿದಸ್ಥಳದಲ್ಲಿ ಸವರಿ ಉಳಿದ ಔಷಧಿಯನ್ನು ಕಚ್ಚಿದ ಸ್ಥಳಕ್ಕೆ ಹಿಡಿದಲ್ಲಿ ಅದು ತಾನಾಗಿ
ಬರುವುದು ತರುವಾಯ [illegible] ತೋರಿಸುವುದು. ಉರಿಯೂ, ಚಳುಕೂ, ಜ್ವ ನಿವಿಸ
ವುದು. ಇಗೆಡ್ಡ [illegible] ಪ್ಯಾಕ್ಕ್ ಪಡಿಸುವವರಿಗೆ ನಾವು ಮೇಲ್ಕ್ಕಂಡ ಬಹುಮಾನವನ್ನು

ಲೋಕೋಪಕಾರವನ್ನು ಮತ್ತು ನಮ್ಮ ಹೆಸರು ಪ್ರಸಿದ್ಧಿ ಹೊಂದುವಹೆನ್ನು ಯೋ
ವಷಾಯ ಪಟ್ಟಾಲು ಖರ್ಚಿಗಾಗಿ ೩ ಆಣೆ ಸ್ಟ್ಯಾಂಪ್ ಮಾತ್ರ ರವಾನಿಸಿದಲ್ಲಿ ಈ ಔಷಧವನ್ನು
ಲಾಗುತ್ತೆ. ಮೂರು ತಿಂಗಳನಂತರ ಔಷಧಗಳ ಖರೀದಿಯನ್ನು ಹೆಚ್ಚಿಕಲಾಗುತ್ತೆ.

ನಮ್ಮ ವಿಳಾಸ:—ಕೆ. ವಿ. ಜೋತೀರಾವ್, ವಾಚ್ ಮೇಕರ್, ಕೆ

ರೇಡಿಯಂ ರಿಸ್ಟ್‌ವಾ



ಇದರ ಗಡಿಯಾರಗಳಲ್ಲಿ ರಾತ್ರಿ ಹೇಳಿ ಗಂಟೆ ನೋಡ್ರಿ. [illegible]
ಅದರ ಗಡಿಯಾರಗಳಿಗೆ ಬೆಳಕುಬೇಕಾಗಿಲ್ಲ ಎಷ್ಟ
ಷು ಜೀವ. ಸರ್ವರ್ಯಾನಂತೆ ಬೆಳಕಿನ ಸಹಿತ ಗಂಟೆ [ಸಂಚಿಕೆ ೧೦
ವು ಅಸ್ಪೃಶ್ಯ ದೇಶದ ಗಡಿಯಾರಗಳು. ಬಹುದಿನ
ಕ್ಕೆರಂಟಿ ಸಹಿತ ಸರಪಣಿಸಹಿತ 8—0—0 ಜನ

ಜಂಟ್ಸ್ ಪಾಕೆಟ್ ಲೀವರ್

ಈ ನಮ್ಮ ಜಂಟಲ್‌ಮೆನ್ ಲೀವರ್ ವಾಚ್ ಮಗನನ್ನು ಕುರಿತು [illegible] ನೂ
ವ್‌ಮೆಂಟ್ಸುಗಳಿಂದ ತಯಾರಿಸಿದ ಗಾಳಿಯೂ ಧೂಳು ನಿಷ್ಪನ್ನು ತಬ್ಬಲಾಗದು
ಇರುವದು ಸರಿಯಾದ ಕಾಲವನ್ನು ತೋರಿಸುವದು.
ಕೋದರೆ ನಾವೇ ಸರಿಮಾಡಿಕೊಳ್ಳ ಬಹುದು. ನೋಟಕ್ಕೆ ನಿಸ್ಸನ್ನು ಕಳಂತೆ ಸುಂದರ
ವಾಗಿಯೂ ಇರುವದು ಇದು ಇಂಗ್ಲೀಷ್ ನಮೂನೆಯಾಗಿದೆ [illegible] ಗೊಸಿಯಾರದಲ್ಲಿ
ಯಾರೇಲಿಗಲಿ ಸಲಭವಾಗಿ ಗಂಟೆ ನೋಡಬಹುದು. ಅದ್ದರಿಂದ ಇದಕ್ಕಾಗಿ ವರ್ಣನೆ
ಮಾಡುವದ್ಯಾತಕ್ಕೆ. ಒಂದನ್ನು ತರಿಸಿ ನೋಡಿದರೆ ತೀರುವುದು. ಪ್ರ 1 ವರುಷಗ್ಯಾರಂ
ಗ್ಯಾರಂಟಿ ಸಹಿತ ಕ್ರಯ 4—0—0
ಮ್ಯಾನೇಜರ್, ಫೈನ್ ಆರ್ಟ್ ಲಜ್ಜೆ ಕಂಡ್ ಕಂ, ಪೋ॥ಬಾ॥ ನಂ 275 ಮದ್ರಾಸು

ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ಗಂಟೆ ಗಂಟೆಗೆ ಗುಣಮಾಡುವ

ಮೂತ್ರಕೋಶನಿವಾರಣೀ ಭಸ್ಮ

ಈ ಭಸ್ಮವನ್ನು ಸೇವಿಸುವದರಿಂದ ಮೂತ್ರದಲ್ಲಿ ಧಾತುಹೋಗುತ್ತಿದ್ದರೂ ಕೇವು
ಸರು) ಉರುತ್ತಿದ್ದರೂ ಬಿಳಿಪುಕೋಗುತ್ತಿದ್ದರೂ ಸರಿಯೇ 24 ಗಂಟೆಯೊಳಗಾಗಿ ಗು
ಮಾಡುವದು. ಗತ್ತು ಬಹಳ ಹಳೆವ್ಯಾದಿಯಾಗಿದ್ದರೆ ಅಮೃತಸಂಜೀವಿನಿಎಂಬ ಅವುಷ
ವನ್ನು ಸೇವಿಸಿದರೆ 4-5 ದಿನಗಳಲ್ಲಿ ಗುಣವಾಗುವುದು

ಸಾಧಾರಣವ್ಯಾಧಿಗೆ ಭಸ್ಮ ಡಬ್ಬಿ 1ಕ್ಕೆ 1—0 0
ಬಹಳ ಹಳೆವ್ಯಾಧಿಗೆ ಅಮೃತಸಂಜೀವಿನಿ ತುಪ್ಪ ಡಬ್ಬಿ 1ಕ್ಕೆ 2—0 0
(ಧಾತು ಪುಷ್ಟಿಗೆ) ವಜ್ರಾಂಗ ಲೇಹ್ಯ ಡಬ್ಬಿ 1ಕ್ಕೆ 2—0—0

ಡಾಕ್ಟರ್ ಪೀಟರ್,
ಇರುಳಪ್ಪನ ಬೀದಿ, ಮದ್ರಾಸು.

೫. ಚಂದ್ರನು ಹುಟ್ಟಿದ ತಕ್ಷಣ ಬೆಳದಿಂಗಳು ಬರುತ್ತದೆ ಎಂಬುದಾಗಿ ಈಚೆಗೆ ಒಬ್ಬ ವಿಕಟಶಾಸ್ತ್ರಜ್ಞರು ಬಹಳ ಕೆಷ್ಟಪಟ್ಟು ಕಂಡು ಹಿಡಿದಿರುತ್ತಾರಂತೆ.

೬. ಕೊಡಗುದೇಶದಲ್ಲಿ ವರುಷ ೧ಕ್ಕೆ ೧೨ ತಿಂಗಳುಗಳಂತೆಯು ತಿಂಗಳು ೧ಕ್ಕೆ ೩೦ ದಿನಗಳಂತೆಯು ದಿನ ೧ಕ್ಕೆ ೨೪ ಗಂಟೆಗಳಂತೆಯೂ ಗಂಟೆ ೧ಕ್ಕೆ ೬೦ ನಿಮಿಷಗಳಂತೆಯೂ ನಿಮಿಷ ೧ಕ್ಕೆ ೬೦ ಸೆಕೆಂಡುಗಳಂತೆಯೂ ನಿರ್ಧರಿಸಿಕೊಂಡಿದ್ದಾರಂತೆ.

೭. ಲಂಕಾಪಟ್ಟಣದಲ್ಲಿರುವ ಜನರು ಒಂದುಸಲ ಸತ್ತರೆ ಪುನಹ ಸಾಯುವುದೇ ಇಲ್ಲವಂತೆ.

೮. ಬೆಣದನಹಳ್ಳಿಎಂಬ ಗ್ರಾಮದಲ್ಲಿ ಒಬ್ಬ ಕಳ್ಳನು ಒಂದು ಮನೆಗೆ ಕನ್ನಾಹಾಕುತ್ತಿರುವಾಗ ಗೋಡೆಯು ಬೆ ಲೆಬಿದ್ದು ಮೃತಪಟ್ಟದ್ದರಿಂದ ಮನೆ ಮಾಲೀಕನು ಗೋ ಡೆಯನ್ನು ಛಿದ್ರವಾಗಿ ಕಟ್ಟದೆ ಇದ್ದುದರಿಂದ ತನ್ನ ಗಂ ಡನು ಮೃತನಾದನೆಂತಲೂ ಸದರಿ ಮಾಲೀಕನಿಂದ ಧನಕ್ಕೆ ಜೀವನಾಂಶವನ್ನು ಕೊಡಿಸಿಕೊಡಬೇಕೆಂತಲೂ ಕಳ್ಳನ ಹೆಂ ಡತಿಯೂ ವಿಕಟಕೋರ್ಟಿನಲ್ಲಿ ದಾವಾ ಹಾಕಿರುತ್ತಾಳಂತೆ

ಸಿ. ಕೆ. ಎಸ್. ನಾರಾಯಣರಾವ್.

ಚೂಲಿಕೋಕಡಿಂದ ಮುಸುಳುಬಗೆ ಹಾಕಿರುವ ಹಬೆಯಿಂದ ಚಲಿಸುವ ಗಾಲಿಗಳ ಸಹಾಯದಿಂದ ರೈಲಿನ ಛಾಲಕನಿಗೂ ಪ್ರಾಣಿಗಳಿಗೂ ಕೆಲಸ ಕೊಡುವುದಕ್ಕೆ ಮುಂಚೆ ಇದ್ದ ಬೆಲೆ

ಸ್ಟೇಷನ್ನಿಂದ	ಸ್ಟೇಷನ್ನಿಗೆ	ದರ ರೂ.	ಆ.	ಪೈ
ಪೊಣಕಾಲ್ಮಲೈ	ಪಟ್ಟಣಹಳ್ಳಿ	೦೦೦೦	೦೦೦೦	೦೦೦೦
ಪಟ್ಟಣಹಳ್ಳಿ	ನಾಡಪಟ್ಟಣ	೦೦೦೫	೦೦೦೦	೦೦೦೦
ಕುಡ್ಡಪಟ್ಟಣ	ಪೆಂಕಿಪುರ	೦೦೦೮	೦೦೦೫	೦೦೦೦
ಪೆಂಕಿಪುರ	ಬೂಟುಹಾಳು	೦೦೦೭	೦೦೦೭	೦೦೦೦
ಬೂಟುಹಾಳು	ಹೊಳಿಹೊನ್ನೂರು	೦೦೦೫	೦೦೦೫	೦೦೦೦
ಹೊಳಿಹೊನ್ನೂರು	ಯಮಪುರಿ	೦೦೦೯	೦೦೦೫	೦೦೦೫

N. B:—ಮೊದಲು (ಪೊಣಕಾಲ್ಮಲೈರು) ಪೊಣಕಾಲು ಗಳನ್ನು ಮಡಿಸಿ (ಪಟ್ಟಹಳ್ಳಿ) ಪಟ್ಟಾರೋಹಣ ಅಲ್ಲಿಂದ (ರುದ್ರಪಟ್ಟಣ) ಸ್ಮಶಾನಕ್ಕೆಹೋಗಿ (ಪೆಂಕಿಪುರ, ಪೆಂಕಿ ಎತ್ತಿ ಸುತ್ತಾರೆ. ಅದುಆರಿ (ಬೂದಿ ಹಾಳು) ಬೂದಿಆದನಂತ ರ (ಹೊಳೆ ಹೊನ್ನೂರು) ನೀರಿನಲ್ಲಿ ಕಡರುತ್ತಾರೆ. ಈ ಸಂ ಸ್ಕಾರಗಳೆಲ್ಲವೂ ಅಡಿನಕ್ಷತ್ರ [illegible]ಷ್ಟ ಮುಂಚೆ ಯಮಪುರಿ

ಪೆಂಡ್ಲಾಮೋದೇವತಾ (ಹಂಪತಿಯೇ ದೇವರು) ಅತ್ತೆ ಮಾ ಮೋರುಷಿ (ಅತ್ತೆಮಾವ ಎರಡೇ ರುಷಿಗಳು) ಭಾವ ಭಿ ಕ್ಷದಿಂದ (ಭಾವಮೈದುನನೇ ಬಂದನ್ನು) ಮಾತಾಪಿತೃವಿ ಸರ್ಜನೇವಿನಿಯೋಗ್ಯ (ಹಂಬೆ ತಾಯಿಗಳನ್ನು ಮನೆಇಂದ ಹೊರಗೆ ಹೊರಡಿಸುವದೇ ಮುಖ್ಯವಾದದ್ದು) ಎಂದು ಅ ನುಕೂಲಸಿಂಧು ಎಂಬ ವಾರ್ಷಿಕಪತ್ರಿಕೆಯೊಂದರಲ್ಲಿ ಹೇಳು ವದಂತೆ.

ಕೆ ಸುಬ್ರಹ್ಮಣ್ಯಯ್ಯ

ಸಾರಾಯಿ ಬುಡ್ಡಿ.

ಬೇನಾಂಖಾರ್ರು ಸಾರಾಯಿ ಅಂಗಡಿಯಲ್ಲಿ ಕುಳಿತು ಕೊಂಡು ಸಾರಾಯಿ ಕುಡಿಯುತ್ತಾ ಬಹುಸಂಭ್ರಮದಿಂದಿ ರುವಲ್ಲಿ ಯಾರೂಕಾಣದಂತೆ ಥಡಬಡಅಯ್ಯಂಗಾರು ಅಂ ಗಡಿವಳಕ್ಕೆಸುಗ್ಗಿದರು. ಇದನ್ನುನೋಡಿ ಬೇನಾಂಖಾರ್ರು ಕ್ಯಾಸಾಮಿ ತುಮ್ಮೇಬೀಆಗಯ ? ತುಮ್ಮಕ್ಕ್ಯಾಸಾಮೀ ಗಿರಫ್ತಾರಿ, ತುಮೆ ಬೊಮ್ಮಕ್ ಎಡ್ಡಾಕೀ ಆಯೆ ಸಾಮಿ ?

ಥಡಬಡಅಯ್ಯಂಗಾರು—ನೀ ಎನ್ಮಾತ್ಕಡೂ ಬಂದ ?

ಬೇನಾಂ—ಅರೆ ಕ್ಯಾಸಾಮಿ ಐಸಾಪೋಸ್ತೀ. ಸುಂಜೆ ಷರಾಬ್ ಹುಕ್ಕಾಕ್ಕಾಲ್ ಪೈಸೆದೇನಾ ವಸೂಲ್‌ಕರ್ಕೋಳ್ಳು ಆಯ ನೀಯಮ್ಮತಕ್ಕ್ [illegible]ಂದ್ರಿ ಸಾಮಿ?

ಥಡಬಡ—ನಿನಗೆ ಗೊತ್ತಿಲ್ಲವೇನೋಸಂಬ ಆ ಹಣವ ಬಡ್ಡಿವಸೂಲ್ಮಾಡಿಕೊಂಡು ಹೋಗೋಣವೆಂದು ಒಂದೆ ಕಾಣೂ

K. M

ಕರ್ನಾಟಕ ಮೇ 1923

ಕನ್ನಡಿಗರ ಜ್ಞಾನದೀಪಿಕೆ. 1923

ಸಂಪುಟ ೧.] ಏಪ್ರೆಲ್ ೧೯೨೩ [ಸಂಚಿಕೆ ೧೨.

ಸಂಪಾದಕ—ಎಂ. ತಿರುನಾರಾಯಣ್, ಮೈಸೂರು.

WORLD NEWS PAPER EXIBITION
MADRAS

ವಿಷಯಸೂಚಿಕೆ.

೧	ಸಾಕ್ರೆಟೀಸನ ಸಂವಾದಗಳು—ಯೂಥಿಫ್ರೋ (ಸಂಪೂರ್ಣ)		೨೫–೩೨
೨	ಇಂಗ್ಲೆಂಡಿನ ಸರ್ಕಾರಕ್ರಮ—೮ ಕಕ್ಷೆಗಳು		೮೫
೩.	,,	೯. ಇಂಗ್ಲೆಂಡಿನ ರಾಜಕೀಯ ಸನ್ನಿವೇಶ	೮೮
೪.	,,	—೧೦. ಇಂಗ್ಲಿಷು ಸರ್ಕಾರವು ಕಾರ್ಯ ಮಾಡುತ್ತಿರುವ ಸ್ಥಿತಿಯ ಸ್ವರೂಪ	೯೨
೫	,,	ಪಾರಿಭಾಷಿಕ ಶಬ್ದಕೋಶ (ಸಂಪೂರ್ಣ)	೧೦೦
೬	,,	ವಿಷಯಸೂಚಿಕೆ	I—V

ಚಂದಾ ನಿರ್ಣಯ.

	ಪೋಷಕರು	ಇತರರು.
ವರ್ಷ ಒಂದಕ್ಕೆ	ರೂ 5—0—0	ರೂ. 2—8—0
ಆರು ತಿಂಗಳಿಗೆ	,,	1—4—0
ಪ್ರತಿಗೆ	,,	0—4—0

MYSORE:
PRINTED AT SREENIVAS ELECTRIC PRESS
1923

ವಾರ್ಷಿಕ ಚಂದಾ ರೂ. 3] [ಏಪ್ರಿಲ್, ಮೇ, ಜೂನ್ 1923

WORLD NEWS ... ಶ್ರೀ
Shimoga Dist, Karnat...

ಸಂಪುಟ ೭] [ಸಂಚಿಕೆ ೪, ೫, ೬

ಆನಂದಚಂದ್ರಿಕೆ

ಅನಂದ ರಸಭರಿತ ಸಚಿತ್ರ ವಿಷಯ ವಿರಾಜಿತವಾಗಿ
ಪ್ರತಿ ಸಂಚಿಕೆಯೂ ಒಂದು ಸ್ವತಂತ್ರ ಗ್ರಂಥವಾಗಿರುತ್ತದೆ

Ananda Chandrika

An illustrated High Class Kannada Monthly

[Every issue will be an independent publication]

Contents—ವಿಷಯಸೂಚಿಕೆ

ಸಂಸ್ಕೃತ ಕವಿಚರಿತ್ರೆ, ವಿಶ್ವಕೋಶ,
ಶ್ರೀ ರುಕ್ಮಿಣೀ ಕಲ್ಯಾಣ, ಪುರಂದರದಾಸರ ಚರಿತ್ರೆ, ಯೋಗರಹಸ್ಯ.

ಗ್ರಂಥಕರ್ತ ಮತ್ತು ಪ್ರಕಾಶಕ:

ವಿದ್ಯಾನಿಧಿ ಕಾರುಪಲ್ಲಿ ಶಿವರಾಮದಾಸ್

Ananda Chandrika Office

P. O. KELAMANGALAM [Salem Dt., India]

ವಿಳಾಸ:—ಮ್ಯಾನೇಜರ್, "ಆನಂದ ಚಂದ್ರಿಕೆ"
ಕೆಲಮಂಗಲಂ ಪೋಸ್ಟು (ಶೇಲಂ ಜಿಲ್ಲಾ)

All Rights Reserved.

1923.

ಈ ಸಂಚಿಕೆ ಬೆಲೆ 8 ಆಣೆ] [ವಿ. ಪಿ. ಚಾರ್ಜು 4 ಆಣೆ.

ಸಹಿಸಿರಿ

1924

ತಾಲೂ

ಟಟಾನ ಟ್ರೆಕ್ಟರು (Titan Tractor)

ವುದು. ನಿಮಗೆ ಅವರು ಅಷ್ಟು ಉತ್ಸುಕರಾಗಿರುವರೆ——

ನ್ನವು; ಅವುಗಳಿಗೆ ಹವೆಯ ದೋಷವು ತಾಗುವ——

ಲ್ಲರೂ ಟಟಾನ ಟ್ರೆಕ್ಟರೆಂಬ ಈ ಚಿಮ್ಮಣಿಯೆ

ಲೋಕದಲ್ಲೆಲ್ಲಾ ಕಡೆಯ ಕೃಷಿ ಸಮುದಾಯವು ಪ್ರಶ್ನಿಸು

ವಾಗಿ, ಉತ್ತಮವಾಗಿ, ಬೇಗನೆ ಗದ್ದೆಗಳನ್ನು ಹೂಡು

ಳು ಕೆಲಸ ನಾವಾ ಸೋಲುವುದೂ ಇಲ್ಲ ಆದುದರಿಂದಲೇ

ುವ ಯಂತ್ರದ ನೇಗಿಲನ್ನು ಕೊಳ್ಳುವರು.

ಈ ಯಂತ್ರದ ನೇಗಿಲಿನೊಡನೆ ಉಪಯೋಗಿಸಬಹುದಾದ ಎಲ್ಲಾ ಉಪಕರಣಗಳು ನಮ್ಮಲ್ಲಿ ಯಾವಾಗಲೂ ಸಿದ್ಧವಿವೆ. ಇಂಜನುಗಳೂ (Engines), ನೀರೆತ್ತುವ ಪಂಪುಗಳೂ (Pumps) ನಮ್ಮಲ್ಲಿವೆ. ಸಚಿತ್ರ ಕ್ಯಾಟಲಾಗಿಗೆ ಬರೆಯಿರಿ.

ಎತ್ತುಗಳಿಂದೆಳೆಯುವ ಅಮೇರಿಕದ ನೇಗಿಲುಗಳು.

ಗದ್ದೆಗಳೊಳಗಿನ ಮಣ್ಣಿನ ಹೆಂಟೆಗಳನ್ನು ಹುಡಿ ಮಾಡುವ ತರತರದ ಪಾವಾನುಗಳೂ (Pegtooth Harrows, Spring tooth Harrows, Dise Harrows, Cultivators), ಇತರ ಜೀಸಾಯ ವ್ಯವಸಾಯದ ಉಪಕರಣಗಳೂ, ನಮ್ಮಲ್ಲಿವೆ. ನಾಲ್ವತ್ತೈದು ವರುಷಗಳ ಅನುಭವವೂ ಶೋಧವೂ ಈ ಉಪಕರಣಗಳ ತಯಾರಿಯಲ್ಲಿ ಅಡಗಿವೆ.

ಆಧುನಿಕ ಉಪಾಯಗಳನ್ನು ಉಪಯೋಗಿಸಿರಿ!

ನಿಮ್ಮ ಬೆಳೆಯನ್ನು ದ್ವಿಗುಣಿತವಾಗಿ ಹೆಚ್ಚಿಸಿರಿ!!

ನಿಮಗೆ ಬೇಕಾದ ಅನುಭವವನ್ನು ಪತ್ರ ಮುಖೇನ ಕೇಳಿದರೆ ಸಂತೋಷದಿಂದ ನಾವು ಉತ್ತರವನ್ನು ಕೊಡುವೆವು.

ವಿಳಾಸ:—

ಮೇಕೈತ್ ಬ್ರದರ್ಸ್ ಎಂಡ್ ಕೋ., ಲಿಮಿಟೆಡ್,

ಸ್ಟೇರ್‌ಕೋಡ್, ಮುಂ[illegible]ಯಿ.

ಸಂಪುಟ ೪೨ ಸಂಚಿಕೆ ೪೫೫] [ಏಪ್ರಿಲ್, ೧೯೬೯

ಓಂ!

ಆನಂದಚಂದ್ರಿಕೆ

[ರಾಮಕೋಟಿ ಮತ್ತು ಆನಂದಚಂದ್ರಿಕೆ]

ಸಚಿತ್ರ ಮಾಸಪತ್ರಿಕೆ

"ಆನಂದ ಚಂದ್ರಿಕೋದ್ದೇಶಂ ಜ್ಞಾನಾನಂದ ಸುಬೋಧನಂ
ನಹ್ಯಾನಂದ ಸಮುಂಸೌಖ್ಯಂ, ಪವಿತ್ರ ಮಿಹವಿದ್ಯತೇ"

ಪತ್ರಿಕಾಧಿಪತಿ
ವಿದ್ಯಾನಿಧಿ, ಕಾ. ಶಿವರಾಮದಾಸ್.

ವಿಳಾಸ:—ಮೇನೇಜರ್, ಆನಂದಚಂದ್ರಿಕೆ,
ಹೊಸೂರು ಪೋಸ್ಟ್ (ಶೇಲಂ ಜಿಲ್ಲಾ).

APPLY TO:—The Manager,
Ananda Chandrika,
P. O. Hosur,
(Salem Dt., India)

(All Rights Reserved)

ಅನೇಕರು ಪ್ರತಿಸೃಷ್ಟಿಯನ್ನು ಮಾಡಿದ್ದಾರೆ. ಸಾವಿರಾರು ಸೀಸೆಗಳು ವಿಕ್ರಯ.
ಪಂಚಭಾಷೆಯಲ್ಲಿರುವ ಚೀಟಿಯನ್ನು ನೋಡಿಕೊಂಡರೆ
ಮೋಸವಾಗಲಾರದು.

AMRUTANJAN ಅಮೃತಾಂಜನ.

ತಲೆನೋವು, ಕೇಲುಹೊಡತ, ವಾಯುನೋವು, ಪಕ್ಷವಾತ, ಚಳುಕು, ಊದು, ಪಕ್ಕನೋವು, ಜೇಳುಕಡಿತ, ಉಬ್ಬಸ, ಕೆಮ್ಮುಲು, ಶೈತ್ಯ, ಹುಣ್ಣು ಇವುಗಳಿಗೆ ಒಳ್ಳೇ ಔಷಧ: ಸಾವಿರಾರು ಮಂದಿ ಹೊಗಳಿ ಬರೆಯುತ್ತಿದ್ದಾರೆ. ಪ್ರತಿ ಮನೆಯಲ್ಲಿಯೂ ಇರಬೇಕು. ಉಪಯೋಗಿಸಿದಲ್ಲಿ ನಿಜಾಂಶವು ತಿಳಿಯುತ್ತೆ.

ಸೊಗಸಾದ ಡಬ್ಬಿ ಸಹಿತ ಕ್ರಯ ೦—೮—೧ ಆಣೆ

೧೨ ಡಬ್ಬಿಗಳಿಗೆ ರೂ. ೫—೦—೦

ತಾವರೇತೈಲ—ಕಪ್ಪುತಾವರೆ, ಕೆಂಪುತಾವರೆ, ತೀಟೆ, ಅನೇಕಜ್ಜಿ, ದುರದೆ ಮೊದಲಾದ ಚರ್ಮರೋಗಗಳು ಈ ತೈಲವನ್ನು ೪, ೫ ಸಲ ಲೇಪನಮಾಡುವಲ್ಲಿ ಕೊಂಚ ಉರಿಯುತ್ತೆ. ಸಂಗಡಲೇ ವಾಸಿಯಾಗುತ್ತೆ.

ಕ್ರಯ ಡಬ್ಬಿ ೧ ಕ್ಕೆ ೦—೪—೦ ೧೨ ಕ್ಕೆ ೨—೧೦—೦

ಮೋಹನೀತೈಲ—ಸುವಾಸನೆಯುಳ್ಳ ಎಣ್ಣೆ. ಸುಖನಿದ್ರೆ, ವಿಶ್ರಾಂತಿ, ಮೆದಳಿಗೂ ಕಣ್ಣಿಗೂ ತಂಪುಕೊಡುತ್ತೆ. ಕೂದಲನ್ನು ನಯವಾಗಿಯೂ ಜಾಗ್ರತೆ ಬೆಳೆಯುವಂತೆಯೂ ಮಾಡುತ್ತೆ.

೫ ತೊಲೆಯ ಸೀಸೆ ೧ ಕ್ಕೆ ೧೨ ಆಣೆ

ಹಲ್ಲುಪುಡಿ—ಇದು ಸುವಾಸನೆಯಾಗಿ ಮನೋಹರವಾಗಿದೆ. ಇದರಿಂದ ಉಜ್ಜಿದರೆ ಹಲ್ಲು ಶುಭ್ರವಾಗುತ್ತೆ. ಆಲ್ಲದೆ ರಕ್ತಬಾರದು. ಹಲ್ಲುನೋವು ಹೋಗುತ್ತೆ.

ಕ್ರಯ ಡಬ್ಬಿ ೧ ಕ್ಕೆ ೨ ಆಣೆ. ೧೨ ಕ್ಕೆ ರೂ. ೧—೨—೦

ಪೋಸ್ಟೇಜು ಪ್ರತ್ಯೇಕ. ಅನೇಕಸ್ಥಳಗಳಲ್ಲಿ ಮಾರಾಟಕ್ಕೆ ಇಟ್ಟಿದೆ.

ವಿಳಾಸ:—**ಅಮೃತಾಂಜನ ಡಿಪೋ,**
೧೧೯, ಫೈರಿ ರೋಡ್, ಬೊಂಬಾಯಿ,
ಅಥವ ೬, ತಂಬುಚೆಟ್ಟಿ ಬೀದಿ, ಮದರಾಸ್.

K. C. Sheshagiri Rao
S. L. N. Reading Room
Jirthamullur mail

ಸಂಚಿಕೆ 4.



ಶ್ರೀಃ

ಯೋಗರಹಸ್ಯ*

ಸಹಸ್ರಾರಕಮಲ.

[ಅಷ್ಟದಳಚಕ್ರ ರಹಸ್ಯವಿಚಾರ.]

ಶ್ರುತಿ॥ ಅಷ್ಟಾಚಕ್ರಾನವದ್ವಾರಾ ದೇವಾನಾಂ ಪೂರಯೋಧ್ಯಾ।
ತಸ್ಯಾಂಹಿರಣ್ಮಯಃ ಕೋಶಃ ಸ್ವರ್ಗೋಜ್ಯೋತಿಷಾ ವೃತಃ।
ತಸ್ಮಿನ್ ಹಿರಣ್ಮಯೇಕೋಶೇ ತ್ರ್ಯರೇತ್ರಿಪ್ರತಿಷ್ಠಿತೇ।
ತಸ್ಮಿನ್ಯದ್ಯಕ್ಷಮಾತ್ಮನ್ವತ್ ತದ್ವೈ ಬ್ರಹ್ಮವಿದೋವಿದುಃ॥

"ಪ್ರಭ್ರಾಜಮಾನಾಂ ಹರಿಣೀಂಯಶಸಾ ಸಂಪರೀವೃತಾಂ।
ಪುರಂ ಹಿರಣ್ಮಯೀಂ ಬ್ರಹ್ಮ ವಿವೇಶಾ ಪರಾಜಿತಾಂ"

(ಅಥರ್ವವೇದ ೧೦; ೨—೩೨,೩೪.)

ಇತರರಿಂದ ಜಯಿಸಲ್ಪಡುವುದಕ್ಕೆ ಅಸಾಧ್ಯವಾದ, ದೇವತೆಗಳ ನಿವಾಸವಾದ ಹಿರಣ್ಮಯವಾದ, ಬ್ರಹ್ಮಪುರಕ್ಕೆ ಎಂಟು ಚಕ್ರಗಳೂ, ಒಂಭತ್ತು ಬಾಗಿಲುಗಳೂ ಇರುವವು. ಅದರ ನಡುವೆ ಜ್ಯೋತಿರ್ಮಯವಾದ (ಕಾಂತಿಯಿಂದ ಕೂಡಿದ) ಸುವರ್ಣಕೋಶವಿರುವುದು. ತ್ರಿಕೋಣಗಳಿಂದ (ಮೂಲೆಗಳಿಂದ) ಕೂಡಿದ ಮೂರು ಕೋಶಗಳಲ್ಲಿಯೂ ಒಂದು ನೇತ್ರವಿರುವುದು. ಬ್ರಹ್ಮಜ್ಞಾನಿಗಳೀನೇತ್ರವನ್ನೇ ಆತ್ಮವೆಂತಲೂ (ಜೀವಚೈತನ್ಯವೆಂತಲೂ, ಹಂಸನಟನೆಯೆಂತಲೂ) ಒಕ್ಕಣಿಸುವರು.

* ಯೋಗರಹಸ್ಯದ 1—2—3 ಸಂಚಿಕೆಗಳು ಸಿದ್ಧವಾಗಿರುತ್ತವೆ.

ವಿಳಾಸ :—ಆನಂದಚಂದ್ರಿಕೆ, ಹೊಸೂರು (P. O. Hosur), ಶೇಲಂಜಿಲ್ಲಾ.

ಜಯಿಸಲಶಕ್ಯವಾದ ಈ ಹಿರಣ್ಮಯಪುರವು ಬ್ರಹ್ಮನಿಂದ ಪ್ರವೇಶಿಸಲ್ಪಟ್ಟಿತು, ಎಂಬದಾಗಿ ವೇದವಚನಗಳೀಬ್ರಹ್ಮಪುರವನ್ನು ಬಣ್ಣಿಸುತ್ತಿರುವುವು.

"ಅಷ್ಟಾಚಕ್ರಾ" ಎನ್ನುವುದರಿಂದ ಚಕ್ರಸ್ಥಾನಗಳು ಎಂಟಿರುವುವೆಂದು ವಿಶದವಾಗುತ್ತದೆ. (ಶ್ರೀಗುರು ದತ್ತಾತ್ರೇಯ ಸ್ತೋತ್ರರೂಪವಾದ ಷಡಾಧಾರ ಸ್ತೋತ್ರಮಂಜರಿಯೂ, ಮತ್ತೆಕೆಲವು ಗ್ರಂಥಾನುಭವಗಳೂ ಅಷ್ಟಚಕ್ರರಹಸ್ಯವನ್ನು ಚೆನ್ನಾಗಿ ವಿವರಿಸುತ್ತವೆ.

ಷಡಾಧಾರಧ್ಯಾನಮಂಜರಿ.

ಶ್ಲೋ॥ ಮೂಲಾಧಾರೇ ವಾರಿಜಪತ್ರೇ ಸುಚತುಷ್ಕೇ।
ವಂ ಶಂ ಷಂ ಸಂ ವರ್ಣವಿಶಾಲೇ ಸುವಿಶಾಲೇ।
ರಕ್ತಂ ವರ್ಣಂ ಶ್ರೀಗಣನಾಥಂ ಭಗವಂತಂ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ॥

ಸ್ವಾಧಿಷ್ಠಾನೇ ಷಡ್ದಳಪತ್ರೇ ಸತುಲಿಂಗೇ।
ಬಾಲಾಂತಾವದ್ವರ್ಣ ವಿಶಾಲೇ ಸುವಿಶಾಲೇ।
ಪೀತಂ ವರ್ಣಂ ವಾಕ್‌ಪತಿರೂಪಂ ಧ್ರುಹಿಣಂತಂ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ॥

ನಾಭೌಪದ್ಮೇ ಪತ್ರದಶಾರೇ ಡಫವರ್ಣೇ।
ಲಕ್ಷ್ಮೀಕಾಂತಂ ಗರುಡಾರೂಢಂ ನರವೀರಂ।
ನೀಲಂ ವರ್ಣಂ ನಿರ್ಗುಣರೂಪಂ ನಿಗಮಾಂತಂ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ॥

ಹೃತ್ಪದ್ಮಾಂತೇ ದ್ವಾದಶಪತ್ರೇ ಕಠವರ್ಣೇ।
ಸಾಂಬಂಶೈವಂ ಹಂಸವಿಶೇಷಂ ಶಮಯಂತಂ।
ಸರ್ಗಸ್ಥಿತ್ಯಂತಂ ಕುರ್ವಂತಂ ಶಿವಶಕ್ತಿಂ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ॥

ಕಂಠಸ್ಥಾನೇ ಚಕ್ರವಿಶುದ್ಧೇ ಕಮಲಾಂತೇ।
ಚಂದ್ರಾಕಾರೇ ಷೋಡಶಪತ್ರೇ ಸ್ವರವರ್ಣೇ।
ವಾಯ್ವಾಧೀಶಂ ಬೀಜಶಿವಂತಂ ನಿಜರೂಪಂ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ॥

ಆಜ್ಞಾಚಕ್ರೇ ಭೃಕುಟಿಸ್ಥಾನೇ ದ್ವಿದಳಾಂತೇ ।
ಹಂಸಂ ಬೀಜಂ ಜ್ಞಾನಸಮುದ್ರಂ ಗುರುಮೂರ್ತಿಂ ।
ವಿದ್ಯುದ್ವರ್ಣಂ ಜ್ಞಾನಮಯಂತಂ ಒಟಿಲಾಖ್ಯಂ ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ ॥

ಮೂರ್ಧ್ನಿ ಸ್ಥಾನೇ ವಾರಿಜಪತ್ರೇ ಶಶಿಬೀಜೇ ।
ಶುಭ್ರಂ ವರ್ಣಂ ಪದ್ಮಸಹಸ್ರಂ ಸುವಿಶಾಲಂ ।
ಹಂಬೀಜಾಖ್ಯಂ ವರ್ಣಸಹಸ್ರಂ ತುರಿಯಾಂತಂ ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ ॥

ಬ್ರಹ್ಮಾನಂದಂ ಬ್ರಹ್ಮಮುಕುಂದಂ ಭಗವಂತಂ ।
ಬ್ರಹ್ಮಜ್ಞಾನಂ ಸತ್ಯಮನಂತಂ ಭವರೂಪಂ ।
ಪೂರ್ಣಂ ಚಿದ್ಘನ ಪಂಚಮಖಂಡಂ ಶಿವರೂಪಂ ।
ದತ್ತಾತ್ರೇಯಂ ಶ್ರೀಗುರುರೂಪಂ ಪ್ರಣತೋಸ್ಮಿ ॥

ಶಾಂತಾಕಾರಂ ಶೇಷಶಯಾನಂ ಸುರವಂದ್ಯಂ ।
ಕಾಂತಾನಾಥಂ ಕೋಮಲಗಾತ್ರಂ ಕಮಲಾಕ್ಷಂ ।
ಚಿಂತಾರತ್ನಂ ಚಿದ್ಘನಪೂರ್ಣಂ ದ್ವಿಜರಾಜಂ ।
ದತ್ತಾತ್ರೇಯಂ ಶ್ರೀಗುರುಮೂರ್ತಿಂ ಪ್ರಣತೋಸ್ಮಿ ॥

ಈ ವಿವರವು ಹಿಂದಿನ ಪ್ರಕರಣದಲ್ಲಿ ಕೊಟ್ಟಿರುವ "ಷಡಾಧಾರಚಕ್ರ" ದಲ್ಲಿ ತಿಳುಹಿಸಲಾಗಿದೆ. ಮೂಲಾಧಾರ (The Sacral-plexus), ಸ್ವಾಧಿಷ್ಠಾನ (The Solar-plexus), ಮಣಿಪೂರಕ (The Navel-plexus), ಅನಾಹತ (The Heart-plexus), ವಿಶುದ್ಧ (The Throat-plexus), ಆಜ್ಞಾಚಕ್ರ (The Scowl-plexus) ಷಟ್ಚಕ್ರವಿವರಣೆಯಲ್ಲಿ ಸೂಚಿಸಿದೆ. ಮೂಲಾಧಾರಕ್ಕಿಂತ ಎರಡಂಗುಲ ಮೇಲೆಯೂ ಸ್ವಾಧಿಷ್ಠಾನಕ್ಕಿಂತ ಎರಡಂಗುಲ ಕೆಳಗೂ ಇರತಕ್ಕ ನಾಡೀಚಕ್ರವೂ, ಆಜ್ಞಾಚಕ್ರಕ್ಕೆ ಮೇಲ್ಭಾಗದಲ್ಲಿ ಹನ್ನೆರಡಂಗುಲದಲ್ಲಿ ವಿರಾಜಿಸತಕ್ಕ ಬ್ರಹ್ಮರಂಧ್ರದಲ್ಲಿರುವ ಸಹಸ್ರಾರ (The Cerebral-plexus) ಚಕ್ರವೂ ಸೇರಲಾಗಿ ಎಂಟು ಚಕ್ರಗಳಾಗುತ್ತವೆ.

—: ಸಹಸ್ರಾರ ಚಕ್ರ :—



ಆತ್ಮಜ್ಯೋತಸ್ಸ್ವವು ಬ್ರಹ್ಮವಿಲಾಸವೆಂತಲೂ ಹಂಸನಾಟನೆಯೆಂತಲೂ ಬಗೆ ಬಗೆಯ ಹೆಸರುಗಳಿಂದ ಕರೆಯಲ್ಪಡುತ್ತ, ಸಹಸ್ರಾರಚಕ್ರದಲ್ಲಿ ಸಂಚರಿಸುತ್ತಿರುವ ದಿವ್ಯ ವೈಭವವು ಯೋಗಿಗಳಿಗೆ ಅನುಭವದಿಂದ ಗೋಚರವಾಗುತ್ತದೆ. ಇ ವಿವರ ವಿಲ್ಲಿ ಸಂಗ್ರಹವಾಗಿ ಸೂಚಿಸಲ್ಪಡುತ್ತದೆ.

S-L-N-Reading-Room
Jirhamukhur-Omalk

ಯೋಗರಹಸ್ಯ

ಹಂಸನಟನೆ.

ಶ್ಲೋ॥ಪೂರ್ವದಳೇ ಪುಣ್ಯೇಮತಿರಾಗ್ನೇಯೇ ನಿದ್ರಾಲಸ್ಯಾದಯೋಭವಂತಿ।
ಯಾಮ್ಯೇಕ್ರೌರ್ಯೇಮತಿನೈರ್ಋತೇ ಪಾಪೇಮನೀಷಾವಾರುಣ್ಯಾಂ॥
ಕ್ರೀಡಾವಾಯವ್ಯಾಂ ಗಮನಾದೌ ಬುದ್ಧಿಸ್ತ್ಸೌಮ್ಯೇ ರತಿಪ್ರೀತಿ।
ರೀಶಾನ್ಯೇದ್ರವ್ಯಾದಾನಂ ಮಧ್ಯೇವೈರಾಗ್ಯಂ ಕೇಸರೇಜಾಗ್ರದವಸ್ಥಾ॥
ಕರ್ಣಿಕಾಯಾಂ ಸ್ವಪ್ನೋಲಿಂಗೇಸುಷುಪ್ತಿಃ ಪದ್ಮತ್ಯಾಗೇತುರೀಯಂ।
ಯದಾಹಂ ಸೋನಾದೇನಿಲೀನೋ ಭವತಿತತ್ತುರೀಯಾತೀತಂ ಭವತಿ॥

(ಹಂಸೋಪನಿಷತ್ತು.)

"ಪೂರ್ವದಳೇ ಪುಣ್ಯಮತಿಃ, ಆಗ್ನೇಯೇ ನಿದ್ರಾಲಸ್ಯಂ, ಯಾಮ್ಯೇ ಕ್ರೌರ್ಯಂ, ನೈಋತ್ಯಾಂ ಪಾಪೇಬುದ್ಧಿಃ, ವಾರುಣ್ಯಾಂ ಕ್ರೀಡಾದೌ, ವಾಯವ್ಯೇ ಗಮನಾದೌ, ಕೌಬೇರ್ಯಾಂ ರತಿಪ್ರೀತಿಃ, ಈಶಾನ್ಯೇ ದಾನಪ್ರೀತಿಃ, ಮಧ್ಯೇ ವೈರಾಗ್ಯಂ, ಕೇಸರೇ ಜಾಗ್ರತಃ, ಕರ್ಣಿಕಾಯಾಂ ಸ್ವಪ್ನಂ, ಲಿಂಗೇಸುಷುಪ್ತಿಃ, ಪದ್ಮತ್ಯಾಗೇ ತುರೀಯಂ"

ಹಂಸನಟನೆಯೆಂಬ ಆತ್ಮಜ್ಯೋತಸ್ಯದ ಸಂಚಾರವು (1) ಪೂರ್ವದಳಕ್ಕೆ ಬಂದಾಗ ಪುಣ್ಯಮತಿಯೂ (2) ಆಗ್ನೇಯದಲ್ಲಿರುವಾಗ ಆಲಸ್ಯವೂ (3) ಯಾಮ್ಯದಲ್ಲಿ ಕ್ರೂರತ್ವವೂ (4) ನೈಋತ್ಯದಲ್ಲಿ ಪಾಪಕಾರ್ಯಾಸಕ್ತಿಯೂ (5) ವರುಣದಳದಲ್ಲಿ ಕ್ರೀಡಾವಿನೋದಗಳೂ (6) ವಾಯವ್ಯದಳದಲ್ಲಿ (ಗಮನ) ಸಂಚಾರಪ್ರೀತಿಯೂ (7) ಕುಬೇರದಳದಲ್ಲಿ ರತಿವಿಲಾಸದಲ್ಲಿ ಇಚ್ಛೆಯೂ (8) ಈಶಾನ್ಯದಲ್ಲಿ ದಾನಧರ್ಮ ಧನಾರ್ಜನಾಭಿಲಾಷೆಯೂ, ಕಮಲಮಧ್ಯದಲ್ಲಿರುವಾಗ ವೈರಾಗ್ಯಭಾವವೂ, ಕೇಸರದಲ್ಲಿ ಜಾಗ್ರತೆಯೂ, ಕರ್ಣಿಕೆಯಲ್ಲಿ ಸ್ವಪ್ನವೂ, ಲಿಂಗದಲ್ಲಿ (ದಳಮೂಲದಲ್ಲಿ) ಸುಷುಪ್ತಿಯೂ, ಕಮಲವನ್ನು ಬಿಟ್ಟಿರುವಾಗ ತುರೀಯಾವಸ್ಥೆಯೂ ಉಂಟಾಗಿ ಅತಿವಿಚಿತ್ರವಾಗಿರುತ್ತದೆ. ಜಾಗ್ರದಾದಿ ಅವಸ್ಥೆಗಳ ರಹಸ್ಯವನ್ನು ತಿಳಿದರೆ ಇದು ಮತ್ತಷ್ಟು ಸುಲಭವಾಗಿ ತಿಳಿಯಬರುತ್ತದೆ. ಯಾವ ಅವಸ್ಥೆಯಲ್ಲಿ ವ್ಯಷ್ಟಿ ಸ್ವರೂಪನಾದ ಜೀವನೂ, ಸಮಷ್ಟಿಸ್ವರೂಪನಾದ ಪರಮಾತ್ಮನೂ, ಯಾವ ವಿಧವಾದ ನಾಮಧಾಮಗಳನ್ನುಂಟಾಗಿರುತ್ತಾರೆಂಬ ವಿವರವಿಲ್ಲಿ ತಿಳುಹಿಸಲ್ಪಡುತ್ತದೆ. ಈ ವಿವರವು "ಷೋಡಶಾವಸ್ಥಾನಿರೂಪಣ ಚಕ್ರ" ವೆಂಬ ಹೆಸರಿನಿಂದ ಇಲ್ಲಿ ವಿವರಿಸಲ್ಪಡುತ್ತದೆ.

ಷೋಡಶಾವಸ್ಥಾನಿರೂಪಣ ಚಕ್ರ.

ಅವಸ್ಥಾ ವಿವರ	ಪ್ರಣವಾಕ್ಷರ	ಪಾದನಾಮ	ದೇಹನಾಮ	ಪರಮಾತ್ಮನಾಮ	ಜೀವನಾಮ	ಬ್ರಹ್ಮವಿದನಾಮ
ಜಾಗ್ರತೆ ಯೊಳ್ ಜಾಗ್ರತೆ	ಅಕಾರ ದೊಳ್ ಅಕಾರ	ಅವಿದ್ಯಾಪಾದ ದೊಳ್ ಅವಿದ್ಯಾಪಾದ	ಸ್ಥೂಲದೇಹ ದೋಳ್ ಸ್ಥೂಲದೇಹ	ವಿರಾಟ್ಪ ನೊಳ್ ವಿರಾಟ್	ವಿಶ್ವನೊಳ್ ವಿಶ್ವನು	ಓತನೊಳ್ ಓತ
ಜಾಗ್ರತೆ ಸ್ವಪ್ನ	ಅಕಾರ ಉಕಾರ	ಅವಿದ್ಯಾಪಾದ ವಿದ್ಯಾಪಾದ	ಸ್ಥೂಲ ಸೂಕ್ಷ್ಮ	ವಿರಾಟ್ ಹಿರಣ್ಯಗರ್ಭ	ವಿಶ್ವ ತೈಜಸ	ಓತ ಅನುಜ್ಞಾತ
ಜಾಗ್ರತೆ ಸುಷುಪ್ತಿ	ಅಕಾರ ಮಕಾರ	ಅವಿದ್ಯಾ ಆನಂದ	ಸ್ಥೂಲ ಕಾರಣ	ವಿರಾಟ್ ಅವ್ಯಾಕೃತ	ವಿಶ್ವ ಪ್ರಾಜ್ಞ	ಓತ, ಅನುಜ್ಞೈಕರಸ
ಜಾಗ್ರತೆ ತುರೀಯ	ಅಕಾರ ಅರ್ಧಮಾತ್ರೆ	ಅವಿದ್ಯಾ ತುರೀಯ	ಸ್ಥೂಲ ಮಹಾಕಾರಣ	ವಿರಾಟ್ ಪರಮಾತ್ಮ	ವಿಶ್ವ ಕೂಟಸ್ಥ	ಓತ ಅವಿಕಲ್ಪ
ಸ್ವಪ್ನ ಜಾಗ್ರತೆ	ಉಕಾರ ಅಕಾರ	ವಿದ್ಯಾ ಅವಿದ್ಯಾ	ಸೂಕ್ಷ್ಮ ಸ್ಥೂಲ	ಹಿರಣ್ಯಗರ್ಭ ವಿರಾಟ್	ತೈಜಸ ವಿಶ್ವ	ಅನುಜ್ಞಾತ ಓತ
ಸ್ವಪ್ನ ಸ್ವಪ್ನ	ಉಕಾರ ಉಕಾರ	ವಿದ್ಯಾ ವಿದ್ಯಾ	ಸೂಕ್ಷ್ಮ ಸೂಕ್ಷ್ಮ	ಹಿರಣ್ಯಗರ್ಭ ಹಿರಣ್ಯಗರ್ಭ	ತೈಜಸ ತೈಜಸ	ಅನುಜ್ಞಾತ ಅನುಜ್ಞಾತ
ಸ್ವಪ್ನ ಸುಷುಪ್ತಿ	ಉಕಾರ ಮಕಾರ	ವಿದ್ಯಾ ಆನಂದ	ಸೂಕ್ಷ್ಮ ಕಾರಣ	ಹಿರಣ್ಯಗರ್ಭ ಅವ್ಯಾಕೃತ	ತೈಜಸ ಪ್ರಾಜ್ಞ	ಅನುಜ್ಞಾತ ಅನುಜ್ಞೈಕರಸ
ಸ್ವಪ್ನ ತುರೀಯ	ಉಕಾರ ಅರ್ಧಮಾತ್ರೆ	ವಿದ್ಯಾ ತುರೀಯ	ಸೂಕ್ಷ್ಮ ಮಹಾಕಾರಣ	ಹಿರಣ್ಯಗರ್ಭ ಪರಮಾತ್ಮ	ತೈಜಸ ಕೂಟಸ್ಥ	ಅನುಜ್ಞಾತ ಅವಿಕಲ್ಪ
ಸುಷುಪ್ತಿ ಜಾಗ್ರತೆ	ಮಕಾರ ಅಕಾರ	ಆನಂದ ಅವಿದ್ಯಾ	ಕಾರಣ ಸ್ಥೂಲ	ಅವ್ಯಾಕೃತ ವಿರಾಟ್	ಪ್ರಾಜ್ಞ ವಿಶ್ವ	ಅನುಜ್ಞೈಕರಸ ಓತ
ಸುಷುಪ್ತಿ ಸ್ವಪ್ನ	ಮಕಾರ ಉಕಾರ	ಆನಂದ ವಿದ್ಯಾ	ಕಾರಣ ಸೂಕ್ಷ್ಮ	ಅವ್ಯಾಕೃತ ಹಿರಣ್ಯಗರ್ಭ	ಪ್ರಾಜ್ಞ ತೈಜಸ	ಅನುಜ್ಞೈಕರಸ ಅನುಜ್ಞಾತ
ಸುಷುಪ್ತಿ ಸುಷುಪ್ತಿ	ಮಕಾರ ಮಕಾರ	ಆನಂದ ಆನಂದ	ಕಾರಣ ಕಾರಣ	ಅವ್ಯಾಕೃತ ಅವ್ಯಾಕೃತ	ಪ್ರಾಜ್ಞ ಪ್ರಾಜ್ಞ	ಅನುಜ್ಞೈಕರಸ ಅನುಜ್ಞೈಕರಸ
ಸುಷುಪ್ತಿ ತುರೀಯ	ಮಕಾರ ಅರ್ಧಮಾತ್ರೆ	ಆನಂದ ತುರೀಯ	ಕಾರಣ ಮಹಾಕಾರಣ	ಅವ್ಯಾಕೃತ ಪರಮಾತ್ಮ	ಪ್ರಾಜ್ಞ ಕೂಟಸ್ಥ	ಅನುಜ್ಞೈಕರಸ ಅವಿಕಲ್ಪ
ತುರೀಯ ಜಾಗ್ರತೆ	ಅರ್ಧಮಾತ್ರೆ ಅಕಾರ	ತುರೀಯ ಅವಿದ್ಯಾ	ಮಹಾಕಾರಣ ಸ್ಥೂಲ	ಪರಮಾತ್ಮ ವಿರಾಟ್	ಕೂಟಸ್ಥ ವಿಶ್ವ	ಅವಿಕಲ್ಪ ಓತ
ತುರೀಯ ಸ್ವಪ್ನ	ಅರ್ಧಮಾತ್ರೆ ಉಕಾರ	ತುರೀಯ ವಿದ್ಯಾ	ಮಹಾಕಾರಣ ಸೂಕ್ಷ್ಮ	ಪರಮಾತ್ಮ ಹಿರಣ್ಯಗರ್ಭ	ಕೂಟಸ್ಥ ತೈಜಸ	ಅವಿಕಲ್ಪ ಅನುಜ್ಞಾತ
ತುರೀಯ ಸುಷುಪ್ತಿ	ಅರ್ಧಮಾತ್ರೆ ಮಕಾರ	ತುರೀಯ ಆನಂದ	ಮಹಾಕಾರಣ ಕಾರಣ	ಪರಮಾತ್ಮ ಅವ್ಯಾಕೃತ	ಕೂಟಸ್ಥ ಪ್ರಾಜ್ಞ	ಅವಿಕಲ್ಪ ಅನುಜ್ಞೈಕರಸ
ತುರೀಯ ತುರೀಯ	ಅರ್ಧಮಾತ್ರೆ ಅರ್ಧಮಾತ್ರೆ	ತುರೀಯ ತುರೀಯ	ಮಹಾಕಾರಣ ಮಹಾಕಾರಣ	ಪರಮಾತ್ಮ ಪರಮಾತ್ಮ	ಕೂಟಸ್ಥ ಕೂಟಸ್ಥ	ಅವಿಕಲ್ಪ ಅವಿಕಲ್ಪ

ಯೋಗಾಭ್ಯಾಸ ಮಾಡತಕ್ಕ ಸಾಧಕರು ಚಿತ್ತವೃತ್ತಿಗಳ ಬಹುವಿಧವಾದ ಚಾಂಚಲ್ಯವನ್ನು ನಿಗ್ರಹಿಸಿ (ಸ್ವಾಧೀನಕ್ಕೆ ತಂದುಕೊಂಡು) ಈವರೆಗೆ ವಿವರಿಸಿದ ಹಂಸಜ್ಯೋತಸ್ಸ್ಯವು ಹೃದಯಕಮಲವನ್ನನುಸರಿಸಿ ಸಂಚರಿಸತಕ್ಕ ವಿಧಾನವನ್ನೂ, ಜಾಗ್ರತಿ, ಸ್ವಪ್ನ, ಸುಷುಪ್ತಿ, ತುರೀಯಗಳೆಂಬ ಸಂವಿಧಾನಗಳಲ್ಲಿ ಹೊಂದತಕ್ಕ ನಾಮ ಧಾಮಗಳನ್ನೂ ಶ್ರದ್ಧೆಯಿಂದ ಪರಿಕಿಸಿ ತಿಳಿಯಬೇಕಾದುದು ಪರಮಾವಶ್ಯಕವು; ಹಾಗೆ ತಿಳಿದ ಹೊರತು ಆತ್ಮವಿಕಾಸ ಉಂಟಾಗಲಾರದು. ಒಂದೇ ಜನ್ಮದಲ್ಲಿ ಸಂಪೂರ್ಣತ್ವವು ಸಿದ್ಧಿಸದೆ ಹೋದಾಗ್ಗೂ, ಈ ಜನ್ಮದಲ್ಲಿ ಪ್ರಯತ್ನ ಪೂರ್ವಕವಾಗಿ ಯೋಗಸಾಧನೆಗಾರಂಭಿಸಿದರೆ ಅಂತಹ ಉತ್ತಮವಾದ ಜನ್ಮವು (ಪರಿಪೂರ್ಣತ್ವವನ್ನು ಹೊಂದುವುದಕ್ಕೆ ಅನುಕೂಲವಾದ ಜನ್ಮವು) ಅಂದರೆ; ಆತ್ಮವಿಕಾಸಕ್ಕೆ ಅನುಕೂಲವಾದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದೊಡಗೂಡಿದ ಉತ್ತಮ ಜನ್ಮವು ಯೋಗಬಲದಿಂದಲೇ ಉಂಟಾಗಬೇಕು. ಈ ಜನ್ಮದಲ್ಲಿ ಯೋಗಸಾಧನೆಗಾರಂಭಿಸಿ, ಅಷ್ಟರಲ್ಲಿಯೇ ಅಂದರೆ ಯೋಗಸಿದ್ಧಿಯಾಗುವುದರೊಳಗಾಗಿಯೇ ಸ್ಥೂಲಶರೀರವು ಬಿದ್ದು ಹೋಗುವುದಾದರೆ ಆಗೇನುಮಾಡತಕ್ಕದ್ದು? ಪ್ರಾರಂಭಿಸಿದ ಯೋಗವು ಸಿದ್ಧಿಹೊಂದುವುದಕ್ಕೆ ಮೊದಲೇ ಈ ತೆರನಾದ ವಿಘ್ನವುಂಟಾದರೆ ಅಂಥವನ ಗತಿಯೇನು; ಎಂಬದಾಗಿ ಸಂಶಯಗ್ರಸ್ತನಾದ ಪಾರ್ಥನು ಬಿನ್ನವಿಸಲಾಗಿ, ಶ್ರೀಪರಮಾತ್ಮನಿಂತೆಂದನು.

ಶ್ಲೋ॥ ಪಾರ್ಥನೈವೇಹನಾಮುತ್ರ ವಿನಾಶಸ್ತಸ್ಯವಿದ್ಯತೇ।
ನಹಿಕಲ್ಯಾಣಕೃತ್ಕಶ್ಚಿದ್ದುರ್ಗತಿಂತಾತಗಚ್ಛತಿ॥
ಪ್ರಾಪ್ಯಪುಣ್ಯಕೃತಾಂಲೋಕಾನ್। ಉಷಿತ್ವಾಶಾಶ್ವತೀಸ್ಸಮಾಃ।
ಶುಚೀನಾಂ ಶ್ರೀಮತಾಂಗೇಹೇ। ಯೋಗಭ್ರಷ್ಟೋಽಭಿಜಾಯತೇ॥
ಅಥವಾಯೋಗಿನಾಮೇವ। ಕುಲೇಭವತಿಧೀಮತಾಂ।
ಏತದ್ಧಿದುರ್ಲಭತರಂ ಲೋಕೇ ಜನ್ಮಯದೀದೃಶಂ॥

(ಭಗವದ್ಗೀತೆ ೬–೪೦, ೪೧, ೪೨.)

ಎಲೈ ಅರ್ಜುನಾ! ಅಂತಹ ಯೋಗಭ್ರಷ್ಟನಿಗೆ (ಯೋಗವಿಘ್ನವುಂಟಾದವನಿಗೆ) ಇಹಪರಲೋಕಗಳಲ್ಲೆಲ್ಲಿಯೂ ನಾಶವಿಲ್ಲವು. ಅಯ್ಯಾ! ಒಳ್ಳೆಯದನ್ನು ಮಾಡಿದವನಿಗೆಂದಿಗೂ ಕೇಡಿಲ್ಲವು. ಯೋಗವಿಘ್ನ ಹೊಂದಿದವನು ಪುಣ್ಯಾತ್ಮರ ಲೋಕಗಳನ್ನು ಹೊಂದಿ, ಅನೇಕ ವರ್ಷಗಳ ಕಾಲವಲ್ಲಿ ವಾಸಮಾಡಿ, ಬಳಿಕ ಪರಿಶುದ್ಧಪ್ರವರ್ತಕರಾದ ಶ್ರೀಮಂತರಮನೆಯಲ್ಲಿ ಹುಟ್ಟುವನು. ಅಥವಾ ನಿಜಗುಣಸಂಪನ್ನರಾದ ಯೋಗಿಗಳವಂಶದಲ್ಲಿ ಜನಿಸುವನು. ಇಂತಹ ಜನ್ಮವು ಲಭಿಸುವ್ರದು ಕೂಡಾ ಬಹಳ ದುರ್ಲಭವೆಂದು ತಿಳಿ! ಎಂಬದಾಗಿ ಅಪ್ಪಣೆಕೊಡಿಸಿರುವನು.

ಯೋಗಸಾಧನೆಯಿಂದೇನುಫಲ ? ಯೋಗಪಸ್ಕೀಕೆ ಅಭ್ಯಾಸಮಾಡಬೇಕು ? ಎಂಬ ಪ್ರಶ್ನೆಯನ್ನು ಪರಿಶೀಲಿಸಿ ನೋಡಲಾಗಿ ಅದಕ್ಕೆ ಪ್ರತ್ಯುತ್ತರವೇತರನಾಗಿರುತ್ತದೆ.

ಕಾರ್ಪಣ್ಯ ದುಃಖ ದೋಷಸಮಸ್ಪಿತವಾದ ಮನಸ್ಸಿನ ಚಾಂಚಲ್ಯವನ್ನು ಪರಿಹರಿಸಿ, ಶಾಂತಿಸಂತೋಷಸಂಪನ್ನವಾದ ಆನಂದವನ್ನೊಡಗೂಡಿಸುವುದೇ ಯೋಗದ ಉದ್ದೇಶವು. ಆನಂದವು ಅನೇಕ ವಿಧವಾಗಿರುತ್ತದೆ.

" ಆನಂದೋ ಬ್ರಹ್ಮಣೋವಿದ್ವಾನ್ ನಬಿಭೇತಿಕುತಶ್ಚನ " ಆನಂದವು ಬ್ರಹ್ಮ ಸ್ವರೂಪವೆಂದರಿತ ವಿದ್ವಾಂಸನು ಎಂದಿಗೂ ಭಯಪಡಲಾರನೆಂದು ಪ್ರಾಜ್ಞರ ವಚನವು. ದ್ವಾದಶಾದಿತ್ಯರಂದದಿ ಹನ್ನೆರಡು ವಿಧಗಳಾದ ಆನಂದಗಳಿರುವುವು. ಆ ವಿವರವೆಂತೆಂದರೆ.—

" ಆತಿಷ್ಠೋ ದೃಢಿಷ್ಠೋ ಬಲಿಷ್ಠಃ | ತಸ್ಯೇಯಂ ಪೃಥಿವೀ ಸರ್ವಾವಿತ್ತಸ್ಯ ಪೂರ್ಣಾ ಸ್ಯಾತ್ | ಸಏಕೋ ಮಾನುಷ ಆನಂದಃ|| ತೇಯೇ ಶತಂ ಮಾನುಷಾ ನಂದಾಃ, ಸಏಕೋ ಮನುಷ್ಯ ಗಂಧರ್ವಾಣಾಮಾನಂದಃ | ತೇಯೇ ಶತಂ ಮನುಷ್ಯ ಗಂಧರ್ವಾಣಾಮಾನಂದಾಃ, ಸಏಕೋ ದೇವಗಂಧರ್ವಾಣಾಮಾನಂದಃ | ತೇಯೇ ಶತಂ ದೇವಗಂಧರ್ವಾಣಾ ಮಾನಂದಾಃ, ಸಏಕಃ ಪಿತೃಣಾಂ ಚಿರಲೋಕ ಲೋಕಾನಾ ಮಾನಂದಃ| ತೇಯೇಶತಂ ಪಿತೃಣಾಂ ಚಿರಲೋಕಲೋಕಾನಾ ಮಾನಂದಾಃ, ಸಏಕ ಅಜಾನಜಾನಾಂ ದೇವಾನಾಮಾನಂದಃ | ತೇಯೇ ಶತಂ ಅಜಾನಜಾನಾಂದೇವಾನಾಮಾನಂದಾಃ, ಸಏಕಃ ಕರ್ಮದೇವಾನಾ ಮಾನಂದಃ ತೇಯೇಶತಂ ಕರ್ಮದೇವಾನಾಮಾನಂದಾಃ, ಸಏಕೋ ದೇವಾನಾಮಾನಂದಃ ತೇಯೇಶತಂ ದೇವಾನಾಮಾನಂದಾಃ, ಸಏಕ ಇಂದ್ರಸ್ಯಾನಂದಃ | ತೇಯೇಶ ಮಿಂದ್ರಸ್ಯಾನಂದಾಃ, ಸಏಕೋ ಬೃಹಸ್ಪತೇರಾನಂದಃ | ತೇಯೇಶತಂ ಬೃಹಸ್ಪತಿ ರಾನಂದಾಃ, ಸಏಕಃ ಪ್ರಜಾಪತೇ ರಾನಂದಾಃ, ತೇಯೇಶತಂ ಪ್ರಜಾಪತೇರಾನಂದಾ ಸಏಕೋ ಬ್ರಹ್ಮಣಆನಂದಃ|| (ತೈತ್ತಿರೀಯೋಪನಿಷತ್ತು

ಆನಂದವನ್ನನುಭವಿಸತಕ್ಕ ಪ್ರಾರಂಭ ತರಗತಿ ಮನುಷ್ಯವರ್ಗವು. ಮನುಷ್ಯಾ ನಂದ ಏಂತಹದೆಂಬುದನ್ನು ಜ್ಞಾನಿಗಳೀತೆರನಾಗಿ ಒಕ್ಕಣಿಸಿರುತ್ತಾರೆ.

ಶ್ಲೋ|| ಯಾವನೇನಾಭಿಸಂಪನ್ನೋರೂಪಶೀಲಾದಿಸಂಯುತಃ |
. . . . . ವಜ್ರಸಾರಸಮಾನಾಂಗೋ ಬಲವಾ ಬಲಭಿದ್ಯಥಾ
ತಸ್ಯೇಯಂ ಪೃಥಿವೀಸರ್ವಾ, ಸಪ್ತಸಾಗರಮೇಖಲಾ |
ಸರ್ವೈರ್ವಿತ್ತೈಶ್ಚಸಂಪೂರ್ಣಾನಾಭಿಕಾಂಜನ ಪರ್ವತಾ |
ಸ್ವಾಧೀನಾಜೇದವೇತ್ಸೋಯಂ ಆನಂದೋಮಾನುಷಃ ಪರಃ||

(ಶ್ರೀಶಂಕರಾನಂದ ವಿರಚಿತ ಆತ್ಮಪುರಾಣ

ಯೌವನ ರೂಪಲಾವಣ್ಯಗಳಿಂದೊಡಗೂಡಿದವನಾಗಿ, ಭೂಚಕ್ರವೆಲ್ಲಕ್ಕೂ ಚಕ್ರವರ್ತಿಯಾಗಿ ನಿರಾತಂಕವಾಗಿ ರಾಜಭೋಗಗಳನ್ನನುಭವಿಸತಕ್ಕ ಸಾರ್ವಭೌಮನು ಅನುಭವಿಸುವ ಆನಂದವು ಮನುಷ್ಯಾನಂದವೆನಿಸುವುದು; ಅಂದರೆ ಈ ವೈಭವವನ್ನು ಮತ್ತಷ್ಟು ಸುಲಭವಾಗಿ ವಿವರಿಸಬೇಕಾದರೆ;

ಶ್ಲೋ॥ ಋಣಂಯಾಚ್ಞಾ ಜವೃದ್ಧತ್ವಂ।
ಜಾರಚೌರದರಿದ್ರತಾಃ।
ರೋಗಶ್ಚ ಭುಕ್ತಶೇಷಶ್ಚಾಪ್ಯಷ್ಟಕಷ್ಟಾಃ ಪ್ರಕೀರ್ತಿತಾಃ॥

ಋಣಬಾಧೆ, ಯಾಚನಾವೃತ್ತಿಯಿಂದ ಜೀವಿಸುವಿಕೆ, ಮುದಿತನ, ಜಾರತ್ವ, ಕಳ್ಳತನ, ದಾರಿದ್ರ್ಯ, ರೋಗ, ಎಂಜಲುತಿನ್ನುವಿಕೆ ಮುಂತಾದುವುಗಳೆಂಬ ಅಷ್ಟಕಷ್ಟಗಳ ಭೀತಿ ಲೇಶವೂ ಇಲ್ಲದಿರುವಿಕೆ, ಮತ್ತು

ಶ್ಲೋ॥ ದಾಸೋಭ್ಯತ್ಯಸ್ಸತೋ ಬಂಧುರ್ವಸ್ತುವಾಹನಮೇವಚ।
ಧನಧಾನ್ಯ ಸಮೃದ್ಧಿಶ್ಚಾಷ್ಟಭೋಗಾಃ ಪ್ರಕೀರ್ತಿತಾಃ॥

ಪಶುವಿತ್ತಕ್ಷೇತ್ರ ಕಳತ್ರ ಪುತ್ರ ಮಿತ್ರ ಧನ ಧಾನ್ಯ ವಸ್ತುವಾಹನಾದಿ ಅಷ್ಟೈಶ್ವರ್ಯ ಸಂಪತ್ತನ್ನು ಹೊಂದಿ, ಬೇಕಾದಹಾಗೆ ಸುಖಭೋಗಗಳನ್ನು ನಿರಾತಂಕವಾಗಿ ಅನುಭವಿಸುವಿಕೆಯು ಮನುಷ್ಯಾನಂದವೆನಿಸುವುದು. ಇದಕ್ಕೆ ಲೌಕಿಕಾನಂದವೆಂದು ಹೆಸರು. ಸರ್ವೋತ್ತಮವಾದ ಬ್ರಹ್ಮಾನಂದವನ್ನು ವರ್ಣಿಸುವುದು ಅಸಾಧ್ಯವಾದುದರಿಂದ ಮನುಷ್ಯಾನಂದವೇ ಮುಂತಾದುವುಗಳನ್ನು ಬಣ್ಣಿಸಿ, (ತನ್ಮೂಲಕವಾಗಿ) ಬ್ರಹ್ಮಾನಂದವಿಂತಹುದೆಂಬುದನ್ನು ಊಹಿಸುವುದಕ್ಕೆ ಶಕ್ಯವಾಗುವಂತೆ ಜ್ಞಾನಿಗಳು ಸುಲಭವಾಗಿ ಬೋಧಿಸಿರುತ್ತಾರೆ. ಮನುಷ್ಯಾನಂದಕ್ಕಿಂತ ನೂರುಪಾಲು ಅಧಿಕವಾದುದು ಮನುಷ್ಯಗಂಧರ್ವಾನಂದವು. ಅಂತಹ ಮನುಷ್ಯ ಗಂಧರ್ವಾನಂದಕ್ಕಿಂತ ನೂರುಪಾಲು ಅಧಿಕವಾದುದು ದೇವಗಂಧರ್ವಾನಂದವು. ಅಂತಹ ದೇವಗಂಧರ್ವಾನಂದಕ್ಕಿಂತ ನೂರುಪಾಲು ಅಧಿಕವಾದುದೊಂದು ಚಿರ ಲೋಕ (ಬಹುಕಾಲವಿರತಕ್ಕ) ಪಿತೃಲೋಕವಾಸಿಯ ಆನಂದವು. ಅದಕ್ಕಿಂತ ನೂರು ಪಾಲು ಅಧಿಕವಾದುದು (ಪಿತೃಲೋಕಕ್ಕಿಂತ ಮೇಲಿನ ಲೋಕವಾಸಿಯಾದ) ಅಜಾನಜಾನ ದೇವತಾನಂದವು. ಅದಕ್ಕಿಂತ ನೂರು ಭಾಗವಧಿಕವಾದುದೊಂದು ಕರ್ಮದೇವತಾನಂದವು. ಅದಕ್ಕಿಂತ ನೂರುಪಾಲು ಅಧಿಕವಾದುದೊಂದು ದೇವತಾನಂದವು. ಅದಕ್ಕಿಂತ ನೂರುಪಾಲು ಅಧಿಕವಾದುದು ಇಂದ್ರನ ಆನಂದವು. ಅದಕ್ಕಿಂತ ನೂರುಪಾಲು ಅಧಿಕವಾದುದು ಬೃಹಸ್ಪತಿಯ ಆನಂದವು. ಅದಕ್ಕಿಂತ ನೂರುಪಾಲು ಅಧಿಕವಾದುದು ಪ್ರಜಾಕರ್ತನಾನಂದವು. ಅದಕ್ಕಿಂತ ನೂರುಪಾಲು ಅಧಿಕವಾದುದು ಹಿರಣ್ಯಗರ್ಭನ ಆನಂದವು. ಅಂತಹ ಆನಂದವು ಮನುಷ್ಯಾನಂದದಿಂದ

ಹಿರಣ್ಯಗರ್ಭಾನಂದದನರೆಗೂ ಬಣ್ಣಿಸುವುದಕ್ಕೆ ಸಾಧ್ಯವು. ಅದಕ್ಕಿಂತ (ಹಿರಣ್ಯಗರ್ಭಾನಂದಕ್ಕಿಂತ) ಅನಂತಾನಂದವಾಗಿರುವ "ಬ್ರಹ್ಮಾನಂದವು" ವಾಕ್ಕಿಗೂ ಮನಸ್ಸಿಗೂ ಸಹಾ ಅಗೋಚರವಾದುದಾದ್ದರಿಂದ, ಸ್ವಾನುಭವದಿಂದಲೇ ತಿಳಿಯತಕ್ಕುದಾದ ಬ್ರಹ್ಮಾನಂದವನ್ನೊಂದು ಅಗಾಧವಾದ ಸಮುದ್ರವಾಗಿಯೂ, ಹಿರಣ್ಯಗರ್ಭಾನಂದವು ಆ ಸಮುದ್ರದಲ್ಲೊಂದು ತಟಕಿನಷ್ಟು ಪ್ರಮಾಣವುಳ್ಳ ಜಲಬಿಂದುವೆಂತಲೂ ಶ್ರುತಿಸಮ್ಮತವಾದ ಅನುಭವದಿಂದ ವಿಶದವಾಗುತ್ತದೆ. ಅಂತಹ ಬ್ರಹ್ಮಾನಂದವು ಜ್ಞಾನಯೋಗಿಗಳಾದ ಮಹಾತ್ಮರಿಗೆ ಸಿದ್ಧಾವಸ್ಥೆಯಲ್ಲಿ ವಿಕಾಸವಾಗುತ್ತದೆ. ಯೋಗವು ಇಷ್ಟಾರ್ಥಗಳನ್ನು (ಕೋರಿಕೆಗಳನ್ನು) ಸುಲಭವಾಗಿ ಕೈಗೂಡಿಸುತ್ತದೆ. ಕರ್ಮಬಂಧಗಳನ್ನು ಪರಿಹರಿಸುತ್ತದೆ. ಕರ್ಮವು ಮೂರು ವಿಧವಾಗಿದ್ದು, ಅನಾದಿಸಿದ್ಧನಾದ ಜೀವಾತ್ಮನು ತನ್ನ ಇಚ್ಛಾನುಸಾರವಾಗಿ ಪ್ರವರ್ತಿಸಿದಾಗ ಸಂಭವಿಸಿದ ಕರ್ಮವು ಮೂರುವಿಧವಾಗಿ ವಿಭಾಗಿಸಲ್ಪಟ್ಟು ಜೀವಾತ್ಮರನ್ನು ಬಗೆಬಗೆಯಾದ ದುಃಖ ದೋಷಗಳಿಗೆ ಒಳಪಡಿಸುತ್ತದೆ. ಎಂತೆಂದರೆ:—



ಜೀವಾತ್ಮನು ತನ್ನ ಅಯುಕ್ತ ಪ್ರವರ್ತನೆಯಿಂದ ಕರ್ಮಬಂಧಗಳಿಗೊಳಗಾಗುವನು. ಹಾಗೆ ತನ್ನ ಜೀವಾವಧಿಯಲ್ಲಿ ಸಂಪಾದಿಸಿದ ಪುಣ್ಯಕರ್ಮ, ಪಾಪಕರ್ಮ, ಪುಣ್ಯಪಾಪಮಿಶ್ರಕರ್ಮರೂಪವಾದ ಕರ್ಮಸಂಚಯಕ್ಕೆ (ಸಂಪಾದಿಸಿದ ಕರ್ಮಕ್ಕೆ) ಸಂಚಿತವೆಂದು ಹೆಸರು. ಅಂತಹ ಸಂಚಿತ ಕರ್ಮದಲ್ಲಿ ಸ್ವಲ್ಪಭಾಗವು ಜನನಮರಣ ದುಃಖದೋಷಗಳಿಗಾಸ್ಪದವಾದ ಪಂಚಭೂತಮಯವಾದ ಕರ್ಮಶರೀರವನ್ನುಂಟು ಮಾಡಿಸಿ ಸ್ವರ್ಗನರಕಾನುಭವಗಳೆಂಬ ಸುಖದುಃಖಗಳನ್ನನುಭವಿಸುವಂತೆ ಮಾಡು

ತ್ತದೆ. ಇದಕ್ಕೆ ಪ್ರಾರಬ್ಧವೆಂದು ಹೆಸರು. ಇದನ್ನೇ ಋಣೆಯಬರಹವೆಂತಲೂ ಪ್ರಾಚೀನ ಕರ್ಮವೆಂತಲೂ, ವಿಧಿವಿಧಾನವೆಂತಲೂ ಬಗೆಬಗೆಯ ಹೆಸರುಗಳಿಂದ ವಿವರಿಸುತ್ತಾರೆ. ಈ ವಿಧವಾದ ಪ್ರಾರಬ್ಧಕರ್ಮವನ್ನನುಭವಿಸುತ್ತಿರುವಾಗ ಪುನಃ ಜೀವಾತ್ಮನು ಮಾಡತಕ್ಕ ವಿವಿಧ ಸಂಕಲ್ಪಕ್ರಿಯಾರೂಪವಾದ ನೂತನ ಕರ್ಮಗಳಿಗೆ "ಆಗಾಮಿ" ಯೆಂದು ಹೆಸರು. ಪ್ರಾರಬ್ಧಕರ್ಮವು ಕಳೆಯಲಾಗಿ ಸಂಚಿತಕರ್ಮದಲ್ಲಿ ಮಿಕ್ಕಿರುವ ಕರ್ಮಶೇಷವೂ ಈ ಜನ್ಮದ ನೂತನ ಕರ್ಮವೂ ಒಟ್ಟಾಗಿ ಮುಂದಿನ ಜನ್ಮಕ್ಕೆ ಸಂಚಿತವಾಗುತ್ತದೆ. ಅದರಿಂದ ಪುನಃ ಬೇರೊಂದು ಜನ್ಮಕ್ಕೆ ಕಾರಣಭೂತವಾದ ಪ್ರಾರಬ್ಧ ಭಾಗವೇರ್ಪಡುತ್ತದೆ. ಅಂತಹ ಪ್ರಾರಬ್ಧವು ಇಚ್ಛಾಪ್ರಾರಬ್ಧ, ಅನಿಚ್ಛಾಪ್ರಾರಬ್ಧ, ಪರೇಚ್ಛಾಪ್ರಾರಬ್ಧ ಎಂಬುದಾಗಿ ಮೂರುವಿಧವಾಗಿರುತ್ತದೆ. ತನ್ನ ಇಚ್ಛೆಯಂತೆ ನಡಿಸತಕ್ಕ ಕರ್ಮಗಳಿಂದುಂಟಾಗುವ ಕಷ್ಟಸುಖಗಳಿಗೆ ಇಚ್ಛಾಪ್ರಾರಬ್ಧವೆಂತಲೂ, ಪರರ ಅಪೇಕ್ಷೆಗೊಳಪಟ್ಟು ನಡಿಸತಕ್ಕ ಕರ್ಮಗಳಿಂದುಂಟಾಗುವ ಕಷ್ಟಸುಖಗಳಿಗೆ ಪರೇಚ್ಛಾಪ್ರಾರಬ್ಧವೆಂತಲೂ ಹೆಸರು. ಯಾರ ಇಚ್ಛೆಯೂ ಇಲ್ಲದೆ ತಾನಾಗಿ (ದೈವಿಕವಾಗಿ) ಸಂಭವಿಸತಕ್ಕ ಕಷ್ಟಸುಖಗಳಿಗೆ ಅನಿಚ್ಛಾಪ್ರಾರಬ್ಧವೆಂದು ಹೆಸರು. ಇಂತು ಪ್ರಾರಬ್ಧವು ಮೂರುವಿಧವಾಗಿರುತ್ತದೆ. ಇವುಗಳಲ್ಲಿ ಮೊದಲನೆಯದಾದ ಇಚ್ಛಾಪ್ರಾರಬ್ಧವನ್ನು ಅನುಭವಿಸುವಾಗ ಜ್ಞಾನಯೋಗಸಂಪನ್ನನಾದ ವಿವೇಕಿಗೂ ಜ್ಞಾನಯೋಗಸಂಪನ್ನನಲ್ಲದ ಅವಿವೇಕಿಗೂ ಅನುಭವದಲ್ಲಿ ವಿಶೇಷ ಭೇದವಿರುತ್ತದೆ.

ಮಕರಮಾಸದ ಮೇಘವು ಆಕಾಶವೆಲ್ಲವೂ ವ್ಯಾಪಿಸಿದ್ದಾಗ್ಗೂ ಲೋಕಕ್ಕೆ ಹಾನಿಯಿಲ್ಲದಂತೆ ಸುಖವಾಗಿ ಮಳೆಗರೆವಂದದಿ, ಜ್ಞಾನಿಯು ಪ್ರಮಾದವಿಲ್ಲದೆ ತನ್ನ ಕರ್ಮವನ್ನನುಭವಿಸುತ್ತಾನೆ. ಅಜ್ಞಾನಿಯು ತುಲಾಮಾಸದ ಮೇಘದಂದದಿ ಭಯಂಕರವಾಗಿ ಹರಿದಾಡುತ್ತ ಲೋಕಕ್ಕೆ ಹಾನಿಯುಂಟುಮಾಡುತ್ತಾನೆ.

ಈ ರಹಸ್ಯವು ಹೀಗಿರಲಾಗಿ ಜನಸಾಮಾನ್ಯವು, ಶುಭಾಶುಭಗಳೆಲ್ಲವನ್ನೂ ಗ್ರಹಚಾರವೆಂದು ಹೇಳುತ್ತ ಬಗೆಬಗೆಯಾಗಿ ಪ್ರವರ್ತಿಸುತ್ತಾರೆ. ಆ ವಿವರವೆಂತೆಂದರೆ;—

ಗ್ರಹಮಂಡಲ; ಶಾಂತಿ.

ಹೆಸರು	ವರ್ಣ	ಸ್ಥಾನ	ಆಕಾರ	ಗೋತ್ರ	ವೃಕ್ಷಗಳು	ಧಾನ್ಯಗಳು
ಸೂರ್ಯನು ..	ರಕ್ತವರ್ಣ	ಗ್ರಹಮಂಡಲ ಮಧ್ಯದಲ್ಲಿ	ವರ್ತುಲಾಕಾರ	ಕಾಶ್ಯಪಸಗೋತ್ರ	ಎಕ್ಕೆಯಗಿಡ	ಗೋಧಿ
ಚಂದ್ರನು ..	ಗೌರ-ಶ್ವೇತಮಿಶ್ರವರ್ಣ	ಸೂರ್ಯನಿಗೆ ಆಗ್ನೇಯದಲ್ಲಿ	ಚತುಶ್ರಾಕಾರ	ಆತ್ರೇಯಸಗೋತ್ರ	ಮುತ್ತುಗದಗಿಡ	ಭತ್ತ
ಅಂಗಾರಕನು	ಅಗ್ನಿವರ್ಣ	ಸೂರ್ಯನಿಗೆ ದಕ್ಷಿಣದಲ್ಲಿ	ತ್ರಿಕೋಣಾಕಾರ	ಭಾರದ್ವಾಜಸಗೋತ್ರ	ಗಜ್ಜುಗದಗಿಡ	ತೊಗರಿ
ಬುಧನು ..	ಪೀತವರ್ಣ	ಸೂರ್ಯನಿಗೆ ಈಶಾನ್ಯದಲ್ಲಿ	ಬಾಣಾಕಾರ	ಆತ್ರೇಯಸಗೋತ್ರ	ಉತ್ತರೇಣಿ	ಹೆಸರು
ಗುರುವು ..	ಕನಕವರ್ಣ	ಸೂರ್ಯನಿಗೆ ಉತ್ತರದಲ್ಲಿ	ದೀರ್ಘಚತುರಶ್ರಾಕಾರ	ಆಂಗಿರಸಗೋತ್ರ	ಅಶ್ವತ್ಥವೃಕ್ಷ	ಕಡಲೆ
ಶುಕ್ರನು ..	ಶ್ವೇತವರ್ಣ	ಸೂರ್ಯನಿಗೆ ಪೂರ್ವದಲ್ಲಿ	ಪಂಚಕೋಣಾಕಾರ	ಭಾರ್ಗವಗೋತ್ರ	ಅತ್ತಿಮರ	ಅವರೆ
ಶನಿ ..	ಕೃಷ್ಣವರ್ಣ	ಸೂರ್ಯನಿಗೆ ಪಶ್ಚಿಮದಲ್ಲಿ	ಧನುರಾಕಾರ	ಕಾಶ್ಯಪಸಗೋತ್ರ	ಶಮಿವೃಕ್ಷ	ಎಳ್ಳು
ರಾಹು ..	ಧೂಮ್ರವರ್ಣ	ಸೂರ್ಯನಿಗೆ ನೈಋತ್ಯದಲ್ಲಿ	ಶೂರ್ಪಾಕಾರ	ಪೈಠಿನಸಗೋತ್ರ	ದರ್ಭೆ	ಉದ್ದು
ಕೇತು ..	ಚಿತ್ರವರ್ಣ	ಸೂರ್ಯನಿಗೆ ವಾಯವ್ಯದಲ್ಲಿ	ಧ್ವಜಾಕಾರ	ಜೈಮಿನಿಗೋತ್ರ	ಗರಿಕೆ	ಹುರುಳಿ

S-K-N-Reading-Room Jirthamullur Hall

ಓಮ್.

ಶ್ರೀ ರಾಮಚಂದ್ರ ಪರಬ್ರಹ್ಮಣೇನಮಃ

ಜಯ ರಘು ವೀರ ಸಮರ್ಥ!!!

ರಾಮಕೋಟಿ.

ಪ್ರಶ್ನೋತ್ತರಗಳು.

ಮ||ರಾ|| ಶ್ರೀ ರಾಮಕೋಟಿ ಗ್ರಂಥಕರ್ತರ ಸನ್ನಿಧಿಗೆ.

ಶತಾಧಿಕ ಬಿನ್ನಹಗಳು. ಉಭಯಕುಶಲೋಪರಿ ||ಸಾಂ||

ಪ್ರಶ್ನೆ.

ಆರ್ಯರೆ! ಅನುಗ್ರಹಪೂರ್ವಕವಾಗಿ ತಾವು ಕಳುಹಿಸಿಕೊಟ್ಟ ಶ್ರೀರಾಮಕೋಟಿ ೧–೨–೩ ಸಂಚಿಕೆಗಳನ್ನು ಭಕ್ತಿಶ್ರದ್ಧೆಗಳಿಂದ ಓದಿದೆನು. ಶ್ರೀ ರಾಮಾವತಾರ ಕಾಲ ನಿರ್ಣಯದಲ್ಲಿ ತಾವು ೧೨ ಕೋಟಿ ೫೫ ಲಕ್ಷ ೬೨ ಸಾವಿರದ ೯೭೯ ವರ್ಷಗಳೆಂಬ ದಾಗಿ ನಿಶ್ಚಯಿಸಿರುತ್ತೀರಿ. ಮ|| ರಾ|| ಶ್ರೀ ಬಿ. ಸೂರ್ಯನಾರಾಯಣರಾಯರವರು ಶ್ರೀರಾಮ ಕಾಲವನ್ನು ೧ ಕೋಟಿ ೨೫ ಲಕ್ಷ ೫೮ ಸಾವಿರದ ೨೧ ವರ್ಷಗಳೆಂಬ ದಾಗಿ ನಿಶ್ಚಯಿಸಿರುತ್ತಾರೆ; ಈ ತೆರನಾದ ವ್ಯತ್ಯಾಸಕ್ಕೇನು ಸಮಾಧಾನವೆಂಬು ದನ್ನು ದಯವಿಟ್ಟು ತಿಳುಹಿಸಬೇಕಾಗಿ ಸವಿನಯ ಭಾವದಿಂದ ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಪ್ರಯಾಗ. ಇಂತು, ಭವದ್ವಿಧೇಯ, **ಶ್ರೀ ಕೃಷ್ಣಶರ್ಮ.**

ಪ್ರತ್ಯುತ್ತರ.

ಜಯರಘುವೀರ ಸಮರ್ಥ !

ಶ್ರೀ ರಾಮಕೋಟಿ ಭವನ,
ಹೊಸೂರು.
ಶ್ರೀ ರಕ್ತಾಕ್ಷಿ, ಮಾರ್ಗಶಿರ
ಶುದ್ಧ ೫.

ಮ॥ ರಾ॥ ಶ್ರೀ॥ ಶ್ರೀಕೃಷ್ಣಶರ್ಮರವರ ಸನ್ನಿಧಿಗೆ.

ಅನೇಕ ನಮಸ್ಕಾರಗಳು. ಕುಶಲಪ್ರಶ್ನೆ. ॥ ಸಾಂ॥

ಶ್ರೀಯುತರೆ! ತಾವು ಬರೆದ ಪತ್ರ ತಲಪಿತು. ಓದಿ ನೋಡಿದೆನು. ಬಹಳ ಸಂತೋಷವುಂಟಾಯಿತು. ತಮ್ಮ ಪ್ರಶ್ನೆಗೆ ನನ್ನ ಪ್ರತ್ಯುತ್ತರವನ್ನಿಲ್ಲಿ ಬಿನ್ನವಿಸುತ್ತೇನೆ.

ತಾವು ಸೂಚಿಸಿರುವಂತೆ, ಜ್ಯೋತಿಶ್ಶಾಸ್ತ್ರವಿಶಾರದರಾದ ಶ್ರೀ ಸೂರ್ಯನಾರಾಯಣರಾಯರವರು ಅಮೂಲ್ಯವಾದ ತಮ್ಮ ಗ್ರಂಥಲೇಖನಗಳಲ್ಲಿ ಶ್ರೀರಾಮ ಕಾಲವನ್ನು ೧೨೫೫೬೦೨೧ ವರ್ಷಗಳೆಂಬ ಸಂಖ್ಯೆಯನ್ನು ನಿಶ್ಚಯಿಸಿ ಪ್ರಕಟಿಸಿರುತ್ತಾರೆಂಬುದನ್ನು ಓದಿನೋಡುತ್ತೇನೆ. ಸುಪ್ರಸಿದ್ಧ ವಿದ್ವಾಂಸರಾದ ಅವರು ಯಾವ ಪದ್ಧತಿಯನ್ನನುಸರಿಸಿ ಹಾಗೆ ನಿಶ್ಚಯಿಸಿರುತ್ತಾರೆಯೋ ನಾನರಿಯೆನು. ಪೂಜ್ಯರಾದ ಅವರಿಗೆ ಈ ವಿಷಯವಾಗಿ ನಾನೊಂದು ಪತ್ರವನ್ನು ಬರೆದು ಕಳುಹಿಸಿರುತ್ತೇನೆ. ಅವರ ಪ್ರತ್ಯುತ್ತರವು ಬರುತ್ತಲೇ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ.

ಶ್ರೀ ರಾಮಾವತಾರ ಕಾಲವನ್ನು ನಾನು ನಿಶ್ಚಯಿಸಿರುವಂತೆಯೇ ಸುಪ್ರಸಿದ್ಧ "ನಿಮ್ಮಗಡ್ಡೆ ಸಿದ್ಧಾಂತ ಪಂಚಾಂಗ ಕರ್ತರಾದ ಬ್ರಹ್ಮಶ್ರೀ ಜ್ವಾಲಾಪತಿ ಸಿದ್ಧಾಂತಿಗಳವರು" ವಿರೋಧಿಕೃತ್ ವರ್ಷದ ಪಂಚಾಂಗದಲ್ಲಿ "೧೨೫೫೬೦೨೧೮೬" ವರ್ಷಗಳೆಂಬದಾಗಿಯೇ ಶ್ರೀರಾಮ ಕಾಲ ಸಂಖ್ಯೆಯನ್ನು ನಿಶ್ಚಯಿಸಿರುತ್ತಾರೆ.

ಪರಂತು ಶ್ರೀರಾಮಾವತಾರವು ಈಗಿನ ವೈವಸ್ವತಮನ್ವಂತರದ ಐದನೇ ಮಹಾಯುಗದ ತ್ರೇತಾಯುಗದಲ್ಲಿ ಸಂಭವಿಸಿರುತ್ತದೆಂಬ ಪ್ರಮಾಣವಚನಗಳನ್ನನುಸರಿಸಿ, ಅದರಂತೆ ಗಣಿತ ಮಾಡಿದರೆ ನಾವು ಕೊಟ್ಟಿರುವ ೧೨ ಕೋಟಿ ಸಂಖ್ಯೆಯೇ ಪರಿಷ್ಕಾರವಾಗಿ ಏರ್ಪಡುತ್ತದೆ.

ಬ್ರಹ್ಮಶ್ರೀ ಸೂರ್ಯನಾರಾಯಣರಾಯರವರ ಪ್ರತ್ಯುತ್ತರವನ್ನು ನೋಡಿದ ಬಳಿಕ ಮುಂದಿನ ಸಂಚಿಕೆಯಲ್ಲಿ ಈ ವಿಚಾರವಾದ ಪರಶ್ಶತ ಪ್ರಮಾಣ ಸಿದ್ಧಾಂತಗಳನ್ನು ಒಕ್ಕಣಿಸುತ್ತೇನೆ.

ಇಂತು
ಭವದೀಯ,
ಕಾ. ಶಿ. (ವಿದ್ವಾನಿಧಿ).

S-L-N- Reading-Room
Jirthamullur - Mall

ಪುರಂದರದಾಸರ ಚರಿತ್ರೆ.

ರಾಗ–ಮೋಹನ–ಆದಿ.

ಮಾನಸದೊಳು ಭಜಿಸೈ, ರಮೇಶನ ಧ್ಯಾನವ ಮರೆಯದಿರೈ ॥ ಪ ॥
ದೀನ ಜನಾವನ ಜತುರನ ಸುಜನರ ಮಾನವ ಕಾಯುವ ಗಾನವಿಲೋಲನ
॥ ಮಾನಸ॥ ॥ ಅ-ಪ ॥

ಶ್ರೀರಮಣೀಮಣಿ ಚಿತ್ತವಿಹಾರನ, ಸೇವಕಜನಮಂದಿರ ಮಂದಾರನ ॥ ಮಾನಸ ॥
ಸತ್ಯಜ್ಞಾನಾನಂದವಿಕಾಸನ, ಸರ್ವವಿಶ್ವಪರಿಪೂರ್ಣ ವಿಲಾಸನ ॥ ಮಾನಸ ॥
ಮದಶಿಖಿಪಿಂಚಾಲಂಕೃತ ಚಿಕುರನ, ಮಹನೀಯಕಪೋಲವಿಜಿತಮುಕುರನ ॥ಮಾ॥
ಜಾಗ್ರತ್ಸ್ವಪ್ನ ಸುಷುಪ್ತಿವಿನೋದನ, ಜನ್ಮಬಂಧನಿಶ್ಶೇಷಕಾರಣನ ॥ಮಾನಸ ॥
ಪರಮಭಕ್ತ ಮುಖಚಂದ್ರಚಕೋರನ, ದುರಿತಹರನ ಮುರಳೀಧರ ಕೃಷ್ಣನ ॥ಮಾ॥
ಭಾವಯೋಗವರ ಭಕ್ತವಿನೋದನ, ಭಾವರಸಿಕ ಶಿವರಾಮವಿಲೋಲನ ॥ಮಾನಸ॥

ಎಂಬೀ ವಿಧವಾಗಿ ಶ್ರೀರಮಾರಮಣನ ದಿವ್ಯಮಹಿಮೆಯನ್ನು ಬಣ್ಣಿಸುತ್ತ, ಭಕ್ತಜನರನೇಕರು ಗ್ರಹಣಕಾಲದಲ್ಲಿ ಚಂದ್ರಭಾಗೆಯಲ್ಲಿ ಸ್ನಾನಮಾಡಿ ಶ್ರೀ ಪಾಂಡುರಂಗಮೂರ್ತಿಯನ್ನು ಸಂದರ್ಶಿಸಬೇಕೆಂಬ ಕುತೂಹಲದಿಂದ ಪಂಢರಾಪುರಕ್ಕೆ ತೆರಳುತ್ತ ಮಾರ್ಗವಶದಿಂದ ಪುರಂದರಗಡದ ಬಳಿಯಿರುವ ಛತ್ರದಲ್ಲಿಳಿದು ವಿಶ್ರಾಂತಿಪಡೆಯುತ್ತಿದ್ದರು. ಶ್ರೀಮಂತಳಾದಾಗ್ಯೂ ಲಕ್ಷ್ಮೀಬಾಯಿಯು ಸ್ವಲ್ಪವೂ ಬೇಸರವಿಲ್ಲದೆ ಗ್ರಾಮದ ಮುಂಭಾಗದಲ್ಲಿದ್ದ ಶ್ರೀವೇಣುಗೋಪಾಲಸ್ವಾಮಿಯ ಸನ್ನಿಧಿಗೆ ತೆರಳಿ ಪೂಜೆಮಾಡಿ ಬರುತ್ತಿದ್ದಳು. ಆಲಯದಿಂದ ಊರಿಗೆ ಬರುವ ದಾರಿಯಲ್ಲಿಯೇ ಛತ್ರವಿರುವುದರಿಂದ ಅಲ್ಲಿ ನಡೆಯುತ್ತಿದ್ದ ಶ್ರೀರಾಜಗೋಪಾಲನಾಮ ಸಂಕೀರ್ತನವನ್ನು ಕೇಳಿ ಆನಂದಪಟ್ಟವಳಾಗಿ, ಮಹಾತ್ಮರಾದ ಅವರೆಲ್ಲರೂ ಗ್ರಹಣಪರ್ವಕಾಲಕ್ಕಾಗಿ ಶ್ರೀಪಾಂಡುರಂಗವಿಠಲನ ಸನ್ನಿಧಿಗೆ ತೆರಳುತ್ತಿರುವರೆಂದರಿತು, ಆ ಹೊತ್ತಿಗೆ ಅವರೆಲ್ಲರಿಗೂ ಆಗುವಷ್ಟು ಅನ್ನಪಾನಾದಿಗಳನ್ನು ಕಳುಹಿಸಿಕೊಟ್ಟು ಸಾಧು ಸತ್ಕಾರವನ್ನು ಭಕ್ತಿಪೂರ್ವಕವಾಗಿ ಆಚರಿಸಿದಳು. ಪರಮ ಸಾಧ್ವೀಮಣಿಯಾದ ಶ್ರೀಲಕ್ಷ್ಮೀಬಾಯಿಯು ನಡೆಯಿಸಿದ ಅತಿಥಿಸತ್ಕಾರವನ್ನು ಕೊಂಡಾಡುತ್ತ ಮೃಷ್ಟಾನ್ನ ಭೋಜನ, ಶಿಷ್ಟಜನ ಸಂದರ್ಶನ, ಇಷ್ಟ ಸಂಭಾಷಣೆಗಳಿಂದ ತುಷ್ಟರಾದ ಭಕ್ತಜನರು **ಗೋವಿಂದನಾಮ ಸಂಕೀರ್ತನ ಜಯಘೋಷ**ದಿಂದೊಡಗೂಡಿ ಪಾಂಡುರಂಗನ ಸನ್ನಿಧಿಯನ್ನು ಕುರಿತು ತೆರಳಿದರು. ಸತೀರತ್ನವಾದ ಲಕ್ಷ್ಮೀಬಾಯಿಯ ಮನೋನಿಯತಿಯನ್ನೆಷ್ಟು ಕೊಂಡಾಡಿದರೂ ಸಾಲದು. ತೀರ್ಥಯಾತ್ರೆಗಳು, ದಿವ್ಯ ಕ್ಷೇತ್ರ ಸಂದರ್ಶನಗಳು, ಸಾಧು ಸತ್ಕಾರಗಳೇ ಮೊ ತಾದುವುಗಳಲ್ಲಿ ಲೇಶವೂ ಅಭಿಲಾಷೆಯಿಲ್ಲದೆ ಅತ್ಯಂತ ಜಿಪುಣತನದಿಂದಿದ್ದ ತನ್ನ ಪತಿಗೆ ಸಮ

ಯೋಚಿತವಾದ ಮೃದುಮಧುರವಚನಗಳಿಂದ ಬಿನ್ನವಿಸಿ, ಎಷ್ಟೋ ಪ್ರಯತ್ನದಿಂದ ಆತನ ಮನಸ್ಸಿನಲ್ಲಿ ಪಂಡರಾಪುರಕ್ಕೆ ತೆರಳಿ ತೀರ್ಥಯಾತ್ರೆ ಮಾಡಿಬರಬೇಕೆಂಬ ಆಸಕ್ತಿಯನ್ನುಂಟುಮಾಡಿದಳು. ಶ್ರೀ ಲಕ್ಷ್ಮೀಬಾಯಿಯಂತಹ ನಿಜಗುಣ ಸಂಪನ್ನೆಯರಿಗೆ ಅವುದುತಾನೇ ಅಸಾಧ್ಯವು! ಅನುಪಮಾನ ಸದ್ಧರ್ಮವತಿಯರಾದ ಪತಿವ್ರತೆಯರು ಎಂತಹ ಘನಕಾರ್ಯಗಳನ್ನಾದರೂ ಸಾಧಿಸಬಲ್ಲರು. ಪಾತಿವ್ರತ್ಯದ ಮಹಿಮೆಯು ಅನುಪಮಾನವಾದುದು. ಪೂರ್ವದಲ್ಲೊಂದು ಕಾಲ ಧಾರಾನಗರವನ್ನಾಳುತ್ತಿದ್ದ ಭೋಜರಾಜನು, ವಿದ್ವಾಂಸರವಾಲಿಗೆ ಕಲ್ಪವೃಕ್ಷದೋಪಾದಿಯಲ್ಲಿ ಬೇಡಿದ ಇಷ್ಟಾರ್ಥಗಳನ್ನು ನಿರಾತಂಕವಾಗಿ ಸಲ್ಲಿಸುತ್ತ, ಅಕ್ಷರಕ್ಕೆ ಲಕ್ಷದ್ರವ್ಯಕೊಡತಕ್ಕ ಮಹಾ ಪ್ರಭುವೆಂಬ ಕೀರ್ತಿಗಳಿಸಿ ಧರ್ಮಸಮ್ಮತವಾಗಿ ರಾಜ್ಯಭಾರಮಾಡುತ್ತ, ಕಾಳಿದಾಸ, ಬಾಣಭಟ್ಟ, ಭವಭೂತಿ ಮುಂತಾದ ಮಹಾಕವಿಗಳನ್ನು ತನ್ನ ಆಸ್ಥಾನ ಪಂಡಿತರನ್ನಾಗಿಟ್ಟುಕೊಂಡು ಪೋಷಿಸುತ್ತಿದ್ದನು. ಧಾರಾನಗರದ ದೇವಾಲಯದ ಮುಂಭಾಗದಲ್ಲಿ ಪೂರ್ವಿಕರಿಂದ ಬಹುಕಾಲದಹಿಂದೆ ಸ್ಥಾಪಿಸಲ್ಪಟ್ಟಿದ್ದ ಧ್ವಜಸ್ತಂಭವೊಂದು ಕಾಲವಶದಿಂದ ನೆಲಕ್ಕೆರಗಲಾಗಿ, ಅದನ್ನು ಯಥಾಪ್ರಕಾರವಾಗಿ ನಿಲ್ಲಿಸಲೆಣಿಸಿ, ಭೋಜನು ನೂರಾರುಮಂದಿ ಶಿಲ್ಪಿಗಳನ್ನು ನಿಯಮಿಸಿ ಸಾವಿರಾರು ಮಂದಿ ಸೇವಕರ ಸಹಾಯವನ್ನು ಕೊಟ್ಟನಾದರೂ, ಅವರೆಷ್ಟೇ ಪ್ರಯತ್ನಿಸಿದಾಗ್ಯೂ ಅಮೋಘವಾದಾಸ್ತಂಭವು ಸ್ವಲ್ಪವೂ ಕದಲಲಿಲ್ಲ. ಭೋಜನರೇಂದ್ರನದಕ್ಕಾಗಿ ಯೋಚಿಸುತ್ತಿರಲು, ಜ್ಞಾನವೃದ್ಧನೂ ವಯೋವೃದ್ಧನೂ ಆದ ಬೈರಾಗಿಯೊಬ್ಬನಲ್ಲಿಗೆ ಬಂದು ಲಕ್ಷಮಂದಿಯೆತ್ತಿದರೂ ಸಾಧ್ಯವಾಗಲಾರದೆಂತಲೂ, ಪತಿವ್ರತೆಯಾದ ನಾರೀರತ್ನದ ಕರಸ್ಪರ್ಶಿಯಾದರೆ ತಕ್ಷಣವೇ ಯಥಾಪೂರ್ವಕವಾಗಿ ಸ್ಥಾಪಿತವಾಗುವುದೆಂತಲೂ ತಿಳುಹಿಸಿ ಹೊರಟುಹೋದನು. ಬಳಿಕ ಭೋಜರಾಜನು, ಅಂತಹ ಪತಿವ್ರತೆಯಾರೆಂಬುದನ್ನರಿಯಲೆಳಸಿ ಗೂಢವೇಷದಿಂದ ರಾತ್ರಿವೇಳೆಗಳಲ್ಲಿ ನಗರಸಂಚಾರಮಾಡುತ್ತಿದ್ದನು. ಧರ್ಮಾತ್ಮನಾದೊಬ್ಬ ಬ್ರಾಹ್ಮಣನ ಮನೆಯ ಬಳಿಯಲ್ಲಿ ಭೋಜನು ನಿಂತಿರಲಾಗಿ ಅಲ್ಲೊಂದು ವಿಚಿತ್ರವು ನಡೆಯಿತು. ಆ ಬ್ರಾಹ್ಮಣಮಡದಿಯು ಪರಮಪತಿವ್ರತೆಯು. ಅವರಿಗೆ ಎರಡು ವರ್ಷಗಳ ಮಗನೊಬ್ಬನಿದ್ದನು. ಆ ದಿವಸವಾ ಬ್ರಾಹ್ಮಣನು ಸ್ವಲ್ಪ ಹೊತ್ತು ಬೆಂಕಿಕಾಸಿಕೊಳ್ಳುತ್ತಿದ್ದು, ಆಯಾಸ ಪರಿಹಾರಕ್ಕಾಗಿ ತನ್ನ ಪತ್ನಿಯ ತೊಡೆಯಮೇಲೆ ತಲೆಯಿಟ್ಟು ಮಲಗಿಕೊಂಡನು. ಅಲ್ಲಿಯೇ ಆಡಿಕೊಳ್ಳುತ್ತಿದ್ದ ಮಗುವು ಕಾಲೆಡವಿ ಬೆಂಕಿಯಲ್ಲಿ ಬಿದ್ದಿತು. ಮಗುವನ್ನೆತ್ತಿಕೊಳ್ಳುವುದಕ್ಕಾಗಿ ತಾನು ಮೇಲಕ್ಕೇಳುವ ಪಕ್ಷಕ್ಕೆ ಪತಿಗೆ ನಿದ್ರಾಭಂಗವಾಗುವುದೆಂದೆಣಿಸಿ ಅಗ್ನಿಹೋತ್ರನನ್ನು ಪ್ರಾರ್ಥಿಸಿ ಸುಮ್ಮನಿದ್ದಳು. ಸಾಧ್ವೀರತ್ನವಾದ ಆಕೆಯ ಪ್ರಾರ್ಥನೆಯನ್ನಂಗೀಕರಿಸಿ, ಅಗ್ನಿದೇವನಾ ಮಗುವನ್ನು ದಹಿಸದೆ ಶ್ರೀಗಂಧದೋಪಾದಿಯಲ್ಲಿ ತಣ್ಣಗಿದ್ದನು. ರಾಜೇಂದ್ರನೀವಿಶೇಷಕ್ಕಾಶ್ಚರ್ಯಪಟ್ಟು, ಮಾರನೇದಿನ ತನ್ನ ಸಭೆಯಲ್ಲಿ ಮಹಾಕವಿಗಳನ್ನುದ್ದೇಶಿಸಿ,

"ಹುತಾಶನ ಶ್ಚಂದನ ಪಂಕಶೀತಲಂ" ಬೆಂಕಿಯು ತಣ್ಣಗಾಯಿತು, ಎಂಬ ಸಮಸ್ಯೆಯನ್ನು ಕೊಟ್ಟು, ಮಿಕ್ಕಪಾದಗಳನ್ನು ಹೇಳಿ ಅರ್ಥವನ್ನು ತಿಳಿಸಬೇಕಾಗಿ ಕವಿಗಳನ್ನು ಕೋರಿದನು. ಅಲ್ಲಿದ್ದ ಕವಿಗಳಲ್ಲಿ ಯಾರೂ ಸರಿಯಾದ ಪ್ರತ್ಯುತ್ತರವನ್ನು ಕೊಡದಿರಲು, ಕವಿಕುಲತಿಲಕನಾದ ಕಾಳಿದಾಸನಿಂತೆಂದು ಸಮಸ್ಯೆಯನ್ನು ಪೂರೈಸಿದನು.

ಶ್ಲೋ ॥ ಸುತಂ ಪತಂತಂ ಪ್ರಸವಾಕ್ಷ್ಯಪಾವಕೇ।
ನಬೋಧಯಾ ಮಾಸ ಪತಿಂಪತಿವ್ರತಾ॥
ಪತಿವ್ರತಾ ಶಾಪಭಯೇನ ಪೀಡಿತೋ।
ಹುತಾಶನಶ್ಚಂದನಪಂಕಶೀತಲಃ ॥

ಒಬ್ಬ ಪತಿವ್ರತೆಯ ಮಗುವು ಅಗ್ನಿಯಲ್ಲಿ ಬಿದ್ದಿತು. ಪತಿಯು ಆಕೆಯ ತೊಡೆಯಮೇಲೆ ತಲೆಯಿಟ್ಟು ನಿದ್ರಿಸುತ್ತಿದ್ದನು. ಪತಿಗೆ ನಿದ್ರಾಭಂಗಮಾಡಬಾರದೆಂದಾಕೆ ಅಗ್ನಿಯನ್ನು ಪ್ರಾರ್ಥಿಸಿದಳು. ಆಕೆಯ ಪಾತಿವ್ರತ್ಯಧರ್ಮವನ್ನು ಗೌರವಿಸಿ, ಅಗ್ನಿಹೋತ್ರನು ಚಂದನದಂತೆ ತಣ್ಣಗಾದನು. ಆದುದರಿಂದ ಮಗುವು ನಿರಪಾಯವಾಗಿದ್ದಿತು, ಎಂಬದಾಗಿ ಕಾಳಿದಾಸನು ಪ್ರತ್ಯುತ್ತರವಿತ್ತನು. ಆಗ ಮಹಾರಾಜನೇ ಮುಂತಾದ ಸಭಾಸದರೆಲ್ಲರೂ ಆ ಮಹಾಕವಿಯ ಬುದ್ಧಿಕುಶಲತೆಯನ್ನು ಬಹಳವಾಗಿ ಕೊಂಡಾಡಿದರು. ತದನಂತರ ಭೋಜನರೇಂದ್ರನಾಪತಿವ್ರತೆಯ ಅನುಗ್ರಹದಿಂದ ದೇವಾಲಯದ ಧ್ವಜಸ್ತಂಭವನ್ನು ಯಥಾಪೂರ್ವಕವಾಗಿ ನೆಲೆಗೊಳಿಸಿದನು. ಆದುದರಿಂದ ನಿರ್ಮಲಧರ್ಮಸಂಪನ್ನೆಯರಾದ ಪತಿವ್ರತೆಯರ ಇಷ್ಟಾರ್ಥಗಳನ್ನು ಲಕ್ಷ್ಮೀವಲ್ಲಭನಾದ ಶ್ರೀಮನ್ನಾರಾಯಣನು ಸರ್ವದಾ ಸಫಲಗೊಳಿಸುವನು. ಕೃಷ್ಣನಾಯಕರ ಧರ್ಮಪತ್ನಿಯಾದ ಲಕ್ಷ್ಮೀಬಾಯಿಯ ಮನೋಭೀಷ್ಟವು ಕೈಗೂಡುವ ಸಮಯವೊದಗಿತೋ ಎಂಬಂತೆ ಪಾಂಡುರಂಗ ಕ್ಷೇತ್ರವಾದ ಪಂಡರಪುರದಲ್ಲಿ ಶ್ರೀವಿಜಯವಿಠ್ಠಲಮೂರ್ತಿಗೆ ಬ್ರಹ್ಮೋತ್ಸವವು ನಡೆಯತಕ್ಕ ಆಷಾಢಮಾಸದಲ್ಲಿಯೇ ಪೂರ್ವೋಕ್ತ ಗ್ರಹಣಪರ್ವಕಾಲವೂ ಪ್ರಾಪ್ತವಾದುದರಿಂದ, ಗ್ರಹಣಸ್ನಾನ ವಿಠಲಸಂದರ್ಶನಾಸಕ್ತರಾದ ಭಕ್ತಜನರು ಗುಂಪು ಗುಂಪಾಗಿ ಕೂಡಿ ಕೆಲದಿನಗಳು ಮುಂದಾಗಿಯೇ ಪುರಂದರಗಡದ ಮಾರ್ಗವಾಗಿ ಶ್ರೀ ಪಾಂಡುರಂಗ ಕ್ಷೇತ್ರಕ್ಕೆ ತೆರಳುತ್ತಿರುವುದನ್ನು ಕೃಷ್ಣನಾಯಕರು ಸ್ವತಃ ಅನೇಕ ವೇಳೆ ನೋಡಿದರಾದುದರಿಂದಲೂ ನಿಜಸತಿಯು ತಮಗೆ ಬಿನ್ನವಿಸಿದ ತೀರ್ಥಯಾತ್ರಾ ಸಂಕಲ್ಪವು ಮತ್ತಷ್ಟು ದೃಢವಾಗಿ, ಪಂಡರಾಪುರಕ್ಕೆ ಬೇಗನೆ ತೆರಳಬೇಕೆಂಬ ಲವಲವಿಕೆಯು ಹುಟ್ಟಿ ಹುರಿಗೊಳಿಸಿತು. ಆದಾಗ್ಯೂ ತಮ್ಮ ಧನರಾಶಿಗಳನ್ನು ಭದ್ರಪಡಿಸಿರುವ ಸ್ಥಳವನ್ನು ಬಿಟ್ಟು ಸ್ವಲ್ಪಕಾಲವಾದರೂ , ಗಲಿದ್ದ ವರಲ್ಲವಾದುದರಿಂದ ಪಂಡರಾಪುರಕ್ಕೆ ಹೋಗಿಬರತಕ್ಕ ಮೂರುನಾಲ್ಕು ದಿನಗಳ ಕಾಲವು ಸಹಾ ಅವರಿಗೆ ಬಹಳ ಪ್ರಯಾಸವಾಗಿ ತೋರಿತು. ಆದಕಾರಣ ತಾವು ತೀರ್ಥಯಾತ್ರೆ ಮಾಡಿ

ಬರುವವರೆಗೂ ಅಪಾರವಾದ ತಮ್ಮ ಧನರಾಶಿಗಳನ್ನು ಭದ್ರವಾಗಿ ನೋಡಿ ಕೊಳ್ಳತಕ್ಕ ಕಾರ್ಯಭಾರವನ್ನು ತಮ್ಮ ಪತ್ನಿಗೊಪ್ಪಿಸಿ, ಮನೆಬಿಟ್ಟು ಸ್ವಲ್ಪ ದೂರ ತೆರಳಿ ಪುನಃ ಹಿಂದಿರುಗಿ ಬಂದು ಧನಾಗಾರದ (ಖಜಾನೆಯ) ಬೀಗಗಳನ್ನು ಮತ್ತೆ ಮತ್ತೆ ಸೆಳೆದು, ನಾಲ್ಕಾರು ಸಾರಿ ಪರಿಕಿಸಿ ನೋಡಿದಾಗ್ಗೂ ಅನುಮಾನವನ್ನು ಪೂರ್ತಿಯಾಗಿ ತೊರೆಯದವರಾಗಿ ಪೇಚಾಟ ಗೊಣಗಾಟಗಳಿಂದ ಹೆಂಡತಿಯನ್ನು ಸಾರೆ ಸಾರೆಗೂ ಯೆಚ್ಚರಗೊಳಿಸುತ್ತ ಆಕೆಯ ಕೈಪಿಡಿದು ಮತ್ತೆ ಮತ್ತೆ ಸೂಚಿಸಿ, ಕಡೆಗೊಂದು ವಿಧವಾಗಿ ಧೈರ್ಯವನ್ನವಲಂಬಿಸಿ ಶ್ರೀವಿಠ್ಠಲ ಕ್ಷೇತ್ರವನ್ನು ಕುರಿತು ಪ್ರಯಾಣ ಬೆಳಸಿದರು.



ಶ್ರೀಕೃಷ್ಣನಾಯಕರು ತಮ್ಮ ಸತಿಯ ಕೈಪಿಡಿದು "ಎಚ್ಚರಿಕೆ" ನೇಳುವಿಕೆ.

ಪುಂಡರೀಕನೆಂಬ ಪರಮ ಭಕ್ತನ ಪ್ರಾರ್ಥನೆಯನ್ನು ಪರಿಪಾಲಿಸಲೆಳಸಿ, ಪರಂಧಾಮನಾದ ಶ್ರೀ ಕೃಷ್ಣಪರಮಾತ್ಮನು ಕಟಿಹಸ್ತನಾಗಿ ಇಟ್ಟಿಗೆಯ ಮೇಲೆ ನಿಂದು, ತನ್ನ ಜಗನ್ಮಂಗಳಾಕಾರದಿಂದ ಭಕ್ತಜನರಿಗೆ ಉಜ್ಜೀವನೋಪಾಯವನ್ನು ಅನುಗ್ರಹಿಸುತ್ತ, ಪುಂಡರೀಕವರದನೆಂತಲೂ, ಪಾಂಡುರಂಗವಿಠ್ಠಲನೆಂತಲೂ ಭಕ್ತಜನರಿಂದ ಸ್ತುತಿಸಲ್ಪಡುತ್ತಿರುವನು. ಆಗಿನ ಬ್ರಹ್ಮೋತ್ಸವದ ದಿವ್ಯವೈಭವವನ್ನು ನೇತ್ರಾನಂದಕರವಾಗಿ ಸಂದರ್ಶಿಸಬೇಕೆಂಬ ಕುತೂಹಲದಿಂದ ಬಹುದೂರ ದೇಶಗಳಿಂದ ಬಂದಿದ್ದ ಭಕ್ತಜನರು ಚಂದ್ರಭಾಗಾನದೀತೀರದಲ್ಲಿ ಕೂಟವಾಗಿ ನೆರೆದು ನದೀಸ್ತೋತ್ರವನ್ನು ಪಠಿಸುತ್ತ ಸ್ನಾನಸಂಕಲ್ಪಗಳನ್ನಾಚರಿಸುತ್ತಿದ್ದರು.

ಶ್ಲೋ॥ ಗಂಗಾಯಮುನಯೋರ್ಮಧ್ಯೇ ತ್ರಿಕೂಟಂ ರಂಗಮಂದಿರಂ।
ಜ್ಞಾನಂ ಭೀಮರಥೀತೀರಂ ಸ್ವದೇವಂ ಪಂಢರೀಪುರಂ ॥
ಭೀಮಾತೀರನಿವಾಸಾಯ ಪಂಢರೀಪುರವಾಸಿನೇ।
ಪಾಂಡುರಂಗಪ್ರಕಾಶಾಯ ವಿಠ್ಠಲಾಯನಮೋನಮಃ॥
ಭಾಗೀರಥೀ ವಾರಣಾಸೀ ಯಮುನಾಚ ಸರಸ್ವತೀ।
ಫಲ್ಗುಣೀ ಶೋಣಭದ್ರಾಚ ನರ್ಮದಾಗಂಡಕೀತಥಾ ॥
ಗಯಾಪ್ರಯಾಗಾ ಸರಯೂ ತ್ರಿವೇಣೀ ಮಣಿಕರ್ಣಿಕಾ।
ಕೃಷ್ಣವೇಣೀ ಭೀಮನದೀ ಗೌತಮೀ ಭವನಾಶನೀ ॥
ಅಘನಾಶೀ ವಿಯದ್ಗಂಗಾ ತುಂಗಭದ್ರಾ ಮಲಾಪಹಾ।
ಕೌಮ್ರಿಹೈಮವತೀಚೈವ ವರದಾಚಕುಮುದ್ವತೀ ॥
ವೇತ್ರಾವತೀವೇಗವತೀ ಗಾಯತ್ರೀ ಕೌಶಿಕೀ ತಥಾ।
ಕಾವೇರೀ ಸಿಂಧುಕಪಿಲಾ, ತಾಮ್ರಪರ್ಣೀ ಕುಮುದ್ವತೀ ॥
ಮಂಡಲೀ ಮಾಲಿನೀಚೈವ ಯೋಗಾನಂದಾಚಗಾರ್ಗಿಣೀ।
ಮಾಹೇಶ್ವರೀ ಧಾನ್ಯಮಾಲೀ ಪ್ರಣತಾಕಪಿಲಾತಥಾ ॥
ಶುದ್ಧಮಂದಾಕಿನೀಚೈವ ಕೃತಮಾಲಾ ಹರೀತಕೀ।
ಮಹಾನದೀ ಬಾಣಗಂಗಾ ಸೀತಾಚಾಲಕನಂದಿನೀ ॥
ಸ್ವಾಮಿಪುಷ್ಕರಣೀಚೈವ ಚಂದ್ರಪುಷ್ಕರಣೀತಥಾ।
ಕಾಳೇಶ್ವರಂ ವೇದಗಿರಿಂ ಗೋಕರ್ಣಂ ಗೋಮುಖಂತಥಾ ॥
ಕೌಮೋದಕಂ ಕುರುಕ್ಷೇತ್ರಂ ಬದರೀ ದ್ವಾರಕಾತಥಾ।
ಸಾಲಗ್ರಾಮಂಜತೋತಾದ್ರಿಂ ನರನಾರಾಯಣಾಶ್ರಮಂ ॥
ಬೃಂದಾವನಂಚ ಕೇದಾರಂ ಹರಿದ್ವಾರಂಚ ಗೋಕುಲಂ।
ಶ್ರೀಕಾಕುಳಂಚ ಶ್ರೀಕೂರ್ಮಂ ಪಾಂಡುರಂಗಂಚ ವಿಠ್ಠಲಂ ॥

ಅಹೋಬಲಂ ಜಗನ್ನಾಥಂ ವೇಂಕಟಾದ್ರಿಂಜನೈಮಿಷಂ ।
ಅಯೋಧ್ಯಾ ಸೇತುಮಧುರಾ ಶ್ರೀರಂಗಂ ರಂಗಮಂದಿರಂ ॥
ಪಂಚಕ್ಷೇತ್ರಂ ಹಸ್ತಿಗಿರಿಂ ಶ್ವೇತಾದ್ರಿಂ ವೃಷಭಾಚಲಂ ।
ಆದಿಕೂರ್ಮಂ ತಥಾಮಾಯಾ ಶ್ರೀಶೈಲಂ ಕುಂಭಕೋಣಕಂ ॥
ಪುಷ್ಕರಂಚ ತಥಾಕಾಂಚೀ ಅನಂತಂಚ ಜನಾರ್ದನಂ ।
ಹೇಮಾದ್ರಿಂಚೈವ ಕೈಲಾಸಂ ಹಿಮವಾ ಸಾಗರಸ್ತಥಾ ॥
ನೀಲಾದ್ರಿಂ ಮಂದರಗಿರಿಂ ತ್ರಿಕೂಟಮರುಣಾಚಲಂ ।
ಗೋವರ್ಧನಗಿರಿಂಚೈವ, ಮೈನಾಕಂ ಗಂಧಮಾಧನಂ ॥
ಮಲಯಾದ್ರಿಂಚ ಮಾಹೇಂದ್ರಂ ಸಿದ್ಧಾದ್ರಿಂ ಚಕ್ರವಾಳಕಂ ।
ವೃದ್ಧಾಚಲಂ ಚಕ್ರತೀರ್ಥಂ ಗೋಮತಿಂ ಪಕ್ಷಿತೀರ್ಥಕಂ ॥
ಘಟಿಕಾಚಲಾಂ ಗಜಾರಣ್ಯಂ ಮಲ್ಲಿಕಾರ್ಜುನವಾಸಿನಂ ।
ವ್ಯಾಘ್ರಪುರೀಂ ನಂದಿಪುರೀಂ, ಹಾಲಾಸ್ಯಂ ಜಂಬುಕೇಶ್ವರಂ ॥
ಕ್ರೌಂಚಪಾದಂ ವೇದಪಾದಂ, ನಂದಿಪಾದಂ ಮಹಾಪಥಂ ।
ಕ್ಷೀರಾಬ್ಧಿಂ ಕೃಷ್ಣತೀರ್ಥಂಚ ದಕ್ಷಿಣದ್ವಾರಕೀತಥಾ ॥
ಸುಬ್ರಹ್ಮಣ್ಯಂ ವಿರೂಪಾಕ್ಷಂ ರುದ್ರಪಾದಂಚಮಾಪುರಂ ।
ಪಂಪಾಮವಂತಿಕಾಂಚೈವ ಕಾಳಹಸ್ತಿಂ ವಟಾಟವೀಂ ॥
ಕನ್ಯಾಕುಮಾರೀಂ ಭದ್ರಾದ್ರಿಂ ಕಾಶ್ಮೀರಂ ಚಿತ್ರಕೂಟಕಂ ।
ಶಿವನಾರಾಯಣಂಚೈವ ವೈಕುಂಠಂ ಪಾಪನಾಶಿನಂ ॥
ಶ್ವೇತಾರಣ್ಯಂ ಪಂಚನದಂ ಗೌರೀಮಾಯೂರಪತ್ತನಂ ।
ಭೂರ್ಮಾಮಾಹೇಶ್ವರೀಚೈವ ಇಂದ್ರಾಣೀ ವೈಷ್ಣವೀತಥಾ ॥
"ಸಾರ್ಧತ್ರಿಕೋಟಿತೀರ್ಥಸಹಿತಚಂದ್ರಭಾಗಾನದೀ ಸ್ನಾನಮಹಂಕರಿಷ್ಯೇ।
ತ್ವಂರಾಜಾ ಸರ್ವತೀರ್ಥಾನಾಂ ತ್ವಮೇವಜಗತಃಪಿತಾ ।
ಯಾಚಿತಂ ತೀರ್ಥಮೇದೇಹಿ ಸರ್ವಪಾಪಪನುತ್ತಯೇ ॥
ಯೋಸೌಸರ್ವಗತೋವಿಷ್ಣುಶ್ಚಿತ್ಸ್ವರೂಪೀನಿರಂಜನಃ ।
ಸಏವದ್ರವರೂಪೇಣ ದಿವ್ಯಾಂಭೋನಾತ್ರಸಂಶಯಃ॥
ಚಂದ್ರಭಾಗಾನಮಸ್ತುಭ್ಯಂ ಚಂದ್ರಭಾಗಾನಮೋನಮಃ ।
ಚಂದ್ರಭಾಗಾ ಮಹಾಭಾಗಾ ಅನುಜ್ಞಾಂದಾತುಮರ್ಹಸಿ ॥

ಎಂಬದಾಗಿ ಸಂಕಲ್ಪ ಸೂಕ್ತಗಳನ್ನು ಪಠಿಸುತ್ತ ಭಕ್ತಜನರಲ್ಲಿ ಕೆಲವರು ಚಂದ್ರಭಾಗಾನದಿಯಲ್ಲಿ ಸ್ನಾನಮಾಡುತ್ತಿದ್ದರು. ಕೆಲವರು ದೇವಾಲಯಕ್ಕೆ ತೆರಳಿ "ಜಂ

ಪಾಂಡುರಂಗವಿಠ್ಠಲಸ್ಮರಣೇ, ಜಯ ಜಯ ವಿಠ್ಠಲ್" ಎಂಬದಾಗಿ ನಾಮ ಸಂಕೀರ್ತನರೂಪವಾದ ಜಯಘೋಷಗಳನ್ನಾಚರಿಸುತ್ತ ಜಗನ್ಮೋಹನಾಕಾರವಾದ ಶ್ರೀ ಪುಂಡರೀಕವರದನ ದಿವ್ಯಮೂರ್ತಿಯನ್ನು ಅನನ್ಯಪ್ರೇಮದಿಂದ ಆಲಿಂಗನಮಾಡಿಕೊಂಡು ಪರಮಾನಂದವನ್ನನುಭವಿಸುತ್ತಿದ್ದರು; ಮತ್ತೆ ಕೆಲವರು

ಶ್ಲೋ॥ಶ್ರೀಗುರುಂ ವಿಠ್ಠಲಾನಂದಂ ಪರಾತ್ಪರಜಗತ್ಪ್ರಭುಂ।
ತ್ರೈಲೋಕ್ಯವ್ಯಾಪಕಂ ದೇವಂ ಶುದ್ಧಮತ್ಯಂತನಿರ್ಮಲಂ॥
ನಾಸಾಗ್ರೇವಸ್ಥಿತಂದೇವಮಾಬ್ರಹ್ಮಸ್ತಂಭಸಂಯುತಂ।
ಊರ್ಣಾತಂತು ನಿಭಾಕಾರಂ ಸೂತ್ರಜ್ಞಂ ವಿಠ್ಠಲಸ್ವಯಂ॥
ಗಂಗಾಯಮುನಯೋರ್ಮಧ್ಯೇತ್ರಿಕೂಟಂ ರಂಗಮಂದಿರಂ।
ಜ್ಞಾನಂ ಭೀಮರಥೀತೀರಂ ಸ್ವದೇವಂ ಪಂಢರೀಪುರಂ॥
ರುಕ್ಮಿಣೀಶಕ್ತಿಹಸ್ತೇನ ಕ್ರೀಡಂತಂ ಚಲಲೋಚನಂ।
ಆಜ್ಞಾ ಬ್ರಹ್ಮಬಿಲಾಂತಸ್ಥ ಜ್ಯೋತಿರ್ಮಯ ಸ್ವರೂಪಕಂ॥
ಸಹಸ್ರದಳಪದ್ಮಸ್ಥಂ ಸರ್ವಾಭರಣಭೂಷಿತಂ।
ಸರ್ವದೇವಸಮುತ್ಪನ್ನಂ ಓಮಿತಿಜ್ಯೋತಿರೂಪಕಂ॥
ಸಮಪರ್ವತ ಊರ್ಧ್ವಸ್ಥಂ ಶ್ರೋಣಿತ್ರಯ ಸಹಸ್ರಕಂ।
ಸ್ತಂಭೋಮಧ್ಯಂ ಯಥಾಸ್ಥಾನಂ ಕಲೌವೇಂಕಟನಾಯಕಂ॥
ಪೀತವಸ್ತ್ರಪರೀಧಾನಂ ತುಲಸೀವನಮಾಲಿನಂ।
ಶಂಖಚಕ್ರಧರಂ ದೇವಂ ವರದಾಭಯಹಸ್ತಕಂ॥
ಊರ್ಧ್ವಪುಂಡ್ರಮಯಂದೇವಂ ಚಿತ್ರಾಭರಣಭೂಷಿತಂ।
ರತ್ನಸಿಂಹಾಸನಂ ದೇವಂ ಸುವರ್ಣಮಕುಟೋಜ್ವಲಂ॥
ರತ್ನಕಿಂಕಿಣಿಕೇಯೂರಂ ರತ್ನಮಂಟಪ ಶೋಭಿತಂ।
ಪೌಂಡ್ರಂಚಪಾಲಿನಂರಂಗಂ ಯದೂನಾಂ ಕುಲದೀಪಕಂ॥
ದೇವಾರಿದೈತ್ಯದರ್ಪಘ್ನಂ ಸರ್ವಲೋಕೈಕನಾಯಕಂ।
ಓಂನಮಶ್ಶಾಂತಿರೂಪಾಯ ಸರ್ವಲೋಕೈಕಸಿದ್ಧಯೇ॥
ಸರ್ವದೇವಸ್ವರೂಪಾಯ ಸರ್ವಯಂತ್ರ ಸ್ವರೂಪಿಣೇ।
ಸರ್ವತಂತ್ರಸ್ವರೂಪಾಯ ವಿಠ್ಠಲಾಯನಮೋನಮಃ॥
ಪರಾತ್ಪರಸ್ವರೂಪಾಯ ಪರಮಾತ್ಮಸ್ವರೂಪಿಣೇ।
ಪರಬ್ರಹ್ಮಸ್ವರೂಪಾಯ ವಿಠ್ಠಲಾಯನಮೋನಮಃ॥
ಪರಮಂತ್ರಪ್ರಣಾಶಾಯ ಪರಯಂತ್ರ ನಿವಾರಿಣೇ।
ಪರತಂತ್ರವಿನಾಶಾಯ ವಿಠ್ಠಲಾಯನಮೋನಮಃ॥

ವಿಶ್ವರೂಪಸ್ವರೂಪಾಯ ವಿಶ್ವವ್ಯಾಪಿ ಸ್ವರೂಪಿಣೆ |
ವಿಶ್ವಂಭರ ಸ್ವಮಿತ್ರಾಯ ವಿಠ್ಠಲಾಯನಮೋನಮಃ ||
ಪರಹಂಸಸ್ವರೂಪಾಯ ಸೋಹಂಹಂಸ ಸ್ವರೂಪಿಣೆ |
ಹಂಸಮಂತ್ರಸ್ವರೂಪಾಯ ವಿಠ್ಠಲಾಯನಮೋನಮಃ ||
ಅನಿರ್ವಾಚ್ಯಸ್ವರೂಪಾಯ ಅಖಂಡ ಬ್ರಹ್ಮರೂಪಿಣೆ |
ಆತ್ಮತತ್ವಪ್ರಕಾಶಾಯ ವಿಠ್ಠಲಾಯನಮೋನಮಃ ||
ಕ್ಷರಾಕ್ಷರಸ್ವರೂಪಾಯ ಅಕ್ಷರಾಯಸ್ವರೂಪಿಣೆ |
ಓಂಕಾರವಾಚ್ಯರೂಪಾಯ ವಿಠ್ಠಲಾಯನಮೋನಮಃ ||
ಬಿಂದುನಾದಕಲಾತೀತ ಭಿನ್ನದೇಹಸಮಪ್ರಭ |
ಅಭಿನ್ನಾಯೈವವಿಶ್ವಾಯ ವಿಠ್ಠಲಾಯನಮೋನಮಃ ||
ಭೀಮಾತೀರನಿವಾಸಾಯ ಪಂಢರೀಪುರವಾಸಿನೇ |
ಪಾಂಡುರಂಗಪ್ರಕಾಶಾಯ ವಿಠ್ಠಲಾಯನಮೋನಮಃ ||
ಸರ್ವಯೋಗಾರ್ಥತತ್ವಜ್ಞ ಸರ್ವಭೂತಹಿತೇರತಃ |
ಸರ್ವಲೋಕಹಿತಾರ್ಥಾಯ ವಿಠ್ಠಲಾಯನಮೋನಮಃ ||

ಎಂಬದಾಗಿ ಪರಮಾತ್ಮನ ಕಲ್ಯಾಣಗುಣಗಳನ್ನು ಸ್ತೋತ್ರಮಾಡುತ್ತಿದ್ದರು. ಮತ್ತೆ ಕೆಲವರು ತಂಬೂರತಾಳಮೃದಂಗ ವೀಣಾವೇಣುವಾದ್ಯಗಳನ್ನು ಜತೆ ಪಡಿಸಿಕೊಂಡು

ರಾಗ—ಮೋಹನ—ಏಕ.

ವಿಠ್ಠಲ ವಿಠ್ಠಲ ಮೋಹನ ವಿಠ್ಠಲ ಆನಂದ ವಿಠ್ಠಲ ಶ್ರೀ ಜಯ ಜಯ ||ಪ||
ವಿಠ್ಠಲ ವರಗುಣ, ವಿಠ್ಠಲ ಪರತರ, ವಿಠ್ಠಲ ಶ್ರೀಧರ, ವಿಠ್ಠಲ ಮಾಧವ || ಅ-ಪ ||
ಸಕಲಲೋಕಶುಭಕಾರಣ ಮುನಿಜನನಿಕರ ವಿನುತ ಶಿವರಾಮಸುಪೂಜಿತ|| ವಿಠ್ಠಲ

ಇಂತು ಕರ್ಣಾನಂದವಾಗಿ ನಾಮ ಸಂಕೀರ್ತನಗೈಯುತ, ವಿಠ್ಠಲಶಬ್ದ ಸರ್ವತ್ರ ತುಂಬಿ ಎಲ್ಲರ ನಾಲಿಗೆಗಳಲ್ಲಿಯೂ ನಲಿದಾಡುತ್ತಿರಲಾಗಿ ಆನಂದಸಮು ದಲ್ಲಿ ಓಲಾಡುತ್ತಿದ್ದರು. ಇಲ್ಲಿನ ವರ್ತಮಾನ ವಿಶೇಷಗಳು ಹೀಗಿರಲಾಗಿ ಅಗಣ ಶ್ರೀಮಂತರಲ್ಲಿ ಅಗ್ರಗಣ್ಯರೆನಿಸಿದ ನಮ್ಮ ಕಥಾನಾಯಕರಾದ (ನವಕೋ ನಾರಾಯಣಸೇಟರೆಂಬ ಅನ್ವರ್ಥನಾಮಧೇಯದಿಂದ ಪ್ರಸಿದ್ಧಿಯನ್ನು ಪಡೆದ) ಕೃ ನಾಯಕರು ಶ್ರೀ ಪಾಂಡುರಂಗ ಕ್ಷೇತ್ರವನ್ನು ಕುರಿತು ತೆರಳುತ್ತ ತಮ್ಮ ಹೀಗೆಂದು ಯೋಚಿಸತೊಡಗಿದರು. (ಸಶೇಷ.)

gordian - Literature

INDIAN LITERATURE.

[Sanskrit Poets and Poems.]

—o—

— KASIPATHI —

Sanskrit Poet of Hosur and Author of 'Mukundananda Bana'.

Prof. Hudson in his essay on the judicious use of a good biography observes that 'side by side in our shelf with the books of any author that we really care for, a place should thus be certainly made for some well-chosen account of his life'. The curiosity in our study of the personal life in literature is legitimate, and in gratifying it we will come to know the conditions under which the literary work was written and the outward history of the author, his ambitions, struggles, success, or failure which influenced the author in the production of his work. For instance, the lives of Milton, Johnson, Goethe and Tennyson apart from their interest as human documents, have a direct literary value since we feel that we can understand the author and enjoy his work, so much the better for the information they afford. Unfortunately to reveal the lives of the great Sanskrit authors, the circumstances are not favourable and the only exception is Bana who would have left us in the same dubious position about his history had it not been for his immortal prose work Harsha-charitra (हर्षचरित्र) which includes a portion of his autobiography.

While labouring in my father's library to select a suitable book for my study I came across a copy of 'Mukundananda Bana' published by the Vajapeyam Book Depot, Bangalore. Observing the passage नूतनपुरानवासिभिः आसेतुशीताचलप्रथिततार्किकैकालंकारिक विद्वद्वरिष्ठैः कविकुलतिलकौ श्रीकाशीपति कविभिः कृतः which reveales the

poet's Tharka (Logic) scholarship and his nativity, my pride of finding such a great poet and scholar of my town, roused in me a natural desire to give a few of my leisure hours to the *Bana* that I had found. After finishing my study I felt with Macaulay that 'by poetry we mean the art of employing words in such a way as to create an illusion on the imagination, the art of doing by the words what a painter does by means of colours.' The legitimate curiosity to know something more of such a great poet resulted in my efforts to get at the glimpses of the author's biography. Three ways were only open to me. Firstly, to know something of the author from the literary work itself; secondly, from the tradition of his family and lastly, to get some information from the poet's family records.

The fact that Sri Kasipathi belongs to an ancient scholarly family of Hosur is unmistakable. It is evident not only from the tradition of his family but also from the references that we have of him in the *Bana*. The poet speaks of his grandfather Yallaya-Deekshita in this verse:

समस्त विबुधेषु कस्तवसमोस्ति यज्ञाध्वरिन्
यतोजितवते बलात्सदसिकामदेवंगवा ॥
शिवामिवशिवायते नवविधां दिदेशाधिधां
त्रिलोकविजयीत्यलं तिरुमलक्षमाभृद्वरः ॥

He says—"Like Siva who obtained Parvati by his prowess of the conquest of Kamadeva (Cupid), Yallayadhvari for his conquest of a scholar Kamadeva obtained the title *Thrilokavijaye* (The conqueror of the three worlds)."

This verse besides revealing the poet's ancestry confronts us with some other interesting problems. The verse throws some light on the contemporary history of the period. The tradition of the family says that Yallaya received the title from a King of Mysore. King Thirumala who is referred to in the verse may be one of the ruling chiefs of Southern India considering the

fact that Yallaya was a domicile of Hosur who migrated to the Mysore kingdom from Nandyala. It is certain that Yallayadhvari is the first ancestor of our poet who settled at Hosur, examining the genealogy of their family on the title deed of Santapuram, a rich village only a few miles from Hosur. The family records further reveal to us that Yallaya earned in token of his scholarship two other villages besides Santapuram which might have been presented to him either by the ruling chiefs of Mysore or by the Rajah of Bagalur who ruled over Hosur and its surroundings. A similar offer was made to another ancient family of Hosur at the same time and the records show that this was made about two hundred years ago. The genealogy of the family as given on the title deed of Santapuram village is as follows :—

Yallaya Deekshita
Umapathi Sastri
Kasipathi Kavi *
Venkatarama Sastri
Sreenivasa Somayaji
Krishnam Bhatta
Venkatarama Sastri
Krishnam Bhatta.

The last of the descendants is now living. We can fix approximately the period of our poet between 1720–1800 A.D. On the title page published by Garani Vaiyakarani Krishnamachariar, it is stated that the work was produced in the year 1700 Hevilambi, Salivahana Saka, *i.e.*, 1778 A.D. Nextly we are aware of many other references to the poet in his *Bana*. The verses

उमापति सुधासूनोः काशीपतिकवेः कृतिः
मुकुन्दानन्दनामायं मिश्रभाणः प्रयुज्यते ॥
कौण्डिन्यवंशरत्नस्य कवेःकाशीपतेः कृतिः
तर्के कर्कशवक्रवावयगहने यानिष्ठुरा भारती

साकाङ्क्षे मृदुलोक्तिसारसुलभा स्यादेवमे कोमला ॥
काल: कोमल कोकिलोक्तिमधुर: काव्यज्ञमान्य: कवि:
. . . . . .
. . . . . .
किंचायं समुदंचितो भगवतश्चूडेश्वरस्योत्सव: ॥

reveal to us a few facts relating to the poet. We come to know from his very pen that the poet belongs to Koundinyagotra and his ability in Tharka which is so well spoken of on the title page of Krishnamachariar's edition has a direct reference in the *Bana*. The poet speaks of himself as a Kavyagnamanya (काव्यज्ञमान्य)— the best amongst learned—and this is natural for Sanskrit poets to speak of themselves in such high terms.

Besides Mukundananda Bana there are a very few *Banas* in the Sanskrit dramatic literature. This is most famous amongst all of them. In Dasarupaka the definition of a *Bana* is

"भारतीवृत्ति भूयिष्ठं शौर्यसौभाग्यवर्णनै: । सूच्यते वीरशृंगारौ विटेन निपुणोक्तिना । कल्पितेनेतिवृत्तेन धूर्तचारित्र वर्णनम् । एकांकोमुखनिर्वाहौ यत्रभाणस्सस्सम्मत:" that it should contain (भारतीवृत्ति) Bharatti Vritti, while Sringara or Vira Rasa (शृंगार or वीररस) predominates. The plot of a *Bana* should not be borrowed and it should have one only act. The hero of a *Bana* is a paramour (विट) and the *Bana* is an aspect of his life. The plot of Mukundananda Bana is an original plot and the hero is Krishna, Radha's paramour (राधाविट).

Sri Kasipathi in his one only work Mukundananda Bana which has suvrvied him r e v e a l s his greatness as a poet. S. Laing in his essay on the creeds of great poets writes, "that by a great poet I mean to be one whose nature is exceptionally susceptible to impressions of the surrounding universe, especially those of a character which comes within the domain of art and unites with this a certain musical faculty and command of

language." The Sanskrit definition of a great poet as in Sambhurahasyam is that he should possess Pratibha (प्रतिभा) which is the power of viewing the universe in newer ways. A poet's brain can be compared to a Æolian harp which vibrates responsive to harmonies of nature, unheard to the coarser fibres of ordinary mortals. Sri Kasipathi, as for instance, is equal to the greatest in the exquisite susceptibility to all that is beautiful in nature. Shelley's *Skylark* and *Cloud* stand for the susceptibility to all that is most beautiful in nature. So also the lyric-drama of Kasipathi stands for high and deeper insight into the life of things and he finds *Nature* with Wordsworth:

"The anchor of purest thoughts, the nurse, the guide, the guardian, the heart and soul of all moral beings."

Vidyanatha Mahopadhya in his Pratapa Rudriya observes that शृंगार रसस्यैव प्राधान्यं भाणे। Sringara Rasa alone should predominate in a *Bana* and Kasipathi is true to this definition. The verses in his drama reach the high water-mark to which lyrical poetry has ever attained. He like Keats gives us the 'things of beauty which are joy for ever'. The one criticism that can be levelled against him is that he scarcely gives any counsel or consoling words to guide the world for higher and higher things. The poet scarcely has any liberty to introduce the philosophy of life in a *Bana*. The charge can be easily repudiated by consideration of the fact that no other works of the author except this *Bana* has come to light.

What influenced Kasipathi in the production of his work are the beautiful natural surroundings of Hosur. The glittering peak of Chudanatha, the lofty tower on the hill, the Marakatha Sara with its greenish water cannot but fascinate a susceptible brain as that of Sri Kasipathi. He opens his scene of action on the full-moon day of Phalguna when the moon-beams pour a flood of light creating the impression of day all around.

It is Vasanta season. The description of Vasanta season in Bharthruhari can be compared to the mental picture of the poet when he says, कालः कोमल कोकिलोक्तिमधुरः that the season was pleasant with the song of Kokila. It is on this day that God Chudanatha's car festival takes place to which spectators gather from all the surrounding villages. The poet describes this scene when he writes

इतश्च नूतनपुर परिसरालंकार भद्रगिरि चूडामणेः भगवतः चूडेश्वरस्य वसन्तोत्सव सन्दर्शन समुत्सुकाः सामाजिकाः कल्याणमंटप मध्यमध्यासते ॥

The surrounding scenes from which he drew the inspiration of his 'musical thoughts' are described in the *Bana*. He cleverly manages to shift his scenes to the different quarters of the town which appeal to human emotions and gives a description of them. He describes the Marakatha lake, the garden in front of the town, the particular street inhabited by the prostitutes; he speaks of the town-purohit and above all there is an interesting description of a professional cook.

Any careful reader of the *Bana* cannot but observe the reflections on the conditions of the town which we find in the *Bana* at the time of the poet. It is not to "an airy nothing" he gives a local habitation and a name. We are able to discriminate the passages which are simply dramatic and those which while still dramatic may safely be read as representing the poet's own mind and his surroundings. The passages in the drama that describe the different scenes are :—

(१) सितासितसरित्प्रमुखमहातीर्थराजेरपि महत्तरमिदं मरकतसरः ।

(२) अविरलदलनिकर निवारित रविकर प्रवेशम् ।
रविकरप्रकाश चकितगुरुतिमिर शरणोकरणविलताप्रदेशम् ॥
क्वचिदुदारतुरंगमिव क्रीडाकुरंगैः । क्वचनवाचालबंदिवृंदमिव कलकलायमान कोकिलकुलैः ॥
समन्ततः कुसुमशर शिविरमिव सकलेनापि स्फुरित पुरःपुरोद्यानम् ॥

(३) एषाकिल योषाकुल भाषाजित रोषावृत कीरायुतका
रायित मणिमंजुल रुचिपिंजर नवपंजरमाला ॥
चरन्तीनां सौधे चपलनयनानांतनुरुचां
गवाक्षान्तर्वान्ताः कातचनगृहीत्वाजलमुचः ।
क्षणंगीपायन्ति क्षणरुचिमिषेणक्षणमहो
विवृण्वन्तिस्वर्णकरगतामिवा किंचनजनाः ॥

(४) पंचांगमंचितकुशेन करेण धृत्वा
पत्त्रीप्रमृज्यकिल पत्त्ररसेन भूयः ।
आवर्तयन्नसकृदक्षर मेकमेकं
तारादिवाचयति तत्पुनरन्यदन्यत् ॥

(५) अथतावदशिथिल सकलावयव सन्धिबंधं
सिंधुमिव जडाशयं जलदामिव पयोवाहं
जलदकालमिव घनभषी मलिनांबरं ... ...
... ... पंडितमिव सकलपरिचित रसपाकं
कमपिकज्जलमेचकं पाचकमपश्यन् ॥

Examining these passages, we get some glimpses about the prosperity of the town at the time of the poet 'Śri Kasipathi'. Here we see the description of the lake and the poet is but the mouth-piece of the feelings of the townsmen. His descriptions of the particular street inhabited by prostitutes as well as that of the garden, reveal to us the richness of the poet's imagination and the prosperous condition of the town. The description of the town-purohit (priest) is thoroughly natural in character and indicates that the purohits were shallow in learning even at the days of our poet as they are now at present. The appearance of the professional cook is highly descriptive and is full of poetic beauty.

The style of our poet is the combination of lucid order, graceful ease, pregnant significance and rich variety. It requires no greater authority than the verdict of the two great scholars of Bangalore, Siddhanthi Subrahmanya Sastri, and Garani

Vaiyakarana Krishnamachariar who give the above opinion. As a matter of fact we have to wonder with *Nati* that the style of this great poet is unaffected by his scholarship in Tharka. The poet is sympathetic in his descriptions, rich in humour, noble in views, and this *Bana* is purely lyrical in character. The beautiful descriptions of the morning, evening and midnoon do attract the attention of every heart that is bent towards the soul-elevating *nature.*

Coming to conclusion, it is certain that I have thrown only a dim light on the great Sanskrit poet of Hosur. I will be highly grateful for any further information that can be supplied on the subject either from the local scholars or those who are connected with literary research.

C. S. Nanjundiah.

C. S. Nanjundiah

ಪ್ರಕಟನೆ.

ನಮ್ಮ ಭೂಮಿಯಲ್ಲಿ
ಹುಟ್ಟುವಳಿಯನ್ನು ಹೇಗೆ ಹೆಚ್ಚಿಸಬೇಕು?



ಅನೇಕರು ಪ್ರಶ್ನೆಯ ಕುರಿತು ಯಾವತ್ತರೂ ಆಲೋಚನೆಯಲ್ಲಿರುವರು. ಇದಕ್ಕೆ ಸ್ವಲ್ಪದರಲ್ಲಿ ಹಂಚಿಕೆಯೆಂದರೆ, ಸುಧಾರಿಸಿದ ಒಕ್ಕಲತನದಗಳೇ ಸಾಮಾನುಗಳನ್ನೇ ಹೂಡುವದು :—ಈ ಬಗ್ಗೆ,

"ಕಿರ್ಲೋಸ್ಕರ"

ಕಬ್ಬಿಣ ರೆಂಟೆಗಳೂ, ಕಬ್ಬಿಣ ಗಾಣಗಳೂ, ಕನಿಕೆ ಕೊರೆಯುವ ಯಂತ್ರಗಳೂ, ಕಪ್ಪಲಿಗಡೆಗಳೂ ಇತ್ಯಾದಿ; ಒಕ್ಕಲತನದ ಸುಧಾರಿಸಿದಗಳೇ ಸಾಮಾನುಗಳನ್ನು ಉಪಯೋಗಿಸುವದರಿಂದ ಬಹಳ ಲಾಭವದೆ. ಈ ಬಗ್ಗೆ ಸಾವಿರಾರು ಒಕ್ಕಲಿಗರು ಅನುಭವ ತೆಗೆದುಕೊಂಡಿರುವರು. ನಿಮಗಾದರೂ ಇವುಗಳಿಂದ ಲಾಭ ತಕ್ಕೊಳ್ಳಲಿಕ್ಕೆ ಬರುವದು. ಹೆಚ್ಚು ವಿವರಗಳನ್ನು ತಿಳಿಸುವ

"ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ"

ವಿಳಾಸ:— **ಕಿರ್ಲೋಸ್ಕರ ಬಂಧು,** ಲಿಮಿಟೆಡ್,

ಪೋಸ್ಟು :—**ಕಿರ್ಲೋಸ್ಕರವಾಡಿ,**

ಜಿಲ್ಲಾ—ಸತಾರಾ.

ಆನಂದಚಂದ್ರಿಕೆ

[ರಾಮಕೋಟಿ ಮತ್ತು ಆನಂದಚಂದ್ರಿಕೆ]

Single Copy
Re. 1—0—0
V.P. Charge 0-4-0

ಚಂದಾವಿವರ.

ಬಿಡಿಸಂಚಿಕೆ, ಬೆಲೆ
ರೂ. ೧—೦—೦
ವಿ. ಪಿ. ಪೋಸ್ಟೇಜು ೦—೪—೦

ಚಂದಾದಾರರು (ವರ್ಷ ೧ ಕ್ಕೆ)	..	..	ರೂ. 5–0–0
ರಾಜಪೋಷಕರು (ಒಂದುಸಾರಿ ಮಾತ್ರ)	..	..	,, 100–0–0
ಪ್ರಧಾನಪೋಷಕರು (ಸದರಿ)	..	..	,, 50–0–0
ಪೋಷಕರು (ಸದರಿ)	..	..	,, 25–0–0

ಈ ವಿಧವಾಗಿ ಸಹಾಯಮಾಡಬೇಕು.

☞ 5 ರೂಪಾಯ್ಗಿ ಚಂದಾ ಕೊಡಲು ಶಕ್ತಿಯಿಲ್ಲದವರಿಗೆ ಮಾತ್ರ ಈ ಪತ್ರಿಕೆಯನ್ನು ರೂ. 2 ಕ್ಕೇ ಕಳುಹಿಸುತ್ತೇವೆ. ಅಂಥವರು ರೂ. 2–0–0 ನ್ನು ಮನಿ ಯಾರ್ಡರು ಮಾಡಬೇಕು. ವಿ. ಪಿ. ಕಳುಹಿಸಬೇಕಾದರೆ ರೂ. 2–6–0 ಆಗುತ್ತದೆ.

ಒಂದೇಸಾರಿ (5–0–0) ಐದು ರೂಪಾಯಿಗಳನ್ನು ಸಲ್ಲಿಸಲು ಸೌಕರ್ಯವಿಲ್ಲದವರು ರೂ. 2–8–0 ಯಂತೆ, ಎರಡುಸಾರಿ ಕೊಡಬಹುದು. ಪೋಷಕರು, ಪ್ರಧಾನಪೋಷಕರು ಸಹಾ ಹಾಗೆಯೇ ಎರಡುಸಾರಿ ಸಲ್ಲಿಸಬಹುದು.

ವರ್ಷ ೧ ಕ್ಕೆ ೫ ರೂಪಾಯಿಗಳನ್ನು ಕೊಡತಕ್ಕ ಚಂದಾದಾರರ ನಾಮಧೇಯಗಳನ್ನು ಒಂದುಸಾರಿ ಪ್ರಕಟಿಸುತ್ತೇವೆ, ಮತ್ತು ಒಂದು ವರ್ಷದವರೆಗೂ ಸಂಚಿಕೆಗಳನ್ನು ಕಳುಹಿಸುತ್ತೇವೆ.

ರಾಜಪೋಷಕರು, ಪ್ರಧಾನಪೋಷಕರು, ಪೋಷಕರ *ನಾಮಧೇಯಗಳನ್ನು ಶಾಶ್ವತವಾಗಿ ಪ್ರಕಟಿಸುತ್ತೇವೆ; ಮತ್ತು ಅವರಿಗೆ ಎಲ್ಲಾ ಸಂಚಿಕೆಗಳನ್ನೂ ಕಳುಹಿಸುತ್ತೇವೆ.

ವಿಳಾಸ:—ಆನಂದಚಂದ್ರಿಕಾ ಆಫೀಸ್,
ಹೊಸೂರು (ಶೇಲಂ ಜಿಲ್ಲಾ).

Address :— **Ananda Chandrika**
P.O. Hosur (Salem Dt., India).

THE BANGALORE PRESS, MYSORE ROAD, BANGALORE CITY.

ಸಿರಿಗನ್ನಡಂಗೆಲ್ಗೆ.

ಕಿರ್ಲೋಸ್ಕರ ವಾರ್ತೆ.

ಉದ್ಯೋಗ! ಉತ್ಸಾಹ!! ಆತ್ಮೋನ್ನತಿ!!!

ತಿಳಿಗನ್ನಡ ಮಾಸಪತ್ರಿಕೆಯು.

ಉದ್ಧರೇದಾತ್ಮನಾತ್ಮಾನಂ | ನಾತ್ಮಾನಮವಸಾದಯೇತ್ ||
ಆತ್ಮೈವ ಹಿ ಆತ್ಮನೋ-ಬಂಧು | ರಾತ್ಮೈವ ರಿಪುರಾತ್ಮನಃ||

ಸಂಪಾದಕರು— ಶೀ. ಲ. ಕೃ. ಬಾಗಲ.

ವರ್ಷ ೨
ಸಂಚಿಕೆ ೪

ಅಗಸ್ಟ ೧೯೨೫.

ವಾರ್ಷಿಕ ಚಂದಾ ೧೫೪
ವ್ಹಿ. ಪಿ. ಯಿಂದ ೧೫೪

ರಾಮಚಂದ್ರ
ಪೋಸ್ಟ್
ತೀರ್ಥಹಳ್ಳಿ ತಾಲ್ಲೂಕು

ಸಿಂಗಸ್ವಾಮಿ
ಪುಸ್ತಕ ಭಂಡಾರ, ಬಳವಾನಿ
ಕ್ರಮಸಂಖ್ಯೆ.....
ದಿನಾಂಕ.....

ಆಯುರ್ವೇದ.

ವೈದ್ಯಕ ಸಂಬಂಧವಾದ ತಿಳಿಗನ್ನಡ ಮಾಸಪತ್ರಿಕೆ.

ಪ್ರತಿ ತಿಂಗಳ ಪುಷ್ಯ ಪೂರ್ಣಿಮೆಯ ದಿವಸ ಪ್ರಕಟವಾಗುವುದು

ವರ್ಷ ೧೫ ತೀರ್ಥಹಳ್ಳಿ. ಮಾರ್ಗಶಿರ ಪು. ೧೫. (ಇಂ. ೧೧-೨೫)] ಸಂ. ೧.

ವಿಷಯಾನುಕ್ರಮಣಿಕೆ.

ವಿಷಯ.	ಪುಟ.
ಸ್ವವಿಷಯ.	೧ ರಿಂದ ೬
ಮಾಧವನಿಧಾನ (ಕರ್ನಾಟಕ ಅನುವಾದ)	೧ ,, ೨೦.
ಶಾರ್ಙ್ಗಧರಸಂಹಿತಾ. ,,	೧ ,, ೨೦.

—: ವಾರ್ಷಿಕವರ್ಗಣೆ :—

ಸ್ಥಳದವರಿಗೆ.	ಪೋಷಕರಿಗೆ.	ಪರಸ್ಥಳದವರಿಗೆ.
೩—೦—೦	೧೬—೦—೦	೩—೪—೦

ಸಂಪಾದಕರು:—

ವಿದ್ವಾನ್, ಪಿ. ಸೂರ್ಯನಾರಾಯಣಶಾಸ್ತ್ರಿ, ಆಯುರ್ವೇದಭೂಷಣ,
ಸಾಹಿತ್ಯವಿದ್ವಾನ್, ಕಾವ್ಯತೀರ್ಥ,
ಚಿಕಿತ್ಸಕ, ಶ್ರೀ ಭುವನೇಂದ್ರ ಆಯುರ್ವೇದ ವೈದ್ಯಶಾ

ಪ್ರಕಾಶಕರು.

ಜಿ. ರಘುಪತಿರಾವ್ ಬ್ರದರ್ಸ್, ತೀರ್ಥಹಳ್ಳಿ.

Printed at the Radha Krishna Printing Works, Tirthahalli.

HEALTH

ಆರೋಗ್ಯಚಿಂತಾಮಣಿ.

ಆರೋಗ್ಯವಂತರಿಗೂ ರೋಗಿಗಳಿಗೂ ಉಪಯೋಗಿಸುವ ಪತ್ರಿಕೆ.

ಸಂಪಾದಕರು, ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ.

ಸಂಪುಟ. 2 ಸಂಖ್ಯೆ 8. ಫೆಬ್ರವರಿ. 1925.

ವಿಷಯ ಸೂಚಿಕೆ.

	ಪುಟ.
ಮುಖಚಿತ್ರ:—ನಾಟಕರಂಗದಲ್ಲಿರುವ ದೃಢಗಾತ್ರಿಯಾದ ಒಬ್ಬ ಹೆಂಗಸು.	
ಆರೋಗ್ಯ ಕಲಾಪ್ರದರ್ಶನದ ವಾರ.	
ಸಣ್ಣ ಮಕ್ಕಳ ಆಹಾರಗಳು. ...	144
ಈರುಳ್ಳಿಯಲ್ಲಿರುವ ಆಹಾರಗುಣ ಮತ್ತು ಔಷಧಗುಣಗಳು. ...	145
ಹಲ್ಲುಗಳ ಸಂರಕ್ಷಣೆ.	146
ಸಿದ್ರೆಯಲ್ಲಿ ಎದ್ದು ತಿರುಗಾಡುವುದು.	148
ಜಲಭಯವನ್ನು ತಪ್ಪಿಸುವುದು ಮತ್ತು ಈಜುಕಲಿಸುವುದು. ...	150
ಗಪ್ಪಿಜೀಜಗಳು ಮತ್ತು ಅಪರ ಎಣ್ಣೆಗಳು. (ಬಾದಾಮಿ.) ...	151
ಆಹಾರ ಜೀರ್ಣಾಂಗಗಳು. ...	152
ವರ್ಷಾಕ್ರಮ ಸಿಯಮಗಳಲ್ಲಿ ಅಡಗಿರುವ ಆರೋಗ್ಯಶಾಸ್ತ್ರ ಸೂತ್ರಗಳು.	156
ಮಲಗುವಾಗ ನಮ್ಮ ಶರೀರವನ್ನು ಹೇಗಿರಿಸಬೇಕು? ...	159
ಸ್ವೀಕಾರ.	160

ಪತ್ರಿಕೆ ದೊರೆಯುವ ಸ್ಥಳ:— ನಂ. 323. ತಂಬುಚೆಟ್ಟಿ ಜಂಡಿ, ಮದ್ರಾಸು.

ವಾರ್ಷಿಕ ಚಂದಾ ರೂ. 1-8-0 ಪ್ರತಿ ಸಂಚಿಕೆ. 0-2-0.

ವಿನ್‌ಕಾರ್ನಿಸ್.

ಇದು ಶರೀರಕ್ಕೆ ಒಳ್ಳೇಬಲವನ್ನೂ, ತೂಕವನ್ನೂ ಬಹುಬೇಗನೆ ಹೆಚ್ಚಿಸುವುದು.

ಜ್ವರ ಅಥವಾ ಬೇರೆ ಯಾವುದಾದರೂ ಕ್ರೂರವ್ಯಾಧಿಗಳಿಂದ ದೇಹದ ಶಕ್ತಿಯೂ, ತೂಕವೂ ಬಹಳವಾಗಿ ತಗ್ಗಿದಾಗ, ಈಮೇಲ್ಕಂಡ ಜೀವನೌಷಧವನ್ನು ಉಪಯೋಗಿಸಿ, ಆದರಿಂದಾಗುವ ಆಶ್ಚರ್ಯಕರವಾದ ಗುಣವನ್ನು ಪರೀಕ್ಷಿಸಿನೋಡಿರಿ !

ಮೈಗೆ ತ್ರಾಣವನ್ನೂ, ಪುಷ್ಟಿಯನ್ನೂ ಕೊಡುವುದರಲ್ಲಿ ಜಗತ್ಪ್ರಸಿದ್ಧವಾದ ಈ ಅನುಪಾನವನ್ನು, ಇದುವರೆಗೆ ಹದಿನೇಳುಸಾವಿರಕ್ಕಿಂತ ಹೆಚ್ಚುಮಂದಿ ವೈದ್ಯರು, ತಮ್ಮಲ್ಲಿ ಚಿಕಿತ್ಸೆಗಾಗಿ ಬಂದ ಅನೇಕಾನೇಕರೋಗಿಗಳಿಗೆ ಉಪಯೋಗಿಸಿ, ಅದರ ಅದ್ಭುತಗುಣವನ್ನು ಪರೀಕ್ಷಿಸಿ ತಿಳಿದಿರುವರು. ''ವಿನ್‌ಕಾರ್ನಿಸ್'' ಎಂಬೀ ಪಾನೀಯವು ಬಲಹೀನರಿಗೆ ಪುಷ್ಟಿಯನ್ನುಕೊಡುವುದು ಮಾತ್ರವಲ್ಲದೆ, ರಕ್ತವೃದ್ಧಿಯನ್ನುಂಟುಮಾಡಿ, ರಕ್ತದ ಕೆಂಪುಕಣಗಳನ್ನೂ ಹೆಚ್ಚಿಸುವುದು.

ದೇಹಕ್ಕೆ ಬಲವನ್ನೂ, ತೂಕವನ್ನೂ ಹೆಚ್ಚಿಸುತ್ತಬರುವುದರೊಡನೆ, ಈ ವಿನ್‌ಕಾರ್ನಿಸ್ ಎಂಬುದು ಬಹುಬೇಗನೆ ಜೀರ್ಣಶಕ್ತಿಯನ್ನುಂಟುಮಾಡಿ, ಹಸಿವನ್ನೂ ಹೆಚ್ಚಿಸುವುದು.

ಕಫಜ್ವರ, ಇನ್‌ಫ್ಲುಯೆಂಜಾ, ನರಗಳ ದುರ್ಬಲತೆ, ದೇಹಕಾರ್ಶ್ಯ, ಸಿತ್ರಾಣ ಮುಂತಾದ ವ್ಯಾಧಿಗಳಿಂದ ಜೇತರಿಸಿಕೊಳ್ಳುತ್ತಿರುವವರಿಗೆ ಇದು ಬಹುಶೀಘ್ರದಲ್ಲೆ ಗುಣವನ್ನು ತೋರಿಸಿ, ಆರೋಗ್ಯಸ್ಥಿತಿಗೆ ತರುವುದು.

ವಿನ್‌ಕಾರ್ನಿಸ್ ಎಂಬುದು ಬಾಯಿಗೆ ರುಚಿಯಾಗಿಯೂ, ಸುಲಭವಾಗಿ ಜೀರ್ಣಿಸತಕ್ಕುದಾಗಿಯೂ, ಸಿಕ್ಕಿದ ಔಷಧದ್ರವ್ಯಗಳ ವಿಶ್ರಾಣವಿಲ್ಲದೆ, ಅಪ್ಪಟವಾಗಿಯೂ ಇರುವುದರಿಂದ ಎಷ್ಟೇ ಬಲಹೀನರಾದವರೂ ಇದನ್ನು ನಿರ್ಭಯವಾಗಿ ಸೇವಿಸಬಹುದು.

''ವಿನ್‌ಕಾರ್ನಿಸ್'' ಎಂಬುದು ಪ್ರಸಿದ್ಧವಾದ ''ಪಿಂಕ್ ಪೇಪರ್'' ಎಂಬ ಕೆಂಪು ಕಾಗದದ ಮೇಲೆ ಸುತ್ತಿದ ಸೀಸೆಗಳಲ್ಲಿ ತುಂಬಿ, ಎಲ್ಲಾ ಮದ್ದಿನ ಷಾಪುಗಳಲ್ಲಿಯೂ,ಮಳಿಗೆಗಳಲ್ಲಿಯೂ ಮಾರಲ್ಪಡುತ್ತಿದೆ.

''ವಿನ್‌ಕಾರ್ನಿಸ್'' ''ಜೀವನಾಮೃತ,

WINCARNIS

THE
HEALTH
ಆರೋಗ್ಯ ಚಂದ್ರಿಕೆ.

ಸಂಪುಟ. 5. | ಅಕ್ಟೋಬರ್. 1927. | ಸಂಚಿಕೆ. 4.

ಶಿಶುಗಳ ಪೋಷಣೆ ಮತ್ತು ಅವುಗಳ ಆರೋಗ್ಯ.

ಮಕ್ಕಳಲ್ಲಿ ಪ್ರೀತಿಯಿಲ್ಲದೆ ಇರತಕ್ಕವರೂ, ಅವುಗಳ ರಕ್ಷಣೆಯ ವಿಷಯದಲ್ಲಿ ಎಚ್ಚರ ತಪ್ಪಿದವರೂ ಶಿಶುಗಳ ರಕ್ಷಣೆಯ ಕಾರ್ಯದಲ್ಲಿ ನಿಯಮಿಸಲ್ಪಡಬಾರದು. ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳದೆ, ಅವುಗಳ ರಕ್ಷಣೆಯ ವಿಷಯದಲ್ಲಿ ಅಲಕ್ಷ್ಯದಿಂದಿದ್ದು, ದೂರಾಲೋಚನೆಯು ಸ್ವಲ್ಪವೂ ಇಲ್ಲದೆ, ಗೊಡ್ಡು ಹರಟೆಗಳಲ್ಲಿ ಕಾಲವನ್ನು ಕಳೆಯತಕ್ಕವರು ಶಿಶುಸಂರಕ್ಷಣೆಗೆ ಅರ್ಹರಲ್ಲ. ತಾಯಿಯರೂ, ದಾದಿಯರೂ, ಯಾವಾಗಲೂ ಎಚ್ಚರಿಕೆಯಿಂದ ಮಕ್ಕಳ ಚರ್ಯೆಗಳನ್ನು ನೋಡುತ್ತಿರಬೇಕು. ಬೆಂಕಿಯುರಿ, ದೀಪ, ಬಿಸಿಯಾದ ದ್ರವಪದಾರ್ಥಗಳು, ಕತ್ತರಿ, ಬೆಂಕಿಕಡ್ಡಿಯ ಪೆಟ್ಟಿಗೆ, ಅಮೋನಿಯ ಮುಂತಾದ ಪದಾರ್ಥಗಳು ಅವುಗಳ ಕೈಸಿಕ್ಕುವಂತಿರುವ ಪ್ರದೇಶಗಳಲ್ಲಿ ಅವುಗಳನ್ನು ಪ್ರತ್ಯೇಕವಾಗಿ ಬಿಡಬಾರದು, ಮಕ್ಕಳು ಬೆಕ್ಕಿನ ಬಾಯಿಗೆ ಮುಕ್ತಿಕ್ಕುವುದಕ್ಕೆ ಅಸ್ಪದ ಕೊಡಬಾರದು ಮಕ್ಕಳು ಮಲಗಿರುವ ಕೊಠಡಿಗೇ ಬೆಕ್ಕನ್ನು ಬಿಡಬಾರದು. ಮಕ್ಕಳು ಅಳುವುದಕ್ಕೆ ಪ್ರಾರಂಭಿಸಿದ ಮಾತ್ರಕ್ಕೇ ಅವು ಚಂಡಿಯೆಂದು ಭಾವಿಸಬಾರದು. ಪ್ರಾಯಶಃ ಎಳಮಕ್ಕಳು 'ಚಂಡಿ' ಹಿಡಿಯುವುದಿಲ್ಲ. ಅವು ಅತ್ತರೆ, ಅವು ಹಸಿದಿವೆಯೆಂದಾಗಲಿ, ಅವುಗಳಿಗೆ ಯಾವುದೋ ಬಾಧೆಯುಂಟಾಗಿದೆಯೆಂದಾಗಲಿ ಅವುಗಳಿಗೆ ಮೈ ಸ್ವಸ್ಥವಿಲ್ಲವೆಂದಾಗಲಿ ತಿಳಿಯಬಹುದು. ಕೆಲವು ಸಂದರ್ಭಗಳಲ್ಲಿ ಲಾಲನೆಮಾಡಿ ಸ್ವಲ್ಪ ಸರಿಯಾಗಿ ಮಲಗಿಸಿದರೆ ನಿಶ್ಶಬ್ದವಾಗಿ ಮಲಗುವುವು. ಹಾಗೆ ಮಲಗದಿದ್ದರೆ, ಅದರ ಬಟ್ಟೆಯು ಶುಭ್ರವಾಗಿಯೂ, ತೇವವಿಲ್ಲದೆಯೂ ಇರುವುದೇ, ಮಗುವಿಗೆ ಎಲ್ಲಿಯಾದರೂ ಗಾಯವಿರುವುದೇ, ಮೈಗೇನಾದರೂ ಜಜ್ಜುತ್ತಿರುವುದೇ ಎಂಬುದನ್ನು ಗಮನಿಸಿ ನೋಡಬೇಕು ಕೆಲವು ಸಂದರ್ಭಗಳಲ್ಲಿ ಹೊಟ್ಟೆಯಲ್ಲಾಗಲಿ, ಮಲದಲ್ಲಾಗಲಿ, ವಾಯುವು ಸೇರಿಕೊಳ್ಳುವುದರಿಂದ ಮಗುವಿಗೆ ಬಾಧೆಯುಂಟಾಗಿ, ಅಳುವುದಕ್ಕೆ ಪ್ರಾರಂಭಿಸುವುದು. ಅಂತಹ ಕಾಲಗಳಲ್ಲಿ ಅದರ ಹೊಟ್ಟೆಯಮೇಲೆ ಕೈಗಳ ಸ್ನಿಟ್ಟು ಸುತ್ತಲೂ ಸೀಮ. ಜನ್ನಾಗಿ ಜಿಣಗಿದ ಫ್ಲಾನಲ್ ಬಟ್ಟೆಯನ್ನು ಅದರ ಕಾಲಿಗೆ ಸುತ್ತಿಡಬೇಕು ಒಂದು ಚಮಚಾ ತುಂಬ ನೀರನು

ಕುಡಿಸುವುದರಿಂದಲೂ ಈ ನೋವು ಹೋಗುವುದುಂಟು. ಅದರೆ ಇದಕ್ಕಾಗಿ ಯಾವ ಔಷಧಿಯನ್ನೂ ಷರಬತ್ತನ್ನೂ ಕುಡಿಸಬಾರದು. ಇವು ಬಹಳ ಅಪಾಯಕಾರಿಗಳು. ಸ್ವಲ್ಪಡಿಲ್ ದ್ರವವನ್ನು ಕುಡಿಸುವುದರಿಂದ ಬಾಧಕವೇನೂ ಇಲ್ಲ. ಹಲ್ಲು ಹುಟ್ಟುವುದಕ್ಕಾಗಿ ನೋವುಂಟಾದರೆ, ಗ್ಲಿಸರೈನನ್ನೂ, ಬೋರಾಕ್ಸನ್ನೂ ಕರಗಿಸಿದ ಜೇನಿನಲ್ಲಿ ನಿಮ್ಮ ಕೈಬೆರಳನ್ನದ್ದಿ, ಹಲ್ಲಿನ ಮಾಂಸಖಂಡಗಳಮೇಲೆ ಬಲವಾಗಿ ಉಜ್ಜಬೇಕು.

ಮಗುವಿಗೆ ನೆಗಡಿಯಾಗಿ ಗಂಟಲು ಕಟ್ಟಿಕೊಂಡಿದ್ದರೆ, ಅದರ ಎದೆಗೆ ಕರ್ಪೂರತೈಲವನ್ನು ತಿಕ್ಕಬೇಕು. ಒಳಗಿನ ಚರ್ಮವು ಶುಚಿಯಾಗಿರುವುದಕ್ಕೂ, ಶರೀರದೊಳಕ್ಕೆ ಪ್ರವೇಶಿಸಿದ ಆಹಾರವು ಬೇರೆ ಬೇರೆಭಾಗಗಳಿಗೆ ಹೋಗಿ ಜೀರ್ಣಿಸಿ ರಕ್ತಗತವಾಗಿ ಶರೀರದ ಎಲ್ಲಾ ಭಾಗಗಳಿಗೂ ವ್ಯಾಪಿಸುವಂತೆ ಮಾಡುವುದಕ್ಕೂ ಸಹಜವಾಗಿಯೇ ತಕ್ಕ ಸಾಧನಗಳೇರ್ಪಟ್ಟಿವೆ ಈ ಸಾಧನದಿಂದ ದೇಹವು ಬೆಳೆಯುವುದಕ್ಕೆ ಸಾಧಕವಾದ ಪದಾರ್ಥಗಳೆಲ್ಲ ಜೀರ್ಣಿಸಿ, ರಕ್ತಗತವಾಗಿ, ಸಿರುಪಯೋಗವಾದ ಪದಾರ್ಥಗಳು ವಿಸರ್ಜಿಸಲ್ಪಡುವುವು ಆದರೆ ಆ ಶಕ್ತಿಯು ಕಡಿಮೆಯಾದರೆ, ಅಥವಾ ಆ ದ್ವಾರದಲ್ಲಿ ಏನಾದರೂ ಅಡಚಣೆಯಾದರೆ, ಆ ಚರ್ಮದ ಮೂಲಕ ದೇಹಕ್ಕೂ, ರಕ್ತಕ್ಕೂ ವಿಷ

ಚಟುವಟಿಕೆಯೂ ಮನಸ್ಸಿನ ಆರೋಗ್ಯವೂ.

ನಿಮ್ಮ ಮಕ್ಕಳನ್ನು
ಯಥೇಚ್ಛವಾಗಿ ಬಿಡದೆ
ಏಕೆ ತಡೆದಿಡುವಿರಿ?
ಅವು ಬಡವಾಗುವುವು.

ಇಚ್ಛೆ ಬಂದಹಾಗೆ
ಆಡುವುದೂ ನಡೆನುಡಿಗಳೂ
ಇವೆಲ್ಲ ಎಳಮಕ್ಕಳ
ಚಟುವಟಿಕೆಗೂ,
ಪುಷ್ಟಿಗೂ ಕಾರಣಗಳು.

ಮಕ್ಕಳನ್ನು ನಿರ್ಬಂಧಿಸಿ ತಡೆದಿಡಬಾರದು.

ಮಲಬದ್ಧತೆಯೇ ಅನೇಕ ರೋಗಗಳಿಗೆ ಮೂಲವು. ಮಕ್ಕಳಿಗೆ ಎರಡು ಚರ್ಮವಿರುವುದು. ದೇಹವು ತನ್ನ ಕೆಲಸವನ್ನು ಚೆನ್ನಾಗಿ ಮಾಡಬೇಕಾದರೆ ಅದರ ಮೈಮೇಲಿನ ಚರ್ಮ, ಒಳಗಿನ ಚರ್ಮ, ಇವೆರಡೂ ಶುದ್ಧವಾಗಿರಬೇಕು. ಪದಾರ್ಥವು ಸೇರಿ, ಅದರಿಂದ ಬಹಳ ಅಪಾಯವಾಗುವುದು. ಆದುದರಿಂದ ದಿನಕ್ಕೊಂದು ಸಲವಾದರೂ ಮಲಶುದ್ಧಿಯಾಗುವಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಮಲವು ಗಟ್ಟಿಯಾಗಿದ್ದು, ವಿಸರ್ಜನೆಯಾಗುವಾಗ ನೋವಾ

ದರೆ, ನೀರನ್ನು ಕುಡಿಸಿ, ಹೊಟ್ಟೆಯ ಮೇಲೆ ಕೈಯನ್ನಿಟ್ಟು ಉಜ್ಜಬೇಕು, ಆಲಿವ್ ಎಣ್ಣೆಯನ್ನಾಗಲಿ, ಅಥವಾ ಶುದ್ಧಿಮಾಡಿದ ಪಾರಪಿನ್ ಎಣ್ಣೆಯನ್ನಾಗಲಿ ಉಪಯೋಗಿಸುವುದರಿಂದ ಗುಣವುಂಟು. ಮಲವು ಯಾವಾಗಲೂ ಹಳದಿಯಾಗಿಯೂ ಸ್ವಲ್ಪಗಟ್ಟಿಯಾಗಿಯೂ ಇದ್ದರೆ ಅದು ಆರೋಗ್ಯ ಚಿಹ್ನವು. ಅದು ನೀರಾಗಿ ಹಸುರಾಗಿದ್ದರೆ, ವೈದ್ಯರ ಸಲಹೆಯನ್ನು ಕೇಳಬೇಕು. ಪ್ರಾಯಶಃ ಮಕ್ಕಳು ಬೇಧಿಯ ಜಾಡ್ಯದಿಂದ ಸಾಯುವುದು ಹೆಚ್ಚು. ಈ ಜಾಡ್ಯವು ಪ್ರಾಪ್ತವಾದ ಒಂದೆರಡು ದಿನಗಳೊಳಗಾಗಿ ಅವು ಸಾಯುವುವು. ಮಕ್ಕಳ ಪೋಷಣೆಯ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು. ಮುಖ್ಯವಾಗಿ, ಮಲಬದ್ಧತೆಗೆ ಅವಕಾಶವನ್ನು ಕೊಡಲೇ ಕೂಡದು. ಹೊಟ್ಟೆನೋವು ಹೊಟ್ಟೆ ಹಿಡಿದುಕೊಳ್ಳುವುದು (ಕಚ್ಚು) ಮುಂತಾದುವುಗಳಿಗೆ ಹೊಟ್ಟೆಯಲ್ಲಿರುವ ಬಾಧೆಮಾತ್ರ ಕಾರಣವಲ್ಲ. ಮಲದಲ್ಲಿ ವಾಯುವಾಗಲಿ, ಯಾವುದಾದರೂ ಕೆಟ್ಟಪದಾರ್ಥವಾಗಲಿ ಮಲಬೊಡನೆ ಸೇರುವುದರಿಂದಲೂ ಈ ಮೇಲಿನ ವ್ಯಾಧಿಗಳು ಕಾಣಿಸಿಕೊಳ್ಳಬಹುದು. ಆದುದರಿಂದ ಆ ವ್ಯಾಧಿಗಳು ನಿವಾರಣೆಯಾಗಬೇಕಾದರೆ, ಮಲವು ಕ್ರಮವಾಗಿಯೂ, ಧಾರಾಳವಾಗಿಯೂ ಹೋಗುವಂತೆ ಏರ್ಪಡಿಸಬೇಕು. ಆದರೆ ಅದಕ್ಕಾಗಿ ಬೇಧಿಕಾರಕ ಔಷಧಿಗಳನ್ನು ಉಪಯೋಗಿಸುತ್ತಿರಬಾರದು.

ದಿನಕ್ಕೆರಡಾವರ್ತಿ ಕ್ಲೃಪ್ತಕಾಲದಲ್ಲಿ, ಮಲಶುದ್ಧಿಗಾಗಿ ಮಕ್ಕಳನ್ನು ಹೊರಕ್ಕೆ ಕರೆದುಕೊಂಡು ಹೋಗಿ, ನಿರ್ಬಂಧದಿಂದಲಾದರೂ ಕೂರಿಸಿ ಅಭ್ಯಾಸಮಾಡಿಸಬೇಕು. ಮಕ್ಕಳನ್ನು ಕಾಲುಗಳ ಸಂದಿನಲ್ಲಿ ಕೂರಿಸಿಕೊಂಡು ಅಭ್ಯಾಸಮಾಡಿಸುವುದುತ್ತಮವು. ೨೪ ಗಂಟೆಗಳಕಾಲಕ್ಕೆ ಒಂದು ಸಲ ಕ್ರಮವಾಗಿ ಮಲಶುದ್ಧಿಯಾಗದೆ, ಮೇಲೆ ವಿವರಿಸಿದಂತೆ ಹೊಟ್ಟೆಯನ್ನುಜ್ಜುವುದರಿಂದಲೂ ಗುಣವು ಕಾಣದಿದ್ದರೆ, ಒಂದೇ ಒಂದು ಔನ್ಸ್ ನೀರನ್ನು ಬಿಟ್ಟು, ರಬ್ಬರಿನಿಂದ ಮಾಡಿದ ಮೃದುವಾದ ಸಿರಂಜುಳ್ಳ ಎನೀಮಾವನ್ನು ಕೊಡಬೇಕು. ಕೆಲವು ಸಮಯಗಳಲ್ಲಿ ಇನೀಮಾವನ್ನು ಕೊಟ್ಟೊಡನೆ ಮಲವಿಸರ್ಜನೆಯಾಗುವುದು. ಹಾಗೆ ವಿಸರ್ಜನೆಯಾಗದಿದ್ದರೆ, ಒಂದು ಸೀಸೆಯ ನೀರಿಗೆ ಅರ್ಧ ಚಮಚಪ್ಪು ಮಾಣದ ಉಪ್ಪನ್ನು ಸೇರಿಸಿ, ಸ್ವಲ್ಪ ಬೆಚ್ಚಗೆ ಮಾಡಿ ಕುಡಿಸಬಹುದು. ಸೋಪನ್ನಾಗಲಿ ದೊಡ್ಡ ಇನೀಮಾವನ್ನಾಗಲಿ ಉಪಯೋಗಿಸಬಾರದು ಈ ಚಿಕಿತ್ಸೆಗಳಿಗೆ ಬಗ್ಗದಿದ್ದರೆ, ವೈದ್ಯರ ಸಲಹೆಗಳನ್ನು ಕೇಳಿ ಅವರು ಹೇಳಿದಂತೆ ಆಚರಿಸಬೇಕು.

ಮಲವು ಹಸುರುಬಣ್ಣವಾಗುವುದು ಬೇಧಿಯ ಜಾಡ್ಯಕ್ಕೆ ಪ್ರಥಮ ಸೂಚನೆ. ಅದುದರಿಂದ ಮಲವು ಹಸುರಾಗಿ ಹೋಗುವುದಕ್ಕೆ ಪ್ರಾರಂಭಿಸಿದರೆ, ಕೂಡಲೆ ಎಚ್ಚರ ತೆಗೆದುಕೊಳ್ಳಬೇಕು. ಬೇಧಿಯು ಹೆಚ್ಚಿದರೆ ಕಾಯಿಸಿ ಕುದಿಸಿದ ಬಿಸಿ ನೀರನ್ನು ಕುಡಿಸಬೇಕು. ಹಿಂದು ಸಣ್ಣ ಚಮಚದ ತುಂಬ ಕೈಯೆಣ್ಣೆಯನ್ನು, ಅಥವಾ ಒಂದೆರಡು ಗುಟುಕು ಹಾಲನ್ನು, ಅಥವಾ ಎದೆ ಹಾಲನ್ನು ಕುಡಿಸಬಹುದು.

ಮಕ್ಕಳಿಗೆ ಎಚ್ಚರಾದರೆ ಒಡನೆ ಬಿಸಿನೀರಿನಲ್ಲಿ ಸ್ನಾನವನ್ನು ಮಾಡಿಸಿ, ವೈದ್ಯರನ್ನು ಕರೆಸಬೇಕು. ಮಕ್ಕಳಿಗೆ ಹಲ್ಲು ಹುಟ್ಟುವಾಗ ಅವುಗಳ ತಲೆಯಲ್ಲಿ ಶಾಖವು ಹೆಚ್ಚಿ, ಮುಖವು ಕೆಂಪಾಗಿ, ಅಡಿಗಡಿಗೆ ಬೆಚ್ಚಿಬಿದ್ದು ಅಳುವುದಕ್ಕೆ ಪ್ರಾರಂಭಿಸಿದರೆ, ವೈದ್ಯರನ್ನು ಕರೆಸುವುದೇ ಒಳ್ಳೆಯದು. ಮುಖ್ಯವಾಗಿ ಮಕ್ಕಳ ವ್ಯಾಧಿಯು ಬಹು ಶೀಘ್ರದಲ್ಲಿ ಅಪಾಯಕಾರಿಯಾಗಬಹುದಾದುದರಿಂದ ಆ ವ್ಯಾಧಿಯು ಹೆಚ್ಚುವುದಕ್ಕೆ ಮುಂಚೆ ವೈದ್ಯರಿಂದ ಚಿಕಿತ್ಸೆಮಾಡಿಸುವುದು ಅತ್ಯುತ್ತಮವು ಇದಕ್ಕಾಗಿ ಮಕ್ಕಳ ವಿಷಯದಲ್ಲಿ ಜಾಗರೂಕರಾಗಿರಬೇಕೇಹೊರತು ಅವುಗಳನ್ನು ಮಾತನಾಡಿಸಿ ಆಡಿಸುವುದಕ್ಕಲ್ಲ. ಮಕ್ಕಳನ್ನು ಸ್ವತಂತ್ರವಾಗಿ ಬಿಟ್ಟರೆ ತಾವೇ ಸಂತೋಷದಿಂದ ಆಡುವುವು. ಮಕ್ಕಳು ಬೆಚ್ಚಿಬೀಳುವಂತೆ ಗಟ್ಟಿಯಾಗಿ ಕೂಗಿ ಶಬ್ದಮಾಡುವು

ದು, ಎತ್ತಿಎತ್ತಿ ಎಸೆಯುವುದು, ಚಕ್ಕುಲಗುಲಿ ಮಾಡಿ (ಅಥವಾ ಆಕ್ಕುಳೆ ಚುಚ್ಚಿ) ನಗಿಸುವುದು ಇವೇ ಮುಂತಾದುವು ಮಕ್ಕಳ ವಿಷಯಗಳಿಗೂ, ನರಗಳಿಗೂ ಬಹಳ ಹಾನಿಕರಗಳು.

ಮಕ್ಕಳ ರಕ್ಷಣೆಯ ವಿಷಯದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಪ್ರೀತಿ ಮತ್ತು ತಿಳಿವಳಿಕೆ; ಮಕ್ಕಳ ರಕ್ಷಣೆಯ ಕಾರ್ಯದಲ್ಲಿ ನಿಯಮಿತರಾದವರಿಗೆ ಸಹಜವಾಗಿಯೇ ಕನಿಕರ ಸ್ವಭಾವ ವಿರಬೇಕು. ಮಕ್ಕಳ ರಕ್ಷಣೆಯ ಕಾರ್ಯದಲ್ಲಿ ನಿಯಮಿತಳ್ವಟ್ಟುದೇ ಒಂದು ದೊಡ್ಡ ಗೌರವವೆಂದು ಭಾವಿಸಿ, ಈ ಘನತರವಾದ ಕೆಲಸವನ್ನು ನಡೆಸಲು ಸಾಧ್ಯವಾದಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳದಿದ್ದರೆ, ಯಾವ ಸ್ತ್ರೀಯೂ ಶಿಶುಸಂರಕ್ಷಣಕಾರ್ಯವನ್ನು ಚೆನ್ನಾಗಿ ನಡೆಸಿದಂತೆ ಆಗುವುದಿಲ್ಲ.

ಆತಪ ಘಾತವನ್ನು ಕುರಿತು ಕೆಲವು ತತ್ವಾಂಶಗಳು.

ಇದಕ್ಕೆ ದೇಹದಲ್ಲಿ ಹೆಚ್ಚಿರುವ ಉಷ್ಣಾಂಶವೇ ಕಾರಣವಲ್ಲದೆ ಬಿಸಿಲು ಮುಖ್ಯವಲ್ಲ.

ಈ ಆತಪಮೂರ್ಛೆಯೆಂಬುದು, ನೇರವಾಗಿ ಸೂರ್ಯಕಿರಣದಿಂದಲೇ ಉಂಟಾಗುದೇ ಎಂಬ ದೊಂದು ಪ್ರಶ್ನೆ ಶಬ್ದಾರ್ಥದಮೇಲೆ ನಿರೂಪಿಸುವುದಾದರೆ, ಸೂರ್ಯಕಿರಣದಿಂದಾಗತಕ್ಕ ಅಪಾಯವೇ ಇದೆಂದು ಉತ್ತರವನ್ನು ಕೊಡಬೇಕಾಗುವುದು. ಹೀಗೆ ಸೂರ್ಯಕಿರಣದಿಂದಲೇ ಈ ಅಪಾಯವು ಏರ್ಪಡುವುದಕ್ಕೆ ಬಿಸಿಲಿನ ವೇಗವು ಅಧಿಕವಾಗಿ ದೇಹದಲ್ಲಿ ವ್ಯಾಪಿಸಿ, ಅದರಿಂದ ರಕ್ತಕ್ಕೆ ಮಿತಿಮೀರಿ ಕಾವುಂಟಾಗಿ, ಅದು ಕುದಿಯುವುದರಿಂದ ಈ ಬಾಧೆಯುಂಟಾಗುವುದೆಂದು ಸಾಧಾರಣಜ್ಞಾನದಿಂದ ಎಲ್ಲರಿಗೂ ಅಭಿಪ್ರಾಯ ಹುಟ್ಟುವುದು ಹೀಗೆ ಹೇಳುವುದಾದರೆ, ಬಿಸಿಲಿಲ್ಲದ ಕಾಲದಲ್ಲಿ ಈ ಅಪಾಯವು ಏರ್ಪಡುವುದಕ್ಕೆ ಅವಕಾಶವಿಲ್ಲ. ಅಂತಹ ನಿಯಮವೇನೂ ಇಲ್ಲದೆ, ಕೆಲವು ವೇಳೆ ಬಿಸಿಲಿಲ್ಲದಕಾಲದಲ್ಲಿಯೂ ಈ ಅಪಾಯವು ಏರ್ಪಡುವ ಸಂಭವವಿರುವುದರಿಂದ, ಇದಕ್ಕೆ ಉಷ್ಣಘಾತವೆಂದು ಹೇಳುವುದೇ ಅನುಗುಣವಾದ ಹೆಸರಾಗಿದೆ. ಆ ನೇಕವೇಳೆಗಳಲ್ಲಿ ಬಿಸಿಲಿನವೇಗದಿಂದುಂಟಾಗುವ ಇದೇತಪಪ ಅಪಾಯವನ್ನು ಎಂದರೆ, ಆಪತ ಘಾತವೆಂಬುದನ್ನು, ಇದರಲ್ಲಿ ಒಂದು ಭೇದವಾಗಿ ಇಟ್ಟುಕೊಳ್ಳಬಹುದು. ಶರೀರದ ರಕ್ತಕ್ಕೆ ಮಿತಿಮೀರಿದ ಕಾವು ಹತ್ತಿ,ಆ ರಕ್ತವು ಕುದಿಯಲಾರಂಭಿಸುವುದರಿಂದ ಸ್ನಾಯುಗಳು, ಮುಖ್ಯವಾಗಿ ರಕ್ತನಾಡಿಗಳಿಗೆ ಸೇರಿದಂತಿರುವ ಸ್ನಾಯುಗಳು ಕೆಟ್ಟುಹೋಗುವುದಕ್ಕೆ ಉಷ್ಣಘಾತವೆಂದು ಹೇಳಬಹುದು.

ಶುದ್ಧವಾದ ರಕ್ತಕ್ಕೂ, ಆರೋಗ್ಯವುಳ್ಳ ಶರೀರಕ್ಕೂ ಇರುವ ಸಾಧಾರಣದ ಉಷ್ಣಾಂಶವು 99 ಅಥವಾ 100 ಡಿಗ್ರಿಗಳಿರುವುವು. ದೇಹದಲ್ಲಿ ಸರಿಯಾಗಿ ಕೆಲಸಮಾಡುತ್ತ, ಜೀವದಶೆಯಲ್ಲಿರುವ ಸ್ನಾಯುಗಳಿಗೆ ಉಷ್ಣಪ್ರಮಾಣವು ಇಷ್ಟೇ ಇರಬೇಕು. ಉಷ್ಣಾಂಶವು ಅದಕ್ಕಿಂತ ಕಡಿಮೆಯಾದರೆ, ಆ ಸ್ನಾಯುಗಳಲ್ಲಿ ಶೀತಲವು ಹುಟ್ಟಿ ಅವು ಅಪಾಯಕ್ಕೆ ಗುರಿಯಾಗುವುವು. ರಕ್ತವು ಅಧಿಕ ಶೀತಲವಾಗಿಬಿಟ್ಟರೆ, ಅದು ಹೃದಯಕ್ಕೆ ಸಂಬಂಧಿಸಿ, ಅದರಿಂದ ಹೃದಯವು ಜಡವಾಗಿ, ಕೆಲವು ಸಂದರ್ಭಗಳಲ್ಲಿ ಆಕಸ್ಮಿಕಮರಣವೂ ಸಂಭವಿಸಿದುದುಂಟು.

ಈಗ್ಗೆ ಮೂವತ್ತೈದುವರ್ಷಗಳಿಗೆ ಹಿಂದೆ ಒಮ್ಮೆ ಅಪರಿಮಿತವಾಗಿ ಮಂಜು ಬೀಳುತ್ತಿದ್ದ ಕಾಲದಲ್ಲಿ, ಹಲವು ಜನಗಳು ಇಂತಹ ಅಪಾಯ,

ಕ್ಕೆ ಗುರಿಯಾಗಿರುವರು. ಒಬ್ಬ ಯುವತಿಯು ಟ್ರಾಮ್‌ಬಂಡಿಯಲ್ಲಿ ಕುಳಿತುಹೋಗುತ್ತಿರುವಾಗಲೇ ಅವಳ ರಕ್ತಕ್ಕೆ ಶೀತವೇರಿ, ಹೃದಯಕ್ಕೆ ವ್ಯಾಪಿಸಿದುದರಿಂದ, ಅವಳೂ ಆ ನಿಮಿಷದಲ್ಲಿಯೇ ಮೃತಿಹೊಂದಿದುದನ್ನು ನಾವು ಕಣ್ಣಾರೆ ನೋಡಿದೆವು ಇಂತಹ ಅಪಾಯಕ್ಕೆ "ಶೈತ್ಯಘಾತ"ವೆಂಬ ಬೇರೆ ಹೆಸರನ್ನು ಹೇಳಬಹುದು ಅದರೆ ಅದೃಷ್ಟವಶದಿಂದ ಇಂತಹ ಅಪಾಯಗಳು ಜನಗಳಲ್ಲಿ ಸಂಭವಿಸುವುದು ಬಹಳ ಕಡಿಮೆ. ಉಷ್ಣಘಾತವೆಂಬುದೇನೋ ಬಹಳ ಸಾಧಾರಣವಾಗಿಯೇ ಇರುವುದು. ಯಾವಕಾರಣದಿಂದಲೇ ಆದರೂ, ದೇಹದಲ್ಲಿ ಸಾಧಾರಣವಾದ ಉಷ್ಣಾಂಶಕ್ಕಿಂತ 10 ಡಿಗ್ರಿಗಳು ಹೆಚ್ಚಾಗಿ ಕಂಡುಬಿಂದರೆ, ಅವನಿಗೆ ಮರಣಕಾಲವು ಸಮೀಪಿಸಿತೆಂಬುದೇ ನಿಶ್ಚಯವು.

ರಕ್ತವು ಉಷ್ಣಾಧಿಕ್ಯದಿಂದ ಕುದಿಯುವುದೆಂದರೇನು? ಶರೀರದಲ್ಲಿರುವ ಸ್ನಾಯುಗಳೆಲ್ಲ ಬೆಂದು ಜಡವಾಗುವಂತೆ ಮಾಡುವುದೇ ಅದರ ಫಲಿತಾಂಶವು. ಅದರಿಂದ ಶರೀರದ ಮಧ್ಯಭಾಗದಲ್ಲಿರುವ ನರಗಳ ಗೂಡುಗಳೆಲ್ಲಾ ಕೆಟ್ಟು ಹೋಗುವುವು

ಶರೀರದ ಉಷ್ಣಾಂಶವು ಹೊರಬೀಳದಿರುವುದು.

ಶರೀರದಲ್ಲಿರುವ ಸರ್ವಾವಯವಗಳೂ, ಎಲ್ಲಾ ಸ್ನಾಯುಗಳೂ, ಎಡೆಬಿಡದೆ ಕೆಲಸಮಾಡುತ್ತಲೇ ಇರುವುದರಿಂದ, ಯಂತ್ರಗಳು ಕೆಲಸಮಾಡುತ್ತಿದ್ದ ಹಾಗೆಲ್ಲಾ ಅದರಲ್ಲಿ ಕಾವು ಹೆಚ್ಚುವಂತೆ, ಕ್ಷಣಕ್ಷಣಕ್ಕೂ ದೇಹದಲ್ಲಿ ಕಾವು ಹೆಚ್ಚುತ್ತಿರುವುದು ಹೀಗಿದ್ದರೂ, ಆ ಉಷ್ಣವು ಪ್ರಮಾಣಕ್ಕೆ ಮೀರಿಹೋಗದಂತೆ ಒಂದೇ ಸ್ಥಿತಿಯಲ್ಲಿರಿಸುವುದಕ್ಕೆ ತಕ್ಕ ಏರ್ಪಾಡುಗಳು ಶರೀರದಲ್ಲಿ ದೈವಕಲ್ಪಿತವಾಗಿರುವುದರಿಂದ, ಕೆರೆಗಳಿಗೆ ಕೋಡಿಯು ಹೇಗೋಹಾಗೆ, ಆ ಹೆಚ್ಚು ಉಷ್ಣವು ಬೇರೆ ವಿಧವಾಗಿ ಹೊರಬೀಳುತ್ತಿರುವುದು ಹೀಗೆ ಹೆಚ್ಚು ಉಷ್ಣವು ಹೊರಗೆ ಬೇಳೆದಿದ್ದರೆ, ಮೂವತ್ತಾರು ಘಂಟೆಗಳ ಕಾಲಗಳೊಳಗಾಗಿ ಶರೀರದ ಪ್ರವಾಂಶವೆಲ್ಲಾ ಇಂಗಿ, ಒಣಗಿದ ಕಟ್ಟಿಗೆಯಂತಾಗಿ, ಅದರಿಂದಾಚೆಗೆ ನಾಲ್ಕಾರು ಘಂಟೆಗಳಕಾಲದೊಳಗಾಗಿ ಶರೀರವು ಉರಿದು ಭಸ್ಮಾವಶೇಷವಾಗುತ್ತಿತ್ತು.

ಹೊರಗಿನ ವಾತಾವರಣದಲ್ಲಿ ಶೀತೋಷ್ಣ ಗುಣಗಳು ಎಷ್ಟುಮಟ್ಟಿಗೆ ಇವೆಯೋ ಅದಕ್ಕನುಗುಣವಾಗಿ ಶರೀರದಿಂದ ಹೊರಬೀಳುವ ಉಷ್ಣದ ಪ್ರಮಾಣವಿರುವುದು ಎಂದರೆ, ಹೊರಗಿನ ವಾತಾವರಣದಲ್ಲಿ ಶೀತವು ಹೆಚ್ಚಾಗಿದ್ದರೆ, ನಮ್ಮ ದೇಹದ ಉಷ್ಣವು ಬೇಗನೆ ಹೊರಬೀಳುವುದು ವಾತಾವರಣದಲ್ಲಿ ಉಷ್ಣವು ಹೆಚ್ಚಾಗಿದ್ದಾಗ, ನಮ್ಮ ದೇಹದ ಉಷ್ಣವು ಬಹಳ ಸ್ವಲ್ಪಸ್ವಲ್ಪವಾಗಿ ಹೊರಬೀಳುವುದು. ಉಷ್ಣದೇಶಗಳಲ್ಲಿ ವಾತಾವರಣದ ಉಷ್ಣವು ಕೆಲವುವೇಳೆ ದೇಹದ ಉಷ್ಣಪ್ರಮಾಣಕ್ಕೆ ಸಮವಾಗಿರುವುದು. ಕೆಲವು ಸಮಯಗಳಲ್ಲಿ ಇನ್ನೂ ಅಧಿಕವಾಗಿ ಬಿಡುವುದು. ಕೆಲವು ಸಂದರ್ಭಗಳಲ್ಲಿ 120 ಡಿಗ್ರಿಗಳವರೆಗೂ ಏರುವುದು. ಇಂತಹ ಸ್ಥಿತಿಯಲ್ಲಿ ದೇಹದ ಉಷ್ಣವು ಹೊರಬೀಳಲು ಅವಕಾಶ ತಪ್ಪುವುದು. ದೇಹದ ಉಷ್ಣಕ್ಕಿಂತಲೂ, ವಾತಾವರಣದ ಉಷ್ಣವು ಕಡಮೆಯಾಗಿದ್ದಾಗಮಾತ್ರವೇ, ದೇಹದ ಉಷ್ಣವು ಸರಿಯಾಗಿ ಹೊರಬೀಳಲು ಸಾಧ್ಯವು. ಆದರೆ ವಾತಾವರಣದಲ್ಲಿಉಷ್ಣ ಹೆಚ್ಚಿದಾಗ ಬೆವರು ಹೆಚ್ಚಾಗುವುದರಿಂದ, ಆ ಮೂಲಕವಾಗಿ ಸ್ವಲ್ಪಮಟ್ಟಿಗೆ ಉಷ್ಣಾಂಶವು ಹೊರಬೀಳಬಹುದು ಆದರೆ ಉಷ್ಣದೇಶಗಳಲ್ಲಿ ಸಾಮಾನ್ಯವಾಗಿ ಹೊರಗಿನ ಗಾಳಿಯು ಉಷ್ಣವಾಗಿರುವುದರೊಡನೆ, ಆಗಾಗ ಅದರಲ್ಲಿ ತೇವದ ಸಂಬಂಧವು ಇರುವುದುಂಟು. ಇಂತಹ ಸ್ಥಿತಿಯಲ್ಲಿ ಮಾತ್ರ ಶರೀರದ ಉಷ್ಣವು ಸಹಜವಾಗಿಯಾಗಲಿ, ಬೆವರಿನ ಮೂಲಕವಾಗಲಿ ಹೊರಬೀಳಲು ಅವಕಾಶ ತಪ್ಪುವುದು. ಅಂತಹ ಸ್ಥಿತಿಯಲ್ಲಿ ಶರೀರದ ಉಷ್ಣವು ಏರುತ್ತಬಂದು 10 ಡಿಗ್ರಿಗಳವರೆಗೆ ಹೆಚ್ಚಿ ಆ ಉಷ್ಣಾಧಿಕ್ಯದಿಂದ ಸ್ನಾಯುಗಳೂ ನರಗಳೂ, ಸೂಕ್ಷ್ಮರಂಧ್ರಗಳೂ ಎಲ್ಲಾ ಬೆಂದು ಕೆಟ್ಟು ಹೋಗುವುವು. ಇ

ದರಿಂದ ಶ್ವಾಸೋಚ್ಛ್ವಾಸಗಳೂ ಕಷ್ಟವಾಗಿ ತೋರುವುವು. ಕ್ರಮಕ್ರಮವಾಗಿ ಕೈಕಾಲುಗಳಲ್ಲಿ ತ್ರಾಣತಪ್ಪಿ ಮನುಷ್ಯನು ಕೆಳಗೆ ಬಿದ್ದು ಬಿಡುವನು. ಇದಕ್ಕೆ ಕಾರಣವು ಸೂರ್ಯಕಿರಣವಾಗಿಯೇ ಇರಬಹುದು. ಹಾಗಿಲ್ಲದಿದ್ದರೂ ಇರಬಹುದು. ಸೂರ್ಯರಶ್ಮಿಯು ಮೈಗೆ ತಗುಲದಿದ್ದಾಗಲೂ ಇಂತಹ ಅಪಾಯವು ಏರ್ಪಡಬಹುದು. ಕೆಲವು ಸಮುದ್ರದಲ್ಲಿ, ಅದರಂತೆ ಉಷ್ಣಾಧಿಕ್ಯವುಳ್ಳ ಬೇರೆ ಜಲಮಾರ್ಗಗಳಲ್ಲಿಯೂ ಹಡಗುಗಳಲ್ಲಿ ಪ್ರಯಾಣಮಾಡುವಾಗ ಜನಗಳಲ್ಲಿ ಈ ಅಪಾಯವು ಏರ್ಪಡುವುದುಂಟು.

ಯಾವಾಗಲೂ ಒಲೆಯೆಮುಂದೆ ಕೆಲಸಮಾಡುತ್ತಿರುವವರ ಬಟ್ಟೆಯು ದುರ್ಬಲವಾಗಿ ಹೇಗೆ ಬೇಗನೆ ಕೆಟ್ಟುಹೋಗುವುದೋ, ಹಾಗೆಯೇ, ರಕ್ತದಲ್ಲಿ ಉಷ್ಣಾಂಶವು ಅಧಿಕವಾಗುತ್ತ ಬರುವುದರಿಂದ ಕಾಲಕ್ರಮದಲ್ಲಿ ಸೂಕ್ಷ್ಮವಾದ ನರಗಳು ಕೆಟ್ಟುಹೋಗುತ್ತ ಬರುವುವು. ಒಲೆಯ ಮುಂದೆ ಕೆಲಸಮಾಡತಕ್ಕವರ ಬಟ್ಟೆಯು ಸುಟ್ಟುಹೋಗದಿದ್ದರೂ, ಅವರ ಗಮನಕ್ಕೆ ಜಾರದಂತೆಯೇ ಆ ಬಟ್ಟೆಯು ಉಷ್ಣವೇಗದಿಂದ ದುರ್ಬಲವಾಗುತ್ತ ಬರುವಂತೆ, ನರಗಳ ಸ್ಥಿತಿಯನ್ನೂ ತಿಳಿಯಬೇಕು. ಉಷ್ಣವು ಧಾರಾಳವಾಗಿ ಹೊರಗೆ ಹೋಗಲು ತಡೆಯಿಲ್ಲದಿದ್ದರೆ, ಆ ನರಗಳಿಗೆ ಮೊದಲಿನ ಬಲವು ತಪ್ಪದೆ ಒಂದೇಸ್ಥಿತಿಯಲ್ಲಿರುವುದು! ಆದುದರಿಂದ ಉಷ್ಣಾಧಿಕ್ಯವು ಯಾವಾಗಲೂ ದೇಹಕ್ಕೆ ಹಾನಿಕರವೇ!

ಅತ್ಯುಷ್ಣಾಧಿಕ್ಯದಿಂದ ವಿದುಳಿಗೂ ಕೆಲವು ವೇಳೆಗಳಲ್ಲಿ ಕೆಡುಕು ಸಂಭವಿಸುವುದುಂಟು. ಆದರಿಂದ ಯಾವುದಾದರೂ ಒಂದು ಶಕ್ತಿಯು ತಪ್ಪುವುದು. ಇಂಡಿಯಾದೇಶದಲ್ಲಿ ಬಹುಕಾಲ ಏದ್ದು ಇಂಗ್ಲೆಂಡಿಗೆ ಹೋದವರನೇಕರಲ್ಲಿ ಕಾಣಬಹುದಾದ ಕೆಲವು ಬದಲಾವಣೆಗಳು ಇದಕ್ಕೆ ನಿದರ್ಶನವಾಗಿವೆ. ಉಷ್ಣದೇಶಗಳಲ್ಲಿ ಸೂರ್ಯನ ತಾಪವು ವಿದುಳಿಗೆ ವ್ಯಾಪಿಸುವುದರಿಂದಲೂ ವಿದುಳು ಕೆಡುವುದು. ಇದರ ರಕ್ಷಣೆಗಾಗಿಯೇ ನಮ್ಮ ಇಂಡಿಯಾದೇಶದ ಜನರು ತಲೆಯಲ್ಲಿ ಕೂದಲನ್ನು ಬೆಳೆಸುವ ಪದ್ಧತಿಯಿದೆ. ಕೂದಲಿದ್ದರೆ ಅಷ್ಟು ಅಧಿಕವಾಗಿ ಉಷ್ಣವು ದೇಹಕ್ಕೆ ವ್ಯಾಪಿಸಲು ಅವಕಾಶವಿಲ್ಲ.

ಸಣ್ಣಮಕ್ಕಳನ್ನು ಬಿಸಲಿನಲ್ಲಿ ಸುತ್ತಾಡಿಸುವುದರಿಂದ ಅವುಗಳ ಮೈಗೆ ವಿರೋಧವಾಗುವುದೆಂಬುದು ಎಲ್ಲಾ ತಾಯಿಯರಿಗೂ ಅನುಭವಸಿದ್ಧವು. ಇದರಿಂದ ಮಕ್ಕಳಿಗೆ ತಲೆಶೂಲೆ, ಅಥವಾ ಬೇರೆವ್ಯಾಧಿಗಳು ಕಾಣಿಸುವುದುಂಟು. ಬಿಸಿಲಿನಲ್ಲಿ ಹೊಲದಲ್ಲಿ ಕೆಲಸಮಾಡುತಿದ್ದ ಒಬ್ಬಾನೊಬ್ಬ ಬಾಲಕನು ಇದ್ದಕಿದ್ದಹಾಗೆ "ನನ್ನತಲೆ! ನನ್ನತಲೆ!!" ಎಂದು ಕೂಗಿಕೊಂಡು ಬಾಗಿಯೂ, ಅವನನ್ನು ಮನೆಗೆ ಎತ್ತಿಕೊಂಡು ಬಂದೊಡನೆ, ಅವನು ಮೃತಿಹೊಂದಿದುದಾಗಿಯೂ ಹಳೇ ಬೈಬಲಿನಲ್ಲಿ ಒಂದು ಕಥೆಯುಂಟು ಅತಪಘಾತವೆಂದರೆ ಹೀಗೆಂಬುದು ಆಗಲೇ ಮೊದಮೊದಲು ತಿಳಿದುಬಂದಿರಬೇಕು. ಉಷ್ಣದೇಶಗಳಲ್ಲಿ ಬಿಳೀಬಣ್ಣದ ಪಾಗನ್ನು ತಲೆಗೆ ಇಟ್ಟುಕೊಳ್ಳುವುದು ಒಳ್ಳೆಯದು. ಬಿಳೀ ಬಣ್ಣಕ್ಕೆ ಇತರವರ್ಣಗಳಿಗಿಂತ ಹೆಚ್ಚಾಗಿ ಉಷ್ಣನಿವಾರಣಶಕ್ತಿಯುಂಟು. ಇದಕ್ಕಾಗಿಯೇ ಕುದುರೆಗಳಿಗೆ ಅಂತಹ ಮುಖವಾಡವನ್ನಿಡುವುದುಂಟು. "ಹೆಲ್ತ್ ಎಂಡ್ ಸ್ಟ್ರೆಂಗ್ತ್."

ವೊಟ್ಟಿಗಳಲ್ಲಿ ಇರಬಹುದಾದ ಕೆಟ್ಟ ಕ್ರಿಮಿಗಳು.

ಪ್ಯಾರಿಸ್‌ನಗರದಲ್ಲಿ ಹುಚ್ಚುನಾಯಿಗಳ ಕಡಿತದ ಚಿಕಿತ್ಸೆಗಾಗಿ ಏರ್ಪಟ್ಟಿರುವ ವೈದ್ಯಶಾಲೆಯಲ್ಲಿ, ಡಾಕ್ಟರ್ ಟಿಸಿಯರ್ ಎಂಬವರು ಕೋಳಿ ವೊಟ್ಟಿಗಳಲ್ಲಿರುವ ದೋಷಗಳನ್ನು ಪರೀಕ್ಷಿಸಲೆ ಮಾಡುವ ಪ್ರಯತ್ನದಲ್ಲಿ, ತಮಗೆ ಕಂಡು ಬಂದ ಒಂದು ವಿಶೇಷವಿಷಯವನ್ನು ಕುರಿತು ಸಂಗ್ರಹವಾಗಿ ಈ ಕೆಳಗೆ ಕಂಡಂತೆ ಸೂಚಿಸಿರುವರು. ಅದರ ಪೂರ್ಣವಿವರವನ್ನು ತೀಘ್ರದಲ್ಲಿಯೇ ಅವರು ಪುಸ್ತಕರೂಪವಾಗಿ ಪ್ರಕಟಿಸುವವರಾಗಿರುವರು. ಆ ಡಾಕ್ಟರು ಹೇಳುವುದೇನೆಂದರೆ:—ವೊಟ್ಟೆಗಳಲ್ಲಿ ಸ್ವಾಭಾವಿಕವಾಗಿ "ಬಿ, ಪಾರಾಕೊಲಿ" ಎಂಬ ಒಂದುಜಾತಿಯ ಅಪಾಯಕರವಾದ ಕ್ರಿಮಿಗಳಿರುವುದುಂಟು. ಇವು ಕೋಳೀ ವೊಟ್ಟೆಗಳಲ್ಲಿಯೇ ಹೆಚ್ಚಾಗಿರುವುದು. ಈ ಕ್ರಿಮಿಗಳು ವೊಟ್ಟೆಗಳಲ್ಲಿ ಉತ್ಪತ್ತಿಯಾದ ಒಡನೆ ಆ ವೊಟ್ಟೆಗಳಲ್ಲಿ ಒಂದು ಬಗೆಯ ಕರೀ ಬಣ್ಣವು ಏರ್ಪಡುವುದು. ಕೊಳೆತ ವೊಟ್ಟೆಗಳು ಕಪ್ಪಾಗುವುದಕ್ಕೆ ಇದೇ ಕಾರಣವು. ಅಗಲೇ ಹೊಸದಾಗಿ ಹಾಕಿದ ಕೆಲವು ವೊಟ್ಟೆಗಳಲ್ಲಿಯೂ ಇಂತಹ ಕ್ರಿಮಿಗಳಿರುವುದುಂಟು. ಅತಿಸಾರ ಅಥವಾ ಭೇದಿಯಿಂದ ಪೀಡಿತವಾಗಿರುವ ಕೋಳಿಗಳ ವೊಟ್ಟೆಗಳೆಲ್ಲಾ ಪ್ರಾಯಕವಾಗಿ ಇದೇ ಕ್ರಿಮಿಗಳನ್ನೆಳಕೊಂಡಿರುವುವು. ಇಂತಹ ಕ್ರಿಮಿಗಳುಳ್ಳ ವೊಟ್ಟೆಗಳನ್ನು ತಿಂದವರಿಗೆ ಕಾಲಿಟಿನ್ ಎಂದು ಕರೆಯಲ್ಪಡುವ ಒಂದು ವ್ಯಾಧಿಯೂ, ಇನ್ನೂ ಅಪಾಯಕರಗಳಾದ ಕೆಲವು ಸೊಂಕುರೋಗಗಳೂ ಉಂಟಾಗುವುವೆಂಬುದನ್ನೂ ಅವರು ಸಪ್ರಮಾಣವಾಗಿ ನಿರೂಪಿಸಿರುವರು.

ಈ ಕಾರಣಗಳಿಂದ ಅವರು ಹೇಳುವುದೇನೆಂದರೆ, ವೊಟ್ಟೆಗಳನ್ನು ಮಾರ್ಕೆಟ್ಟುಗಳಲ್ಲಿ ಕೊಂಡುಕೊಳ್ಳುವವರು,ನಿರ್ದುಷ್ಟವಾದವುಗಳನ್ನು ನೋಡಿ ತೆಗೆಯುವುದರಲ್ಲಿ ಬಹಳ ಎಚ್ಚರ ತೆಗೆದುಕೊಳ್ಳಬೇಕು. ಸಾಧಾರಣವಾಗಿ ಮಾರ್ಕೆಟ್ಟುಗಳಲ್ಲಿ ದೊರೆಯುವ ವೊಟ್ಟೆಗಳೊಳಗೆಲ್ಲಾ ಇಂತಹ ದೋಷವು ಇದ್ದೇ ಇರುವುವು. ಒಳ್ಳೇ ಆಹಾರದಿಂದ ಆರೋಗ್ಯವಾಗಿ ಬೆಳೆಸಿದ ಕೋಳಿಗಳ ವೊಟ್ಟೆಗಳೆಂದು ನಂಬಿಕೆಯಾಗಿ ತಿಳಿಹೊರತು ಬೇರೆ ವೊಟ್ಟೆಗಳನ್ನು ಪಯೋಗಿಸಬಾರದು. ಕೋಳಿಗಳನ್ನು ಸಿಕ್ಕಿದ ಹಾಗೆ ಬಿಟ್ಟು ತಿಪ್ಪೆಯ ಗುಂಡೆಗಳನ್ನು ಕೆದಕಿ ತಿನ್ನುವ ವಾಡಿಕೆಯನ್ನು ಮಾಡಿದ್ದರೆ, ಅಂತಹ ಕೋಳಿಗಳು ಹಾಕಿದ ವೊಟ್ಟೆಗಳು ಮನುಷ್ಯರ ಆಹಾರಕ್ಕೆ ಎಂದಿಗೂ ಯೋಗ್ಯವಲ್ಲ. ಅವು ಅಪಾಯಕರಗಳಾದ ಅನೇಕಸಾಂಕ್ರಾಮಿಕರೋಗಗಳನ್ನುಂಟುಮಾಡುವುವು. ಡಾಕ್ಟರ್ ಟಿಸಿರವರು ವೊಡವೊದಲು ನೊಟ್ಟೆಗಳನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದವರಾದರೂ, ಅದರಲ್ಲಿ ಅಪಾಯಗಳು ಹೆಚ್ಚೆಂಬುದನ್ನು ತಿಳಿದಮೇಲೆ, ಸಂಪೂರ್ಣವಾಗಿ ಅದನ್ನು ಆಹಾರಕ್ಕಾಗಿ ಉಪಯೋಗಿಸುವುದನ್ನು ಬಿಟ್ಟೇಬಿಟ್ಟರು ವೊಟ್ಟೆ, ಮಾಂಸ ಇವುಗಳನ್ನು ಉಪಯೋಗಿಸುವುದು ಯಾವಾಗಲೂ ಅಪಾಯಕಾರಣವಾಗಿರುವುದರಿಂದ ಅವುಗಳನ್ನು ಬಿಟ್ಟು ಬೀಜಪದಾರ್ಥಗಳನ್ನೂ ಹಾಲನ್ನೂ ಉಪಯೋಗಿಸುವುದರಲ್ಲಿ ಅಧಿಕಗುಣವುಂಟೆಂದು ಆ ಡಾಕ್ಟರೆ ತೀರ್ಮಾನವು.

"ಗುಡ್ ಹೆಲ್ತ್."

ತಾಂಬೂಲವನ್ನಗಿಯುವುದು ಮತ್ತು ಬಾಯಿಹುಣ್ಣು.

ಎಲೆ ಅಡಿಕೆಯನ್ನು ಅಗಿಯುವ ವಾಡಿಕೆಯಿಂದಲೇ ಬಾಯಿಹುಣ್ಣು ಬರುವುದೆಂದು ಅನೇಕ ಸರ್ಜನ್‌ಮತ್ತು ಡಾಕ್ಟರುಗಳ ಅಭಿಪ್ರಾಯವೆಂಬುದಾಗಿ ಕರ್ನಲ್ ಜೆ. ಡಬ್ಲ್ಯೂ ಮೈಗಾರ್ ಮತ್ತು ಡಾಕ್ಟರ್ ಜೆ.ಸಿ. ಗುಪ್ತ ಇವರೂ, ಮತ್ತು ಇನ್ನೂ ಕೆಲವರೂ ಇಂಡಿಯಾದೇಶದಲ್ಲಿ ಆಯಾ ಭೂಗುಣಗಳಿಂದ ಹುಟ್ಟುವ ವ್ಯಾಧಿಗಳನ್ನು ಕುರಿತು ಶೋಧನೆಮಾಡಿ ಬರೆದ ರಿಪೋರ್ಟಿನಲ್ಲಿ ಕಾಣಿಸಿರುವರು. ಇನ್ನೂ ಬೇರೆ 65 ಮಂದಿ ಸಿವಿಲ್ ಸರ್ಜನರುಗಳು ತಾಂಬೂಲ ಚರ್ವಣವೇ ಕಾಲಕ್ರಮದಿಂದ ಬಾಯಿಯಲ್ಲಿ ವ್ರಣಗಳು ಹುಟ್ಟಲು ಕಾರಣಗಳೆಂದೂ ಬರೆದಿರುವರು. ಬೇರೆ 17 ಮಂದಿ ಡಾಕ್ಟರುಗಳು ಹೊಗೆಸೊಪ್ಪನ್ನು ಮೆಲ್ಲುವುದರಿಂದಮಾತ್ರ ಅಂತಹ ವ್ಯಾಧಿಗಳು ಬರಬಹುದೆಂದು ನಿರೂಪಿಸಿರುವರು. ಇದು ಹೊರತು, ಬೇರೆ 14 ಮಂದಿ ಡಾಕ್ಟರುಗಳು ಬರೆದ ರಿಪೋರ್ಟಿನಲ್ಲಿ ಬಾಯಿ ಹುಣ್ಣಿಗೂ, ತಾಂಬೂಲವನ್ನಾಗಲಿ ಹೊಗೆಸೊಪ್ಪನ್ನಾಗಲಿ ಮೆಲ್ಲುವುದಕ್ಕೂ, ಯಾವಸಂಬಂಧವೂ ತಮಗೆ ತೋರಲಿಲ್ಲವೆಂದು ಬರೆದಿರುವರು. (ಈ ವಿರುದ್ಧಾಭಿಪ್ರಾಯಗಳನ್ನು ನೋಡಿದರೆ, ಈ ತಾಂಬೂಲಚರ್ವಣದ ಗುಣಾವಗುಣಗಳು ಅವರವರ ದೇಹಪ್ರಕೃತಿಯನ್ನನುಸರಿಸಿರುವುವೆಂದೂ, ಅದನ್ನು ಅವರವರು ಅನುಭವದಿಂದಲೇ ತಿಳಿದು ತಮಗೆ ಹಿತವಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದೂ ಸೂಚಿಸಿದಂತಾಗುವುದೇ ಹೊರತು ಬೇರೆಯಲ್ಲ.

·ದಿ. ಇಂಡಿಯರ್ ಅಂಡ್ ಈಸ್ಟರ್ನ್ ಡ್ರಗಿಸ್ಟ್."

ಯೋಗಾಸನ.

(ಇಂದ್ರಪ್ರಸ್ಥ ಗುರುಕುಲದ ರಾಮ್ ಎಂಬವರಿಂದ)

ಐದನೆಯ ಲೇಖನ.

ಪ್ರಿಯಮಿತ್ರರೆ!

ನನ್ನ ಹಿಂದಿನ ಲೇಖನದಲ್ಲಿ ವಿವರಿಸಿದ್ದ ಮೂರು ಆಸನಗಳನ್ನು ಅಭ್ಯಾಸಮಾಡಿದಂತೆಲ್ಲ ನಿಮ್ಮ ದೇಹದಲ್ಲಿ ಆರೋಗ್ಯವೂ,ಲವಲವಿಕೆಯೂ ಹೆಚ್ಚುವುದು ಸಕಲರೋಗಗಳೂ ಹೊಟ್ಟೆಯಲ್ಲಿ ಹುಟ್ಟುವುವು. ಸಾಧನೆಯ ಬಲದಿಂದ ಅದು ತನ್ನ ಕೆಲಸವನ್ನು ಸರಿಯಾಗಿ ನೆರವೇರಿಸುವಂತೆ ಮಾಡಿದರೆ ಸಂಪೂರ್ಣಾರೋಗ್ಯವನ್ನು ಹೊಂದಬಹುದು. ಈ ಆಸನಗಳಿಂದ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹೊಟ್ಟೆಯ ಭಾಗಗಳು ಅಡಿಮಿಡಿಯಂತಾಗಿ ಜೀರ್ಣಾವಯವಗಳು ತನ್ನ ಕೆಲಸವನ್ನು ಮಾಡಲು ಸಹಕಾರಿಯಾಗಿ, ಮಲಬದ್ಧತೆ ಮತ್ತು ಇತರ ಕರುಳಿನ ವ್ಯಾಧಿಗಳನ್ನು ನೀಗಿಸುವುವು.

ನಾನು ಹಿಂದೆ ವಿವರಿಸಿದಂತೆ ಈ ಆಸನಗಳು ವೀರ್ಯಸ್ತಂಭ ಅಥವಾ ಬ್ರಹ್ಮಚರ್ಯ ನಿಯಮಕ್ಕೆ ಸಹಕಾರಿಗಳು. ನಮ್ಮ ದೇಹದಲ್ಲಿರುವ ಮರ್ಮಸ್ಥಾನಗಳೂ ಮತ್ತು ಗ್ರಂಥಿಗಳೂ ತಮ್ಮ ತಮ್ಮ ಕೆಲಸಗಳನ್ನು ಕ್ರಮವಾಗಿ ಮಾಡುವಂತಾಗಿ, ಪುಸ್ಸ್ವಪ್ನ ಮುಂತಾದ ವ್ಯಾಧಿಗಳ ಬಾಧೆಯು ಇದರಿಂದ ತಪ್ಪುವುದು. ಪುರಾತನಕಾಲದಿಂದ ಪ್ರಚಾರದಲ್ಲಿರುವ ಈ ಯೋಗಾಭ್ಯಾಸವಿಷಯ

ದಲ್ಲಿ ಮುಖ್ಯವಾಗಿ ಗಮನಿಸತಕ್ಕುದೇನೆಂದರೆ ನಮ್ಮ ಉಷ್ಣಸ್ಥಾನದಲ್ಲಿ ರಕ್ತ ಸಂಚಾರವು ವೇಗವಾಗಿ ನಡೆಯುವಂತೆ ಮಾಡಬಹುದು. ಆಹಾರ,ಗಾಳಿ ಮುಂತಾದುವುಗಳ ವಿಷಯದಲ್ಲಿ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಳ್ಳದಿದ್ದರೆ ವೈದ್ಯನು ಕೊಟ್ಟ ಔಷಧಿಯು ಹೇಗೆ ವ್ಯರ್ಥವಾಗುವುದೋ ಹಾಗೆಯೇ ಅದೇ ವಿಷಯದಲ್ಲಿ ಜಾಗರೂಕರಾಗಿಲ್ಲದಿದ್ದರೆ, ಈ ಸಾಧನೆಗಳೂ ವ್ಯರ್ಥವಾಗುವುವು. ಮದವೇರಿಸುವ ಪದಾರ್ಥಗಳನ್ನಾಗಲಿ, ಶರೀರದಲ್ಲಿ ಉಷ್ಣವನ್ನು ಹೆಚ್ಚಿಸುವ ವಿಶೇಷ ಖಾರಪದಾರ್ಥಗಳನ್ನಾಗಲಿ ಉಪಯೋಗಿಸಕೂಡದು. ಆಹಾರವನ್ನು ಮಿತವಾಗಿ ಸೇವಿಸಬೇಕು. ಮುಖ್ಯವಾಗಿ ರಾತ್ರಿಯ ಕಾಲದಲ್ಲಿ ಹೆಚ್ಚಾಗಿ ಊಟಮಾಡಬಾರದು. ಊಟಕ್ಕೂ ನಿದ್ರೆಗೂ ಮಧ್ಯದಲ್ಲಿ ಕನಿಷ್ಠ ಪಕ್ಷ ಮೂರುಗಂಟೆಯ ಕಾಲವಾದರೂ ಬಿಡಬೇಕು. ನಿದ್ರೆಗೆ ಪೂರ್ವಭಾವಿಯಾಗಿ ಹಾಲು, ನೀರು ಮುಂತಾದ ಯಾವ ದ್ರವಪದಾರ್ಥಗಳನ್ನೂ ಸೇವಿಸಕೂಡದು. ಮಲಗುವುದಕ್ಕೆ ಮುಂಚೆ ಮೂತ್ರ ವಿಸರ್ಜನೆ ಮಾಡಬೇಕು, ಇಲ್ಲದಿದ್ದರೆ ಅದರಲ್ಲಿರುವ ನಾಳಗಳನ್ನು ಬಲವಾಗಿ ಅದುಮಿದಂತಾಗುವುದು. ನಿರವಶ್ಯವೂ ಅಪಾಯಕರವೂ ಅದ ಕಾಲುದಿಂಬು ಮುಂತಾದುವುಗಳನ್ನು ಉಪಯೋಗಿಸುವ ಮೂಲಕವೂ, ಹೊಟ್ಟೆಯನ್ನು ಕೆಳಗೆ ಮಾಡಿಕೊಂಡು ಮಲಗುವುದರ ಮೂಲಕವೂ ಪುರುಷರ ಮರ್ಮಸ್ಥಾನವು ಅದುಮಿದಂತಾಗುವುದು. ಅಂಗತ್ತನಾಗಿ ಮಲಗುವುದರಿಂದ ಬೆನ್ನಿನ ಮೂಳೆಯ ಕೊನೆಯ ಭಾಗದಲ್ಲಿರುವ ನರಗಳಿಗೆ ಹೆಚ್ಚು ಕೆಲಸವನ್ನು ಕೊಟ್ಟಂತಾಗುವುದರಿಂದ ಅದೂ ಕೆಟ್ಟುದೇ. ಇದುದರಿಂದ ಎಡಮಗ್ಗಲಾಗಿಯಾಗಲಿ, ಬಲಮಗ್ಗಲಾಗಿಯಾಗಲಿ ಮಲಗುವುದೇ ಉತ್ತಮವಾದುದು. ಹಾಗೆ ಮಲಗುವುದರಿಂದ ಪಿತ್ತಜನಕಾಂಗದಲ್ಲಿಯೂ, ಕರುಳುಗಳಲ್ಲಿಯೂ ಆಹಾರವನ್ನು ಜೀರ್ಣಿಸುವ ಶಕ್ತಿಯು ಹೆಚ್ಚುವುದು. ಮಲಗುವುದಕ್ಕೆ ಮುಂಚೆ ಕೆಲವು ನಿಮಿಷಗಳ ವರೆಗಾದರೂ ಯಾವುದಾದರೂ ಒಳ್ಳೆಯ ಆಲೋಚನೆಯಿಂದ ದೇಹಾರೋಗ್ಯವೂ, ದೇಹ ಶುದ್ಧಿ ಮತ್ತು ಮನಶ್ಶುದ್ಧಿಗಳೂ ಆಗುವಂತೆ ದೇವತಾ ಪ್ರಾರ್ಥನೆಗಳ ಮೇಲೆ ಮನಸ್ಸಿಟ್ಟರೆ ಸುಖವಾಗಿ ನಿದ್ರೆ ಬರುವುದು.

ಜಾನು ಶೀರ್ಷಾಸನ.



ಈ ಚಿತ್ರದಲ್ಲಿ ತೋರಿಸಿರುವಂತೆ ಕೈಕಾಲುಗಳನ್ನು ಚೆನ್ನಾಗಿ ನೀಡಿ, ಮೂಗೂ ಹಣೆಯೂ, ಮಂಡಿಯನ್ನು ಸ್ಪರ್ಶಿಸುವಂತೆ ಮಾಡುವುದೇ ಈ ಸಾಧನೆಯ ಉದ್ದೇಶವು. ಹಿಂದಿನ ಸಂಚಿಕೆಯಲ್ಲಿ ವಿವರಿಸಿರುವ ಮೂರನೆಯ ಸಾಧನೆಗೂ ಇದಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಒಂದು ಜಮಖಾನದ ಮೇಲೆ ಕುಳಿತು ಕಾಲುಗಳನ್ನು ಚೆನ್ನಾಗಿ ನೀಡಿರಿ. ತಲೆಯನ್ನು ಬಗ್ಗಿಸಿಕೊಂಡು ಕಾಲಿನ ಹಜ್ಜೆಯು ತೊಡೆಗೆ ಸ್ಪರ್ಶವಾಗುವಂತೆ ಮಡಿಸಿ

ಕೊಳ್ಳಿರಿ. ಎರಡು ಕೈಗಳನ್ನೂ ಜೆನ್ನಾಗಿ ನೀಡಿ, ಜೋಡಿಸಿಕೊಂಡು, ನೀಡಿದ ಕಾಲನ್ನು ಹಿಡಿದು ಕೊಳ್ಳಿರಿ. ಉಸಿರನ್ನು ತಡೆದು ತಡೆದು ಬಿಟ್ಟು, ಅಡಿಹೊಟ್ಟೆಯನ್ನು ಒಳಕ್ಕೆಳೆದುಕೊಂಡು, ಮಂಡಿಗೆ ಮೂಗು ಸ್ಪರ್ಶವಾಗುವಂತೆ ತಲೆಯನ್ನು ತಗ್ಗಿಸಿರಿ. ಹೀಗೆ ಕೆಲವು ಸೆಕೆಂಡುಗಳವರೆಗೂ ಇದ್ದು, ನಿಮ್ಮ ತಲೆಯನ್ನೆತ್ತಿ ಉಸಿರನ್ನೆಳೆದು ಕೊಳ್ಳಿರಿ. ಈ ಸಾಧನೆಯನ್ನು ಹಲವುಸಲ ಮಾಡಿರಿ. ಕೈಯನ್ನು ತೆಗೆದು, ಮಡಿಸಿದ್ದಕಾಲನ್ನು ನೀಡಿ, ಇನ್ನೊಂದು ಕಾಲನ್ನು ಮಡಿಸಿ, ಹಿಂದೆ ಎಷ್ಟು ಸಲಸಾಧನೆ ಮಾಡಿದಿರೋ ಅಷ್ಟೇ ಸಲ ಮೊದಲಿನಂತೆ ಸಾಧನೆಮಾಡಿರಿ. ಈ ಆಸನದಿಂದ ಕೈ,ಕಾಲು, ಕಿಬ್ಬೊಟ್ಟೆ,ಮುಂತಾದ ಅವಯವಗಳಲ್ಲಿರುವ ಮಾಂಸಖಂಡಗಳಿಗೆ ಹೆಚ್ಚು ಕೋಣ (Angle) ವಾಗುವಷ್ಟು ಎತ್ತರಕ್ಕೆ ಎತ್ತಿದ ಮೇಲೆ, ಎರಡು ಕಾಲುಗಳ ಹಿಮ್ಮಡಿಗಳನ್ನೂ, ಹೆಬ್ಬೆರಳುಗಳನ್ನೂ ಸೇರಿಸಿ, ಸುಮಾರು ಅರ್ಧನಿಮಿಷದವರೆಗೂ ಹಾಗೆಯೇ ಇಟ್ಟುಕೊಳ್ಳಿರಿ. ಹೀಗೆಯೇ 60 ಡಿಗ್ರಿಯ ಕೋಣವೂ ಆಗುವಂತೆ, ಕಾಲುಗಳನ್ನು ಎತ್ತಿ ಪ್ರತಿಸಲವೂ ಅರ್ಧಾರ್ಧ ನಿಮಿಷದವರೆಗೂ ನಿಲ್ಲಿಸಿಟ್ಟುಕೊಳ್ಳಿರಿ. ಆನಂತರದಲ್ಲಿ ನಿಮ್ಮ ಕೈಗಳೆರಡನ್ನೂ ಈ ನಕ್ಷೆಯಲ್ಲಿ ತೋರಿಸಿರುವಂತೆ ಇಟ್ಟುಕೊಂಡು, ಕಾಲುಬೆರಳುಗಳು ಹಿಂಭಾಗದಲ್ಲಿ ನೆಲಕ್ಕೆ ತಾಗುವಂತೆ ದೇಹವನ್ನು ಬಗ್ಗಿಸಿರಿ ಕಾಲುಗಳನ್ನು ನೆಟ್ಟಗಿಟ್ಟು ಅವುಗಳನ್ನು ಎಷ್ಟುದೂರದಲ್ಲಿಡಲು ಸಾಧ್ಯವೋ ಅಷ್ಟು ದೂರದಲ್ಲಿಡಬೇಕು.

(5) ಸರ್ವಾಂಗಾಸನ.



ಸಾಧನೆಯುಂಟಾಗುವುದಲ್ಲದೆ, ಜನನೇಂದ್ರಿಯದ ಶಕ್ತಿಯನ್ನು ಹೆಚ್ಚಿಸುವುದು. ಇದರಿಂದ ವೀರ್ಯವೃದ್ಧಿಯಾಗುವುದು. ಈ ಆಸನದಿಂದ ಜೀರ್ಣಾವಯವಗಳಿಗೂ, ಶರೀರದ ಬೆಳೆವಳಿಕೆಗೆ ಸಹಕಾರಿಗಳಾದ ಅವಯವಗಳಿಗೂ ಸಂಬಂಧಪಟ್ಟ ಸಕಲರೋಗಗಳೂ ನಿವೃತ್ತಿಯಾಗುವುವು.

ಈ ಆಸನವು ದೇಹದಲ್ಲಿರುವ ಸಕಲ ಅವಯವಗಳಿಗೂ ಕೆಲಸವನ್ನು ಕೊಡುವುದು. ಈ ಕೆಳಗೆ ವಿವರಿಸಿರುವಂತೆ ಈ ಸಾಧನೆಯನ್ನು ಮಾಡಿದರೆ, ಇದರಿಂದ ಬಹಳ ಪ್ರಯೋಜನವುಂಟು. ಕೈಕಾಲುಗಳನ್ನು ಜೆನ್ನಾಗಿ ನೀಡಿ ಅಂಗತ್ತನಾಗಿ ಮಲಗಿರಿ. ಕಾಲುಗಳನ್ನು ಮಾತ್ರ ಮೇಲಕ್ಕೆತ್ತಿರಿ. ¡ಅವುಗಳನ್ನು ನೆಲದಿಂದ 30 ಡಿಗ್ರಿಯ ಪುನಃ ಕಾಲನ್ನು ಮೇಲಕ್ಕೆತ್ತಿ,ಅದನ್ನು ಪ್ರಾರಂಭದಲ್ಲಿಟ್ಟಿದ್ದ ಸ್ಥಾನದಲ್ಲಿಟ್ಟು ನೆಲದಮೇಲೆ ನಿಶ್ಚಲವಾಗಿ ಮಲಗಿರಿ. ದೇಹದಲ್ಲಿರುವ ಮಾಂಸಖಂಡಗಳೆಲ್ಲವನ್ನೂ ಸರಾಗವಾಗಿಟ್ಟರೆ, ಆಯಾಸವು ಹೋಗುವುದು, ಮತ್ತು ಮನಸ್ಸಿಗೆ ಉಲ್ಲಾಸವುಂಟಾಗುವುದು.

ಆಡಿಗಡಿಗೆ ಮಲೇರಿಯಾಜ್ವರವು ಬಂದು, ಆ ಜ್ವರದ ಪರಿಣಾಮದಿಂದ ಗುಲ್ಮವು ಊದಿಕೊಂಡಿದ್ದಾಗ, ಈ ಆಸನವನ್ನು ಪ್ರತಿನಿತ್ಯವೂ ಕ್ರಮವಾಗಿ ಮಾಡುತ್ತ ಬಂದುದರಿಂದ ಗುಲ್ಮರೋಗವು ಸಂಪೂರ್ಣವಾಗಿ ಗುಣವಾಗಿದೆ. ಈ ಆಸನದಿಂದ ಗಂಟಲಿನ ಮಾಂಸಖಂಡಗಳಿ

ಗೂ ಮತ್ತು ತೊಡೆಯಲ್ಲಿರುವನರಗಳಿಗೂ ಒಳ್ಳೆಯ ಕೆಲಸವನ್ನು ಕೊಟ್ಟಂತಾಗುವುದು. ಈ ಚಿತ್ರವನ್ನು ನೋಡಿ ಕ್ರಮವಾಗಿ ಅಭ್ಯಾಸಮಾಡುವುದರಿಂದ ನಮ್ಮ ಅಡಿಹೊಟ್ಟೆಗುಂಟಾಗುವ ಅನುಕೂಲ್ಯವು ವ್ಯಕ್ತಪಡುವುದು.

ಬಾಗಿಸಿ ಸೊಂಟವನ್ನು ಎರಡು ಕೈಗಳಿಂದಲೂ ಭದ್ರವಾಗಿ ಹಿಡಿದು, ಕಾಲುಗಳನ್ನೂ ದೇಹವನ್ನೂ ಮೇಲಕ್ಕೆತ್ತಿ, ನಿಮ್ಮ ಭುಜಗಳ ಮೇಲೆ ನಿಲ್ಲಿಸಿರಿ. ಕಾಲುಗಳನ್ನು ಕ್ರಮವಾಗಿ ಹಿಂದಕ್ಕೂ ಮುಂದಕ್ಕೂ ಆಡಿಸಿರಿ ಹೀಗೆ ಕೆಲವು ಸಲ ಸಾ

(6) ಪಾದೋತ್ಥಿತ ಸರ್ವಾಂಗಾಸನ.



ಈ ಕೆಳಗೆ ಕೊಟ್ಟಿರುವ ಚಿತ್ರವನ್ನು ನೋಡಿರಿ. ಮೇಲಿನ ಆಸನವೂ ಇದೂ ಒಂದೇ! ಆದರೆ ಈ ಆಸನದಲ್ಲಿ ನಮ್ಮ ದೇಹದ ಭಾರವೆಲ್ಲವನ್ನೂ ನಮ್ಮ ಭುಜದಮೇಲೆ ಬಿಟ್ಟು, ಶರೀರವೆಲ್ಲವನ್ನೂ ಎತ್ತಿ ನಿಲಿಸಬೇಕು.ನಮ್ಮ ದೇಹವು ತನ್ನ ಕೆಲಸವನ್ನು ಕ್ರಮವಾಗಿ ಮಾಡುವಂತೆ ಅವಕಾಶವನ್ನು ಕಲ್ಪಿಸುವುದಕ್ಕೆ ಮೊದಲು, ದೇಹವೆಲ್ಲವನ್ನೂ ಆಡಿಸಿ ರಕ್ತವನ್ನು ಬೇರೆ ಕಡೆಗೆ ತಿರುಗಿಸುವುದೇ ಈ ಆಸನದ ಮುಖ್ಯೋದ್ದೇಶವು.

ಮೇಲಿನ ಚಿತ್ರದಲ್ಲಿ ವಿವರಿಸಿರುವ ಸರ್ವಾಂಗಾಸನದಲ್ಲಿ ಹೇಗೋ ಹಾಗೆ ದೇಹವನ್ನು ಧಾನೆಮಾಡಿದ ಮೇಲೆ, ಬೆನ್ನು ಮತ್ತು ಕೈಕಾಲುಗಳನ್ನು ನಿಶ್ಚೇತನವಾದ ಸ್ಥಿತಿಗೆ ತಂದು ಮಲಗಿರಿ. ಈ ಸಾಧನೆಯನ್ನು ಕೆಲವಾವರ್ತಿ ಮಾಡಬೇಕು.

ಈ ಸಾಧನೆಯಿಂದ ಕರುಳುಗಳಾಗಲಿ, ಅಹಾರವಾಗಲಿ ಬಾಯಿಗೆ ಬಂದು ಬಿಡುವುದೆಂಬ ಬೆದರಿಕೆಗೆ ಅಂಜಬಾರದು. ಅಡಿಗಡಿಗೆ ದೇಹವನ್ನು ಹೀಗೆ ಎತ್ತಿನಿಲ್ಲಿಸಿ ಅದರ ಸ್ವಭಾವ ಸ್ಥಿತಿಗೆ ವ್ಯತಿರಿಕ್ತವಾದ ಕೆಲಸಗಳನ್ನು ಮಾಡಿಸುವುದರಿಂದ, ಆ ಭಾಗಗಳಲ್ಲಿ ಶಕ್ತಿಯು ಹೆಚ್ಚಿ, ಅವು ತಮ್ಮ ಕೆಲಸವನ್ನು ಕ್ರಮವಾಗಿ ಮಾಡುವಂತಾಗುವುದು.

ಆಹಾರವೂ ಪಾನವೂ.

ಕೆಲವು ಮುಖ್ಯಸೂಚನೆಗಳು.

"ಆಹಾರಗಳಲ್ಲಿ ಎರಡು ವಿಧವುಂಟು. (1) ಎಲುಬು, ಮಾಂಸಖಂಡ, ಸ್ನಾಯು ಮೆತ್ತು ಇತರ ದೇಹಭಾಗಗಳು ಬೆಳೆಯುವುದಕ್ಕೆ ಸಾಧಕವಾದುವುಗಳೆಂದೂ, (2) ದೇಹವು ತನ್ನ ಕೆಲಸವನ್ನು ಮಾಡಲು ಅವಶ್ಯವಾದ ಶಕ್ತಿಯನ್ನುಂಟುಮಾಡಲು ಸಹಕಾರಿಯಾದವುಗಳೆಂದೂ ಎರಡು ವಿಧವಾಗಿ ವಿಂಗಡಿಸಬಹುದು."

"ಮಾಂಸಖಂಡಗಳೂ, ಮೂಳೆಯೂ ಬೆಳೆಯುವುದಕ್ಕೆ ಸಾಧಕವಾಗಿ, ದೇಹಕ್ಕೆ ಶಾಖವನ್ನೂ, ಶಕ್ತಿಯನ್ನೂ ತರುವ ಕೊಬ್ಬು, ಸಸಾರಜನಕ, ಪಿಷ್ಟಪದಾರ್ಥಗಳು, ಇವುಗಳನ್ನೊಳಕೊಂಡ ಆಹಾರವೇ ಅತ್ಯುತ್ತಮವಾದುದು."

" ಆಹಾರವು ಆರೋಗ್ಯಕಾರಿಯಾಗಿರಬೇಕು. ಅನೇಕರು ಇದಕ್ಕಾಗಿ ಮಾಂಸಾಹಾರವನ್ನೂ ಪ್ರೋಟೇ೯ ಎಂಬ ಪದಾರ್ಥಗಳು ಹೆಚ್ಚಾಗಿರುವ ಆಹಾರವನ್ನೂ ಸೇವಿಸುವರು. ಪ್ರೋಟೇ೯ ಎಂಬ ಪದಾರ್ಥವು ಹೆಚ್ಚಾಗಿರುವ ಆಹಾರದಿಂದ ಯೂರಿಕ್ ಆಸಿಡ್, ಯೂಡಿಯಾ, ಮುಂತಾದ ವಿಷಪದಾರ್ಥಗಳು ಉತ್ಪತ್ತಿಯಾಗಿ, ನಮ್ಮ ದೇಹವು ತನ್ನ ಕೆಲಸವನ್ನು ಮಾಡುವುದಕ್ಕೆ ತಡೆಯಾಗುವುದು. ರಕ್ತನಾಳಗಳಲ್ಲಿ ವಿಷಪದಾರ್ಥಗಳು ತುಂಬಲು ಅವಕಾಶವನ್ನುಂಟುಮಾಡಿ ನರಗಳಲ್ಲಿ ಉಷ್ಣವನ್ನು ಹೆಚ್ಚಿಸುವುದು. ಆಹಾರ ಸೇವನೆಗೆ ಹೆಚ್ಚು ಕಾಲವನ್ನು ಪಯೋಗಿಸಬೇಕು. ಒಂದು ಊಟಕ್ಕೂ, ಮತ್ತೊಂದು ಊಟಕ್ಕೂ ಮಧ್ಯದಲ್ಲಿ ಧಾರಾಳವಾಗಿ ನೀರನ್ನು ಕುಡಿಯಬೇಕು.

ಅತ್ಯುತ್ತಮವಾದ ಆಹಾರವಿದ್ದು ಮಾತ್ರಕ್ಕೇ ಅದರ ಪ್ರಯೋಜನವನ್ನು ಅನುಭವಿಸಿದಂತೆ ಆಗಲಿಲ್ಲ. ಆದರೆ ಆ ಆಹಾರವು ಜೀರ್ಣಿಸಿ ರಕ್ತಗತವಾಗುವಂತೆ ಅದನ್ನು ಸೇವಿಸುವ ಕ್ರಮವು ತಿಳಿಯಬೇಕು.

ಮನುಷ್ಯರಿಗೆ ಪ್ರಾಪ್ತವಾಗುವ ವ್ಯಾಧಿಗಳಲ್ಲಿ ಶೇಕಡಾ ನಲವತ್ತೈದು ಭಾಗಕ್ಕೆ ಅವರ ಜಠರರಸದಲ್ಲಿಯೂ, ಕರುಳುರಸದಲ್ಲಿಯೂ ಹುಟ್ಟುವ್ಯತ್ಯಯವೇ ಕಾರಣವು. ಈ ವ್ಯಾಧಿಯೆಲ್ಲ ಆಹಾರದೋಷಗಳಿಂದಲೇ ಏರ್ಪಡುವುದು.

ಭಾರತೀಯರಿಗಿಂತಲೂ ಯೂರೋಪ್ ದೇಶಸ್ಥರಲ್ಲಿ ಹೆಚ್ಚು ಜನರು ದಂತವ್ಯಾಧಿಯಿಂದ ಬಾಧೆಪಡುತ್ತಿರುವರು. ಭಾರತೀಯರು ಸೇವಿಸುವ ಆಹಾರದಲ್ಲಿ ಹಾಲೂ, ಹೊಸಕಾಯಿಪಲ್ಯಗಳೂ ಸೇರಿರುವುದರಿಂದ, ಅವರ ಆಹಾರದಲ್ಲಿ ವಿಟಮಿ೯ ಎಂಬ ಪದಾರ್ಥವು ಹೆಚ್ಚಾಗಿರುವುದೇ ಇದಕ್ಕೆ ಮುಖ್ಯಕಾರಣವು. ಯೂರೋಪ್‌ದೇಶಸ್ಥರೋ, ನೂರಾರು ಮೈಲಿಗಳ ದೂರದಲ್ಲಿರುವ ವಿದೇಶಗಳಲ್ಲಿ ತಯಾರಿಸಿದ ಆಹಾರವನ್ನೂ ಸೇವಿಸುತ್ತಿರುವರು.

ಶುದ್ಧಿಮಾಡಿ ಟಿನ್ನುಗಳಲ್ಲಿ ಭದ್ರಪಡಿಸಿದ ಆಹಾರಪದಾರ್ಥಗಳಲ್ಲಿ ಗುಣಭಾಗವು ಎಷ್ಟಿದ್ದರೂ, ಅವು ಹೊಸದಾಗಿ ತಯಾರಿಸಿದ ಪದಾರ್ಥಗಳಿಗೆ ಸರಿಬಾರವು. ಅವುಗಳಲ್ಲಿ ಅತಿ ಮುಖ್ಯವಾದ ವಿಟಮಿ೯ ಎಂಬ ಪದಾರ್ಥವೇ ಕಡಿಮೆ.

ಆಹಾರವು ಜೀರ್ಣಿಸಿ ರಕ್ತಗತವಾಗಲು, ಜಠರವೂ ಕರುಳುಗಳೂ ಮುಖ್ಯವಾದುವು. ಆಹಾರವು ಮುಖ್ಯವಾಗಿ ನಮ್ಮ ಬಾಯಿ, ಹೊಟ್ಟೆ, ಮತ್ತು ಕರುಳುಗಳಲ್ಲಿ ಜೀರ್ಣವಾಗುವುದು. ಆದರೆ ನಾವು ಪ್ರಾಯಕವಾಗಿ ಬಾಯಿಯಲ್ಲಿ ನಡೆಯಬೇಕಾದ ಆಹಾರಪಚನಕ್ಕೆ ಅನುಕೂಲವನ್ನುಂಟುಮಾಡುವುದಿಲ್ಲ.

ಪಿಷ್ಟ ಪದಾರ್ಥಗಳು ಜೊಲ್ಲಿನ ರಸದಲ್ಲಿರುವ 'ಜಾಲಿನ್' ಎಂಬ ಪದಾರ್ಥದೊತನೆ ವಿಶ್ರವಾಗುವುದರಿಂದ ಸಕ್ಕರೆಯಾಗಿ ರಕ್ತಗತವಾಗಬೇಕು

"ನಮ್ಮ ಆಹಾರವನ್ನು ಚೆನ್ನಾಗಿ ಅಗಿದು, ಅದರೊಡನೆ ಜೊಲ್ಲಿನ ರಸವು ಧಾರಾಳವಾಗಿ ಸೇರುವಂತೆ ಏರ್ಪಡಿಸಿದರೆ, ಗೋಧಿ, ಜೋಳ, ಓಟ್ಸ್, ಅಕ್ಕಿ, ಬಾರ್ಲಿ, ಉರುಳುಗೆಡ್ಡೆ, ಬಾಳೆಯ ಹಣ್ಣು, ಬೀಟ್ಸ್, ಕಾರಟ್ಸ್, ಟರ್ನಿಪ್ಸ್ ಮುಂತಾದುವುಗಳಲ್ಲಿರುವ ಪಿಷ್ಟಪದಾರ್ಥಗಳು ಬಾಯಲ್ಲೇ ಸಕ್ಕರೆಯಾಗಿ ಮಾರ್ಪಟ್ಟು ರಕ್ತದೊಡನೆ ಸೇರುವುವು,"

"ಜಠರರಸಕ್ಕೂ, ಮೇದೋಜೀರಕರಸಕ್ಕೂ ಪಿಷ್ಟಪದಾರ್ಥವನ್ನು ಸಕ್ಕರೆಯಾಗಿ ಮಾಡುವ ಶಕ್ತಿಯಿಲ್ಲ."

"ಆಹಾರವನ್ನು ಚೆನ್ನಾಗಿ ಅಗಿದು ತಿನ್ನಬೇಕು. ಇಲ್ಲವಾದರೆ ಅದನ್ನು ಜೀರ್ಣಿಸಿಕೊಳ್ಳಲು ಬಹಳ ಪ್ರಯತ್ನಪಡಬೇಕಾಗಬಹುದು. ಒಟ್ಟೊಟ್ಟಿಗೆ ಆಹಾರವನ್ನು ಬಾಯಿಗೆ ಹಾಕಿಕೊಂಡು ನುಂಗುವುದರಿಂದ ನರಗಳಿಗೆ ಕೆಲಸವು ಹೆಚ್ಚಿ ಹೊಟ್ಟೆಯಲ್ಲಿಯೂ ಉರಿಯು ಬಲವಾಗುವುದು."

"ಆಹಾರ ಪ್ರಮಾಣದ ವಿಚಾರದಲ್ಲಿ ಆರೋಗ್ಯಶಾಲಿಯಾದ ಒಬ್ಬ ಸಾಮಾನ್ಯನಿಗೆ ಎರಡು ಹೊತ್ತು ಊಟವೂ, ಮಧ್ಯಾಹ್ನಕಾಲದಲ್ಲಿ ಅಲ್ಪಾಹಾರವೂ ಸಾಕು."

"ದ್ರಾವಕ, ವಿನೀಗರ್, ಸಾಸುವೆ, ಮುಂತಾದುವು ವಿಶೇಷವಾಗಿ ಸೇರಿರುವ ಪದಾರ್ಥವನ್ನು ಸೇವಿಸಕೂಡದು. ಊಟಮಾಡುವಾಗ ಉಪ್ಪು, ಮೆಣಸಿನ ಪುಡಿ, ಇವನ್ನು ಸೇರಿಸಿಕೊಳ್ಳಬಾರದು. ಆಹಾರದಲ್ಲಿ ಶಾಖವು ಕಡಿಮೆಯಾಗುವುದಕ್ಕೆ ಪ್ರಾರಂಭಿಸಿದಾಗ ಉಪ್ಪನ್ನು ಸೇರಿಸಿದರೆ ಸಾಕು. ಊಟಮಾಡುವ ತಟ್ಟೆಯಲ್ಲಾಗಲಿ, ಎಲೆಯಲ್ಲಾಗಲಿ, ಉಪ್ಪನ್ನು ಹಾಕಿಕೊಂಡು ಸೇವಿಸುವುದರಿಂದ ಹೊಟ್ಟೆಯಲ್ಲಿ ಉರಿಯು ಹೆಚ್ಚುವುದು."

"ವಿಶೇಷ ಆಯಾಸವಾಗಿ, ಅಹಾರದಲ್ಲಿ ಅಭಿಲಾಷೆಯೇ ಇಲ್ಲದಿರುವಾಗ ಊಟಮಾಡಲೇಬಾರದು. ಆಹಾರವು ಮಿತವಾಗಿರಬೇಕು. ರಾತ್ರಿಯಕಾಲದಲ್ಲಿ ಹೆಚ್ಚಾಗಿ ಊಟಮಾಡಬಾರದು. ದಿನಕ್ಕೆ ಎರಡು ಸಲಕ್ಕಿಂತ ಕಡಿಮೆಯಾಗಿಯೂ ಮೂರಾವರ್ತಿಗಿಂತ ಹೆಚ್ಚಾಗಿಯೂ ಆಹಾರವನ್ನು ಸೇವಿಸಬಾರದು ಆಹಾರದ ಪ್ರತಿ ಕಬಳವೂ ಬಾಯಲ್ಲೇ ನೀರಾಗುವಂತೆ ಚೆನ್ನಾಗಿ ಅಗಿದು ತಿನ್ನಬೇಕು."

(ಈ ಚಿತ್ರದಲ್ಲಿ,ನಲ್ಲಿಗಳಿಂದ ನೀರನ್ನು ಕುಡಿಯುವುದರಲ್ಲಿ ಸರಿಯಾದ ಪದ್ಧತಿಯೂ, ಕೆಟ್ಟ ಪದ್ಧತಿಯೂ ತೋರಿಸಲ್ಪಟ್ಟಿರುವುವು.)

"ನೀರಿನಲ್ಲಿರುವ ಗುಣವು ಇನ್ನೂ ಅನೇಕರಿಗೆ ತಿಳಿದಿಲ್ಲ. ಸ್ನಾನವಿಚಾರದಲ್ಲಿಯೂ, ದಂತಧಾವನದ ವಿಚಾರದಲ್ಲಿಯೂ ಅನೇಕರು ಹೆಚ್ಚು ಗಮನವನ್ನು ಕೊಡುತ್ತಿರುವರು ಆದರೆ ತಮ್ಮ ಹೊಟ್ಟೆಯನ್ನು ಶುದ್ಧಿಪಡಿಸಿ ಕೊಳ್ಳುವುದಕ್ಕೆ ಪ್ರಯತ್ನಿಸುವವರು ಸ್ವಲ್ಪಮಂದಿಯೇ !"

"ಬೆಳಗ್ಗೆ ಏನಾದರೂ ತಿನ್ನುವುದಕ್ಕೆ 10 ನಿಮಿಷಮುಂದೆಯೇ ಒಂದು ಲೋಟಾ ನೀರನ್ನು ಕುಡಿದರೆ ಹೊಟ್ಟೆಯು ಶುದ್ಧವಾಗಿ ಆರೋಗ್ಯವು ಹೆಚ್ಚುವುದು.

ನಿಮ್ಮ ಶರೀರದ ತೂಕವು ಹೆಚ್ಚಬೇಕೆಂಬ ಅಭಿಲಾಷೆಯಿದ್ದರೆ, ವ್ಯಾಯಾಮ ಮಾಡಿದ ಮೇಲೂ, ಎರಡು ಊಟಗಳಿಗೆ ಮಧ್ಯಕಾಲದಲ್ಲಿಯೂ ಧಾರಾಳವಾಗಿ ನೀರನ್ನು ಕುಡಿಯಿರಿ. ದಿನಕ್ಕೆ ಕೊನೇಪಕ್ಷ ಕಾಲು ಗ್ಯಾಲನ್ ನೀರನ್ನಾದರೂ ಕುಡಿಯಬೇಕು.ನಮ್ಮ ದೇಹದ ಮುಕ್ಕಾಲು ಭಾಗವೆಲ್ಲಾ ನೀರೆಂಬುದನ್ನು ಜ್ಞಾಪಕದಲ್ಲಿಡಬೇಕು ನಿಮ್ಮ ತೂಕವು ಕಡಿಮೆಯಾಗಬೇಕಾದರೆ ಆಗ ದೇಹವನ್ನೊಣಗಿಸಬಹುದು. ಅಜೀರ್ಣವಿದ್ದಾಗ ನೀವು ಕುಡಿಯುವ ನೀರು ಉಗುರು ಬೆಚ್ಚಗಿರಲಿ!

ಆಹಾರವೂ ಪಾನವೂ.

ಕೆಲವು ಮುಖ್ಯಸೂಚನೆಗಳು.

"ಆಹಾರಗಳಲ್ಲಿ ಎರಡು ವಿಧವುಂಟು. (1) ಎಲುಬು, ಮಾಂಸಖಂಡ, ಸ್ನಾಯು ಮತ್ತು ಇತರ ದೇಹಭಾಗಗಳು ಬೆಳೆಯುವುದಕ್ಕೆ ಸಾಧಕವಾದುವುಗಳೆಂದೂ, (2) ದೇಹವು ತನ್ನ ಕೆಲಸವನ್ನು ಮಾಡಲು ಅವಶ್ಯವಾದ ಶಕ್ತಿಯನ್ನುಂಟುಮಾಡಲು ಸಹಕಾರಿಯಾದವುಗಳೆಂದೂ ಎರಡು ವಿಧವಾಗಿ ವಿಂಗಡಿಸಬಹುದು."

"ಮಾಂಸಖಂಡಗಳೂ, ಮೂಳೆಯೂ ಬೆಳೆಯುವುದಕ್ಕೆ ಸಾಧಕವಾಗಿ, ದೇಹಕ್ಕೆ ಶಾಖವನ್ನೂ, ಶಕ್ತಿಯನ್ನೂ ತರುವ ಕೊಬ್ಬು, ಸಸಾರಜನಕ, ಪಿಷ್ಟಪದಾರ್ಥಗಳು, ಇವುಗಳನ್ನೊಳಕೊಂಡ ಆಹಾರವೇ ಅತ್ಯುತ್ತಮವಾದುದು."

"ಆಹಾರವು ಆರೋಗ್ಯಕಾರಿಯಾಗಿರಬೇಕು. ಅನೇಕರು ಇದಕ್ಕಾಗಿ ಮಾಂಸಾಹಾರವನ್ನೂ ಪ್ರೊಟೀಕ್ ಎಂಬ ಪದಾರ್ಥಗಳು ಹೆಚ್ಚಾಗಿರುವ ಆಹಾರವನ್ನೂ ಸೇವಿಸುವರು. ಪ್ರೊಟೀಕ್ ಎಂಬ ಪದಾರ್ಥವು ಹೆಚ್ಚಾಗಿರುವ ಆಹಾರದಿಂದ ಯೂರಿಕ್ ಆಸಿಡ್, ಯೂಡಿಯಾ, ಮುಂತಾದ ವಿಷಪದಾರ್ಥಗಳು ಉತ್ಪತ್ತಿಯಾಗಿ, ನಮ್ಮ ದೇಹವು ತನ್ನ ಕೆಲಸವನ್ನು ಮಾಡುವುದಕ್ಕೆ ತಡೆಯಾಗುವುದು. ರಕ್ತನಾಳಗಳಲ್ಲಿ ವಿಷಪದಾರ್ಥಗಳು ತುಂಬಲು ಅವಕಾಶವನ್ನುಂಟುಮಾಡಿ ನರಗಳಲ್ಲಿ ಉಷ್ಣವನ್ನು ಹೆಚ್ಚಿಸುವುದು. ಆಹಾರ ಸೇವನೆಗೆ ಹೆಚ್ಚು ಕಾಲವನ್ನು ಪಯೋಗಿಸಬೇಕು. ಒಂದು ಊಟಕ್ಕೂ, ಮತ್ತೊಂದು ಊಟಕ್ಕೂ ಮಧ್ಯದಲ್ಲಿ ಧಾರಾಳವಾಗಿ ನೀರನ್ನು ಕುಡಿಯಬೇಕು.

ಅತ್ಯುತ್ತಮವಾದ ಆಹಾರವಿದ್ದು ಮಾತ್ರಕ್ಕೇ ಆದರ ಪ್ರಯೋಜನವನ್ನು ಅನುಭವಿಸಿದಂತೆ ಆಗಲಿಲ್ಲ. ಆದರೆ ಆ ಆಹಾರವು ಜೀರ್ಣಿಸಿ ರಕ್ತಗತವಾಗುವಂತೆ ಅದನ್ನು ಸೇವಿಸುವ ಕ್ರಮವು ತಿಳಿಯಬೇಕು.

ಮನುಷ್ಯರಿಗೆ ಪ್ರಾಪ್ತವಾಗುವ ವ್ಯಾಧಿಗಳಲ್ಲಿ ಶೇಕಡಾ ನಲವತ್ತೈದು ಭಾಗಕ್ಕೆ ಅವರ ಜಠರರಸದಲ್ಲಿಯೂ, ಕರುಳುರಸದಲ್ಲಿಯೂ ಹುಟ್ಟುವ್ಯತ್ಯಯವೇ ಕಾರಣವು. ಈ ವ್ಯಾಧಿಯೆಲ್ಲ ಆಹಾರದೋಷಗಳಿಂದಲೇ ಏರ್ಪಡುವುದು.

ಭಾರತೀಯರಿಗಿಂತಲೂ ಯೂರೋಪ್ ದೇಶಸ್ಥರಲ್ಲಿ ಹೆಚ್ಚು ಜನರು ದಂತವ್ಯಾಧಿಯಿಂದ ಬಾಧೆಪಡುತ್ತಿರುವರು. ಭಾರತೀಯರು ಸೇವಿಸುವ ಆಹಾರದಲ್ಲಿ ಹಾಲೂ, ಹೊಸಕಾಯಿಪಲ್ಯಗಳೂ ಸೇರಿರುವುದರಿಂದ, ಅವರ ಆಹಾರದಲ್ಲಿ ವಿಟಮಿಕ್ ಎಂಬ ಪದಾರ್ಥವು ಹೆಚ್ಚಾಗಿರುವುದೇ ಇದಕ್ಕೆ ಮುಖ್ಯಕಾರಣವು. ಯೂರೋಪ್‌ದೇಶಸ್ಥರೋ, ನೂರಾರು ಮೈಲಿಗಳ ದೂರದಲ್ಲಿರುವ ವಿದೇಶಗಳಲ್ಲಿ ತಯಾರಿಸಿದ ಆಹಾರವನ್ನೂ ಸೇವಿಸುತ್ತಿರುವರು.

ಶುದ್ಧಿಮಾಡಿ ಟಿನ್ನುಗಳಲ್ಲಿ ಭದ್ರಪಡಿಸಿದ ಆಹಾರಪದಾರ್ಥಗಳಲ್ಲಿ ಗುಣಭಾಗವು ಎಷ್ಟಿದ್ದರೂ, ಅವು ಹೊಸದಾಗಿ ತಯಾರಿಸಿದ ಪದಾರ್ಥಗಳಿಗೆ ಸರಿಬಾರವು. ಅವುಗಳಲ್ಲಿ ಅತಿ ಮುಖ್ಯವಾದ ವಿಟಮಿಕ್ ಎಂಬ ಪದಾರ್ಥವೇ ಕಡಿಮೆ.

ಆಹಾರವು ಜೀರ್ಣಿಸಿ ರಕ್ತಗತವಾಗಲು, ಜಠರವೂ ಕರುಳುಗಳೂ ಮುಖ್ಯವಾದುವು. ಆಹಾರವು ಮುಖ್ಯವಾಗಿ ನಮ್ಮ ಬಾಯಿ, ಹೊಟ್ಟೆ, ಮತ್ತು ಕರುಳುಗಳಲ್ಲಿ ಜೀರ್ಣವಾಗುವುದು. ಆದರೆ ನಾವು ಪ್ರಾಯಕವಾಗಿ ಬಾಯಿಯಲ್ಲಿ ನಡೆಯಬೇಕಾದ ಆಹಾರಪಚನಕ್ಕೆ ಅನುಕೂಲವನ್ನುಂಟುಮಾಡುವುದಿಲ್ಲ.

ಪಿಷ್ಟ ಪದಾರ್ಥಗಳು ಜೊಲ್ಲಿನ ರಸದಲ್ಲಿರುವ 'ಜಾಲಿನ್' ಎಂಬ ಪದಾರ್ಥದೊಡನೆ ವಿಶ್ರವಾಗುವುದರಿಂದ ಸಕ್ಕರೆಯಾಗಿ ರಕ್ತಗತವಾಗಬೇಕು

"ನಮ್ಮ ಆಹಾರವನ್ನು ಚೆನ್ನಾಗಿ ಅಗಿದು, ಅದರೊಡನೆ ಜೊಲ್ಲಿನ ರಸವು ಧಾರಾಳವಾಗಿ ಸೇರುವಂತೆ ಏರ್ಪಡಿಸಿದರೆ, ಗೋಧಿ, ಜೋಳ, ಓಟ್ಸ್, ಅಕ್ಕಿ, ಬಾರ್ಲಿ, ಉರುಳುಗೆಡ್ಡೆ, ಬಾಳೆಯ ಹಣ್ಣು, ಬೀಟ್ಸ್, ಕಾರಟ್ಸ್, ಟರ್ನಿಪ್ಸ್ ಮುಂತಾದುವುಗಳಲ್ಲಿರುವ ಪಿಷ್ಟಪದಾರ್ಥಗಳು ಬಾಯಲ್ಲೇ ಸಕ್ಕರೆಯಾಗಿ ಮಾರ್ಪಟ್ಟು ರಕ್ತದೊಡನೆ ಸೇರುವುವು,"

"ಜಠರರಸಕ್ಕೂ, ಮೇದೋಜೀರಕರಸಕ್ಕೂ ಪಿಷ್ಟಪದಾರ್ಥವನ್ನು ಸಕ್ಕರೆಯಾಗಿ ಮಾಡುವ ಶಕ್ತಿಯಿಲ್ಲ."

"ಆಹಾರವನ್ನು ಚೆನ್ನಾಗಿ ಅಗಿದು ತಿನ್ನಬೇಕು. ಇಲ್ಲವಾದರೆ ಅದನ್ನು ಜೀರ್ಣಿಸಿಕೊಳ್ಳಲು ಬಹಳ ಪ್ರಯತ್ನ ಪಡಬೇಕಾಗಬಹುದು. ಒಟ್ಟೊಟ್ಟಿಗೆ ಆಹಾರವನ್ನು ಬಾಯಿಗೆ ಹಾಕಿಕೊಂಡು ನುಂಗುವುದರಿಂದ ನರಗಳಿಗೆ ಕೆಲಸವು ಹೆಚ್ಚಿ ಹೊಟ್ಟೆಯಲ್ಲಿಯೂ ಉರಿಯು ಬಲವಾಗುವುದು."

"ಆಹಾರ ಪ್ರಮಾಣದ ವಿಚಾರದಲ್ಲಿ ಆರೋಗ್ಯಶಾಲಿಯಾದ ಒಬ್ಬ ಸಾಮಾನ್ಯನಿಗೆ ಎರಡು ಹೊತ್ತು ಊಟವೂ, ಮಧ್ಯಾಹ್ನಕಾಲದಲ್ಲಿ ಅಲ್ಪಾಹಾರವೂ ಸಾಕು."

"ದ್ರಾವಕ, ವಿನೀಗರ್, ಸಾಸುವೆ, ಮುಂತಾದುವು ವಿಶೇಷವಾಗಿ ಸೇರಿರುವ ಪದಾರ್ಥವನ್ನು ಸೇವಿಸಕೂಡದು. ಊಟಮಾಡುವಾಗ ಉಪ್ಪು, ಮೆಣಸಿನ ಪುಡಿ, ಇವನ್ನು ಸೇರಿಸಿಕೊಳ್ಳಬಾರದು. ಆಹಾರದಲ್ಲಿ ಶಾಖವು ಕಡಿಮೆಯಾಗುವುದಕ್ಕೆ ಪ್ರಾರಂಭಿಸಿದಾಗ ಉಪ್ಪನ್ನು ಸೇರಿಸಿದರೆ ಸಾಕು. ಊಟಮಾಡುವ ತಟ್ಟೆಯಲ್ಲಾಗಲಿ, ಎಲೆಯಲ್ಲಾಗಲಿ, ಉಪ್ಪನ್ನು ಹಾಕಿಕೊಂಡು ಸೇವಿಸುವುದರಿಂದ ಹೊಟ್ಟೆಯಲ್ಲಿ ಉರಿಯು ಹೆಚ್ಚುವುದು."

"ವಿಶೇಷ ಆಯಾಸವಾಗಿ, ಅಹಾರದಲ್ಲಿ ಅಭಿಲಾಷೆಯೇ ಇಲ್ಲದಿರುವಾಗ ಊಟಮಾಡಲೇಬಾರದು. ಆಹಾರವು ಮಿತವಾಗಿರಬೇಕು. ರಾತ್ರಿಯಕಾಲದಲ್ಲಿ ಹೆಚ್ಚಾಗಿ ಊಟಮಾಡಬಾರದು. ದಿನಕ್ಕೆ ಎರಡು ಸಲಕ್ಕಿಂತ ಕಡಿಮೆಯಾಗಿಯೂ ಮೂರಾವರ್ತಿಗಿಂತ ಹೆಚ್ಚಾಗಿಯೂ ಆಹಾರವನ್ನು ಸೇವಿಸಬಾರದು ಆಹಾರದ ಪ್ರತಿ ಕಬಳವೂ ಬಾಯಲ್ಲೇ ನೀರಾಗುವಂತೆ ಚೆನ್ನಾಗಿ ಅಗಿದು ತಿನ್ನಬೇಕು."

(ಈ ಚಿತ್ರದಲ್ಲಿ,ನಲ್ಲಿಗಳಿಂದ ನೀರನ್ನು ಕುಡಿಯುವುದರಲ್ಲಿ ಸರಿಯಾದ ಪದ್ಧತಿಯೂ, ಕೆಟ್ಟ ಪದ್ಧತಿಯೂ ತೋರಿಸಲ್ಪಟ್ಟಿರುವುವು.)

"ನೀರಿನಲ್ಲಿರುವ ಗುಣವು ಇನ್ನೂ ಅನೇಕರಿಗೆ ತಿಳಿದಿಲ್ಲ. ಸ್ನಾನವಿಚಾರದಲ್ಲಿಯೂ, ದಂತಧಾವನದ ವಿಚಾರದಲ್ಲಿಯೂ ಅನೇಕರು ಹೆಚ್ಚು ಗಮನವನ್ನು ಕೊಡುತ್ತಿರುವರು ಆದರೆ ತಮ್ಮ ಹೊಟ್ಟೆಯನ್ನು ಶುದ್ಧಿಪಡಿಸಿ ಕೊಳ್ಳುವುದಕ್ಕೆ ಪ್ರಯತ್ನಿಸುವವರು ಸ್ವಲ್ಪಮಂದಿಯೇ !"

"ಬೆಳಿಗ್ಗೆ ಏನಾದರೂ ತಿನ್ನುವುದಕ್ಕೆ 10 ನಿಮಿಷಮುಂದೆಯೇ ಒಂದು ಲೋಟಾ ನೀರನ್ನು ಕುಡಿದರೆ ಹೊಟ್ಟೆಯು ಶುದ್ಧವಾಗಿ ಆರೋಗ್ಯವು ಹೆಚ್ಚುವುದು.

ನಿಮ್ಮ ಶರೀರದ ತೂಕವು ಹೆಚ್ಚಬೇಕೆಂಬ ಅಭಿಲಾಷೆಯಿದ್ದರೆ, ವ್ಯಾಯಾಮ ಮಾಡಿದ ಮೇಲೂ, ಎರಡು ಊಟಗಳಿಗೆ ಮಧ್ಯಕಾಲದಲ್ಲಿಯೂ ಧಾರಾಳವಾಗಿ ನೀರನ್ನು ಕುಡಿಯಿರಿ. ದಿನಕ್ಕೆ ಕೊನೇಪಕ್ಷ ಕಾಲು ಗ್ಯಾಲನ್ ನೀರನ್ನಾದರೂ ಕುಡಿಯಬೇಕು. ನಮ್ಮ ದೇಹದ ಮುಕ್ಕಾಲು ಭಾಗವೆಲ್ಲಾ ನೀರೆಂಬುದನ್ನು ಜ್ಞಾಪಕದಲ್ಲಿಡಬೇಕು ನಿಮ್ಮ ತೂಕವು ಕಡಿಮೆಯಾಗಬೇಕಾದರೆ ಆಗ ದೇಹವನ್ನೊಣಗಿಸಬಹುದು. ಅಜೀರ್ಣವಿದ್ದಾಗ ನೀವು ಕುಡಿಯುವ ನೀರು ಉಗುರು ಬೆಚ್ಚಗಿರಲಿ!

ನಿಂಬೆಯ ಹಣ್ಣುಗಳಲ್ಲಿರುವ ಗುಣಗಳು.

ಕಿತ್ತಲೆಯ ಹಣ್ಣುಗಳಲ್ಲಿರುವ ರುಚಿಯಿಂದಲೂ, ಅವುಗಳಲ್ಲಿ ವಿಟಮಿನ್ ಎಂಬ ಪದಾರ್ಥವು ಹೆಚ್ಚಾಗಿರುವುದರಿಂದಲೂ ವಿಶೇಷ ಆದರಣೆಯನ್ನು ಪಡೆದಿರುವುವು. ಅಪರಂತೆ ಹಿರಳೇ ಹಣ್ಣೂ ಹಲವರಿಗೆ ಆದರಣೀಯವಾಗಿರುವಂತೆ ತೋರುತ್ತದೆ. ಭಿನ್ನರುಚಿಯುಳ್ಳ ಈ ಪ್ರಪಂಚದಲ್ಲಿ ಹುಳಿಗೂ, ಸಿಹಿಗೂ "ನಾನು ಮೇಲು ತಾನು ಮೇಲೆಂಬ ವಾದಗಳು ನಡೆಯುತ್ತಲೇ ಇರುವುವು. ವಿತವಾಗಿ ಸೇವಿಸುವುದಾದರೆ ಯಾವುದರಿಂದಲೂ ಬಾಧಕವಿಲ್ಲ. ಸುವಾಸನೆಯು ಹೆಚ್ಚಾಗಿರುವ ಪದಾರ್ಥಗಳಲ್ಲಿ ತೃಪ್ತಿಯುಂಟಾಗುವುದು. ಹಿಂದೆ ಔಷಧವ್ಯಾಪಾರಿಗಳು, ಕಿತ್ತಲೆ ಹಣ್ಣು, ನಿಂಬೆಹಣ್ಣು ಮುಂತಾದುವುಗಳ ಸಾರವನ್ನೂ, ಟಿಂಕ್ಚರನ್ನೂ ತಯಾರಿಸಿ ವಿಕ್ರಯಿಸುವುದಕ್ಕೆ ಪ್ರಾರಂಭಿಸಿದಾಗ, ಈ ಪದಾರ್ಥಗಳಲ್ಲಿರುವ ಮಹತ್ವಗುಣವು ಯಾರಿಗೂ ತಿಳಿದಿರಲಿಲ್ಲ. ಪದಾರ್ಥಗಳಲ್ಲಿ ವಾಸನೆಯು ಹೆಚ್ಚುವುದಕ್ಕಾಗಿ ಈ ಪಸಾರೆಗಳನ್ನು ಉಪಯೋಗಿಸುತ್ತಲಿಬಂದರೇಹೊರತು ಅವುಗಳಲ್ಲಿರುವ ಗುಣಭಾಗಕ್ಕಾಗಿ ಅಲ್ಲ. ಈಗೀಗ ನಡೆದ ಶೋಧನೆಗಳಿಂದ ಆ ಹಣ್ಣುಗಳಲ್ಲಿರುವ ರಸಗಳಲ್ಲಿ ಮಾತ್ರವಲ್ಲದೆ, ನಿರುಪಯೋಗವಾದ ಸಿಪ್ಪೆಗಳಿಂದು ಭಾವಿಸಿ ಹೊರಕ್ಕೆ ಬಿಸಾಡುವ ಸಿಪ್ಪೆಗಳಲ್ಲಿಯೂ ವಿಟಮಿನ್ ಎಂಬ ಪದಾರ್ಥವು ಇರುವುದೆಂದು ನಿರ್ಧರವಾಗಿರುವುದು. 1920 ನೆಯ ಇಸವಿಯಲ್ಲಿ ಅಸ್‌ಬಾರ್ನ್ ಮತ್ತು ಮೆಂಡಲ್ ಎಂಬ ಪಂಡಿತರು, ಸಿಪ್ಪೆಯ ಒಳ ಭಾಗದಲ್ಲಿರುವ ಬಿಳಿಯ ಪ್ರದೇಶದಲ್ಲಿ ವಿಟಮಿನ್ "ಬಿ" ಎಂಬ ಪದಾರ್ಥವು ಇರುವುದೆಂದು ನಿರ್ಧರಿಸಿದರು. ಕೂಪರ್ ಎಂಬ ಪಂಡಿತನು ನಿಂಬೆ ಕಿತ್ತಳೆ, ಚಪ್ಪರದ್ರಾಕ್ಷೆ, ಮುಂತಾದುವುಗಳ ಸಿಪ್ಪೆಗಳಿಂದ ತೆಗೆದ ಸಾರಪದಾರ್ಥದಲ್ಲಿ ವಿಟಮಿನ್ "ಎ" ಎಂಬ ವಸ್ತುವು ಇರುವುದೆಂದು ತೀರ್ಮಾನಿಸಿದನು. ಈಗ ಕೇಮ್ಬ್ರಿಡ್ಜ್ ವಿಶ್ವವಿದ್ಯಾಲಯದ ವಿಲ್ಲಿನಾಟ್ ಎಂಬವರು, ಹೊಸ ನಿಂಬೆಯ ಹಣ್ಣಿನ ಸಿಪ್ಪೆಯಲ್ಲಿಯೂ, ಅದರೊಡನೆ ಸ್ಪಿರಿಟ್ಟನ್ನು ಹಾಕಿ ತೆಗೆದ ಸಾರದಲ್ಲಿಯೂ ವಿಟಮಿನ್ ಬಿ. ಎಂಬ ಪದಾರ್ಥವು ಇರುವುದೆಂದು ಕಂಡು ಹಿಡಿದಿರುವರು.

ಸಿಡುಬಿನ ವಿಚಾರದಲ್ಲಿ ಗೃಹಿಣಿಯರಿಗೆ ಕೆಲವು ಸೂಚನೆಗಳು.

ಮಾತೆಯರೇ! ನಿಮ್ಮ ಮಕ್ಕಳಿಗಿಂತಲೂ ನಿಮಗೆ ಪ್ರಿಯವಾದ ವಸ್ತುವು ಮತ್ತಾವುದಿರುವುದು? ನಿಮ್ಮ ಮಕ್ಕಳು ಚೆನ್ನಾಗಿ ಕಣ್ಣು ತೆರೆದು ನಿಮ್ಮನ್ನು ನೋಡಿದಾಗಲೂ, ಅವು ನಗುವುದಕ್ಕೆ ಪ್ರಾರಂಭಿಸಿದಾಗಲೂ, ಅವು ತಮ್ಮ ಕೈಗಳನಾಡಿಸಿ ನಿಮ್ಮನ್ನು ಹೊಡೆಯುವುದಕ್ಕೆ ಪ್ರಯತ್ನಿಸಿದಾಗಲೂ, ನೀವು ಅವುಗಳನ್ನು ಎತ್ತಿಕೊಂಡಾಗಲೂ ನಿಮಗೆ ಉಂಟಾಗುವ ಆನಂದಕ್ಕೆ ಮಿತಿಯುಂಟೇ? ಆ ಮಗುವಿಗೆ ಎಳ್ಳಷ್ಟು ಬಾಧೆಯಾದರೂ ನಿಮ್ಮ ಮನಸ್ಸಿನಲ್ಲಿ ಎಷ್ಟು ಕಷ್ಟವಾಗುವುದು? ಅವುಗಳಿಗುಂಟಾಗುವ ಬಾಧೆಯನ್ನು ನೋಡಿ ಸಹಿಸುವುದಕ್ಕೆ

ನಿಮ್ಮ ಮನಸ್ಸೊಪ್ಪುವುದೇ? ಇಲ್ಲ! ಏಕೆಂದರೆ, ನಿಮ್ಮ ಪ್ರಾಣಗಳಿಗಿಂತಲೂ ಆ ಮಕ್ಕಳ ಪ್ರಾಣವೇ ನಿಮಗೆ ಮೇಲೆಂದು ಭಾವಿಸಿರುವಿರಿ !

ಆದರೂ ನಿಮ್ಮಲ್ಲಿ ಅನೇಕರು ಆ ಮಕ್ಕಳಿಗೆ ಕೆಡುಕನ್ನು ಮಾಡುತ್ತಿರುವರು. ಹೇಗೆಂಬುದು ಮಾತ್ರ ಅವರಿಗೇ ತಿಳಿಯದು! ಸಿಡುಬು ಹಾಕುವವರು ಮನೆಯ ಸಮೀಪಕ್ಕೆ ಬಂದು, ನಿಮ್ಮ ಮಕ್ಕಳಿಗೂ ಸಿಡುಬು ಹಾಕಿಸಿರೆಂದು ಹೇಳಿದಾಗಲೂ ಕೆಲವರು ನೆರೆಹೊರೆಯವರ ಮಾತುಗಳನ್ನು ಕೇಳಿ ಅಜ್ಞಾತೆಯಿಂದ ಆ ಸಿಡುಬು ಹಾಕುವವರ ಮಾತುಗಳಿಗೆ ಗಮನವನ್ನೇ ಕೊಡರು. ಎಳೇ ಮಕ್ಕಳಿಗೆ ಅಮೃತ ಪ್ರಾಯವಾದ ದಿವ್ಯೌಷಧಿಯೊಂದನ್ನಿಟ್ಟುಕೊಂಡು, ತಾವಾಗಿ ಗ್ರಾಮಗಳಿಗೆ ತಿರುಗಿ, ಸಾರಿಸಾರಿ ಬುದ್ಧಿಹೇಳಿದರೂ, ಅದು ನಮ್ಮಲ್ಲಿ ಅನೇಕರಿಗೆ ಕಿವಿಗೇರುವುದೇ ಇಲ್ಲ. ಇದರಿಂದ ಎಷ್ಟೋ ಕುಟುಂಬಗಳು ಹಾಳಾಗಿವೆ. ಎಷ್ಟೋಜನರು ಕುರೂಪಿಗಳಾಗಿರುವರು. ಸಂತೋಷದಿಂದ ಕೂಡಿರುವ ಮಗುವಿನ ಮುದ್ದುಮುಖದಲ್ಲಿ, ಅದರ ಮುಖದ ಗುರುತೇ ತಿಳಿಯದಂತೆ ಸಿಡುಬಿನ ಗುರುತುಗಳಾಗಲು ಅವಕಾಶಕೊಡುವುದು ನಿಮ್ಮ ಮನಸ್ಸಿಗೊಪ್ಪುವುದೇ ? ಆನಂದದಿಂದ ನಿಮ್ಮನ್ನು ನೋಡುವ ಆ ಚಿಕ್ಕ ಕಣ್ಣುಗಳು ಎಂದೆಂದಿಗೂ ಕಾಣಿಸದಂತೆ ಆಗುವುದಾದರೆ, ನಿಮ್ಮ ಮನಸ್ಸಿಗೆಷ್ಟು ಕಷ್ಟವಾಗುವುದು ? ನಿಮ್ಮ ಮಕ್ಕಳು ಸಂತೋಷದಿಂದ ಆಡಿಸುತ್ತಿರುವ ಕೈಕಾಲುಗಳನ್ನು ಅವು ವೇದನೆಯಿಂದ ಜಾಡಿಸುವಂತಾಗುವುದನ್ನು ನೋಡಲೊಪ್ಪುವಿರಾ? ನಿಮ್ಮದೇಹದಿಂದ ಹೊರಕ್ಕೆ ಬಂದಿರುವ ಆ ಸಣ್ಣ ಪ್ರಾಣವು ಒಂದು ಸಣ್ಣದೀಪದಂತೆ ಆರಿಹೋಗುವುದನ್ನು ನೋಡಲು ನಿಮಗೆ ಮನಸ್ಸು ಬರುವುದುಂಟೇ? ಮಾತೆಯರೇ! ನೀವು ಮಾಡಿದ ಈ ತಪ್ಪು ಕೆಲಸದ ಪರಿಣಾಮವು ನಿಮಗೆ ತಿಳಿಯದು.

ಸಿಡುಬು ಬೆಂಕಿಯಂತೆ ಅಪಾಯಕರವಾದುದು. ಅದು ಗಾಳಿಯ ಮೂಲಕ ಸಿಡುಬು ಹಾಕಿಸಿಕೊಳ್ಳದಿರುವ ಮಕ್ಕಳಿಗೂ ಪ್ರಾಯಶಃ ವ್ಯಾಪಿಸುವುದು. ವಾಸ್ತವದಲ್ಲಿ ಅದೊಂದು ದುರ್ದೇವತೆಯೇ! ಆದರೂ, ಆ ದೇವತೆ ಕರುಣಿಸಿರುವ ದಿವ್ಯೌಷಧಿಯನ್ನು ಉಪಯೋಗಿಸದಿದ್ದವರಿಗೆ, ಅವಳು ಶಿಕ್ಷೆಯನ್ನು ವಿಧಿಸಲು ಬಂದಿರುವಳು. ಸಿಡುಬುಹಾಕಿಸಿಕೊಳ್ಳುವುದು ಕಷ್ಟವೇನು? ಅದೂಇಲ್ಲ! ಎರಡು ಮೂರುಕಡೆ ಸಣ್ಣಗಾಯಗಳಾಗಿ ಗುಳ್ಳೆಗಳೆದ್ದು ಶೀಘ್ರದಲ್ಲಿಯೇ ಒಣಗಿ ಹೋಗುವುವು. ಇದು ಎಂದಿಗೂ ಸಿಡುಬು ವ್ಯಾಧಿಯಿಂದ ಉಂಟಾಗುವ ಬಾಧೆಯಷ್ಟು ಕ್ರೂರವಾಗಲಾರದು. ಮಕ್ಕಳಿಂದ ಆನಂದವನ್ನು ಹೊಂದುವುದಕ್ಕಾಗಿ ಅವುಗಳನ್ನು ಹೊಟ್ಟೆಯಲ್ಲಿ ಹೊತ್ತು ಎಷ್ಟು ಕಷ್ಟಪಟ್ಟಿರುವಿರಿ! ಸಿಡುಬು ವ್ಯಾಧಿಯಿಂದ ಅಪಾಯವು ತಪ್ಪಲು ಸಿಡುಬು ಹಾಕಿಸಿಕೊಳ್ಳುವುದರ ಮೂಲಕ ಅದಕ್ಕೆ ಸ್ವಲ್ಪಬಾಧೆಯುಂಟಾದರೂ ಅದರಿಂದ ಪ್ರಯೋಜನವು ಹೆಚ್ಚು.

ಈಗ ಎಳೆಮಕ್ಕಳಾಗಿರುವ ನಿಮ್ಮ ಪುತ್ರಿಯರು ದೊಡ್ಡವರಾದಮೇಲೆ ಅವರ ಮಾತೆಯರಾದ ನಿಮ್ಮ ಅನಾದರಣೆಯಿಂದ ತಮ್ಮ ಮುಖವು ವಿಕಾರವಾಯಿತೆಂದು ತಿಳಿದರೆ ನಿಮ್ಮನ್ನು ನಿಂದಿಸದೆ ಬಿಡುವರೇ ? ಎಳೆಮಕ್ಕಳಾಗಿರುವ ನಿಮ್ಮ ಪುತ್ರರು ಅವರ ಬಾಲ್ಯದಲ್ಲಿ ನೀವು ತೋರಿಸಿದ ಅನಾದರಣೆಯಿಂದ ಕುರುಡರಾಗಿ ಹೋದರೆ,ದೊಡ್ಡವರಾದಮೇಲೆ ಯಾವ ಕೆಲಸಕ್ಕೂ ಅಯೋಗ್ಯರಾಗುವರಲ್ಲವೆ?

ಚಿಕ್ಕವಯಸ್ಸಿನ ಮಾತೆಯರೇ! ಸಿಡುಬುಹಾಕುವವರು ನಿಮಗೆ ನಿಮ್ಮೊಡನೆ ಹೇಳಿದ ಹಿತೋಕ್ತಿಗಳಿಗೆ ನೀವು ಕಿವಿಗೊಡದಿರುವುದು ಬಹಳ ತಪ್ಪು.

ಇನ್ನೊಂದಾವರ್ತಿ ಅವರು ನಿಮ್ಮ ಹಳ್ಳಿಗೆ ಬಂದೊಡನೆ, ನಿಮ್ಮ ಮಕ್ಕಳನ್ನು ನೀವಾಗಿ ಆತನಬಳಿಗೆ ಕರೆದುಕೊಂಡು ಹೋಗಿ, ಸಿಡುಬು ಹಾಕಿಸಿರಿ! ಅಲ್ಲದೆ ನಿಮ್ಮ ನೆರೆಹೊರೆಯವರಿಗೂ ಸಿಡುಬು ವ್ಯಾಧಿಯಿಂದುಂಟಾಗುವ ಅಪಾಯವನ್ನೂ, ಸಿಡುಬು ಹಾಕಿಸಿಕೊಳ್ಳುವುದರಲ್ಲಿರುವ ಗುಣಭಾಗವನ್ನೂ ತಿಳಿಯಪಡಿಸಿರಿ.

ಮದರಾಸ್ ಆರೋಗ್ಯಸಮಿತಿ.

ಶರೀರಕ್ಕೂ ಮನಸ್ಸಿಗೂ ಇರುವ ಸಂಬಂಧವೆಂತದು?

ಸ್ನಾಯುಗಳ ಅಥವಾ ಮಾಂಸ ಗ್ರಂಥಿಗಳ ಚಲನದಿಂದ ಮನಸ್ಸಿನಲ್ಲಿ ಉಂಟಾಗತಕ್ಕ ಪರಿಣಾಮವು ಬಹಳಮುಖ್ಯವಾದುದು. "ಒಳ್ಳೆಯ ಶರೀರದಲ್ಲಿ ಒಳ್ಳೆಯಬುದ್ಧಿ" ಯೆಂದು ಲ್ಯಾಟಿನ್ ಭಾಷೆಯಲ್ಲಿ ಸುಪ್ರಸಿದ್ಧವಾದ ಒಂದು ನಾಣ್ಣುಡಿಯುಂಟು. ಆದರೆ, ಇದರ ತತ್ವವೇನೆಂಬುದು ಜನಸಾಮಾನ್ಯಕ್ಕೆಲ್ಲ ಚೆನ್ನಾಗಿ ತಿಳಿದಿರಲಾರದು.

ಮಿದುಳಿನ ಒಂದು ಭಾಗದಿಂದ ಪ್ರೇರಿಸಲ್ಪಟ್ಟಾಗಲೇ ಸ್ನಾಯುಗಳಿಗೆ ಸಮಯೋಚಿತವಾದ ಚಲನಗಳು ಏರ್ಪಡುವುವೇ ಹೊರತು, ಆ ಮಿದುಳಿನ ಪ್ರೇರಣೆಯಿಲ್ಲದೆ ಅವಯವಗಳು ಚಲಿಸಲಾರವು. ಮಿದುಳಿನಲ್ಲಿ ಯಾವುದಾದರೂ ಒಂದು ವ್ಯಾಪಾರದಲ್ಲಿ ಪ್ರವರ್ತಿಸಬೇಕೆಂಬ ಇಚ್ಛೆಯು ಅಂಕುರಿಸಿದೊಡನೆ, ಆ ಮಿದುಳಿನಿಂದ ಶಾಖೋಪಶಾಖೆಗಳಾಗಿ ಹೊರಟಿರುವ ಜ್ಞಾನನಾಡಿಗಳು, ಮಾಂಸಗ್ರಂಥಿಗಳಲ್ಲಿ (ಸ್ನಾಯುಗಳಲ್ಲಿ)ಆಯಾಕಾರ್ಯಗಳು ನಡೆಯುವಂತೆ ಮಾಡುವುವು. ಆದುದರಿಂದ ಶರೀರಾವಯವಯವಗಳಲ್ಲಿ ಮನುಷ್ಯನ ಉದ್ದೇಶಪೂರ್ವಕವಾಗಿ ಚಲನ ವ್ಯಾಪಾರಗಳು ನಡೆಯುತ್ತಿದ್ದ ಹಾಗೆಲ್ಲಾ ಅದಕ್ಕೆ ಪ್ರೋತ್ಸಾಹಕಗಳಾದ ನಾಡಿಗಳೊಳಗೆ ಕಾರ್ಯೋತ್ಸಾಹವಿದ್ದೇ ಇರಬೇಕು. ಆದುದರಿಂದ ಶಾಸ್ತ್ರೀಯವಾದ ವ್ಯಾಯಾಮಕಾಲಗಳಲ್ಲಿ ನಡೆಯುವ !ಅವಯವವ್ಯಾಪಾರಗಳಿಂದ ಆಯಾಶರೀರಭಾಗಗಳಿಗೆ ಮಾತ್ರವಲ್ಲದೆ, ಮನಸ್ಸಿಗೂ ಆ ವ್ಯಾಯಾಮದ ಫಲವುಂಟೆಂದು ಒಪ್ಪಲೇಬೇಕಾಗುವುದಲ್ಲವೆ.

ಶ್ವಾಸೋಚ್ಛ್ವಾಸಗಳೂ ಮನಸ್ಸಿನ ಆರೋಗ್ಯವೂ.

ದೀರ್ಘವಾಗಿ ಉಸಿರನ್ನೆಳೆದು ಬಿಡುವ ಸಾಧನೆಯಿಂದಲೂ ಮನಸ್ಸಿನ ಆರೋಗ್ಯಕ್ಕೆ ಬಹಳ ಸಹಾಯವುಂಟು. ಈ ಬಗೆಯ ಶ್ವಾಸಸಾಧನೆಯಿಂದ ನರಗಳಿಗೆ ಪುಷ್ಟಿಯೂ, ಬಲವಳಿಕೆಯೂ, ಹಿತವೂ ಉಂಟಾಗುವುವು. ಪ್ರಾಣವಾಯುವನ್ನು (ಆಕ್ಸಿಜನ್) ಶ್ವಾಸಿಸುವುದರಿಂದ ನಮಗೆ ಎಷ್ಟುಮಟ್ಟಿಗೆ ಪ್ರಯೋಜನವೆಂದು ಸಾಮಾನ್ಯವಾಗಿ ನಾವು ತಿಳಿದಿರುವೆವೋ, ಅದಕ್ಕಿಂತಲೂ ಎಷ್ಟೋ ವಿಧವಾದ ಗುಣಾಂಶಗಳು ಅದರಲ್ಲಿವೆ. ಅದು ನಮ್ಮ ರಕ್ತವನ್ನು ಶುದ್ಧಿಮಾಡುವುದುಮಾತ್ರವಲ್ಲ. ಚಿಂತೆ, ಭಯ, ಕ್ರೋಧ ಮುಂತಾದುವುಗಳಿಂದ ವ್ಯಾಕುಲಿತವಾದ ಮನಸ್ಸಿಗೆ ಶುದ್ಧವಾದ ಗಾಳಿಯು ತಿಳಿವನ್ನು ಕೊಟ್ಟು ಆಪ್ಯಾಯನಕರವಾಗುವುದು. ಈ ಅಮೂಲ್ಯ ಪ್ರಯೋಜನವನ್ನು ಅವರವರು ಅನುಭವದಿಂದ ತಿಳಿಯಬಹುದು. ದೀರ್ಘಶ್ವಾಸದ ವ್ಯಾಯಾಮವು ಬುದ್ಧಿಯನ್ನು ಕುದಿರಿಸುವುದು. ಮನಸ್ಸಿಗೆ ಸ್ಥೈರ್ಯವನ್ನು ಕೊಡುವುದು. ಈ ದೀರ್ಘಶ್ವಾಸದ ಪ್ರಯೋಜನವೇನೆಂಬುದನ್ನು ಕುರಿತು ವಿಚಾರಿಸುವುದಕ್ಕೆ ಮೊದಲು, ಆ ಸಾಧನೆಯನ್ನು ನಾವು ಮಾಡಿದರೆ ಅದರಿಂದ ಜ್ಞಾನ ನಾಡಿಗಳೆಲ್ಲಾ ವಿಕಾಸಹೊಂದಿ ಅದ ಫಲವು ಸುಲಭವಾಗಿ ಅನುಭವಕ್ಕೆ ಬರುವುವು. ಆಗಲೇ ಅಂಕುರಿಸುತ್ತಿರುವ ಬುದ್ಧಿವಿಕಲ್ಪಕಟಿತಿಶೂಲೆ, ಕಪಾಲಶೂಲೆ, ನಿದ್ರೆಬಾರದಿರುವುದು, ಈ ಮುಂತಾದ ಅಸ್ವಸ್ಥತೆಗಳಿಗೆಲ್ಲಾ ದೀರ್ಘಶ್ವಾಸವು ಬಹಳ ಗುಣಕಾರಿ.

ಬೆನ್ನುಹುರಿಯ ವ್ಯಾಯಾಮಗಳು.

ನರಗಳ ಶಕ್ತಿಯನ್ನು ಉತ್ತೇಜನ ಗೊಳಿಸುವುದಕ್ಕೆ ಬೆನ್ನು ಹುರಿಯ ವ್ಯಾಯಾಮವು ಬಹಳಮುಖ್ಯವು. ಈ ವ್ಯಾಯಾಮವು ಜಠರ, ಜೀರ್ಣಾಂಗ, ಮಲವಿಸರ್ಜನಾಂಗ, ಇವಕ್ಕೆಲ್ಲಾ

ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುವುದು ಶಾಸ್ತ್ರೀಯವಾದ ವ್ಯಾಯಾಮಕ್ರಮದಿಂದ ಬೆನ್ನುಮೂಳೆಯನ್ನು ಬಗ್ಗಿಸುವುದು, ಮತ್ತು ನೀಡುವುದು, ಇಂತಹ ಕೆಲಸ ಕೊಡುವುದರಲ್ಲಿ ಆ ಮೂಳೆಯು ದೃಢವಾಗಿ ಮತ್ತು ಸರಿಯಾಗಿ ಕೆಲಸ ಮಾಡುವುದು. ಈ ಮೂಲಕ ಬೆನ್ನು ಹುರಿಗೆ ಕೂಡ ಆ ವ್ಯಾಯಾಮದ ಫಲವು ಉಂಟಾಗಿ, ಅದು ಮಿದುಳಿಗೆ ಉತ್ತೇಜನಕೊಡುವುದು. ಇದರಿಂದ ಈ ಸಾಧನೆಯು ಶರೀರಕ್ಕೆ ಹ್ಯಾಗೋ ಹಾಗೆ ಮನಸ್ಸಿಗೂ ಪುಷ್ಟಿಯನ್ನು ಕೊಡುವುದು.

ಮನಸ್ಸು ದೇಹವ್ಯಾಧಿಗೆ ಕಾರಣವಾಗಬಹುದೆ?

ಮನಸ್ಸು ವ್ಯಾಧಿಗೆ ಕಾರಣವಾಗಬಹುದಾದ ಸಂದರ್ಭಗಳೂ ಉಂಟು. ಮನಶ್ಶಾಸ್ತ್ರ, ಶಾರೀರಶಾಸ್ತ್ರಗಳೆರಡನ್ನೂ ಪರಿಶೀಲನಮಾಡಿದ ವಿದ್ವಾಂಸರನೇಕರು, ಅಂತಹ ಅನೇಕನಿದರ್ಶನಗಳನ್ನು ಕಂಡುಹಿಡಿದು ನಿರೂಪಿಸಿರುವರು. ದೇಹದಲ್ಲಿ ನಿಜವಾಗಿ ವ್ಯಾಧಿಯು ತಲೆದೋರದಿದ್ದರೂ, ಒಬ್ಬ ಮನುಷ್ಯನಿಗೆ ತನ್ನ ದೇಹದಲ್ಲಿ ವ್ಯಾಧಿಯುಂಟೆಂಬ ಶಂಕೆ ಹುಟ್ಟಿದರೆ, ಆ ವ್ಯಾಧಿಯಿದ್ದುದಕ್ಕಿಂತ ಅವನು ಹೆಚ್ಚು ಬಾಧೆಪಡುವುದುಂಟು. ಶರೀರವ್ಯಾಯಾಮದ ಬಲದಿಂದ ಅಂತಹ ಮನೋವ್ಯಾಕುಲತೆಗಳೂ ನೀಗಬಹುದು. ಅಂಗಸಾಧನೆಮಾಡತಕ್ಕವರಿಗೆ ತಾವು ಬೇರೆಯವರಿಗಿಂತ ಅರೋಗ ದೃಢಕಾಯರೆಂಬ ಒಂದು ಹೆಮ್ಮೆಯೂ, ದೃಢವಾದ ನಂಬಿಕೆಯೂ ಇರುವುದರಿಂದಲೇ, ಅವರಿಗೆ ಸಾಧಾರಣವಾದ ಕುಂಟುರೋಗಗಳೇನೂ ತೋರುವುದೇ ಇಲ್ಲ. ಈ ಕಾರಣಗಳಿಂದ ಶರೀರ ವ್ಯಾಯಾಮವೂ, ರೋಗಗಳನ್ನು ನಿವಾರಿಸಬಹುದೆಂಬ ದೃಢವಾದ ನಂಬಿಕೆಯೂ ಒಬ್ಬನಲ್ಲಿ ಕಲೆತಿದ್ದರೆ, ಅವನ ಸರ್ವಾವಯವಗಳೂ ತಮ್ಮತಮ್ಮ ಕೆಲಸಗಳನ್ನು ಸರಿಯಾಗಿ ನಡೆಸುತ್ತಹೋಗುವುವು. ಮುಖ್ಯವಾಗಿ, ಹೃದಯದ ಚಲನವೂ, ರಕ್ತಸಂಚಾರವೂ ಅಂತವರಲ್ಲಿ ಕ್ರಮವಾಗಿ ನಡೆಯುತ್ತಿರುವುವು. ಆರೋಗ್ಯಕ್ಕೆ ಇವೇ ಮೂಲಾಧಾರಗಳು.

ದೇಹದಲ್ಲಿ ದುರ್ಬಲರಂತೆ ತೋರಿದವರೂ ಕೂಡ, ಬಹುವರ್ಷಗಳವರೆಗೆ ಬದುಕಿದುದಕ್ಕೆ ಎಷ್ಟೋನಿದರ್ಶನಗಳಿವೆ ಅಂತವರು ತಮ್ಮ ಮನೋದಾರ್ಢ್ಯದಿಂದಲೇ ರೋಗಗಳನ್ನು ದೂರ ಮಾಡಿರುವರೆಂದು ತಿಳಿಯಬೇಕು. ಹೀಗೆ ಮನಸ್ಸಿನ ದಾರ್ಢ್ಯವೊಂದೇ ರೋಗಗಳನ್ನು ನಿವಾರಿಸಿ, ದುರ್ಬಲರನ್ನೂ ಚಿರಜೀವಿಗಳನ್ನಾಗಿ ಮಾಡಿರುವಾಗ, ಅದರೊಡನೆ ಶರೀರವ್ಯಾಯಾಮಗಳಿಂದ ದೇಹಬಲವನ್ನೂ ಕಾಪಾಡಿಕೊಳ್ಳುವವರಿಗೆ "ಅಧಿಕಸ್ಯಾಧಿಕಂ ಫಲಂ" ಎಂಬಂತೆ ಆಧಿಕ ಫಲವು ದೊರೆಯುವುದರಲ್ಲಿ ಸಂದೇಹವೇನಿದೆ.

ಬೇರೆ ಕೆಲವು ವಿಶೇಷಲಾಭಗಳು.

ಇದಲ್ಲದೆ ನಾವು ಯಾವಯಾವ ಅವಯವಗಳ ಪುಷ್ಟಿಯನ್ನೂ, ಶಕ್ತಿ ವೃದ್ಧಿಯನ್ನೂ, ಉದ್ದೇಶಿಸಿ, ವ್ಯಾಯಾಮಗಳನ್ನು ಮಾಡುವೆವೋ, ಆಯಾ ಅಂಗಸಾಧನೆಯಕಾಲದಲ್ಲಿ ಅದೇಗಮನದಿಂಧ ಮಾಡುವಾಗ, ಅದರಿಂದ ಮನಸ್ಸಿಗೂ ನೇರವಾಗಿ ಒಂದು ತರದ ವ್ಯಾಯಾಮವುಂಟಾಗಿ, ಆ ಮೂಲಕ ಏಕಾಗ್ರಚಿತ್ತತೆಯೂ,ಮನೋದಾರ್ಢ್ಯವೂ ಸ್ಥಿರಪಡುವುದು. ಇಂತಹ ವ್ಯಾಯಾಮಗಳಿಂದ, ತಾಳ್ಮೆ, ಅಥವಾ ಸಹನಶಕ್ತಿ, ಧೈರ್ಯ ಮುಂತಾದ ಮಾನಸಿಕಗುಣಗಳೆಲ್ಲ ಅಭ್ಯಾಸಕ್ಕೆ ಬರುವುವು. ಇಂತಹ ಮಾನಸಿಕ ಗುಣಗಳು ಏರ್ಪಟ್ಟಹಾಗೆಲ್ಲ ದುರ್ವ್ಯಸನಗಳಲ್ಲಿ ಪ್ರವರ್ತಿಸದಂತೆ ಇಂದ್ರಿಯ ನಿಗ್ರಹಶಕ್ತಿಯೂ ರೋಗಾದಿಗಳಿಗೆ ಕಾರಣವಿಲ್ಲದಂತೆ ಎಲ್ಲಾ ಭಾಗಗಳಲ್ಲಿಯೂ ಮಿತಪ್ರವರ್ತನೆಯೂ, ಅಭ್ಯಾಸಕ್ಕೆ ಬರುವುವು.

ಇವು ಹೊರತು ಈ ಭಾಗದಲ್ಲಿ ಅನುಸರಿಸಬೇಕಾದ ಬೇರೆ ಕೆಲವು ಆತ್ಮೀಯನಿಯಮಗಳುಂಟು. ಆತ್ಮಕ್ಷೇಮ ಚಿಂತಕರೊಬ್ಬೊಬ್ಬರೂ ಆ ನಿಯಮಗಳನ್ನೂ ತಪ್ಪದೆ ಅನುಸರಿಸಬೇಕು.

(1) ಆಹಾರನಿಯಮ.

ಒಂದು ಊಟಕ್ಕೂ, ಮತ್ತೊಂದು ಊಟಕ್ಕೂ ನಡುವೆ ಕೊನೆಯಪಕ್ಷ ಐದು ತಾಸುಗಳ ಅಂತರವಿರಬೇಕು.

ಆಹಾರ ಪದಾರ್ಥಗಳನ್ನು ಆದಷ್ಟು ಸಂಪೂರ್ಣವಾಗಿ ಅಗಿದು ನುಂಗಬೇಕು. ಅಗಿದಷ್ಟೂ ಒಳ್ಳೆಯದು. ಈ ವಿಧಾನದಿಂದ ಅನ್ನಕೋಶವು ಆರೋಗ್ಯಸ್ಥಿತಿಯಲ್ಲಿರುವುದಲ್ಲದೆ, ನಮ್ಮ ಅಜಾಗರೂಕತೆಯಿಂದ ರೊಗಬೀಜಗಳು ಒಂದು ವೇಳೆ ಜಠರಗತವಾದರೂ ಅವುಗಳನ್ನು ಧ್ವಂಸ ಮಾಡಲು ಅನ್ನಕೋಶವು ತಕ್ಕಷ್ಟು ಬಲಹೊಂದುವುದು.

ಮಿತಿಯಿಲ್ಲದೆ ತಿನ್ನುವುದಾಗಲಿ, ನಿಶಾ ಪದಾರ್ಥಗಳ ಸೇವನೆಯಾಗಲಿ, ಸನ್ನಿಪಾತಕ್ಕೂ, ರಕ್ತಭೇದಿಗೂ ಕಾರಣವಾಗಿ ಪರಿಣಮಿಸುವುದು.

(2) ದಂತಶುದ್ಧಿ.

ಹಲ್ಲುಗಳನ್ನೂ, ವಸಡುಗಳನ್ನೂ ಪ್ರತಿದಿನವೂ ಚೆನ್ನಾಗಿ ಉಜ್ಜಿ ಶುಚಿ ಗೊಳಿಸಬೇಕು. ಅವಶ್ಯತೋರಿದರೆ ಹಲ್ಲುಗಳನ್ನು ಡಾಕ್ಟರಮೂಲಕ ಪರೀಕ್ಷೆಮಾಡಿಸಿ, ತಕ್ಕ ಚಿಕಿತ್ಸೆಗಳನ್ನೂ, ಉಪಚಾರಗಳನ್ನೂ ಮಾಡಿಸಬೇಕು.

(3) (ಇನಾಕ್ಯುಲೇಷ್ಣ).

ಮೇಲ್ಕಂಡ ರೋಗಗಳು ಎಂದರೆ ಸನ್ನಿಪಾತ ಅಥವಾ ರಕ್ತಭೇದಿ (ಆಮಶಂತೆ) ಇವು ಅಲ್ಲಲ್ಲಿ ಪ್ರಬಲವಾಗಿದ್ದ ಕಡೆಗಳಲ್ಲಿ ವಾಸಿಸತಕ್ಕವರು, ಅಂತಹ ರೋಗಗಳನಿವಾರಣೆಗಾಗಿ ಏರ್ಪಟ್ಟ "ಇನಾಕ್ಯುಲೇಷ್ಣ" ಮಾಡುವವರಿದ್ದಾರೆ, ಮತ್ತು ಸ್ಯಾನಿಟೆರಿ ಇಲಾಖೆಯ ಅಧಿಕಾರಿಗಳಾಗಲಿ, ಡಾಕ್ಟರುಗಳಾಗಲಿ ಅನುಮತಿಸಿದರೆ ಅಂತಹ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದು ಒಳ್ಳೆಯದು.

ಸನ್ನಿಪಾತಜ್ವರ ಮತ್ತು ರಕ್ತಭೇದಿ.

(ಇವುಗಳನ್ನು ನಿವಾರಣೆಮಾಡುವ ಉಪಾಯಗಳು.)

ಸನ್ನಿಪಾತಜ್ವರವೂ,ರಕ್ತಭೇದಿಯೂ ವಾಂತಿಭೇದಿಯ ಹಾಗೆಯೇ ಸಾಂಕ್ರಾಮಿಕ ರೋಗಗಳು; ಎಂದರೆ, ಒಬ್ಬರೋಗಿಯಿಂದ ಮತ್ತೊಬ್ಬನಿಗೆ ಈ ರೋಗಗಳು ಹಗಡುವುವು. ಹಿಂದೂದೇಶದಲ್ಲಿ ಜನಗಳು ಈ ರೋಗಗಳಿಂದ ಬಹಳವಾಗಿ ಸಾಯುವರು; ಈ ರೋಗ ಹಿಡಿದವರು ಗುಣಹೊಂದಿದನಂತರವೂ, ಬಹುಕಾಲದವರೆಗೆ ಆರೋಗ್ಯಕೆಟ್ಟು ನರಳುವದು ಮಾತ್ರವಲ್ಲದೆ,ಕೆಲವೇಳೆ ಪ್ರಾಣಾಂತದವರೆಗೆ ಇದರ ಪರಿಣಾಮಗಳು ಇಪ್ಪೇ ಇರುವುವು. ಈರೋಗಗಳು, ಸೂಕ್ಷ್ಮವಾದ ರೋಗಬೀಜಗಳಿಂದ ಉಂಟಾಗುವುವು. ಈ ರೋಗಗಳಿಂದ ನರಳುವ ಜನರ ಮಲಮೂತ್ರಗಳಲ್ಲಿ ಈ ಅಂಟುರೋಗಗಳ ಬೀಜಗಳು ಲೆಕ್ಕವಿಲ್ಲದಷ್ಟು ಸಿಗುವುವು. ಕೆಲವರು ಆರೋಗ್ಯವಾಗಿದ್ದು ರೋಗಹಿಡಿಯದಂತಿದ್ದರೂ, ರೋಗಬೀಜಗಳಿಗೆ ಆಶ್ರಯಸ್ವರೂಪರಾಗಿರುವುದುಂಟು. ಇಂಥವರು ಇಡೀಸಮಾಜಕ್ಕೆ ಅಥವಾ ಕೂಟಕ್ಕೇ ಒಂದು ನಿರಂತರವಾದ ಗಂಡಾಂತರವಾಗಿರುವರು, ಏಕೆಂದರೆ, ತಮ್ಮ ಮಲಮೂತ್ರಗಳದ್ವಾರಾ ಇವರು ಈ ಅಂಟು ರೋಗಗಳ ಬೀಜಗಳನ್ನು ಜನಸಮುದಾಯದಲ್ಲಿ ಹರಡಿಸುವರು. ಅಂಥ ಸಂದರ್ಭಗಳಿಗೆ ಅನುಸಾರವಾಗಿ, ಇವರನ್ನು ಸನ್ನಿಪಾತಜ್ವರಕ್ಕೆ ಅಥವಾ ಉಷ್ಣಭೇದಿರೋಗಕ್ಕೆ "ವಾಹಕರು" ಎಂದೆನ್ನಬಹುದು

ವಾಂತಿಭೇದಿಯ ರೋಗವು ಯಾವರೀತಿಯಲ್ಲಿ ರೋಗಿಗಳಿಗೆ ಅಂಟುವುದೋ, ಅದೇ ರೀತಿಯಲ್ಲಿ ಇವೆರಡೂ ಅಂಟುವುವು. ಆದುದರಿಂದ, ವಾಂತಿಭೇದಿಯ ಸೊಂಕು ತಟ್ಟದಹಾಗೆ ಏನೇನು ಮಾಡಬೇಕೆಂದು ಹೇಳಿದೆಯೊ, (ಹಿಂದೆ ಪ್ರಕ

ಟಿಸಿದ ಪತ್ರಗಳನ್ನು ನೋಡಿರಿ) ಆ ಉಪಾಯಗಳಿಮೂಲಕ ಇವೆರಡು ರೋಗಗಳ ಸೊಂಕನ್ನೂ ಹೋಗಲಾಡಿಸಿಕೊಳ್ಳಬಹುದಾಗಿದೆ.

ರೋಗಬೀಜಗಳಿಂದ ದೂಷಿತವಾದ ವಸ್ತುಗಳು ನೀರಲ್ಲಿ ಸೇರುವುದರಿಂದ, ನೀರನ್ನು ಕೆಡಿಸಿ, ತನ್ಮೂಲಕವಾಗಿ ಅಂಟುರೋಗಗಳು ಹರಡುವಂತೆ ಮಾಡುವುವು. ಇಂಥ ಕಶ್ಮಲಗೊಂಡ ನೀರನ್ನು ಕುಡಿಯುವುದು, ಅದನ್ನು ಹಾಲಿಗೆ ಬೆರಸುವುದು ಅಂಥ ನೀರನ್ನು ಭೋಜನೋಪಕರಣಗಳನ್ನು ತೊಳೆವುದಕ್ಕೆ ಉಪಯೋಗಿಸುವುದು, ಹಣ್ಣುಗಳನ್ನಾಗಲಿ, ಕಾಯಿಪಲ್ಯವನ್ನಾಗಲಿ ಶುಚಿಮಾಡುವೆವೆಂದು ಈ ನೀರಿಂದಲೇ ತೊಳೆವುದು, ಇವೆಲ್ಲ ಈ ರೋಗಬೀಜಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡಿಕೊಳ್ಳಲು ಕಾರಣವಾಗಿದೆ. ಚಿರಂಡಿಗಳ ನೀರೆಲ್ಲವೂ ಸಮುದ್ರಕ್ಕೆ ಹರಿದು ಹೋಗುವುದಾದರೆ ಮತ್ತು ಅಂಥ ಸ್ಥಳಗಳಲ್ಲಿ ಚಿಪ್ಪುಮೀನುಗಳು ಬೆಳೆಯುತ್ತಿವೆಯಾದರೆ, ಅಂಥ ಚಿಪ್ಪುಮೀನುಗಳೂ ಈ ರೋಗಗಳ ಸೊಂಕನ್ನು ಸುಲಭವಾಗಿ ಹರಡಿಸುವುವು. ಸೊಂಕನ್ನು ಹರಡುವುದರಲ್ಲಿ ನೊಣಗಳೂ, ಕೊಂಚ ಕಡಿಮೆಯಾಗಿ ದೂಳೂ ಕಾರಣಗಳು.,ಮನುಷ್ಯರ ಮಲಮೂತ್ರಗಳಲ್ಲಿ ಜೀವಿಸುವುದೇ ನೊಣಗಳ ಅಭ್ಯಾಸವು. ಅವು ತಮ್ಮ ಕಾಲುಗಳ ಮತ್ತು ತಮ್ಮ ಕರುಳುಗಳ ಮೂಲಕ ರೋಗಬೀಜಗಳನ್ನು ಕೊಂಡೊಯ್ಯುವುವು. ಈ ನೊಣಗಳೇ ಅಲ್ಲಿಂದಬಂದು ನಮ್ಮ ಆಹಾರದ ಪಾತ್ರಗಳಮೇಲೆ, ಆಹಾರದ ಮೇಲೆ ಕುಳ್ಳಿರುವುವು. ನಮ್ಮ ಹಾಲಿನಲ್ಲಿ ಬೀಳುವುವು. ಇವು ರೋಗಬೀಜಗಳನ್ನು ಮಡಗುತ್ತ ಸಂಚರಿಸುವುವು. ಈ ರೋಗಬೀಜಗಳಿಗೂ ಅನುಕೂಲವಾದ ಆಹಾರವು ಒರೆತಕೂಡಲೆ, ಅವು ಅಸಂಖ್ಯಾಕವಾಗಿ ಬೆಳೆಯುತ್ತವೆ ; ಅವು ಬೆಳೆಯುವ ಮತ್ತು ವೃದ್ಧಿಹೊಂದುವ ಕ್ರಮವು ಅದ್ಭುತನಾಗಿದೆ ; ಒಂದೇ ಒಂದು ರೋಗಬೀಜವು ಕೆಲವು ತಾಸುಗಳೊಳಗಾಗಿ, ಹತ್ತುಲಕ್ಷ ಬೀಜಗಳಷ್ಟು ವೃದ್ಧಿ ಹೊಂದುವುದು! ಈರೋಗಬೀಜಗಳು ಹೀಗೆ ವೃದ್ಧಿಹೊಂದುವಹಾಗೆ, ವಿಶೇಷ ಸಹಾಯವನ್ನು ಮಾಡುವ ದ್ರವ್ಯಗಳಲ್ಲಿ ಹಾಲು ಬಹಳ ಮುಖ್ಯವಾದುದು.

ಹೀಗಿರುವುದರಿಂದ, ರೋಗಿಯಿಂದ, ಈ ಅಂಟುರೋಗಗಳ ಸೊಂಕು ಹರಡದಹಾಗೆ ಮಾಡಬೇಕಾದರೆ, ಈ ಕೆಳಗಣ ನಿಯಮಗಳನ್ನು ಇಟ್ಟುಕೊಳ್ಳಬೇಕು.

1 ರೋಗಿಗಳ ಮಲಮೂತ್ರಾದಿಗಳನ್ನು ಸುಟ್ಟುಹಾಕುವುದರಿಂದ, ಅಥವಾ ಅವುಗಳ ಪರಿಮಾಣಕ್ಕೆ ಇಮ್ಮಡಿಯಷ್ಟು ಫಿನೈಲ್ ದ್ರಾವಕದೊಡನೆ ಬೆರಸಿ (20 ಪಾಲು ನೀರಿಗೆ ಒಂದಂಶ ಫಿನೈಲ್ ಬೆರಸಿದರೆ ಈಬಗ್ಗೆ ಬೇಕಾದ ದ್ರಾವಕವನ್ನು ಸಿದ್ಧಪಡಿಸಬಹುದು) ಎರಡು ತಾಸುಗಳವರೆಗೆ ಹಾಗೆಯೇ ಇರಿಸತಕ್ಕುದು.

2. ರೋಗಿಯು ಮಲಗಿದ ಹಾಸಿಗೆ, ವಸ್ತ್ರಗಳು, ಆಹಾರಪಾತ್ರ ಮೊದಲಾದುವೆಲ್ಲವನ್ನೂ ಫಿನೈಲ್‌ನಲ್ಲಿ ಅದ್ದಬೇಕು ಅಥವಾ ಜೆನ್ನಾಗಿ ಕುದಿಸಬೇಕು. ತಲೆದಿಂಬುಗಳನ್ನೂ ದಪ್ಪನಾದ ಹಾಸುಗೆಗಳನ್ನೂ ಕುದಿಸಲಾಗದಂಥ ಇತರ ಎಲ್ಲಪದಾರ್ಥಗಳನ್ನೂ, ಬಿಸಿಲಿನಲ್ಲಿ, ಒಂದು ದಿನದವರೆಗೆ ಮಡಗತಕ್ಕುದು.

3. ರೋಗಿಗಳ ಉಪಚಾರವನ್ನು ಮಾಡುವವರು, ರೋಗಿಯ ಕೋಣೆಯಿಂದ ಹೊರಕ್ಕೆ ಬರುವಮೊದಲೇ ತಮ್ಮ ಕೈಕಾಲುಗಳನ್ನು ಜೆನ್ನಾಗಿ ಸ್ವಚ್ಛವಾಗಿ ತೊಳೆಯತಕ್ಕುದು.

4. ರೋಗಿಯನ್ನು ನೊಣಗಳು ಮುತ್ತದಂತೆ ಜಾಗ್ರತೆ ಇಡತಕ್ಕುದು. ಎಲ್ಲ ಕಾಲಗಳಲ್ಲೂ, ಎಲ್ಲ ಗೃಹಸ್ಥರೂ (ಕುಟುಂಬಗಳೂ) ಈ ನಿಯಮಗಳನ್ನು ಅನುಸರಿಸುವುದರಲ್ಲಿ ಜಾಗರೂಕರಾಗಿರತಕ್ಕುದು.

5. ಕುಡಿಯುವ ನೀರನ್ನೂ, ಹಾಲನ್ನೂ, ಜೆನ್ನಾಗಿ ಕುದಿಸದೆ ಉಪಯೋಗಿಸಕೂಡದು ; ನೊಣಗಳಿಂದ ಇವನ್ನು ಕಾಪಾಡತಕ್ಕುದು.

6. ಆಹಾರಗಳನ್ನು ಸಿದ್ಧಪಡಿಸುವವರೂ, ಬಳಸುವವರೂ, ಆಹಾರವನ್ನುಣ್ಣುವವರೂ ಸಹ ತಮ್ಮ ಕೈಗಳನ್ನು ತೊಳೆದುಕೊಳ್ಳದೆ ಆ

ಹಾರವನ್ನು ಮುಟ್ಟಕೂಡದು, ಆಹಾರವು ಸಿದ್ಧವಾದನಂತರ ಬಟ್ಟಲಲ್ಲಿ ಇರುವಷ್ಟುಕಾಲ, ಸೊಣಗಳ ಹಾವಳಿಯಿಂದ ಕಾಪಾಡತಕ್ಕುದು.

7. ಸಾಮಾನ್ಯವಾದ ಕಾಯಿಪಲ್ಯಗಳನ್ನೆಲ್ಲಾ ಬೇಯಿಸಿಯೇ ತಿನ್ನುವುದು ಹಿತಕರ. ಬೇಯಿಸದೆ ತಿನ್ನುವುದಾದರೆ, ಕುದಿವ ನೀರಲ್ಲಿ ಅವನ್ನು ತೊಳೆದು ಸ್ವಚ್ಛಗೊಳಿಸಬೇಕು. ತಿನ್ನುವೊಪಲು ಸಿಪ್ಪೆಗಳನ್ನು ಕಿತ್ತುಬಿಡಬಹುದಾದ ಹಣ್ಣುಗಳನ್ನು ತಿನ್ನುವುದರಲ್ಲಿ ಅಪಾಯವು ಕಡಿಮೆ.

8. ಎಲ್ಲ ಉಪಕರಣಗಳನ್ನೂ ಕುದಿಯುವ ನೀರಲ್ಲಿ ತೊಳೆದು ಸೊಣಗಳಿಂದ ಕಾಪಾಡಬೇಕು. ಪಾತ್ರಗಳನ್ನು ಮುಚ್ಚುವ ವಸ್ತ್ರಗಳು ಮುಂತಾದವನ್ನೂ ಇದರಂತೆ ಶುಚಿಗೊಳಿಸಬೇಕು

ಹೇನುಗಳು.

ಇವು ಸಣ್ಣ ಜೀವಿಗಳಾದರೂ. ಇವುಗಳಿಂದ ಆಗುವ ಅನರ್ಥಗಳು ಅಪಾರವಾಗಿವೆ. ಅದರಲ್ಲಿಯೂ ಈಚೆಗೆ ಸಾವಿರಾರು ಮರಣಗಳನ್ನುಂಟುಮಾಡುತ್ತಿರುವ "ಮರುಕೊಳಿಸುವ ಜ್ವರ"ವೆಂಬ ಹೊಸದೊಂದು ಸೊಂಕುಜಾಡ್ಯಕ್ಕೆ ತಲೆಯ ಹೇನುಗಳೇ ಕಾರಣವೆಂದು ಚೆನ್ನಾಗಿ ತಿಳಿಯಬಂದಿದೆ. ಅಶುದ್ಧವಾದ ಚರ್ಮರಂಧ್ರಗಳಲ್ಲಿ ಇವು ತಾನಾಗಿ ಉತ್ಪತ್ತಿಯಾಗುವುವು. ಮಕ್ಕಳ ತಲೆಯಲ್ಲಿ ಇವು ವಿಶೇಷವಾಗಿ ಹೆಚ್ಚುವುವು. ಹೇನುಗಳು ಹೆಚ್ಚಿದರೆ ತಲೆ ಹುಣ್ಣಿಗೆ ಕಾರಣವಾಗುವುದು. ಈ ಹೇನುಗಳು ಹೆಚ್ಚುವಹಾಗೆ ಕಂಡು ಬಂದೊಡನೆ ತಂದೆತಾಯಿಗಳು ಮಕ್ಕಳ ತಲೆಯಲ್ಲಿ ಕೂದಲನ್ನು ಸಂಪೂರ್ಣವಾಗಿ ತೆಗೆಸಿಬಿಡಬೇಕು. ಅಪಕ್ಕೆ ಲಜ್ಜೆಪಟ್ಟರೆ ಅನರ್ಥಕಾರಣವು. ಹಾಗೆ ಇಷ್ಟವಿಲ್ಲದವರು ಶೀಮೆಯೆಣ್ಣೆಯನ್ನು ತಲೆಗೆ ಸವರಿ ಚೆನ್ನಾಗಿ ಬಾಚಬೇಕು. ಬಟ್ಟೆಬರೆಗಳನ್ನು ಬಿಸಿನೀರಿನಲ್ಲಿ ಹಾಕಿ ಕುದಿಸಬೇಕು.

ಸ್ವೀಕಾರ.

ಈ ಕೆಳಗೆಕಂಡ ಪುಸ್ತಕಗಳನ್ನು ನಾವು ಕೃತಜ್ಞತೆಯೊಡನೆ ಸ್ವೀಕರಿಸಿರುವೆವು.

(1) "ಸಪ್ತಸ್ತ್ರೀಸಾಹಸ" ಈ ಹೆಸರಿನಿಂದಲೇ ಈ ಪುಸ್ತಕದೊಳಗಣ ವಿಷಯವೆಂತದೆಂಬುದು ವಾಚಕರಿಗೆ ತಿಳಿಯಬಹುದು. ಇದು "ವಿಕಟ ವಿನೋದಿನೀ" ಗ್ರಂಥಮಾಲೆಯಿಂದ ಪ್ರಕಟಿತವಾಗಿದೆ. ಗ್ರಂಥಲೇಖಕರು ಎ. ವೆಂಕಟರಾಯಪ್ಪ. ಬೆಲೆ 4 ಆಣೆಗಳು.

(2) "ನನ್ನಭಾವನೆ" ಇದೊಂದು ಧರ್ಮಬೋಧಕವಾದ ಸಣ್ಣ ಪುಸ್ತಕವು. ಸ್ತ್ರೀಬಾಲಕರಿಗೂ ಸುಲಭ ಬೋಧೆಯಾಗುವಂತೆ ಲಲಿತಶೈಲಿಯಿಂದ ಬರೆದ ಗಾನರೂಪವಾದ 14 ಪದ್ಯಗಳಿಂದ, ಅಹಿಂಸಾಧರ್ಮವನ್ನೂ, ದೈವ ಭಕ್ತಿಯನ್ನೂ, ಸಾಮಾನ್ಯ ನೀತಿಗಳನ್ನೂ ಬೋಧಿಸುತ್ತಿದೆ.

(ಇದರ ಸಾವಿರಾರು ಪ್ರತಿಗಳು ಧರ್ಮಶೀಲರಾದ ಮಹಾಶಯರಿಂದ ಅಲ್ಲಲ್ಲಿ ಉಚಿತವಾಗಿ ಹಂಚಲ್ಪಟ್ಟಿವೆ.)

ಇದರ ಲೇಖಕರು ಮತ್ತು ಪ್ರಚಾರಕರು, ಕಲ್ಲನಗೌಡ ಎಲ್ಲನಗೌಡ ಪಾಟೀಲ
ತಿಗಡೊಳ್ಳಿ; ಬೆಲ್ಲಾ ಬೆಳಗಾಂ.

ಕೇಸರಿಯಿಂಬರ "ಔಷಧ."

ಇದು ಸ್ತ್ರೀಯರಿಗೆ ಗರ್ಭಸಂಬಂಧವಾದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು. ಋತುಶೂಲೆ, ಸೂತಿಕಾವಾಯು, ಗರ್ಭವಾತ, ಬಂಜೆತನ, ಕಾಲಕ್ಕೆ ಮೊದಲೇ ಬೇಗಬೇಗನೆ ಋತುವಾಗುವುದು, ಗರ್ಭಸ್ರಾವ ಮುಂತಾಗಿ ಸ್ತ್ರೀಯರಿಗೆ ಸಂಭವಿಸಬಹುದಾದ ಇನ್ನೂ ಅನೇಕ ಮರ್ಮವ್ಯಾಧಿಗಳಿಗೆಲ್ಲಾ ಇದು ಉತ್ತಮೌಷಧವೆನಿಸಿದೆ.

ಬೆಲೆ, 12 ಔನ್ಸಿನ ಬುಡ್ಡಿ 1ಕ್ಕೆ ರೂ, 3—0 —0.
" 6 " " 1—10—0.

ನಿಮ್ಮ ಔಷಧದ ಅಂಗಡಿಗಳಲ್ಲಿಯೇ ಇದನ್ನು ಪಡೆಯಬಹುದು.
ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೇಸರಿ ಕಾಟೀರಂ.

ದೇಶೀಯ ಔಷಧವ್ಯಾಪಾರಿಗಳು. ಎಗ್ಮೋರ್, ಮದರಾಸು.
ಬ್ರಾಂಚು. 18- ಬಳೇಪೇಟೆ. ಬೆಂಗಳೂರು ಸಿಟಿ.
ಟೆಲಿಗ್ರಾಫ್ ಆಡ್ರೆಸ್. "ಕೇಸರಿ" ಮದರಾಸು.

ಝೂ—ಝೂ ವಿಶ್ರಾಂತಿಯ ತೊಟ್ಟಿಲು.



ಇದು ಮಕ್ಕಳಿಗೆ ಆರೋಗ್ಯವನ್ನೂ, ಸೌಖ್ಯವನ್ನೂ, ಸಂತೋಷವನ್ನೂ ಕೊಡುವುದು. ಇದರಲ್ಲಿ ಮಕ್ಕಳು ಕೆಳಗೆ ಬೀಳುವ ಸಂಭವವಿಲ್ಲ. ತಟ್ಟೆಯಾಗಿ ಮಡಿಸಿಡಬಹುದು. ೧೦೦ ಪೌಂಡುಗಳವರೆಗೆ ಭಾರವನ್ನೂ ತಡೆಯಬಲ್ಲುದು. ಇದನ್ನು ಪರೀಕ್ಷಿಸಿ ನಿರ್ಧರಿಸಿದೆ. ಪ್ರಖ್ಯಾತಿಹೊಂದಿದ ಡಾಕ್ಟರುಗಳು, ತಮ್ಮ ಅನುಭವದಿಂದ ಇದರಗುಣವನ್ನು ತಿಳಿದು ಸಿಫಾರ್ಸುಮಾಡಿರುವರು. ಅವುಗಳಲ್ಲಿ ಕೆಲವನ್ನು ಈಕೆಳಗೆ ಕೊಟ್ಟಿದೆ.

"ನಿಮ್ಮ ತೊಟ್ಟಿಲಿನ ಉಪಯೋಗವು ಬಹಳ ತೃಪ್ತಿಯಾಗಿದೆ, ಇನ್ನೂ ಎರಡನ್ನು ಕಳುಹಿಸಿರಿ." ಕ್ಯಾಪ್ಟ್, ವಿ. ಭೂಷಾಮ್. ಐ. ಎಮ್. ಎಸ್. ಡೇರಾ ಇಸ್ಮಾಯಲ್‌ಖಾನ್.

"ಡಾಕ್ಟರ್ ಕ್ಲಫ್‌ರನವರು" ನಿಮ್ಮ ತೊಟ್ಟಿಲನ್ನು ನಮ್ಮ ಕೂಸಿಗಾಗಿ ಸಿಫಾರ್ಸು ಮಾಡಿರುವರು. ಎಫ್. ಬಾಡಿಕಾಟ್, ಮಸ್ಸೂರಿ."

"ನಿಮ್ಮ ಝೂಝೂ ತೊಟ್ಟಿಲನ್ನು ನಾನು ಯಾರ್ಕಾಡಿನಲ್ಲಿ ಲೆಫ್ಟನೆಂಟ್ ಕರ್ನಲ್ ನಾಕ್ಸ್‌ರವರ ಮನೆಯಲ್ಲಿ ನೋಡಿದೆನು. ಅಂತದೊಂದನ್ನು ನನಗೆ ಕಳುಹಿಸಿರಿ. ಸಿ. ಕೆ ಷಾರ್ಟ್, ನಾಗಲೂರ್, ಸೇಲಂ."

ಸ್ವಲ್ಪವೆಚ್ಚದಲ್ಲಿ ನಿಮ್ಮ ಮಕ್ಕಳಿಗೆ ಸುಖಸಂತೋಷಾರೋಗ್ಯಗಳನ್ನು ಕೊಡಬೇಕಾದರೆ ನಮ್ಮ ತೊಟ್ಟಿಲನ್ನು ತರಿಸಿರಿ.

ಬೆಲೆ. ಡಿಲಸೆ ಎಂಬ ಉತ್ತಮ ತೊಟ್ಟಿಲು.	6—0—0.
ಸ್ಪ್ರಿಂಡಾರ್ಡು ಎಂಬ ಸಾಮಾನ್ಯ ತೊಟ್ಟಿಲು.	3—12—0.
ಬಾಂಗಿ ಛಾರ್ಜು.	0—12—0.

ಕೇ ಕೇಸ್, ಕಂಪೆನಿ ನಂ. 15 ಫೀಸ್ ಬಜಾರ್, ಪೋಸ್ಟ್ ಬಾಕ್ಸ್ ನಂ. 32, ಡೆಲ್ಲಿ.

ಸಾಹಿತ್ಯ ವಿಜ್ಞಾನ ಕಲಾಭಿ ಮಾಸಿಗಳೆಲ್ಲಾರೂ ಪ್ರೋತ್ಸಾಹಿಸತಕ್ಕ ಮಾಸಪತ್ರಿಕೆ

ಕರ್ಣಾಟಕ ಕೇಸರಿ.

ಸಂಪಾದಕರು :—ರಾವ್‌ಸಾಹೇಬ ಮೂ. ಅನಂತರಾವ್, ಬಿ.ಏ., ಬಿ.ಎಲ್., ರವರು.
ಪ್ರಕಾಶಕರು :—ಎನ್. ಆನಂದರಾವ್‌ರವರು, ಮ್ಯಾನೇಜರ್, ಹರಿಹರ ಪ್ರೆಸ್,
ಪುತ್ತೂರು, ದಕ್ಷಿಣ ಕನ್ನಡಜಿಲ್ಲಾ.
ವರ್ಷಾವಧಿ ಚಂದಾದರ : (ಅಂಚೆವೆಚ್ಚಸೇರಿ) ರೂ 2—0—0.
ರೂ. 0—4—0 ಯ ಟಪಾಲು ಚೀಟಿಗಳನ್ನು ಕಳುಹಿಸಿದರೆ ಮಾದರಿಗಾಗಿ ಒಂದು
ಸಂಚಿಕೆ ಕಳುಹಿಸಲ್ಪಡುವುದು.
ವರ್ತಕ ವ್ಯಾಪಾರಿಗಳೆಲ್ಲರೂ ಲಕ್ಷಿಸತಕ್ಕ ವಿಷಯ !

ಕರ್ಣಾಟಕ ಕೇಸರಿ.

ಇದು ಜನಪ್ರೀತ್ಯರ್ಥವಾದ ಮಾಸಪತ್ರಿಕೆ—ಅನೇಕಾನೇಕ ಜನರ ಕೈವಶವಾಗುತ್ತದೆ
ಇದರಲ್ಲಿ ನಿಮ್ಮ ಮಾಹಾಲಿಗಳನ್ನು ಕುಒತು ಜಾಹೀರು ಮಾಡಿಕೊಂಡರೆ
ಗಿರಾಕಿಗಳು ಹೆಚ್ಚು ವುದರಲ್ಲಿ ಸಂದೇಹವಿಲ್ಲ.
ಹರಿಹರ ಪ್ರೆಸ್, ಪುತ್ತೂರು ದಕ್ಷಿಣ ಕನ್ನಡಜಿಲ್ಲಾ.

ಉಬ್ಬಸವೇ?

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಶುರುವಾದರೆ ಸಾಖ್ಯಪಡಿಸುವುದು ಬಹುಕಷ್ಟ. ಇದು ಹೆಚ್ಚಾಗಿ ತಂದೆ ತಾಯಿಗಳಿಂದ ಮಕ್ಕಳಿಗೆ ಬರುವುದುಸಹಜ. ಶುರುವಾದಾಗ ಬಹಳ ಭಯಂಕರವಾಗಿ ಕಾಣಿಸುವುದು. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟ್ಲುಹಿಡಿದಂತೆ ಆಗಿ ಈಗಲೋ ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು. ಯೆದೆಯಲ್ಲಿ ಚಿಕ್ಕುಕೂಗಿದಂತೆ ಗೊಯ್ ಗೊಯ್ ಯೆಂಬಶಬ್ದವು ಕೇಳಿಸುವುದು. ಹಾಸಿಗೆಯಮೇಲೆ ಮೈಚಾಚಿನಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು. ನನ್ನ 'ಉಬ್ಬಸ ಸಂಹಾರಿ' ಯೆಂಬ ಔಷಧಿಯಿಂದ, ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವ ಹಾಗೆಯೇ ಬಹು ಶೀಘ್ರದಲ್ಲಿಯೇ ಉಬ್ಬಸವ್ಯಾಧಿಯು ಪರಿಪೂರ್ಣವಾಗಿ ಗುಣವಾಗುವುದು. ಸಂದೇಹವೇ ಇಲ್ಲ.

ಬಾಟ್ಲಿ 1ಕ್ಕೆ ರೂ 2-8-0 ವಿ.ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣ ಬ್ರದರ್ಸ್. ಪೋಸ್ಟ್ ಬಾಕ್ಸ್ ನಂ, 166. ಮದ್ರಾಸು.

॥ ಶ್ರೀಗುರುಪ್ರಸನ್ನ ॥

ಲೋಕಪ್ರಸಿದ್ಧಿಯನ್ನು ಹೊಂದಿರುವ ಮೊಳಕಾಲ್ಮುರುವಿನ ರೇಷ್ಮೇ ಜವಳಿಗಳು.

ಪ್ರಿಯೆ ಮಹಾಶಯರೇ! ನಮ್ಮ ಅತ್ಯುತ್ತಮವಾದ ರೇಷ್ಮೇ ವಸ್ತ್ರ, ಮೊಗುಟಿ, ಮುಕ್ಕಳಿ ಬಚ್ಚಿಕಾ ವಸ್ತ್ರ, ಸೀತ, ಶೆಲ್ಯಾ ವಗೈರೆ ಮಾಲು ನಂಬಿಕೆಯಾದ ಖಾತ್ರೆ ಬಣ್ಣದಲ್ಲಿ ತಯಾರಿಸಿ ನಮ್ಮ ಗಿರಾಕಿಗಳಿಗೆಂದಿಗೂ ಮೋಸ ಬಾರದಂತೆ ನೂಲಿನಲ್ಲಾಗಲೀ ಜಿಲೆಯಲ್ಲಾಗಲೀ ವ್ಯತ್ಯಸ್ತ ಬಾರದಂತೆ ರವಾನಿಸಿ ನಮ್ಮ ಭಾರತೀಯರ ಮನಸ್ಸನ್ನು ಸಂತೋಷಪಡಿಸಬೇಕೆಂಬುವುದೇ ಈ ನಮ್ಮ ಕಂಪನಿಯ ಮುಖ್ಯ ಉದ್ದಿಶ್ಯವಾಗಿರುತ್ತದೆ. ಪರಂತು ನಮ್ಮ ಮಿತ್ರಮಂಡಲಿಯವರು ಯಾವ ವಿಚಾರದಲ್ಲೂ ಯೋಚಿಸದೆ ನಿರ್ಭೀತರಾಗಿ ತಮಗೆ ಬೇಕಾದವುಗಳಿಗೆ ನಮಗೆ ಬರೆದು ತರಿಸಿಕೊಳ್ಳಬೇಕಾಗಿ ವಿನಯಪೂರ್ವಕವಾದ ವಿನಂತಿ. ದಯವಿಟ್ಟು ತಮ್ಮ ಆರ್ಡರಿನ ಕಾಗದದಲ್ಲಿ ಈ ಆರೋಗ್ಯಚಂದ್ರಿಕೆಯ ಹೆಸರನ್ನು ತಿಳಿಸಿರಿ.

ನಂ 1 ರೇಷ್ಮೇ ವಸ್ತ್ರ ಮಿಂಚಾದ ರಂಗಿನಲ್ಲಿ ಗೆಂಟು ವಗೈರೆ ಇಲ್ಲದೆ ನಯಸ್ಸಾದ್ದು, ದರ ತೊಲಾ 1 ಕ್ಕೆ 0–9–0. ನಂ 2 ನೇ ರಪಂ ಸುಮಾರಾದ್ದು ದರ ತೊಲಾ 1 ಕ್ಕೆ 0–8–9 ಮೊಗುಟಿ ದರ ತೊಲಾ 1 ಕ್ಕೆ 0–10–0 ಕರವಸ್ತ್ರ ಬಂದಕ್ಕೆ 0–11–0 ಹೆಚ್ಚು ವಿಚಾರ ಪತ್ರ ಮುಖೇನ ತಿಳಿಯಿರಿ.

ನಮ್ಮ ಅಡ್ರೆಸ್ಸು :—ಕಾಂಬಳೆ ಸಣ್ಣ ತಿಪ್ಪಪ್ಪ ಮತ್ತು ಅದವಾನಿ ತಿಪ್ಪಪ್ಪ,

ರೇಷ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಅ ಮೃ ತಾ ಂ ಜ ನ.

ಅ

ಮೂಲ್ಯವಾದ ಔಷಧ,
ದ್ಭುತ ಶಕ್ತಿಯುಳ್ಳದ್ದು.
ಖಿಲಬಾಧಾ ನಿವಾರಕ.
ಸಮಾನ ವಾದುದು.

ನಿಜವಾದುದನ್ನು ಜೆನ್ನಾಗಿ ಪರೀಕ್ಷಿಸಿನೋಡಿ ತೆಗೆಯಿರಿ

ಹೋಲಿಕೆಯ ಮದ್ದುಗಳಿಗೆ ಮೋಸಹೋಗಬೇಡಿರಿ :

ಎಲ್ಲಾ ಕಡೆಯೂ ಮಾರಲ್ಪಡುವುದು.

ಅಮೃತಾಂಜನ ಡೆಪೋ.

ಬೊಂಬಾಯಿ, ಮದರಾಸು, ರಂಗೂನ್.

ಸಂಚಿಕೆ - ೩ (೨)



ॐ सह नाववतु ॥ सह नौ भुनक्तु ॥ सह वीर्यं करवावहै ॥
तेजस्विनावधीतमस्तु मा विद्विषावहै ॥ ॐ शान्तिः ॥३॥

-ಶ್ರುತಿಃ

ಸಂಪುಟ ೫ | ಕ್ಷಯನಾಮ ಸಂವತ್ಸರದ ಹೊಸ್ತಲ ಹುಣ್ಣಿವೆ, ಶಕ ೧೮೪೪ ಇಸವಿ ೧೯ ನೆಯ ಡಿಸೆಂಬರ ೧೯೨೬. | ಸಂಚಿಕೆ ೨

ಮಾನವ ಇತಿಹಾಸದ ಸಂಕ್ಷಿಪ್ತ ವಿಶ್ವಾವ ಲೋಕನ.

ಲೇ:— ಶ್ರೀ ಸುಬ್ಬರಾವ್ ಚಿನ್ನಭಂಡಾರಿ ಬಿ. ಎ., ತೀರ್ಥಹಳ್ಳಿ.

(೧ನೆಯ ಸಂಚಿಕೆಯಿಂದ ಮುಂದುವರಿದುದು.)

ಅತಿ ಪ್ರಾಚೀನಕಾಲದಲ್ಲಿ ಪಾಂಡವರು ತಮಗೆ ಅರಿತಿದ್ದ ರಾಜ್ಯಗಳೆಲ್ಲವನ್ನೂ ಜಯಿಸಿದ್ದರು. ಅವರ ಉದ್ದೇಶವು, ಧರ್ಮ ಸಂಸ್ಥಾಪನೆ, ಶಾಂತಿ, ಸರ್ವಜನರ ಸುಖ, ಇವುಗಳೇ ಆಗಿದ್ದವು. ಅನಂತರದಲ್ಲಿ ಬೌದ್ಧಮತವು ಪ್ರಬಲ ಸ್ಥಿತಿಗೆ ಬರುವ ವೇಳೆಯಲ್ಲಿ ಅಶೋಕಮಹಾರಾಜನು ತನ್ನ ಕ್ಷಾತ್ರಬಲದಿಂದ ರಾಜ್ಯಗಳನ್ನು ಜಯಿಸುತ್ತಿದ್ದನು. ಇವನು ಕಳಿಂಗ ರಾಜನನ್ನು ಜಯಿಸಿದನು. ಯುದ್ಧದಲ್ಲಿ ನಡೆದ ಪ್ರಾಣ ಹಿಂಸೆಯನ್ನು ನೋಡಿ ಕಂಪಿತನಾದನು. ಬುದ್ಧ ಧರ್ಮದ ಅಹಿಂಸಾತತ್ವವನ್ನು ಅಂಗೀಕರಿಸಿ ಯುದ್ಧಮಾಡುವುದನ್ನು ತ್ಯಜಿಸಿದನು. ಮತ್ತಶೋಕಮಹಾರಾಜನಂಥ ಪ್ರಬಲನಾದ ಚಕ್ರವರ್ತಿಗೆ ಜಗತ್ತಿನ ವೀರನಾಗುವುದು ಕಷ್ಟವಿರಲಿಲ್ಲ. ಇವನ ಅಜ್ಜನಾದ ಚಂದ್ರಗುಪ್ತನು ಪಾಶ್ಚಾತ್ಯ ಪ್ರಸಂಚದ ರಣಾಧೀಶನಾಗಿದ್ದ ಯವನರ ಅಲೆಕ್ಸಾಂದರನನ್ನೂ ಹಿಂದಕ್ಕೆ ಓಡಿಸಿ ಅವನ ಕಡೆಯ ಸಿಲಕ್ಯೂಸನನ್ನೂ ಸೋಲಿಸಿ ಭಾರತೀಯರ ಸ್ವಾತಂತ್ರ್ಯವನ್ನೂ ಸ್ವರಾಜ್ಯವನ್ನೂ ಕಾಪಾಡಿದ್ದನು. ಪ್ರಾಚೀನ ಭಾರತೀಯರು ಜಗತ್ತಿನ ಏಕಛತ್ರಾಧಿಪತ್ಯವನ್ನೇ ಮಹಾ ಉದ್ದೇಶವನ್ನಾಗಿಟ್ಟುಕೊಂಡು ಪ್ರಯತ್ನಪಟ್ಟಿದ್ದರೆ ಅದು ಅವರಿಗೆ ಸುಲಭಸಾಧ್ಯವಾಗಿಯೇ ಇತ್ತು. ಆದರೆ ಅವರು ಧಾರ್ಮಿಕ ಸಾಮ್ರಾಜ್ಯದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟರು. ವೈದಿಕ ಧರ್ಮವೂ ಬೌದ್ಧ ಧರ್ಮವೂ ಸಂಯೋಜನವಾಗಿ, ಭಾರತೀಯ ಧಾರ್ಮಿಕ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿ, ಕೋಟ್ಯಂತರ ಜನಗಳನ್ನು ಉದ್ಧಾರಮಾಡಿದುವು. ಭರತವರ್ಷವು ಧಾರ್ಮಿಕನಾಗರಿಕತೆಗೆ ತವರು ಮನೆಯಾಯಿತು. ಭಾರತಮಾತೆಯು, ಅಹಿಂಸಾತತ್ವದ ತೇಜಸ್ಸಿನಿಂದಲೂ, ವಿದ್ಯಾವೈಭವದಿಂದಲೂ, ಧಾರ್ಮಿಕ ಶಾಂತತೆಯಿಂದಲೂ ಮೆರೆಯುತ್ತಿದ್ದಳು. ಬೌದ್ಧಮತವು ಮಲಿನವಾಗಿ ಕಳೆಗುಂದುತ್ತಿರಲು ಶಂಕರಾಚಾರ್ಯರು ಮೊದಲಾದ

ಜಯಕರ್ನಾಟಕ

1964

ಸಂಸ್ಥಾಪಕರು : ಲಿಂಗೈಕ್ಯ ಪ್ರೊ. ಶಿ. ಶಿ. ಬಸವನಾಳ, ಎಂ. ಎ.

ಸಂಪುಟ: ೦೮ ಸಂಚಿಕೆ: ೩೦

ಕನ್ನಡ ವಾರಪತ್ರಿಕೆ

*

ಗುರುವಾರ
ತಾ. ೧೦—೧೨—೧೯೬೪

*

[ಬೆಲೆ: ೦೩ ಪೈಸೆ]

Jaya Karnatak Kannada Weekly Dharwar

« ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್ » —ಕಾಳಿದಾಸ

ವರ್ಷ ೪] ಫಾಲ್ಗುಣ (೧೮೫೦) ಮಾರ್ಚಿ (೧೯೨೯) ಸಂಚಿಕೆ ೭

ನಾವಿಕ

ಕೈಬಿಟ್ಟರೆ ನೀ ಗತಿಯಾವೈ?
ಕೆರುತೋಣಿಯಿದು ಮುಳುಗದೇನೈ—॥ಪ॥

೧

ದೈರ್ಯವೆಯನರಿಯದ ಕಡಲಿದು ಗುರುವೆ
ಭೋರೆಂದಲೆಗಳು ಏಳುತಿವೆ
ಸೊರೆ ಸೊರೆಯಾಗಿಹ ತೆರೆ ತೆರೆಯಲ್ಲಿ
ವೈಕೃವು ನೃತ್ಯವ ಮಾಡುತಿದೆ.

೨

ಉತ್ತರಮುಖಿಯು ಪುಡಿ ಪುಡಿಯಾಗಿದೆ!
ಗಾಳಿಯು! ನೋಡವ್ವ ಬೀಸುತಿದೆ!
ಕತ್ತಲು ಕವಿದಿದೆ! ಚಿತ್ರವದಳುಕಿದೆ!
ಕಾಣದು ಕಣ್ಣಿಗೆ ಧ್ರುವತಾರೆ!

೩

ಹರಿದಿದೆ ಕಟ್ಟು, ಮುರಿದಿದ ಹುಟ್ಟು
ಬಳಲಿಹೆ, ಬೆದರಿಹೆ ಕಂಗೆಟ್ಟು!
ಸೋದರರನಿಬರು ಮುಳುಗಿದ ಚಿಹ್ನೆಯ
ಬರಿಯ ದೋಣಿಗಳು ತೋರುತಿವೆ!

—ಶ್ರೀ ಕೆ. ವಿ ಪುಟ್ಟಪ್ಪ

ಪಂಡಿತ

ಫಣಿಗೆ ಚಂದಿರರೆಂಬೆ
ಯಣಂದಾಗಿ ತಿದ್ದಿಟ್ಟ
ಪೂರಿ ರಮಣಿ ತಾರೆಯೊಲು
ಮಿಣುಕು ಬೀಪವನಿಟ್ಟು
ಕ್ಷಣಗಳನು ವರಸತಿಯು
ಎಣಿಸುತಲಿ ಕುಳಿತಿರಲು
* * * * *

ಫನಘನೋಪಾಧಿಗಳ
ತನ ಬುದ್ಧಿಯಿಂ ಪಡೆದ
ಘನಶಾಸ್ತ್ರ ಪಂಡಿತನು
ತನಿಗಬ್ಬ ನೋಡುತಲೆ
ಮಣಿರಸಿಕ ಮಣಿ
ಮನವ ತಾ ಸುರೆತಿಹನು.

.....

ಮನವ ತಾ ಸುರೆತಿಹನು
—ಶ್ರೀ ಡೊಂಬಿ

ರಾಗ. ಭೂಪ್. ಅರ ತಾಲ್. ಯುಕ್ತಿ ನಿತಿ ಮಾತ್ರೆ.

ಅರೋಹಿ ಅವರೋಹಿ=ಸ ರಿ ಗ ಪ ಧ ಸ ॥ ಸ ಧ ಪ ಗ ರಿ ಸ.

ತಬಲಾಗತಿ=

ಧಿ ಧಿ ಧಾ ತ್ರ ತಿ ನಾ ಕ ತಿ ಧಾ ತ್ರ ಧಿ ನಾ.
ನ್. ನ್. ಧಿ. ಕ್ ನ್. ತ್ತ್. ನ್ ಗಿ. ಕ್ ನ್

ಸ ಸ ಧ ಪ ಗ ರಿ ಸ ರಿ ಗಾ - - -

ರ ಘು ವ ರ ರ s ಮ ಧ ನಿ s s s

ಸ ರಿ ಗ ಪ ರಿ ಗ ಪ ಧ ಪ ಗ ಪ ಧ

ನಿ s ತ s ನ s ಧ s s s s s

ಅಂತರ

ಗ ಗ ಗ ಗ ಪ - ಧ ಪ ಸ - ಸ ಸ

ದ ಶ ರ ಥ ನಂ s ದ ನ ಹೈ s ಚಿ ತ್

ಧ್ರ ಧ ರಿ ಸ ಸ ಸ ಧ ದ ದ ಸ - ರಿ ರಿ

ರ s ಜ ನ ಭ ಕ ತ ನ ಕ s ಪ s

ಸ ರಿ ಗ ರಿ ಸ ಧ ಪ - ಧ ಧ ಗ ಗ

ಸ ಬ ಜ ಗ ಕ s ತು s ಭ ವ ಭ ಯ

ರಿ - ಗ ರಿ ಸ ಸ ರಿ ಸ ಸ ಧ ಸ -

ಂ s ಜ ನ ನಿ ಖಿ ಲ ನಿ ರಂ s ಜ ನ ॥೧

ತೂಹೀ ಜಗತಕಾ | ಸಾರ ಪ್ರಭೂಜೀ। ಮಾಯಾದಿಯಾಕರ್ |
ರಾರ್ ಪ್ರಭೂಜೀ| ಜಗತಕರತ |ತೋಹೆ ಪ್ಯಾರ್ ಪ್ರಭೂಜೀ॥

ಮೇಲಿನ ನುಡಿಯಂತೆ ಬಾರಿಸಬೇಕು.

ಸಸ ನ ಗಗ- ಸಸ ರಿ ರಿ- ಧಧ ನ ಸ ಸ-

ತುಹಿ ಕ ರ ತs ತುಹಿ ಹ ರ ತs ಸುಖ ದ s ತs॥೨

ಅರ್ಥ

ರಘುವರ ರಾಮ, ಧನಿಯೇ, ಸೀತಾನಾಥ, ದಶರಥ ನಂದನನಾದ ನೀನು ಚಿತ್ತವನ್ನು ಎಳೆದುಕೊಳ್ಳುವವನು, ಭಕ್ತನ-ಅದೇಕೆ-ಜಗತ್ತಿನ, ಭವಭಯಗಳನ್ನು ಹೋಗಲಾಡಿಸುವ ನಿಖಿಲ ನಿರಂಜನನು ನೀನು.

ನೀನೇ ಜಗತ್ತಿನ ಸಾರವಾಗಿರುವಿ, ಪ್ರಭೋ ಮಾಯೆಯನ್ನು ನಾಶಮಾಡಿದವನು. ನೀನೇ ಪ್ರಭೋ, ಅದಕ್ಕೇ ಜಗವೆಲ್ಲ ನಿನ್ನನ್ನು ಪ್ರೀತಿಸುತ್ತಲಿದೆ ಪ್ರಭೋ, ನೀನೇ ಹುಟ್ಟಿಸುವವನು, ನೀನೇ ಕೊಲ್ಲುವವನು, ನೀನೇ ಸುಖವನ್ನು ಕೊಡುವವನು.

ಎಚ್. ಕೆ. ಶೇಷಗಿರಿರಾವ್,
ಅಧ್ಯಾಪಕ, ಹಿಂದೀ ಸಂಗೀತ ತರಗತಿ,
ಆ. ನಾ ಸಂಘ.

" ದಾನಶೂರ ಕರ್ಣ "

(ನಾಟಕ ವಿಮರ್ಶೆ)

ಈಚೆಗೆ ಕೆಲವು ದಿನಗಳಿಂದ ಮೈಸೂರಿನ ಶ್ರೀ ಚಾಮುಂ ಡೇಶ್ವರಿ ಕರ್ನಾಟಕ ನಾಟಕ ಸಭೆಯವರು ತಮ್ಮ ಸರ್ವ ಜನಾದರಣೀಯವಾದ ರೂಪಕಗಳನ್ನು ಪ್ರದರ್ಶಿಸುತ್ತಿರುವುದು ಸರಿಯಷ್ಟೆ. ಅವರ " ರಾಜಸೂಯ ಯಾಗ "ವನ್ನು ನೋಡಿ ಮನದಣಿಸದ ಕನ್ನಡಿಗರಪೂರ್ವವೆಂದರೆ ಅತ್ಯುಕ್ತಿಯಾಗ ಲಾರದು. ಜನಗಳ ಮನಸ್ಸನ್ನು ರಮಿಸಿ ಅವರನ್ನು ಆನಂದದ ಬೇರೊಂದು ಜಗತ್ತಿಗೆ ಕ್ಷಣಕಾಲ ಕರೆದೊಯ್ಯುವುದು ಮಾತ್ರ ವಲ್ಲದೆ ಅತ್ಮವನ್ನು ವಿರಮಿಸಿ ತಿಳಿವಿನ ಬೆಳಕನ್ನುಂಟುಮಾಡು ವುದೂ, ಮಾನವ ಮನದ ಮರ್ಮಗಳನ್ನು ಬಿಚ್ಚಿ ಮುಂ ದಿಟ್ಟು ಮುಂದುವರಿಯುವ ಮಾರ್ಗವನ್ನು ತೋರುವುದೂ, ಮನೋಭಾವಗಳು ಬಲಿತು ಕಾರ್ಯರಂಗದಲ್ಲಿ ಫಲಪ್ರದಾ ಯಕವಾಗುವಂತೆ ಮಾಡುವದೂ, ವಿಚಾರ ಶೀಲತೆ ಸನ್ನಿಹ ಯಗಳ ವಿನಿಮಯತೆಯನ್ನು ತೋರುವುದೂ. ಜನಗಳಲ್ಲಿ ಸಂಸ್ಕೃತಿ, ವಿಜ್ಞಾನ, ವಿಭೂತಿಗಳ ಮಹತ್ಕಾರ್ಯಗಳ ಅನು ಬಂಧನದಿಂದ ಐಕ್ಯಭಾವವನ್ನೂ ಪರಸ್ಪರ ಪ್ರೇಮವನ್ನೂ ಉಂಟುಮಾಡುವುದೂ ಕಲೆಯ ಕಾರ್ಯಭಾಗಗಳಲ್ಲಿ ಕೆಲವಾ ಗಿವೆ. ಅಂತೇ ಸಕಲಕಲೆಗಳಿಗೂ ಕೇಂದ್ರಸ್ಥಾನವಾಗಿ, ತ್ರಿವೇಣೀ ಸಂಗಮವೆಂದು ಕರೆಯಿಸಿಕೊಳ್ಳಲ್ಪಡುವ ನಾಟಕ ಕಲೆಯು ಸರ್ವ ಮನರಂಜಕವಾಗಿರುವುದು. ಈ ಕಲಾ ಕ್ಷೇತ್ರದಲ್ಲಿ ಅಂತಃಕರಣಪೂರಿತವಾದ ಶೋಧನ ದೃಷ್ಟಿಯೂ, ಕಲಾ ಮಯವಾದ ಸೃಷ್ಟಿ ಕ್ರಿಯೆಯೂ ನಮ್ಮ ಕನ್ನಡ ನಾಡಿನಲ್ಲಿ ಬಂಗಾಳ, ಮಹಾರಾಷ್ಟ್ರಗಳಷ್ಟು ಬೆಳೆಯದಿರುವುದರಿಂದ ಕಲಾ ವಿಮರ್ಶಕರ ಮಾನದಂಡವು ಕಲಾವಿದರಿಗೆ ವಿನಾಶಕರವಾ ಗಿಯೂ, ಕಲಾವಿದರ ಮಾನದಂಡವು ವಿಮರ್ಶಕರಿಗೆ ಕುಜ ತನದ ಕುರುಹಾಗಿಯೂ ಕಂಡುಬರುತ್ತದೆ. ಕಲಾವಿಮರ್ಶ ಕರೆಂದರೆ ಇರುವುದರಲ್ಲಿ ಬರೆಯ ಒಣದೋಷಗಳನ್ನೆಣಿ ಕೆದ ಕುತ್ತಾ " ಇದು ಸಾಲದು, ಅದು ಸಾಲದು " ಎಂದು ಗೊಣುಗುವ ಅಜನ್ಮ ಅತೃಪ್ತರ ಗೋಷ್ಠಿಯೆಂಬ ತಪ್ಪು ಅಭಿ ಪ್ರಾಯವು ಮೂಡಿದೆ. ಅನುಭವವನ್ನೆಣಿ ಅರ್ಥಕ್ಕೂ ಅರೋಪಿಸುವುದೇ ಈ ಕಲ್ಪನೆಯ ಮಹದ್ದೋಷ ಕಲಾ ವಿಮರ್ಶಕರು ಕಲಾಫಲಗಳ ವಿಚಾರದಲ್ಲಿ ಸೃಷ್ಟಿಕರ್ತನ ಆಶಯ ಸಾಧನೆ ಮತ್ತು ಫಲಿತಾಂಶಗಳನ್ನು ಗಮನಿಸಿ ಅಲ್ಲಿನ ಗುಣದೋಷಗ ಳನ್ನು ನಿಷ್ಪಕ್ಷಪಾತದಿಂದ ನೋಡುವ ರಾಜ ಮಾರ್ಗವನ್ನು ಬಿಟ್ಟು ತಮ್ಮ ಕಲ್ಪನೆಯನ್ನು ಬಿತ್ತಿ ಅದರ ಅಪೂರ್ಣ ಮಾನ ದಂಡದಿಂದಳೆಯುವ ಹವ್ಯಾಸಕ್ಕೆ ಕೈ ಹಾಕುತ್ತಾರೆ. ಕಲಾ ವಿಮರ್ಶೆಯನ್ನು ಮಾಡುವವರು ರಸಗ್ರಾಹಿಗಳಾಗಿ ವಿಷಯ ದಾದರ್ಶವನ್ನರಿತು, ನಿರ್ವಹಣದಲ್ಲಿನ ದೋಷಗಳನ್ನು ತಿದ್ದಿ ಕೊಳ್ಳಲಾಗುವ ರೀತಿಯಲ್ಲಿ ಅಂತಃಕರಣ ಪೂರಿತವಾಗಿ ಸೂಚಿ ಸಬೇಕಾದುದವಶ್ಯಕ.

ಶ್ರೀ ಚಾಮುಂಡೇಶ್ವರಿ ನಾಟಕ ಸಭೆಯವರಭಿನಯಿಸುವ " ದಾನಶೂರ ಕರ್ಣ " ಎಂಬ ನಾಟಕವು ನೂತನವೂ, ಒಂದು ಹೊಸ ಮಾದರಿಯನ್ನನುಸರಿಸಿದುದೂ ಆದುದರಿಂದ ಮೇಲ್ಕಾ ಣಿಸಿದ ಸೂತ್ರಗಳಿಂದ ಪುಷ್ಟಿಗೊಂಡವಲೋಕಿಸುವ. ಮಹಾ ಭಾರತ ಕಾವ್ಯದ ನಾಯಕನನ್ನು ನಿರ್ದೇಶಿಸಲು ಹೊರಡುವ ಪಂಡಿತರು ಕರ್ಣನ ಹೆಸರನ್ನೂ ಸೂಚಿಸುತ್ತಾರೆ. ಕರ್ಣನು ಪಾಂಡವರನ್ನು ಸೇರಿದ್ದ ಪಕ್ಷಕ್ಕೆ ಕುರುಕ್ಷೇತ್ರ ಯುದ್ಧಕ್ಕೆ ಅವಕಾಶವಾಗುತ್ತಿದ್ದಿತೋ ಇಲ್ಲವೋ ಸಂದೇಹಾಸ್ಪದವಾಗು ತ್ತಿತ್ತು. ಕರ್ಣನ ಜನನ ವೃತ್ತಾಂತದ ಗೋಸ್ಯತೆಯೇ ಕಥೆಯ ಗತಿಶಕ್ತಿ. ಕರ್ಣನೆಂದರೆ ಸ್ವಾಮಿ ಭಕ್ತಿ, ದಾನ ಶೀಲತೆ, ಗುಣ ಗಾಂಭೀರ್ಯತೆ. ಮಾತೃಪ್ರೇಮ, ಭಗವದ್ಭಕ್ತಿ-ಇತ್ಯಾದಿ ಗುಣಗಳಿಂದ ಕೂಡಿದ ಮಹಾಪುರುಷ. ಪರುಶರಾಮರನ್ನು ವಂಚಿಸಿ ವಿದ್ಯಾರ್ಜನೆಯನ್ನು ಮಾಡುವ ಪ್ರಯತ್ನದಲ್ಲಿಯೂ, ವೀರ ತರುಣ ಅಭಿಮನ್ಯುವನ್ನು ಕ್ಷಾತ್ರ ಧರ್ಮಾನುಚಿತವಾಗಿ ಹಿಂದಿನಿಂದ ಕೊಲ್ಲುವುದರಲ್ಲಿಯೂ, ಕರ್ಣನು, " ತಪ್ಪಿ ನಡೆ ಯುವುದು ಮಾನವನ ಹುಟ್ಟು ಗುಣ " ಎಂಬ ಸಿದ್ಧಾಂತ ವನ್ನೆಣಿ ದೃಢಪಡಿಸಿದ್ದಾನೆ. ಈ ನಾಟಕ ಕರ್ತೃಗಳಾದ ಶ್ರೀ ಎಂ.ಎಸ್.ರಾಮಸ್ವಾಮಿ ಎಂ.ಎ.ಯವರು, ಗುರುವಿಗೆ ಮೋಸ ಬಗೆದ ಕರ್ಣನಿಗಾಗುವ ಶಿಕ್ಷೆಯನ್ನು ಅವನು ಹೆಜ್ಜೆ ಹೆಜ್ಜೆಗೂ ಅನುಭವಿಸುವ ಕ್ಲೇಶ ಪರಂಪರೆಗಳಿಂದಲೂ ಕೊನೆಗೆ ಯುದ್ಧ ರಂಗದಲ್ಲಿ ಮಹಾಸ್ತ್ರಗಳ ಮುಂದು ಮಂತ್ರಗಳ ವಿಸ್ಮೃತಿಯಿಂದಾ

ಗುವ ಅವನತಿಯಿಂದಲೂ ಚೆನ್ನಾಗಿ ಚಿತ್ರಿಸಿದ್ದಾರೆ. ಆದರೆ ಅಭಿಮನ್ಯುವಿನ ಅಕಾಲ ಮೃತ್ಯುವಿಗೆ ಕಾರಣ ಭೂತನಾದ ಕರ್ಣನಿಗೆ ಕ್ಷಮೆಯೇನು? ಕರ್ಣನನ್ನು ತಾನು ಕೊಂದೆನೆಂದು ನಾಟಕಾರಂಭದಲ್ಲಿ ಹಲುಬುವ ಧನಂಜಯನಿಗೆ ಶ್ರೀ ಕೃಷ್ಣನು ಹೇಳುವ:—

ಅಪನೊಬ್ಬನು ತನುವಿನೊಳಗಿಹ
ಜೀವನನು ಕೊಲುವಾತ ನೆಂಬವ
ನಾವನೊಬ್ಬನು ಕೊಲಿಸಿಕೊಂಬುವ ತಾನೆಯೆಂಬವನು
ಭಾವಿಸಲಿ ಕಿವರೊಬ್ಬರುಂ ದಿಟ
ತಾನರಿಯರೈ ಕೊಲಿಸಿಕೊಂಬವ ನ
ಭಾವದವ ತಾನಲ್ಲಿ ಕೊಲುವ್ವನಲ್ಲ ತಾನೆಂದ

(ನಾಗರಸ—ಭಗವದ್ಗೀತೆ: ಅಧ್ಯಾಯ ೨—ಶ್ಲೋಕ ೧೯)

ಎಂಬ ಭವ್ಯತತ್ವವೇ ಇಲ್ಲಿಯೂ ಅನ್ವಯಿಸುತ್ತದೆಂದು ನಾವು ಭಾವಿಸಿಕೊಂಡು ತೃಪ್ತಿ ಪಟ್ಟುಕೊಳ್ಳೋಣವೆ? ಕರ್ಮ ಸಿದ್ಧಾಂತದಲ್ಲಿ ನಂಬಿಕೆಯನ್ನಿಟ್ಟಿರುವ ಪೂರ್ವಜರಿಗೆ ಅಭಿಮನ್ಯುವಿನ ಮೃತಿಯು ಅಂತೇ ವಿಧಿ ವಿಧಾಯಕವಾಗಿತ್ತೆಂಬ ಸಮಾಧಾನವನ್ನು ಕೊಡಬಲ್ಲವಾದರೂ ವಿಚಾರ ಪರರಾದ ಆಧುನಿಕರಿಗೆ ತೃಪ್ತಿಯನ್ನೀಯಲಾರದು. ಕರ್ಣನ ಕಥೆಯನ್ನು ಹೇಳ ಹೊರಟವರು ಅಪೂರ್ವವಾದ ಕೆಲ ಎಡರುಗಳನ್ನು ಹಾಯ್ದು ಹೋಗಬೇಕಾಗಿರುವದು ಕರ್ಣನ ಕಥೆಗಾರರ ಪ್ರಯತ್ನಗಳಲ್ಲಿ ಅವನ ಜೀವನದ ಮಹತ್ಸನ್ನಿವೇಶಗಳ ಸಿಂಹಾವಲೋಕನವು ಕಂಡು ಬರುವುದೇ ವಿನಾ ವಿಮರ್ಶಾತ್ಮಕವಾದ ಮತ್ತು ಮಾನವ ಮನೋಧರ್ಮವನ್ನನುಸರಿಸಿದ ಪರೀಕ್ಷೆಯು ಕಂಡುಬರುವುದಿಲ್ಲ. ಈ ನಾಟಕ ಕರ್ತೃಗಳೂ ಇದೇ ದೋಷಕ್ಕೆ ಒಳಗಾಗಿದ್ದಾರೆ. ದ್ರೋಣಾಚಾರ್ಯರ ಶಿಕ್ಷಣ ಕ್ಷೇತ್ರದಲ್ಲಿಯೇ ಕರ್ಣನು ಪ್ರಧಾನತಃ ಪ್ರವೇಶಿಸುವುದಕ್ಕಿಂತಲೂ ಸಾಕಿದ ಸೂತ ಜನನೀಜನಕರಲ್ಲಿ ಪ್ರೇಮ ಗೌರವ ಭರಿತನಾದ ಕರ್ಣನನ್ನು ತೋರುವದವಶ್ಯಕ. ಈ ದೃಶ್ಯದಲ್ಲಿಯೇ ಪಾರ್ಥನು ಕರ್ಣನನ್ನು ನೀಚ ಕುಲಜನೆಂದು ಹಳಿಯುವುದರಿಂದ ಅವರಲ್ಲಿ ಆಳಿಯುವವರೆಗೂ ಉಳಿಯುವಂತಹ ವೈಷಮ್ಯವು ಬೆಳೆಯುವುದು. ವಿಚಾರಪರನೂ, ಗುರುಪ್ರೇಮಾರ್ಥಿಯೂ ಆದ ಕರ್ಣನು ಇಂತಹ ಅಲ್ಪ ವಿಚಾರವನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಅಸ್ವಾಭಾವಿಕ. ಒಂದನೇಳೆ ಪರಿಸ್ಥಿತಿಯ ಪ್ರಭಾವದಿಂದ ಹಾಗಾದರೂ, ಕ್ಷಣಿಕವಾದ ಕ್ರೋಧಾಗ್ನಿಯು ಅವುರಣ ಪರ್ಯಂತರದ ದ್ವೇಷವಾಗಿ ಪರಿಣಮಿಸುವುದಸಾಧ್ಯ. ಕರ್ಣಾರ್ಜುನರ ಈ ವೈಷಮ್ಯಕ್ಕೆ ಬಲವತ್ತರವಾದ ಕಾರಣಗಳನ್ನು ತೋರಿಸಿದ ಹೊರತು ಮುಂದಿನ ಕತೆಗೆ ಉಚಿತವಾದ ಇಂಬು ದೊರುಕುವುದಿಲ್ಲ. ಮುಂದೆ ಬರುವ "....." ಯ ಪ್ರಣಯ ದೃಶ್ಯದಲ್ಲಿ ಅವಳು ಕೇಳಿದ "ಬೇಟೆಗಾಗಿ ಬಂದಿಲ್ಲವಜ್ಜೀ" ಎಂಬ ಪ್ರಶ್ನೆಗೆ ಕರ್ಣನು "ಅದರಲ್ಲಿ ನನಗೆ ವಿಶ್ವಾಸವಿಲ್ಲ. ಪ್ರಾಣಿಗಳನ್ನು ಹಿಂಸೆ ಪಡಿಸುವುದು ನನ್ನ ಮನಸ್ಸಿಗೊಪ್ಪದು. ಮಲಿತ ರಾಜರ ಕೊಬ್ಬನ್ನು ಮುರಿದು ಧನಕೀರ್ತಿಗಳನ್ನು ಸಂಪಾದಿಸ ಬೇಕೆಂಬುದೇ ನನ್ನ ಆಶಯ" ಎಂದು ಉತ್ತರ ಕೊಡುತ್ತಾ ತನ್ನ ಜೀವನದ ಧ್ಯೇಯವನ್ನೇ ಹೊರಪಡಿಸಿದ್ದಾನೆ. ಇದೆ ಭಾವವನ್ನು ಬೆಳೆಯಿಸಿ ಪಾರ್ಥನ ಲೋಭವನ್ನೂ, ರಣ ಪಿಪಾಸೆಯನ್ನೂ ಅದರಿಂದ ಕರ್ಣನ ಕೋಮಲಾಂತಃಕರಣಕ್ಕೆ ಹುಟ್ಟುವ ವಿಕರ್ಷಕ ಸಂತಾಪವನ್ನೂ ವಿಸ್ತರಿಸಿ, ಫಲಿತಾಂಶ ರೂಪವಾಗಿ ಬಳುವ ವೈಷಮ್ಯಾಗ್ನಿ ಕಾಳ್ಗಿಚ್ಚನ್ನು ತೋರಿಸ ಬಹುದು. ಮಿಕ್ಕ ವಿಚಾರಗಳಲ್ಲಿ ಕರ್ಣಾರ್ಜುನರಿಗೆ ಯಾವ ಯಾವ ಭೇದಗಳಿದ್ದರೂ ರಣವಿಕ್ರಮತೆಯಲ್ಲಿ ಮಾತ್ರ ಯಾವ ಬೇಧವೂ ಇರಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಕನ್ನಡ ಜೈಮಿನಿ ಭಾರತದ ಕೃತಿಪತಿಯಾದ ಕರ್ಣಾಟಕ ಕವಿಚೂತವನ ಜೈತ್ರ ಲಕ್ಷ್ಮೀಶನು ಬಭ್ರುವಾಹನನ ಬಾಯಿಂದ:—

ಕರ್ಣ ಭೀಷ್ಮ ದ್ರೋಣರಂಗೆಲ್ಲ್ದು ಕೊಟ್ಟಂ ನು
ವರ್ಣಧ್ವಜಂ ನಿನಗೆ ಕರುಣದಿಂ ಕಾದಿದ ನ
ವರ್ಣಾಧವಂ ನಿನೊಳಗ್ಗಳಿಕೆ ಪಿರಿದೆಂದು ಮೇದಿನಿ
ಯೊಳರಿಯದವರು
ವರ್ಣಿಸುವರೆಂದು ಬೆರೆತಿಹೆ ತನ್ನ ಸಮರಮುಂ
ನಿರ್ವೈಸಿದೊಡೆ ವೀರನಹುದೆಂದು.....

ಅರ್ಜುನನ ವೀರತ್ವದ ಬಗ್ಗೆ ತನಗಿರುವ ಉಪೇಕ್ಷೆಯನ್ನು ತೋರಿದ್ದರೂ, ದ್ರೋಣಾಚಾರ್ಯರ ಅನುರಾಗಕ್ಕೆ ಪಾತ್ರನಾಗಿ ಅವರ ಪರಮ ಶಿಷ್ಯನಾಗಿಯೂ, ಸರ್ವಜ್ಞನಾದ ಶ್ರೀ ಕೃಷ್ಣನ ಪ್ರೇಮಕ್ಕೆ ಪಾತ್ರನಾಗಿ ಅವನ ಸಹೋದರಿಯನ್ನು ವರಿಸುವಷ್ಟು ಮನ ಮೆಚ್ಚಿಸಿದ್ದ ಅರ್ಜುನನು ವೀರನಿದ್ದೇ ತೀರಬೇಕು. ಗೀತೆಯನ್ನು ಬೋಧಿಸುವಾಗಲೂ ಸಹ ಅರ್ಜುನನ ದೈನ್ಯವನ್ನೂ ತಾತ್ಕಾಲಿಕ ದೌರ್ಬಲ್ಯವನ್ನೂ ಕರ್ತವ್ಯ ವಿಮುಖತೆಯನ್ನೂ ಕಂಡು ಜಿಗುಪ್ಸಿತನಾದ ಶ್ರೀ ಕೃಷ್ಣನು:—

ಅರಿ ಭಯಂಕರ ನೀಂ ನಪುಂಸಕ"
ರಿರವನೈದಲು ಬೇಡ ನಿನಗಿದು
ದೊರೆಯಲಾಗದು ಧೀರತನಕಿದು ಹಾನಿಕರವಹುದು
ಮರುಳೆ ಬಡಮನದಿಂದ ಪೆದರದೆ
ಮರುಳು ತನವನು ಬಿಟ್ಟ ಕದನಕೆ
ಭರವಸದಲೇಳು.....

ಎಂದು ಹೇಳುವಾಗಲೂ ಪಾರ್ಥನ ಶೌರ್ಯದ ಪರಿಜ್ಞಾನ ವನ್ನಿಟ್ಟುಕೊಂಡೇ ಇರುತ್ತಾನೆ. ಇಂತಹ ವೀರ ಎದುರಾಳಿಯ ಶೌರ್ಯವನ್ನೂ ಪ್ರತಾಪವನ್ನೂ ಕರ್ಣನು ಒಮ್ಮೆಯಾದರೂ ಪ್ರಶಂಸಿಸದಿರುವುದು ಸರಿಯಲ್ಲ. ಯುದ್ಧರಂಗದಲ್ಲಿ ಪಾರ್ಥನೇ ಕರ್ಣನ ಸ್ತುತಿಗಾರಂಭಿಸುತ್ತಾನೆ ಅವನಿಗಿಂತಲೂ ಸರ್ವವಿಷಯಗಳಲ್ಲಿಯೂ ಉತ್ತಮನಾದ ಕರ್ಣನು ಪ್ರತಿಭಟನಿಗೆ ತನ್ನ ಹೆಚ್ಚುಗೆಯನ್ನು ನೀಡದಿರುವನೇ? ಈ ಗುಣದ ಲೋಪವು ನಾಟಕದಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ.

ಸರ್ವಸುಂದರವಾದ ವಸ್ತುಗಳಿಂದ ತುಂಬಿದ ಒಂದಾಗರಕ್ಕೆ ಹೋದಲ್ಲಿ ಯಾವ ವಸ್ತುವನ್ನಾರಿಸಿಕೊಳ್ಳಬೇಕೆಂಬ ವಿಚಾರದಲ್ಲಿ ನಮಗೆ ಹೇಗೆ ಸಂದೇಹವುಂಟಾಗುವುದೋ ಹಾಗೆ ಕರ್ಣ ಕಥೆಯನ್ನು ನಿರೂಪಿಸ ಹೊರಟವರಿಗೆ ಸಂದಿಗ್ಧ ಬರುತ್ತದೆ. ಕರ್ಣನನ್ನು ವಿಭೂತಿ ಪುರುಷರ ಗುಂಪಿಗೆ ಸೇರಿಸಲಾಗದಿದ್ದರೂ ಆದರ್ಶ ಪುರುಷರ ಗುಂಪಿಗಂತೂ ಖಂಡಿತ ಸೇರಿಸಬಹುದು. ಅವನ ದಯಾಳುತನ, ಸ್ವಾಮಿ ಭಕ್ತಿಗಳು ಆದರ್ಶತನದ ಎಲ್ಲೆಯನ್ನು ಕೂಡ ಮೀರುವುದು. ಭಗವಾನ್ ಶ್ರೀ ಕೃಷ್ಣನೇ ಸ್ವಯಂ ಮಾಯಾ ಪ್ರೇರಕನಾಗಿ ಬಂದು ಭಾರತ ಚಕ್ರಾಧಿಪತ್ಯದ ವಿಲೋಭನೆಯನ್ನಿಟ್ಟು "ಕರ್ಣಾ, ದುರ್ಯೋಧನನ ಬಾಯಿಬಿಲಿಗೆ ಕೈಯಾನುವರೇ" ಎಂದು ಮೂದಲಿಸಿದಾಗಲೂ ಹಡೆದ ಜನನಿಯೇ, ವೀರಮಾತೆಯಾದ ಕುಂತೀದೇವಿಯೇ ಸ್ವಯಂ ಬಂದು :—

"ಎಲೆ ಕರ್ಣ ಕೇಳು, ನೀನೆನ್ನ ಪಿರಿಯ ಮಗ।
ನಲಸಿದೀ ನುಡಿಯ ನಾದರಿಸು
ಚಲವಳಿದನುಜರ ಸಲಹು....."

ಎಂದು ಬೇಡಿದರೂ, ಇಂತಹ ವಿಷಯ ಪರೀಕ್ಷೆಯ ಗಳಿಗೆಯಲ್ಲಿಯೂ ಚಿತ್ತಸ್ಥೈರ್ಯವನ್ನು ತೋರುತ್ತ :—

ತಾಯೆ ನೀನೀ ತಪ್ಪುದಾರಿಯೊಳೆಳೆದೆನ್ನ |
ದಾಯಗೆಡಿಪುದಿದು ತರವೆ
ಈ ಯನ್ಯಾಯವ ನಿಳೆಯೊರೆದೆಂದು ತ।
ನ್ಯಾಯವನಳುಹಿದನು ಗಡಾ ॥

ಕಾಮಿತಾರ್ಥವ ನೀವ ಕೌರವನನು ಸಂ।
ಗ್ರಾಮ ಕಾಲದೊಳು ಕಾವಿರದೆ
ಈ ಮಾತ ಕೇಳಿ ನಾನೆದ್ದು ಬಂದೊಡೆಮಗೆ |
ಭೂಮಿ ತಾನೆಂತು ಪೊರೆವುದು ॥

ಸ್ವಾಮಿಗೆರಡು ಬಗೆದನು ಸತ್ಯ ಹೀನನು |
ನಾಮರ ನತಿ ನಾಪಿಯೆಂದು
ಭೀಮಾರ್ಜುನರಿಂದ ಭೀತಿ ಪಡೆದನೆಂ |
ದೀ ಮಹಿ ನಿಂದಿಸದಿಹುದೆ ॥

ಕೇಳು ಕುಂತೀದೇವಿ ಕೇಶವಾರ್ಜುನರನು |
ಕಾಳಿಗದೊಳು ಕಾದಿ ಗೆಲಿದು
ತೋಳ ಒಲ್ಮೆಯ ನೊಮ್ಮೆ ತೋರಿ ಧರ್ಮಜನ ಕೈ |
ಯಾಳಾಗಿಹೆನೆಂದನು ಗಡಾ ॥

(ಕರ್ಣನ ವೃತ್ತಾಂತ ಕಥೆ—ಪ್ರಧಾನಿ ತಿರುಮಲಾರ್ಯ)

ಎಂದುಸುರಿ ಕುಂತಿಯು ಬೇಡಿದ ವರಗಳನ್ನಿತ್ತು ಕಳುಹಿದ ಕರ್ಣನು ಗುಣಶೀಲಗಳ ಗಣಿಯೇ ಅಲ್ಲವೆ? ಸಾಹಿತ್ಯವ ಲೋಕನದಲ್ಲಿ ವ್ಯಕ್ತಿಯ ಸರ್ವಗುಣಗಳನ್ನೂ ವಿಹಂಗಮ ನೋಟದಲ್ಲಿಯಾದರೂ ನೋಡಬಹುದು. ಆದರೆ ನಾಟಕದಲ್ಲಲ್ಲದು ಸಾಧ್ಯವಿಲ್ಲ ನಾಟಕದಲ್ಲಿ ಯಾವಾಗಲೂ ಒಂದು ಗುರಿಯಿರಬೇಕು. ಅದನ್ನು ಸೇರಲಿಕ್ಕೆ ಕವಿ, ನಟ ಇಬ್ಬರೂ ಪ್ರಯತ್ನಿಸಬೇಕು. ಈ ನಾಟಕದಲ್ಲಿ ಗುರಿಯ ಚಿಹ್ನೆಯೇ ಇಲ್ಲ. ಕರ್ಣನ ಮಹತ್ ಜೀವನದ ಯಾವ ಅಂಶಗಳನ್ನು ಕರ್ತೃಗಳು ಒತ್ತಿ ಹೇಳಲಿಚ್ಛಿಸಿದ್ದಾರೆ ಎಂಬುದು ಪತ್ತೆಯಾಗುವುದಿಲ್ಲ. ದಾನಶೂರತನವೆಂದು ಹೆಸರಿನಿಂದ ಗ್ರಹಿಸಬಹುದಾದರೂ, ಬ್ರಾಹ್ಮಣ ವೇಷಧಾರಿಗಳಾಗಿ ಬರುವ ಇಂದ್ರ ಕೃಷ್ಣರಿಗೆ ಕವಚ ಕುಂಡಲಗಳನ್ನು ದಾನ ಕೊಡುವದನ್ನು ಬಿಟ್ಟು ಬೇರೆ ಸನ್ನಿವೇಶಗಳೆರುವುದಿಲ್ಲ ದಾನವನ್ನು ಕೊಡುವಾಗ, ದೈವಿಕ ವಿಭೂತಿಗಳಿಗೆ ತಾನು ಕೊಡುತ್ತಿದ್ದೇನೆಂಬ ಪರಿಜ್ಞಾನದಿಂದಲೇ ಕರ್ಣನು ದಾನವನ್ನೀಯುವನಾದ್ದರಿಂದ ದಾನಶೀಲತ್ವದ ಸೈಜ ಸತ್ವವು ಸಪಾಡ ಕ್ರಿಯೆಯಲ್ಲಿ ಲೀನವಾಗಿ ಕಂಡಿ ಕುಂದುತ್ತದೆ

ಕರ್ಣ ಕಥೆಗೆ ದ್ರೌಪದಿ ಸ್ವಯಂವರದ ದೃಶ್ಯವು ಉತ್ತಮ ಹಿನ್ನೇಲೆವನ್ನು ಕೊಡಬಲ್ಲುದು. ಕರ್ಣನಿಗೆ ಅಲ್ಲಿ ಆದಪ್ಪ ಅಪಮಾನವು ಬೇರೆ ಎಲ್ಲಿಯೂ ಆಗುವುದಿಲ್ಲ. ನಾಟಕ ಕರ್ತೃಗಳು ಇದಕ್ಕೆ ಗಮನ ಕೊಡುವುದೊಳ್ಳೆಯದು.

ನಾಟಕದ ಕಥಾ ವಸ್ತುವಿನ ಪ್ರಕಾರ ಕರ್ಣನನ್ನುಳಿದರೆ ದುರ್ಯೋಧನ ಸಾರ್ಥರೇ ಪ್ರಧಾನರು. ಕೃಷ್ಣನಂತೂ ಸರಿಯೇ ಸರಿ! ದುರ್ಯೋಧನನಿಲ್ಲಿಯೂ ಮೂರ್ತೀಭವಿಸಿದ್ದಾನೆ. ಹಿಂಸಾಪರ, ರಾಜ್ಯ ಲೋಭಿ. ಒಂದು ಪಾತ್ರದ ಗುಣವನ್ನು ಹೆಚ್ಚಿಸಬೇಕಾದರೆ ಇನ್ನೊಂದರ ಗುಣವನ್ನು ತಗ್ಗಿಸಬೇಕಾಗಿಲ್ಲ. ಕರ್ಣನನ್ನು ದ್ರೋಣರ ತೀಕ್ಷ್ಣ ಶಾಲೆಯಲ್ಲಿ ನೀಚ ಕುಲೋತ್ಪನ್ನನೆಂದು ಜರಿದ ಪಾರ್ಥಾದಿಗಳ ಮೇಲೆ ಹಾರಿಬಿದ್ದ ದುರ್ಯೋಧನನೇ ರಾಯಭಾರಿ ಕೃಷ್ಣನನ್ನು ನೀಚ ಕುಲಜನೆಂದು ಹಳಿಯುವುದು ಅಸಂಬದ್ಧ.

ಪಾರ್ಥನೇ ನೈಜವಾಗಿಯೂ ಕರ್ಣ ಕಥೆಯ ದ್ವಿತೀಯ ನಾಯಕ ನಾಟಕದಲ್ಲಿ ಪ್ರಾರ್ಥನಿಗಿಂತಲೂ ಭೀಮಸೇನನಿಗೇ ಪ್ರಾಶಸ್ತ್ಯ ಹೆಚ್ಚು. ಪಾರ್ಥನ ಪಾತ್ರವು ಪುಷ್ಟಿಯಾಗಿರದಿದ್ದರೆ ಕರ್ಣನು ಶೋಭಿಸುವುದು ಕಷ್ಟ. ಗುರುವಿನೆಡೆಯಲ್ಲಿ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಕರ್ಣನನ್ನು ಹಳಿಯುವುದರಿಂದಲೂ, ಪ್ರೇಮಾಂಕುರನನ್ನು ಹಿಂದೆಲ್ಲಿಯೂ ತೋರದೆಯೇ ಅಪರಿಚಿತವಾಗಿ ಯಥಾ ರಂಗದಲ್ಲಿ ಕರ್ಣನ ಶ್ಲಾಘನೆಗೆ ಹೊದಲಿಡುವುದೂ ಸ್ವಭಾವ ವಿರುದ್ಧವಾಗಿರುತ್ತದೆ.

ಕೃಷ್ಣನ ಪಾತ್ರರಚನೆಯಲ್ಲಿ ಕಂಡು ಬರುವ ಕೆಲವು ಸಂಧಿಗ್ಧಗಳನ್ನು ನಾಟಕ ಕರ್ತೃಗಳು ನಿವಾರಿಸುವುದು ಲೇಸು. (೧) ಕೃಷ್ಣನು ಕರ್ಣನ ಜನನ ವೃತ್ತಾಂತವನ್ನು ಗೋಪ್ಯವಾಗಿಟ್ಟದ್ದುದೇತಕ್ಕೆ ? (೨) ದುರ್ಯೋಧನನು ರಾಯಭಾರಿಯಾಗಿ ಬಂದ ಕೃಷ್ಣನನ್ನು ಪುರಸ್ಕರಿಸದಿರಲು ಅವನು ಭೂಮಿಯನ್ನೊತ್ತಿ ಸಿಂಹಾಸನವು ತಲೆಕೆಳಕಾಗಿ ದುರ್ಯೋಧನನ್ನು ತನ್ನ ಸಾದ ಪ್ರಾಂತದಲ್ಲಿ ಬಂದು ಬೀಳುವಂತೆ ಮಾಡುವುದು ಸ್ಪೃಹೆಯಿಂದಲೋ, ಸ್ವಾರ್ಥದಿಂದಲೋ ? (೩) ದುರ್ಯೋಧನನ ಹಬ್ಬದೂಟಕ್ಕಿಂತಲೂ ವಿದುರನ ಬಡ ಆತಿಥ್ಯವನ್ನು ಸ್ವೀಕರಿಸಿದುದರ ನಿಮಿತ್ತವೇನು ?

ಇನ್ನು ನಾಟಕ ಪ್ರದರ್ಶನವನ್ನು ನೋಡುವ ಸನ್ನಿವೇಶಗಳಿಗೆ ನಿಸರ್ಗಶೋಭಿತವಾದ ಛಾಯೆಯನ್ನು ಕೊಡುವುದರಲ್ಲಿ ಶ್ರೀ ಚಾಮುಂಡೇಶ್ವರಿಯವರನ್ನು ಮಿಂಚಿಸಿದವರು ಕನ್ನಡ ನಾಡೊಳಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಭೃಂಗವು ಕರ್ಣನ ತೊಡೆಯನ್ನು ಕೊರೆಯುವುದು, ವಿದುರನ ಮನೆಯಲ್ಲಿ ಹಾಲುಕ್ಕುವುದು, ಕೃಷ್ಣನನ್ನು ಸೆರೆಹಿಡಿಯಲು ಬಂದಾಗ ನೂರಾರು ಕೃಷ್ಣರು ಕಾಣಿಸಿಕೊಳ್ಳುವುದು ಪ್ರೇಕ್ಷಣೀಯವಾಗಿದ್ದುವು. ನಾಟಕವು ಸರ್ವಾಂಗ ಸುಂದರವಾಗ ಬೇಕಾದರೆ ಉತ್ತಮ ಕಾವ್ಯ, ರಂಗ ಸಿದ್ಧತೆಗಳೊಂದಿಗೆ ಕುಶಲ ಮತಿಗಳಾದ ನಟರ ಸೇವೆಯೂ ಬೇಕಷ್ಟೆ. ಕರ್ಣ, ಅರ್ಜುನ, ಶ್ರೀ ಕೃಷ್ಣ ಇವರ ಪಾತ್ರಗಳನ್ನೂ, ಕುಂತಿ, ಕರ್ಣನ ಪತ್ನಿ ಇವರ ಪಾತ್ರಗಳನ್ನೂ ಅಭಿನಯಿಸಿದವರು ನಮ್ಮ ಗಮನಕ್ಕೆ ಅರ್ಹರು. ಕರ್ಣನ ಪಾತ್ರವನ್ನಭಿನಯಿಸಿದ ಶ್ರೀ ಕೊಟ್ಟೂರಪ್ಪನವರ ನಿರ್ವಾಹಕ ರೀತಿಯು ಕರ್ನಾಟಕ ರಂಗಭೂಮಿಯ ಭವಿಷ್ಯದ ಸುಕನಸುಗಳನ್ನು ಕಾಣುತ್ತಿರುವವರಿಗೆ ಆಶೋತ್ಪಾದನವಾಗುತ್ತಿದ್ದಿತು. ಕರ್ಣನು, ತಾನು ಸೂತರ ಮಗನೆಂದರಿತಾಗ ತೋರುವ ಆಶೆ ನಿರಾಶೆಗಳ ಸಂಮಿಶ್ರ ಭಾವವೂ, ದ್ರೋಣಾರ್ಜುನರಿಂದ ತಿರಸ್ಕೃತನಾದನೆಂಬ ಕುಲದ ಕಳೆಯೇರಿಸಿದ್ದನ್ನೂ ಸಮಾಜದ ರೂಢಿಯಾಚರಣೆಗಳ ಮೌಢ್ಯವನ್ನೂ ನೆನೆದು ಸಖೇದ ಕೋಪವನ್ನು ತೋರುವ ಭಾವವನ್ನೂ, ಪ್ರೌಢೋಕ್ತಿಯಲ್ಲಿ ತೋರುವ ಕ್ಷತ್ರಿಯೋಚಿತವಾದ ಮಾತೃಭಕ್ತಿಯೂ, ಶ್ರೀ ಕೃಷ್ಣನಲ್ಲಿ ತೋರುವ ಅಚಂಚಲ ಪ್ರೇಮ ಭಕ್ತಿಗಳೂ, ಪತ್ನಿಗೆ ಕೊಸೆಯಾಲಿಂಗನವನ್ನಿತ್ತು ರಣರಂಗಕ್ಕೆ ತೆರಳಲು ಬಂದಾಗ ತೋರುವ ಮನೋ ನಿಶ್ಚಯವೂ, ರಣರಂಗದಲ್ಲಿ ಸಂಪೂರ್ಣ ಸಾತ್ವಿಕ ತೇಜಸ್ಸನ್ನು ಬೀರುವ ಉದಾತ್ತ ಲಕ್ಷಣವೂ, ಪರಮಾತ್ಮನಿಗೆ ಆತ್ಮವನ್ನರ್ಪಿಸುವಾಗ ತೋರುವ ಏಕಾಗ್ರ ಭಕ್ತಿ ಭಾವವೂ ಮಾನ್ಯವಾಗಿವೆ. ಕೆಲವೆಡೆಗಳಲ್ಲಿ ಮುಖ ಭಾವವನ್ನು ಬಲವತ್ತರವಾಗಿ ಒದಲಾಯಿಸಿದರೆ ಪಾತ್ರವು ಹೆಚ್ಚು ರಸ್ಯವಾಗುತ್ತದೆ.

ಅರ್ಜುನನ ಪಾತ್ರಾಭಿನಯಕಾರರಾದ ಶ್ರೀ ನಾಗೇಂದ್ರ ರಾಯರು ದಿವಂಗತ ಶ್ರೀ| ಎ. ವಿ. ವರದಾಚಾರ್ಯರ ಪ್ರೇಮ ಪಾತ್ರ ಸ್ತ್ರೀ ಭೂಮಿಕಾಭಿನಯಕಾರರು. ಪಾತ್ರದ ಬೆಳೆವಳಿಗೆಯು ಚೆನ್ನಾಗಿದ್ದರೆ ಇವರ ಅಭಿನಯವು ಹೆಚ್ಚು ಶೋಭಾಯಮಾನವಾಗುತ್ತಿದ್ದಿತು. ಕೆಲವೆಡೆಗಳಲ್ಲಿ ವೀರ ರಸವು ಸಾತ್ವಿಕತನದ ಮಾರ್ಗವನ್ನನುಸರಿಸುವುದರಿಂದ ಅಕಾಭಂಗಕ್ಕವಕಾಶವಾಗುತ್ತದೆ. ಇವರು ಮುಖಭಾವವನ್ನು ರಸೋಚಿತವಾಗಿ, ಸರ್ವೋತ್ತಮವಾಗಿ ಬದಲಾಯಿಸಬಲ್ಲರು.

ಶ್ರೀ ಕೃಷ್ಣನ ಪಾತ್ರವನ್ನು ಶ್ರೀ ಸುಬ್ಬಣ್ಣನವರು ಒಂದು ಹೊಸ ಬೆಳಕಿನಲ್ಲಿಯೇ ತೋರಿದರು. ಸಂಪೂರ್ಣ ಪಾತ್ರವೊಂದನ್ನು ನಗೆಯ ಮೂಲಕವೇ ನಿರ್ವಹಿಸುವುದೇನು ಸುಲಭ ಸಾಧ್ಯವಾದ ಕೆಲಸವಲ್ಲ. ಪಾತ್ರಗಳ ರಸ, ಸನ್ನಿವೇಶಗಳನ್ನನುಸರಿಸಿ ನಗೆಯಲ್ಲಿ ತಿರಸ್ಕಾರ, ತೃಪ್ತಿ, ಪ್ರೇಮ, ಕ್ಷಮೆಗಳನ್ನು ಶ್ಲಾಘನೀಯವಾಗಿ ತೋರಿದರು.

ಮಿಕ್ಕ ಪಾತ್ರಗಳಲ್ಲಿ ದುರ್ಯೋಧನ, ವಿದುರ ಇವರ ಪಾತ್ರಗಳು ಅಸ್ಪಷ್ಟ ಉಚ್ಚಾರಣೆ, ಅಸ್ವಾಭಾವಿಕ ಸಂಗೀತಗಳಿಂದ ಬೇಸರಿಸುತ್ತಿದ್ದವು. ವಿದುರನ ಪಾತ್ರಾಭಿನಯಕಾರರು, ವಿದುರ, ಬ್ರಾಹ್ಮಣ ವೇಷಧಾರಿ ಇಂದ್ರ, ಬ್ರಾಹ್ಮಣ ವೇಷಧಾರಿ ಕೃಷ್ಣ, ಸೂತ್ರಧಾರರ ಪಾತ್ರಗಳನ್ನೂ ಅಭಿನಯಿಸಿದರು. ಅಭಿನಯಕಾರರು ಒಂದಕ್ಕಿಂತ ಹೆಚ್ಚು ಪಾತ್ರಗಳನ್ನು ಅಭಿನಯಿಸುವುದು ನಾಟಕದ ಸೌಂದರ್ಯವನ್ನು ವಿಘಾತಿಸುತ್ತದೆ. ಭೀಮನ ಪಾತ್ರಾಭಿನಯಕಾರರು ಯಾವ ಉದ್ದೇಶಗಳನ್ನಿಟ್ಟುಕೊಂಡು ಅಭಿನಯಿಸುತ್ತಾರೋ ತಿಳಿಯುವುದೇ ಕಷ್ಟವಾಗಿದೆ. ಹಾಸ್ಯ ರಸದ ಕ್ರೈರತ್ನಗಳಾದ ಶ್ರೀಯುತರು ಮರಿರಾಯರು, ಕೃಷ್ಣ ಮೂರ್ತಿ ರಾಯರು, ಲಕ್ಷ್ಮೀಪತಿ ಶಾಸ್ತ್ರಿಗಳವರು ಅಭಿನಯಿಸಿದ ವಿನೋದ ಕೃತ್ಯವು ಮೂಲ ಕಥೆಗೆ ಹೆಚ್ಚು ಸಂಬಂಧಿಸಿಲ್ಲದಿದ್ದರೂ ಚೆನ್ನಾಗಿದ್ದಿತು. ಇವರುಗಳ ಪ್ರತಿಭೆಗೆ ತಕ್ಕ

ಹಾಸ್ಯಗ್ರಸ ಪ್ರಧಾನವಾದ ನಾಟಕಗಳನ್ನು ಸಿದ್ಧ ಗೊಳಿಸುವುದು ಸಭೆಯವರ ಕರ್ತವ್ಯವಾಗಿದೆ.

ಬೂಮಿಕೆಗಳೆಲ್ಲವೂ ಪಾತ್ರೋಚಿತವಾಗಿದ್ದರೂ ಕರ್ಣಾನ ಪತ್ನಿಯು ಪ್ರಥಮ ದೃಶ್ಯದಲ್ಲಿ ಪಾರ್ಶ್ವ ವನಿತೆಯಾಗಿಯೂ, ದ್ವಿತೀಯ ದೃಶ್ಯದಲ್ಲಿ ಮೈಸೂರಿನ ರಮಣಿಯಾಗಿಯೂ ಬಂದಳು. ಪಾರ್ಶ್ವೀ ರೀತಿ ನೀತಿಗಳಿಗೆ ಮನ ಸೋಲುವ ಚಿತ್ತ ದಾಸ್ಯವನ್ನು ನಮ್ಮ ನಟರು ತ್ಯಜಿಸುವುದೊಳ್ಳೆಯದು. ಈ ನಾಟಕವು ಸಂಗೀತ ವ್ಯಾಧಿಯಿಂದ ತೊಳಲುತ್ತಿದೆಯೆಂದು ನನ್ನ ಅಭಿಪ್ರಾಯ. ಅದಮ್ಯ ಸಂಗೀತವನ್ನು ಕಡಿಸಿಮಾಡಿ ಪಾತ್ರ ಗೌರವವನ್ನೂ, ನಟರ ಪ್ರಾಧಾನ್ಯವನ್ನೂ ಬೆಳೆಸುವುದು ಉತ್ತಮ. ನಟರು ತಮ್ಮ ಮತ್ತು ಇತರರ ಅಭಿನಯ ಕಾಲ ಗಳಲ್ಲಿ ಏಕರೀತಿಯಾಗಿ ಪಾತ್ರದೊಂದಿಗೆ ಬೆರೆಯುಬೇಕೇ ವಿನಾ ಪ್ರೇಕ್ಷಕರನ್ನೀಕ್ಷಿಸುವುದು ಕೆಟ್ಟ ಅಭ್ಯಾಸ. ನಮ್ಮನಾಟಕ ಸಂಘದವರು ಅನುಸರಿಸುತ್ತಿರುವ ಪ್ರಲಂಬನ್ಯಾಯವನ್ನು ಬಹಿಷ್ಕರಿಸಿ ನಾಟಕಗಳನ್ನು ಮೂರು ಘಂಟೆಗಳಿಗೆ ಇಳಿಸುವುದು ಅವಶ್ಯಕವಾಗಿಬೇಕಾದ ಸುಧಾರಣೆ. ಈ ಸುಧಾರಣೆಯ ಮುಂದಾಳುತನವನ್ನು ಶ್ರೀ ಚಾಮುಂಡೇಶ್ವರಿಯವರು ತೋರುವರೇ?

ಮರ್ಮಜ್ಞರಾದ ಅಭಿನಯಕಾರರೊಂದಿಗೆ ಕೂಡಿ ಕರ್ಣಾಟಕ ಕಲಾ ದಿಗ್ವಿಜಯಕ್ಕೆ ಹೊರಟಿರುವ ಶ್ರೀ ಚಾಮುಂಡೇಶ್ವರಿ ನಾಟಕ ಸಭೆಯವರಿಗೆ ಜಗಜ್ಜನನಿಯು ಶ್ರೇಯವನ್ನು ಅನುಗ್ರಹಿಸಿ ಅವರಿಂದ ಕನ್ನಡ ರಂಗಭೂಮಿಗೆ ಅಖಂಡವಾದ ಸೇವೆಯನ್ನು ಮಾಡಿಸಲೆಂದು ಪ್ರಾರ್ಥಿಸುತ್ತೇನೆ.

—ಆ. ನ. ಕೃಷ್ಣರಾಯ.

—:—



ಲೇಖಕ:—

ಶ್ರೀ ಪ್ರಹ್ಲಾದ

ಕರ್ಣಾಟಕ ರಂಗಭೂಮಿಯು ಮಾಡಿದ ಕೆಲಸ

—:—

ನಾಟಕ ಕಲೆಯು ಹಿಂದೂ ದೇಶದಲ್ಲಿ ಸ್ವತಂತ್ರವಾಗಿ ಉತ್ಪನ್ನವಾಯಿತೆ? ಎರಡನೆಯ ದೇಶದವರ ಅನುಕರಣದಿಂದ ಬಂದಿತೆ? ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುವು. "ಹಿಂದೂ ದೇಶದವರಿಗೆ ಕ್ರಿ ಪೂ. ೨-೩ ಶತಮಾನಗಳ ಹಿಂದೆ ನಾಟಕ ಕಲೆಯು ಗೊತ್ತಿರಲಿಲ್ಲ ನೃತ್ಯಗಾಯನ ಸಂಗೀತ ಕಲೆಗಳು ಮಾತ್ರ ಗೊತ್ತಿದ್ದವು. ಅಲೆಗ್ಜಾಂಡರನ ಸ್ವಾರಿಯು ತರುವಾಯ ಹಿಂದೂ ದೇಶದಲ್ಲಿ ಸ್ಥಾಪಿತವಾದ ಗ್ರೀಕ್ ಆಳಿಕೆಯಲ್ಲಿ ಗ್ರೀಕ ಅರಸರ ಆಸ್ಥಾನಗಳಲ್ಲಾಗುವ ನಾಟಕಗಳನ್ನು ನೋಡಿಯೆ, ಹಿಂದೂ ದೇಶದಲ್ಲಿ ವ್ಯಾಪಾರ ಮಾಡಲಿಕ್ಕೆ ಬಂದ ಗ್ರೀಕ ವ್ಯಾಪಾರಿಗಳ ನಾಟಕಗಳನ್ನು ನೋಡಿಯೆ ಹಿಂದುಗಳು ನಾಟಕ ಮಾಡುವದನ್ನು ಕಲಿತು ಕೊಂಡರು ಎಂದು ಕೆಲವರ ಮತವಿದೆ. *" ನಾಟಕ ಕಲೆಯು ಒಹುಸ್ಯಾಚೀನ ಕಾಲದಲ್ಲಿಯೇ—ವೇದಕಾಲದಲ್ಲಿ—ಹಿಂದುಗಳಿಗೆ ಗೊತ್ತಿತ್ತು. ಪರಂಪರೆಯಿಂದ ನಡೆದು ಬಂದ ಪ್ರಾಕೃತ ಜನರ ಆಟಗಳಿಂದ ಸಂಸ್ಕೃತ ನಾಟಕಗಳೂ ಹುಟ್ಟಿದುವು. ನಾಟಕ ಕಲೆಯು ಹಿಂದುಸ್ಥಾನದಲ್ಲಿ ಸ್ವತಂತ್ರವಾಗಿ ಉತ್ಪನ್ನವಾಗಿದೆ." ಎಂದು ಬೇರೆ ಕೆಲವರು ಅಭಿಪ್ರಾಯಪಡುತ್ತಾರೆ. ‡ ನಾಟಕ ಕಲೆಯು ಹಿಂದೂದೇಶದಲ್ಲಿ ಸ್ವತಂತ್ರವಾಗಿಯೇ ಹುಟ್ಟಲಿ, ಅನುಕರಣದಿಂದಲೇ ಹುಟ್ಟಲಿ. ಕ್ರಿಸ್ತಶಕ ಆದಿಯಿಂದಲೂ ಸಂಸ್ಕೃತದಲ್ಲಿ ನಾಟಕಗಳು ರಚಿತವಾಗಿ ಅಭಿನಯಿಸಲ್ಪಡಹತ್ತಿದುವು. ಅವುಗಳ ಪ್ರತಿರೂಪವಾಗಿ ಕನ್ನಡದಲ್ಲಿ ನಾಟಕಗಳು ಬರೆಯಲ್ಪಟ್ಟವು ಆ ನಾಟಕಗಳ ವಿಕೃತ ರೂಪವಾಗಿ ಡೊಂಬದಾಸರ ಆಟಗಳು ಪ್ರಚಾರದಲ್ಲಿ ಬಂದುವು. ಈ ಡೊಂಬದಾಸರ ಆಟಗಳಿಂದ ಆಧುನಿಕ ಕರ್ಣಾಟಕ ರಂಗ

* ಐದನೆಯ ಸರ್ವ ರಾಷ್ಟ್ರೀಯ ಪ್ರಾಚ್ಯಸಂಶೋಧಕರ ಪರಿಷತ್ತಿನಲ್ಲಿ ವಿಂಡಿಶ್ ಇವರು ಓದಿದ ಪ್ರಬಂಧದಿಂದ.

‡ Mesternum Und mimus im Rigveda (Lipzig 1908) —ಲಿಪ್ಪೋಲ್ಡ್, ಫಾನಕ್ರೋಡರ

ಭೂಮಿಯು ಉತ್ಪನ್ನವಾಯಿತು. ಇದೀಗ ಬಹುಜನ ಕನ್ನಡಿಗರ ಗ್ರಹಿಕೆ, "ಕನ್ನಡವಂತೂ ಇತ್ತೀಚೆಗೆ ತಲೆಯೆತ್ತಿದುದು. ಆಧುನಿಕ ರಂಗಭೂಮಿಗೆ ಪೂರ್ವದಲ್ಲಿ ರಚಿತವಾದ-ಭಾಷಾಂತರಿಸಲ್ಪಟ್ಟ—ನಾಟಕಗಳಲ್ಲಿ ಈಗ ದೊರೆತುದು ಸಿಂಗರಾರ್ಯನಿಂದ ಭಾಷಾಂತರಿಸಲ್ಪಟ್ಟ ರತ್ನಾವಳಿ ನಾಟಕ-ಮಿತ್ರವಿಂದಾ ಗೋವಿಂದ-ಒಂದೇ. ಇದೂ ಹದಿನೇಳನೆಯ ಶತಮಾನದಲ್ಲಿ ಹುಟ್ಟಿದುದು. ಭಟ್ಟಾಕಳಂಕನು (೧೬೦೪) ತನ್ನ ಕಾಲದಲ್ಲಿ ನಾಟಕಗಳು ಇದ್ದಂತೆ ಹೇಳಿರುವುದರಿಂದಲೂ ಕರ್ಣಪಾರ್ಯನು (ಸು ೧೧೪೦) * ಬರೆದಿರುವಂತೆ ತಿಳಿಯುವ 'ಮಾಳವೀ ಮಾಧವ'ವೂ ಕಾತಿರಾಜನ (ಸು ೧೨೬೦)§ ಸುಭದ್ರಾಹರಣ, ಪ್ರಬೋಧ ಚಂದ್ರೋದಯಗಳೂ ನಾಟಕಗಳೆಂದು ಕವಿ ಚರಿತೆಕಾರರು ಊಹಿಸಿರುವುದರಿಂದಲೂ ಕನ್ನಡದಲ್ಲಿ ೧೧-೧೨ನೆಯ ಶತಮಾನದಲ್ಲಿಯೂ ನಾಟಕಗಳು ಇದ್ದಿರಬಹುದೆಂದು ಒಂದುವೇಳೆ ತಿಳಿದುಕೊಳ್ಳಬಹುದು. ಅದರೂ ಅವುಗಳ ಹೆಸರಿನ ಮೇಲಿಂದ ಅವೂ ಸಂಸ್ಕೃತ ನಾಟಕಗಳ ಭಾಷಾಂತರಗಳೇ ಎಂಬುದು ವ್ಯಕ್ತವಾಗುವಂತಿದೆ. ಅವು ಸಹ ಎಷ್ಟರಮಟ್ಟಿಗೆ ರಂಗಭೂಮಿಯ ಮೇಲೆ ಬರುತ್ತಿದ್ದವೊ ದೇವರೇ ಬಲ್ಲ. ಕರ್ಣಾಟಕ ರಂಗಭೂಮಿಯ ಮೇಲೆ ಬಂದ ಪ್ರಥಮ ನಾಟಕವೆಂದರೆ ಶಾಂತ ಕವಿಗಳಿಂದ ರಚಿಸಲ್ಪಟ್ಟ ೧೮೬೬ನೆಯ ಇಸ್ವಿಯಲ್ಲಿ ಗದಗ ಕರ್ನಾಟಕ ನಾಟಕ ಕಂಪನಿಯವರು ಅಭಿನಯಿಸಿದ ಉತ್ತಾಹರಣ ನಾಟಕವೇ. * ಅಲ್ಲಿಂದ ಈಚೆಯ ೫೦ ವರ್ಷಗಳಲ್ಲಾದರೂ ನೆರೆ ಭಾಷೆಯ ರಂಗಭೂಗಳು ತೋರಿಸಿದ ಕರ್ತೃತ್ವವನ್ನಾದರೂ ಕರ್ಣಾಟಕ ರಂಗಭೂಮಿಯು ತೋರಿಸಿರುವುದೆನ್ನಬೇಕೆ? ಅದೂ ಇಲ್ಲ. ಎಂದ ಮೇಲೆ ಕರ್ಣಾಟಕ ರಂಗಭೂಮಿಯು ಮಾಡಿದ ಅಂತಹ ಮಹತ್ವದ ಕೆಲಸವೇನು? ಎಂದು ಸಹಜ ಪ್ರಶ್ನೆ ಬರುತ್ತದೆ. ಸಾವಧಾನವಾಗಿ ವಿಚಾರಿಸಿದರೆ ಕರ್ಣಾಟಕ ರಂಗಭೂಮಿಯು ಮಾಡಿದ ಕೆಲಸವು ಎಲ್ಲರಿಗೂ ಸಹಜ ತಿಳಿದು ಬರುವಂತಿದೆ. ಆದರೆ ಹಾಗೆ ಇನ್ನೂನರೆಗೆ ಯಾರೂ ವಿಚಾರಿಸಿದಂತೆ ತೋರುವುದಿಲ್ಲ.

ಪೂರ್ವದ ಕರ್ಣಾಟಕ ನಾಟಕಗಳು ಭಾಷಾಂತರಗಳೇ ಆಗಿರಬಹುದು. ಕರ್ಣಾಟಕ ರಂಗಭೂಮಿಯ ಮೇಲೆ ಒಂದು ವೇಳೆ ಅವು ಬಂದಿರಲಿಕ್ಕೂ ಇಲ್ಲವೆಂದು ಕಲ್ಪಿಸೋಣ. ಆದರೂ ಕರ್ಣಾಟಕ ರಂಗಭೂಮಿಯು ಮಾಡಿದ ಕೆಲಸವು ಅಷ್ಟಿಷ್ಟಲ್ಲ. ಆಧುನಿಕ ಕರ್ಣಾಟಕ ರಂಗಭೂಮಿಗೆ, ಅದೇಕೆ ಹಿಂದೂ ದೇಶದ ರಂಗಭೂಮಿಗೇ ಡೊಂಬ ದಾಸರ ಆಟಗಳು ಮೂಲವಾಗಿವೆ. ಕರ್ಣಾಟಕದ ಈ ಗ್ರಾಮ್ಯ ರಂಗಭೂಮಿಯ ಕಡೆಗೆ ದೃಷ್ಟಿ ಇಟ್ಟರೆ ಕರ್ಣಾಟಕ ರಂಗಭೂಮಿಯು ಮಾಡಿದ ಮಹತ್ವದ ಕೆಲಸವು ಸ್ಪಷ್ಟವಾಗಿ ಕಂಡುಬರುವಂತಿದೆ.

ಹಿಂದೂ ದೇಶದಲ್ಲಿ ಹುಟ್ಟಿದ ನಾಟಕಕ್ಕೆ ಭಕ್ತಿ ಮಾರ್ಗವು ಕಾರಣವಾಗಿದೆ. ಹಿಂದುಸ್ತಾನದಲ್ಲಿ ನಾಟಕಗಳನ್ನು ರಚಿಸಲಿಕ್ಕೆ ತೆಗೆದುಕೊಂಡ ಹಳೆಯ ವಿಷಯಗಳೆಂದರೆ ದೇವತೆಗಳ. ಅದರಲ್ಲಿಯೂ ವಿಶೇಷವಾಗಿ ತ್ರೀ ವಿಷ್ಣುವಿನ ಸಂಬಂಧವಾದ ಕಥೆಗಳು. ಭಕ್ತಿಮಾರ್ಗದಿಂದ ನಾಟಕಗಳು ಉತ್ಪನ್ನವಾದುವೆಂದು ಹೇಳಲಿಕ್ಕೆ ಇದೊಂದು ಮಾತೇ ಸಾಕಾಗಿರುತ್ತದೆ. ಭಕ್ತಿ ಮಾರ್ಗವು ಪ್ರಾಚೀನ ಆರ್ಯರಲ್ಲಿದ್ದುದು ಕಂಡುಬರುವುದಿಲ್ಲ ವೇದೋಪನಿಷತ್ತುಗಳಲ್ಲಿ ಭಕ್ತಿ ಮಾರ್ಗವನ್ನು ಹೇಳುವ ವಚನಗಳು ತೀರ ಕಡಿಮೆ. ಇಲ್ಲೆಂದರೂ ಅಡ್ಡಿಯಿಲ್ಲ. ಆರ್ಯರ ಕರ್ಮಕಾಂಡಕ್ಕೆ ವೇಸತ್ತು ಅದರ ನಿರ್ಮೂಲನ ಮಾಡುವುದಕ್ಕಾಗಿ ಉತ್ತರ ಹಿಂದುಸ್ತಾನದಲ್ಲಿ ಹುಟ್ಟಿದ ಬೌದ್ಧ ಜೈನ ಧರ್ಮಗಳೂ ಭಕ್ತಿಮಾರ್ಗವನ್ನು ಹೇಳುವುದಿಲ್ಲ. ಇದರಿಂದ ನೂರ್ತ್ಯುಪಾಸಕರಾದ ದ್ರಾವಿಡರ ಸಂಸರ್ಗದಿಂದಲೇ ಆರ್ಯರಲ್ಲಿ ಭಕ್ತಿಮಾರ್ಗವು ಉತ್ಪನ್ನವಾಯಿತೆಂದು ಹೇಳಬಹುದು. ಭಕ್ತಿಮಾರ್ಗಕ್ಕೆ ತವರು ಮನೆಯಾದ ದಕ್ಷಿಣದೇಶದಲ್ಲಿಯೇ ನಾಟಕಗಳು ಉತ್ಪನ್ನವಾದುವೆಂದು ಊಹಿಸಿದರೆ ಆ ಊಹೆ ತಪ್ಪಾಗಲಿಕ್ಕಿಲ್ಲೆಂದೆನಿಸುತ್ತದೆ.

ವೇದಕಾಲದಲ್ಲಿಯೂ ಹಿಂದೂದೇಶದಲ್ಲಿ ನಾಟಕ ಕಲೆಯು ಗೊತ್ತಿದ್ದಿತೆಂದು ತಿಳಿಯುತ್ತಿರುವ ಶ್ರೋದರ ಇವರು-"ಋಗ್ವೇದದಲ್ಲಿ ದೃಷ್ಟಿಗೆ ಬೀಳುವ ನಾಟ್ಯಕಲೆಯು ಭಾರತೀಯ ನಾಟ್ಯ ಕಲೆಯ ಪ್ರಾರಂಭವಾಗಿರದೆ ವೇದ ಪೂರ್ವಕಾಲೀನ ನಾಟ್ಯ ಕಲೆಯ ಅಂತಿಮ ಸ್ವರೂಪವಾಗಿರುವುದು. ಅರ್ವಾಚೀನ ಭಾರತೀಯ ನಾಟ್ಯಕಲೆಯು ಬೀಜಶಕ್ತಿ ದೈವತ ಪ್ರಧಾನ ಸಮಾಜದ ಪ್ರಯತ್ನದಿಂದ ಉತ್ಪನ್ನವಾಗಿದೆ. ಋಗ್ವೇದೋಕ್ತ ನಾಟ್ಯಕಲೆಯು ಅಸ್ತಂಗತವಾಗಿದೆ ಅದರ ಸಂಬಂಧಿಕ ನಾಟ್ಯ ಕಲೆಯು ಹಿಂದುಸ್ತಾನದಲ್ಲಿ ಕಂಡುಬರುವದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೊರೆಯುವುದು. ಋಗ್ವೇದದಲ್ಲಿರುವ ಸಾವಿರಕ್ಕೆ ಹೆಚ್ಚಿರುವ ಸೂಕ್ತಗಳಲ್ಲಿ ಸಂವಾದ ರೂಪದಲ್ಲಿರುವ ಸೂಕ್ತಗಳು ತೀರ ಕಡಿಮೆ ಇರುವುವು. ಯಜುರ್ವೇದದಲ್ಲಿ ಇಂತಹ ಸೂಕ್ತಗಳು ಇರುವುದೇ ಇಲ್ಲ. ಅದರ ತರುವಾಯದಲ್ಲಿ ಆ

---

* ಮಾಳವೀಮಾಧವದ ಕರ್ತೃವಾದ ಕರ್ಣಪಾರ್ಯನು ೧೦೪೬ಕ್ಕಿಂತ ಹಿಂದಿರಬೇಕೆಂದು ಡಾ। ಎ. ವೆಂಕಟಸುಬ್ಬಯ್ಯನವರ ಅಭಿಪ್ರಾಯ.

—ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ ಪುಟ ೬೯

§ ಶಾಂತ ಕವಿಗಳ ಜೀವನಸಾರ—ವಾಗ್ಭೂಷಣ, ಶಾಂತ ಕವಿಗಳ ಸಂಚಿಕೆ.

(ವೇದಧ್ವನ್ನಲ್ಲಿ ಕಂಡುಬರುವ) ನಾಟ್ಯಕಲೆಯು ಮೃತಕಲ್ಪವಾ ದುದು ಕಂಡುಬರುತ್ತದೆ. ಉತ್ತರಕಾಲೀನ ವೇದಗ್ರಂಥಗಳು ಉತ್ಪನ್ನವಾಗುವ ಪೂರ್ವದಲ್ಲಿಯೇ ಋಗ್ವೇದದಲ್ಲಿ ಕಂಡುಬ ರುವ ನಾಟ್ಯಕಲೆಯು ಮೃತವಾಯಿತು. ಆದರೂ ಪ್ರಾಕೃತ ಜನಸಮಾಜದ ಆಟದ ಪರಂಪರೆಯು ಬಹು ಪ್ರಾಚೀನಕಾಲ ದಿಂದಲೂ ಬಂದು ವೇಳೆ ವೇದಕಾಲದಿಂದಲೂ ನಡೆದು ಬಂದಿ ರಬಹುದು'' ಎಂದು ಅಭಿಪ್ರಾಯ ಪಡುವರು. * ಇದರಿಂದ ಹಿಂದುಸ್ಥಾನದಲ್ಲಿ ಪ್ರಚಾರದಲ್ಲಿದ್ದ ಆರ್ವಾಚೀನ ನಾಟಕ ಕಲೆಯು ವೇದ ಪರಂಪರೆಯಿಂದ ಬಂದ ಕಲೆಯಲ್ಲವೆಂದೂ ಅದು ಬೀಜ ಶಕ್ತಿ ದೃಷ್ಟಿಯಿಂದ ದ್ರಾವಿಡ ಪರಂಪರೆ ಯಲ್ಲಿ—ಉತ್ಪನ್ನವಾಗಿದೆಯೆಂದೂ ಸ್ಪಷ್ಟವಾಗುತ್ತದೆ.

ಬಂದುನೇಳೆ ಗ್ರೀಕ ನಾಟಕಗಳನ್ನು ನೋಡಿ ಹಿಂದುಸ್ತಾ ನದಲ್ಲಿ ನಾಟಕಗಳು ಉತ್ಪನ್ನವಾದುವೆಂದು ತಿಳಿದರೂ ಗ್ರೀಕ ನಾಟಕಗಳದರ್ಶನದಿಂದ ಉತ್ತರ ಹಿಂದುಸ್ತಾನದಲ್ಲಿ ಮೊದಲು ನಾಟಕಗಳು ಹುಟ್ಟಿರುವುದು ಹೇಗೆ ಶಕ್ಯವೊ ಹಾಗೆ ದಕ್ಷಿಣ ಹಿಂದುಸ್ತಾನದಲ್ಲಿಯೂ ಮೊದಲಿಗೆ ಹುಟ್ಟಿರುವುದು ಶಕ್ಯವಿರು ತ್ತದೆ. ಹಿಂದೂಸ್ಥಾನದ ನಾಟಕ ಕಲೆಯಮೇಲೆ ಗ್ರೀಕ ನಾಟಕದ ಪರಿಣಾಮವು ಬಹುವಾಗಿದೆಯೆಂದು ಹೇಳುವ ವಿಂಡಿಶ್ ಇವರು—'' ಅಲೆಕ್ಸಾಂಡರ ದಿ ಗ್ರೇಟ್ ಇವನ ಸ್ವಾರಿಯು ಕೂಡ ಇದ್ದ ನಾಟಕದವರು ಅಲೆಗ್ಸಾಂಡರನು ಹೋದ ಹೋದಲ್ಲಿ ಗ್ರೀಕ ನಾಟಕ ಕಲೆಯ ಪ್ರಸಾರ ಮಾಡಿ ದರೆಂದೂ ಇದೂ ಅಲ್ಲದೆ ಅಲೆಗ್ಸಾಂಡ್ರಿಯ ಪಟ್ಟಣವು ಗ್ರೀಕ ಸತ್ತೆಯ ಕೆಳಗೆ ಇರುವಾಗ ಆ ಪಟ್ಟಣಕ್ಕೂ ಹಿಂದುಸ್ತಾನದ ಪಶ್ಚಿಮ ದಂಡೆಗೂ ವ್ಯಾಪಾರೀ ಸಂಬಂಧವಿದ್ದು ಆ ವ್ಯಾಪಾರೀ ಜನರ ಮಧ್ಯದಲ್ಲಿದ್ದ ನಾಟಕ ಕಲಾಕುಶಲ ಜನರಿಂದ ಹಿಂದು ಸ್ತಾನದಲ್ಲಿನಾಟ್ಯಕಲೆಯ ಪ್ರಸಾರವಾಯಿತೆಂದೂ'' ಅಭಿಪ್ರಾಯ ಪಡುವರು ಹಿಂದುಸ್ತಾನದ ಪಶ್ಚಿಮ ತೀರದಲ್ಲಿ ವ್ಯಾಪಾರೀ ಸಂಬಂಧವು ದಕ್ಷಿಣ ಹಿಂದುಸ್ತಾನಕ್ಕೆ ವಿಶೇಷವಾಗಿರ್ದಿತ್ತು. ಕೆಳಗಣ ಈಜಿಪ್ತದಲ್ಲಿಯ ಅಲ್ಸಿಸಾಂಡಸ್ ಎಂಬ ಸ್ಥಳದಲ್ಲಿ ದೊರೆತ ಕ್ರಿಸ್ತಶರದ ೨ ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ ನಾಟಕದಲ್ಲಿ ಬಂದ ಸಂಗತಿಯು ಉಜ್ಜಯಿನಿ ಪತ್ತಿ ರದಲ್ಲಿರುವ ಮಲ್ಲೆ ಬಂದರಿನಲ್ಲಿ ನಡೆದುದಾಗಿರುತ್ತದೆಂತಲೂ ಅದರಲ್ಲಿ ಕನ್ನಡ ನುಡಿಯ ಎಷ್ಟೋ ವಾಕ್ಯಗಳಿರುವುದೆಂತಲೂ ಮೈಸೂರು ಶಾಸನ ಇಲಾಖೆಯ ಅಧ್ಯಕ್ಷರಾದ ಡಾ|| ಶಾಮ ಶಾಸ್ತ್ರಿಗಳವರು ಅಭಿಪ್ರಾಯ ಪಡುತ್ತಾರೆ. ‡ ಇದರಿಂದ ಕ್ರಿಸ್ತ ಶಕದ ಆದಿಯಿಂದಲೂ ದಕ್ಷಿಣ ಹಿಂದೂದೇಶಕ್ಕೂ ಗ್ರೀಕರಿಗೂ ವ್ಯಾಪಾರೀ ಸಂಬಂಧವಿದ್ದು ಆ ವ್ಯಾಪಾರಿಗಳಿಂದ ಇಲ್ಲಿ ನಾಟ ಕಗಳು ಅಭಿನಯಿಸಲ್ಪಡುತ್ತಿದ್ದವೆಂದೂ ಇಲ್ಲಿಯೇ ನಡೆದ ಎಷ್ಟೋ ಸಂಗತಿಗಳ ಮೇಲಿಂದ ಹೊಸದಾಗಿ ನಾಟಕಗಳು ರಚಿಸಲ್ಪಡುತ್ತಿದ್ದುವೆಂತಲೂ ತಿಳಿದು ಬರುತ್ತದೆ. ಹೇಗಿ ದ್ದರೂ ಹಿಂದೂದೇಶದಲ್ಲಿ ನಾಟಕಗಳು ಬೀಜರೂಪದಿಂದಲಾ ದರೂ ದಕ್ಷಿಣ ಹಿಂದುಸ್ಥಾನದಲ್ಲಿಯೇ ಉದ್ಭವಿಸಿರಬೇಕೆಂದು ಅನುಮಾನಿಸಲಿಕ್ಕೆ ಬರುವಂತಿದೆ. ಪ್ರಾಚೀನ ಭಕ್ತಿ ಮಾರ್ಗದ ಇತಿಹಾಸವನ್ನು ಇನ್ನೂ ಯಾರೂ ಸ್ಪಷ್ಟವಾಗಿ ಬರೆದಿಟ್ಟಿಲ್ಲ. ಆದ ರಿಂದ ಈಗ ನಾವು ಭಕ್ತಿ ಮಾರ್ಗವೂ ಭಕ್ತಿಮಾರ್ಗದಿಂದ ನಾಟ ಕಗಳೂ ಹುಟ್ಟಲಿಕ್ಕೆ ದಕ್ಷಿಣ ದೇಶವೇ ಕಾರಣವಾಗಿರಬೇಕೆಂಬ ಊಹೆಯನ್ನು ಮಾತ್ರ ಮುಂದಿರಿಸುವೆವು.

ಕ್ರಿ-ಶ. ೨ನೆಯ ಶತಮಾನದಿಂದ ಸಂಸ್ಕೃತ ನಾಟಕಗಳು ರಚಿತವಾಗಿ ರಾಜ ಸಭೆಗಳಲ್ಲಿ ಅಭಿನಯಿಸಲ್ಪಡುತ್ತಿದವು. ಅವು ವಿದ್ವಾಂಸರ ನಾಟಕಗಳು ಮಾತ್ರ. ಹೀಗೆ ಅಭಿನಯಿ ಸಲ್ಪಡುತ್ತಿದ್ದ ನಾಟಕಗಳಿಗೂ ೧೦-೧೧ನೆಯ ಶತಮಾನಗ ಳಲ್ಲಿ ಒಂದು ಗಂಡಾಂತರ ಒದಗಿತು ಈ ಶತಮಾನಗಳಲ್ಲಾದ ಮುಸಲ್ಮಾನರ ದಾಳಿಗಳಿಂದ ಹಿಂದೂ ರಾಜ್ಯಗಳೊಂದಿಗೆ ಅವೂ ನಷ್ಟವಾಗಿ ಹೋದುವು. ಹಿಂದೂದೇಶದ ಆ ಸುಧಾರಿ ಸಿದ ರಂಗಭೂಮಿಯೇ ನಷ್ಟವಾಯಿತು. ದಕ್ಷಿಣದ ದೇಶ ಭಾಷೆಗಳಲ್ಲಿ ಭಾಷಾಂತರವಾದ ನಾಟಕಗಳು ಆದೆಷ್ಟು ಸಾರಿ ಓಲಗದಲ್ಲಿ ಅಭಿನಯಿಸಲ್ಪಟ್ಟವೊ ತಿಳಿಯದು. ಅಭಿನಯಿಸಲ್ಪ ಟ್ಟಂತೆ ಆಧಾರಗಳು ಇನ್ನು ದೊರೆತಂತಿಲ್ಲ. ಇರಲಿ, ಪೂರ್ವದ ರಂಗಭೂಮಿಯು ಪೂರ್ಣವಾಗಿ ಅಳಿದು ವಾಙ್ಮಯದಲ್ಲಿರುವ ನಾಟಕಗಳು ಮಾತ್ರ ನಮ್ಮ ಪಾಲಿಗೆ ಉಳಿದುವು. ಆ ತರು ವಾಯ ಹಿಂದೂದೇಶದಲ್ಲಿ ನಾಟಕಗಳು ಅಭಿನಯಿಸಲ್ಪಡ ಲಾರಂಭವಾದುದು ೧೯ನೆಯ ಶತಮಾನದಲ್ಲಿಯೇ.

೧೯ನೆಯ ಶತಮಾನದಲ್ಲಿ ಪಾಶ್ಚಾತ್ಯರ ನಾಗರಿಕತೆಯ ಪರಿ ಣಾಮದಿಂದ ನಮ್ಮದೇಶದಲ್ಲಿದ್ದ ಡೊಂಬದಾಸರ ಆಟಗಳು ನಾಟಕಗಳ ಅವಸ್ಥೆಗೆ ಮುಟ್ಟಿದವು. ಅರ್ಥಾತ್ ಆಧುನಿಕ ನಾಟಕಗಳಿಗೆ ಈ ಡೊಂಬದಾಸರ ಆಟಗಳೇ ಮೂಲ. ಈ ಡೊಂಬದಾಸರ ಆಟಗಳಿಗೆ **ಕರ್ನಾಟಕವೇ ಜನ್ಮಭೂಮಿ.**

ವೇದೋತ್ತರ ಕರ್ಮ ಕಾಂಡಕ್ಕೆ ಬೀಸತ್ತ ಆರ್ಯ ಸಮಾಜ ದಲ್ಲಿ ಬೌದ್ಧ ಜೈನ ಧರ್ಮಗಳು ಬಹು ತೀವ್ರದಿಂದ ಹರಡಿದುವು. ಇಡೀ ಹಿಂದುಸ್ತಾನವೇ ಬೌದ್ಧ ಜೈನಧರ್ಮಗಳ ಪಾಶದಲ್ಲಿ ಸಿಕ್ಕಿತ್ತು. ಆದರೆ ಆರ್ಯ ಪರಂಪರೆಯನ್ನು ವಿಶೇಷವಾಗಿ ಕಾದು ಕೊಂಡಿದ್ದ, ಈಶ್ವರನ ಸಗುಣೋಪಾಸನೆಯು ರೋಮು ರೋಮುಗಳಲ್ಲಿ ಭೇದಿಸಿದ ದಕ್ಷಿಣದ ಜನರಮೇಲೆ ಬೌ

* ಮಹಾಷ್ಟ್ರೀಯ ಜ್ಞಾನಕೋಶ ವಿಭಾಗ ೧ ಪುಟ ೩೫೯.

‡ Mysore Archeological Report 1925-26.

ಧರ್ಮಗಳ ವರ್ಚಸ್ಸು ಬಹುದಿವಸ ಬಾಳಲಿಲ್ಲ. ಆರ್ಯ ಪರಂಪರೆಯ ಕಡೆಗೆ ಮನವೆಳೆಯಿತು. **ಶಂಕರಾಚಾರ್ಯರು** ಉದಿಸಿ ಬೌದ್ಧ ಜೈನ ಧರ್ಮಗಳನ್ನು ಖಂಡಿಸಿ ಮತ್ತೆ ಆರ್ಯಧರ್ಮವನ್ನು ಪ್ರಸ್ಥಾಪಿಸಿದರು. **ರಾಮಾನುಜಾಚಾರ್ಯರೂ ಮಧ್ವಾಚಾರ್ಯರೂ** ಅವತರಿಸಿ ಭಕ್ತಿ ಮಾರ್ಗವನ್ನು ಹರಡಿದರು. ಭಕ್ತಿ ಭಂಡಾರಿ **ಬಸವೇಶ್ವರ**ನು ವೀರಶೈವ ಮತವನ್ನು ಉದ್ಧರಿಸಿ ಇಡೀ ಕರ್ನಾಟಕವನ್ನೇ ತನ್ನ ಮತಕ್ಕೆಳೆದುಕೊಂಡನು. ರಾಮಾನುಜಾಚಾರ್ಯರು ಕರ್ನಾಟಕದ ಹೊರಗಿನವರಾದರೂ ತಮ್ಮ ಮತವನ್ನು ಪ್ರಚಾರ ಮಾಡಲಿಕ್ಕೆ ಪ್ರಾರಂಭಿಸಿದುದು ಕರ್ನಾಟಕದಲ್ಲಿಯೇ. ಬಸವೇಶ್ವರ ವಧ್ವಾಚಾರ್ಯರಂತೂ ಕನ್ನಡ ತಾಯಿಯ ಮಕ್ಕಳೇ. ಬೌದ್ಧಜೈನ ಧರ್ಮಗಳ ತರುವಾಯದಲ್ಲಿ ಉತ್ಪನ್ನವಾದ ಭಕ್ತಿಮಾರ್ಗದ ತವರೂರು ಕರ್ನಾಟಕವೇ ಎಂಬುದು ನಿರ್ವಿವಾದವಾಗಿದೆ. ಉತ್ತರ ಹಿಂದುಸ್ತಾನದಲ್ಲಿ ಭಕ್ತಿ ಮಾರ್ಗವನ್ನು ಪ್ರಚಾರದಲ್ಲಿ ತಂದ ಚೈತನ್ಯರು ಈ ದಕ್ಷಿಣದ ಆಚಾರ್ಯರ ಶಿಷ್ಯರೇ ಆಗಿರುವರು ಭಕ್ತಿ ಮಾರ್ಗವು ಕರ್ನಾಟಕದಲ್ಲಿ ಹುಟ್ಟಿ ಮಹಾರಾಷ್ಟ್ರದ ಸಂತರಿಂದಲೂ **ವಲ್ಲಭಾಚಾರ್ಯ ಕಬೀರದಾಸ** ಮೊದಲಾದ ಭಕ್ತಿ ಮಾರ್ಗದ ಅನುಯಾಯಿಗಳಿಂದಲೂ ಹಿಂದುಸ್ತಾನದ ತುಂಬ ಹರಡಿತು.

ಭಕ್ತಿ ಮಾರ್ಗದ ತವರೂರಾದ ಕರ್ನಾಟಕರಲ್ಲಿ **ಶರಣ**ರಿಂದಲೂ **ದಾಸ**ರಿಂದಲೂ ಅನೇಕ ಕೀರ್ತನೆಗಳು ರಚಿಸಲ್ಪಟ್ಟವು. ಪರಂಪರೆಯಿಂದ ದಾಸಕೂಟವೇ ಉತ್ಪನ್ನವಾಯಿತು. ಈ ದಾಸ ಕೂಟದವರು ಭಾರತ ಭಾಗವತಗಳಲ್ಲಿ ವರ್ಣಿತವಾದ ಪರಮಾತ್ಮನ ಲೀಲೆಗಳನ್ನು ತಮ್ಮ ಮಧುರವಾಣಿಯಿಂದ ಪಾಡಿ ಜನ ಸಮಾಜವನ್ನು ತೃಪ್ತಿಪಡಿಸಲಾರಭಿಸಿದರು. ಬರ ಬರುತ್ತ ಪರಮಾತ್ಮನ ಲೀಲೆಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸುವ ದಶಾವತಾರದ ಆಟಗಳು ಭಾಗವತರ ಆಟಗಳು ಬಳಕೆಗೆ ಬಂದವು. ಭಕ್ತಿಮಾರ್ಗಕ್ಕೆ ಸೇರಿದ ಒಂದು ಪಂಗಡದವರ ಕೆಲಸವೇ ಈ ಆಟಗಳನ್ನಾಡಿ ತೋರಿಸುವುದಾಯಿತು. ಆ ಸಮಾಜವು ಇಂದಿಗೂ ಕರ್ನಾಟಕದಲ್ಲಿ ದಾಸರು ಎಂಬ ಜಾತಿಯಿಂದ ವ್ಯವಹರಿಸುತ್ತಿದೆ. ಇಂದಿನವರೆಗೂ ಅವರು ಹಾಡುವುದರಿಂದಲೂ ಆಡುವುದರಿಂದಲೂ ಹೊಟ್ಟೆ ತುಂಬಿಸಿಕೊಳ್ಳುತ್ತ ಬಂದಿರುವರು. ಈಗ ಮಾತ್ರ ಹೊಸ ಹೊಸ ನಾಟಕಗಳಿಮ್ದ ಅವರ ಆಟವು ಸಾಗದೆ ಹೊಟ್ಟೆಗಾಗಿ ಬೇರೊಂದು ಮಾರ್ಗವನ್ನವಲಂಬಿಸಬೇಕಾಗಿದೆ. ಒಯಲಾಟಗಳೇ ಕಸಬಾಗಿ ಉಳ್ಳ ದಾಸರೆಂಬ ಜಾತಿಯ ಸಮಾಜವು ಕರ್ನಾಟಕದಲ್ಲಲ್ಲದೆ ಬೇರೆ ಎಲ್ಲಿಯೂ ಇರುವುದಿಲ್ಲ. ಭಕ್ತಿ ಮಾರ್ಗದಲ್ಲುತ್ಪನ್ನವಾದ ಈ ದಾಸರಾಟಗಳಂತಹ ಆಟಗಳಿಗೆ ಕರ್ನಾಟಕವೇ ತವರೂರೆಂಬುವದಕ್ಕೆ ಈ ಮಾತೇ ಸಾಕ್ಷಿ. ಇಂತಹ ಆಟಗಳು, ಈಗಿನ ನಾಟಕಗಳು ಬಳಕೆಯಲ್ಲಿ ಒರುವ ಪೂರ್ವದಲ್ಲಿ, ಬೇರೆ ಪ್ರಾಂತಗಳಲ್ಲಿಯೂ ಇದ್ದಿರಬಹುದು. ಭಕ್ತಿ ಮಾರ್ಗವು ಪ್ರಸಾರವಾದಂತೆ ಕರ್ನಾಟಕದಿಂದಲೇ ಈ ಆಟಗಳು ಉಳಿದ ಕಡೆಗೆ ಪ್ರಸಾರವಾಗಿರಬಹುದು. ಈ ಭಾಗದ ತರ ಆಟಗಳನ್ನು ನೋಡಿಯೇ ಮಹಾರಾಷ್ಟ್ರದಲ್ಲಿ ಅಂತಹ ಆಟಗಳು ಉತ್ಪನ್ನವಾಗಿ ಅವುಗಳಲ್ಲಿ ಸಾಧಾರಣೆಯಾಗುತ್ತ ಈಗಿನ ಮಹಾರಾಷ್ಟ್ರ ರಂಗಭೂಮಿಯಾಗಿದೆ. ನಾಟಕಗಳಿಗೆ ಜನನಿ ಸ್ವರೂಪಿಯಾದ ಕರ್ನಾಟಕ ರಂಗಭೂಮಿಯು ಮಾತ್ರ ಇಂದು ಉಳಿದ ಭಾಷೆಗಳ ರಂಗಭೂಮಿಯಿಂದ ಎಷ್ಟೋ ಮಾತುಗಳನ್ನು ಕಲಿತುಕೊಳ್ಳಬೇಕಾಗಿದೆ. ಇದರಿಂದ ಪರ ಭಾಷೆಯವರು ಕರ್ನಾಟಕಕ್ಕಿರುವ ಮಾತೃ ಪದವನ್ನು ಕಿತ್ತೊಗೆಯಲು ಪ್ರಯತ್ನಿಸಬಹುದು. ಆದರೆ ಆ ಜನನೀಪದವು ಮಾತ್ರ ಎಂದಿಗೂ ಸುಳ್ಳಾಗಲಿಕ್ಕಿಲ್ಲ.

ಆಧುನಿಕ ನಾಟಕಗಳಿಗೆ ಜನನೀ ಸ್ವರೂಪಿಯಾದ ಕರ್ನಾಟಕ ರಂಗಭೂಮಿಯು ಪೂರ್ವಪರಂಪರೆಯನ್ನು ಕಾಯ್ದುಕೊಂಡು ಬಂದ ಒಂದು ಮಹತ್ವದ ಕಾರ್ಯವನ್ನು ಮಾಡಿರುವುದು. "ವಿದ್ಯಾಚಾರ ಸಂಸ್ಕೃತಿ ಸಮನ್ವಿತ ಕಾಲದೊಳದ ನಮ್ಮ ಸಮಾಜದೊಳಗಿನ ಪ್ರತಿಷ್ಠಿತರೆಂಬವರು ಮಾಡುತ್ತಿದ್ದೆ ನಾಟಕ ಪ್ರಯೋಗಗಳೇ ದೇಶದ ಅವನತಿಯ ಕಾಲಕ್ಕೆ ದಶಾವತಾರ ಆಟ ಭಾಗವತರ ಆಟ ಮೊದಲಾದವುಗಳಲ್ಲಿ ಇಂದಿಗೂ ಕಂಡ ಬರುತ್ತಿರುವ ಸ್ವರೂಪವನ್ನು ಹೊಂದಿರಬೇಕು." ಎಂದು ಕೆಲವರ ಅಭಿಪ್ರಾಯ* ದಶಾವತಾರ ಭಾಗವತರ ಆಟಗಳು ಪ್ರಾಚೀನ ರಂಗಭೂಮಿಯ ವಿಕೃತ ಸ್ವರೂಪಗಳಲ್ಲ. ಶ್ರೋಡರ ಇವರು ಅದಾವ ಪ್ರಾಚೀನ ಪ್ರಾಕೃತ ಆಟಗಳಿಂದ ಸಂಸ್ಕೃತ ನಾಟಕಗಳು ಉತ್ಪನ್ನವಾದುವೆಂದು ಹೇಳುವರೊ ಅವು ಪ್ರಾಕೃತ ಆಟಗಳಾಗಿವೆ, ಈ ಮಾತು ಈ ಆಟಗಳಲ್ಲಿ ಒರುವ ಪಾತ್ರಗಳಿಂದ ವ್ಯಕ್ತವಾಗುತ್ತದೆ. ವಿಂಡಿಶ್ ಇವರು-ಕಥಾನಕ ಪಾತ್ರ (ನಟ ವಿದೂಷಕ ಮೊದಲಾಗಿ) ಪ್ರಸ್ತಾವನೆ ಸೂತ್ರಧಾರ ಮೊದಲಾದ ಸಂಗತಿಗಳಲ್ಲಿ ಗ್ರೀಕ ನಾಟಕಗಳಿಗೂ ಭಾರತೀಯ ನಾಟಕಗಳಿಗೂ ಇರುವ ಸಾದೃಶ್ಯವನ್ನು ಮುಂದಿಟ್ಟು ಭಾರತೀಯ ನಾಟ್ಯಕಲೆಯು ಗ್ರೀಕರ ಅನುಕರಣದಿಂದ ಹುಟ್ಟಿದುದಾಗಿ ಸಿದ್ಧ ಮಾಡಿರುವರು ಹಿಂದುಸ್ತಾನದ ನಾಟ್ಯಕಲೆಯು ಸ್ವತಂತ್ರವಾಗಿ ಹುಟ್ಟಿತೆಂದು ತಿಳಿಯುವವರು ವಿಂಡಿಶ್ ಇವರ ಪಾತ್ರ ಸಾದೃಶ್ಯದ ಪ್ರಮಾಣವನ್ನು ಅಂಗೀಕರಿಸದೆ ಅಂತಹ ಪಾತ್ರಗಳು ಸ್ವಯಂ ಸ್ಫೂರ್ತಿಯಿಂದಲೇ ಭಾರತೀಯ ನಾಟ್ಯ ಕಲೆಯಲ್ಲಿ ಉತ್ಪನ್ನವಾದುವಾಗಿ ಹೇಳುವರು. ವಿಂಡಿಶ್

* ವಾಗ್ಭೂಷಣ. ಶಾಂತ ಕವಿಗಳ ಸಂಚಿಕೆ.

ಇನ್ನೊಬ್ಬ ಪ್ಲಾತಸ್‌ನ ವಿದೂಷಕನ ಪಾತ್ರವು ಗ್ರೀಕ್ ರೋಮನ್ ನಾಟಕಗಳಲ್ಲಿರುವ 'ಬಫೂನ' ಪಾತ್ರದ ಅನುಕರಣವಾಗಿದೆ. ಆದರೆ ಮಾಂಟಗೋನೇರೀ ಶೂಲರ ಎಂಬವರು ಈ ವಿದೂಷಕನ ಪಾತ್ರವು ಬ್ರಾಹ್ಮಣ ವರ್ಗದ ತಿರಸ್ಕಾರವನ್ನು ವ್ಯಕ್ತಪಡಿಸುವದಕ್ಕಾಗಿ ಸಾಮಾನ್ಯರ ಆಟಗಳಲ್ಲಿ ಉತ್ಪನ್ನವಾದ ಪಾತ್ರವಾಗಿದ್ದು ಆ ಪಾತ್ರಕ್ಕೆ ಕೆಲವೊಂದು ಕೆಲಸ ವೊಪ್ಪಿಸಿ ಸಂಸ್ಕೃತ ನಾಟಕಕಾರರು ತಮ್ಮ ನಾಟಕಗಳಲ್ಲಿ ಸೇರಿಸಿಕೊಂಡರೆಂದು ಹೇಳುವರು* ಇದೇ ಪ್ರಕಾರ ಸೂತ್ರಧಾರನ ಪಾತ್ರವು ಪ್ರಾಕೃತ ಜನರ ಆಟಗಳಲ್ಲಿ ಹುಟ್ಟಿದುದಾಗಿರುವುದೆಂದೂ ಪ್ರಾಕೃತ ಜನರ ಆಟಗಳಿಗೆ ವ್ಯವಸ್ಥಿತ ಸ್ವರೂಪ ಕೊಡಲು ಸಂಸ್ಕೃತ ನಾಟಕಗಳಾಗಿರುವವೆಂದೂ ನಮ್ಮೊಡೊಂಬ ದಾಸರ ಭಾಗವತರ ಆಟಗಳಿಂದ ತೋರಿಸ ಬಹುದು.

ಸೂತ್ರಧಾರ ಪಾತ್ರದ ವಿಷಯದಲ್ಲಿ-"ಸೂತ್ರಧಾರ ಅಥವಾ ಸ್ಟೇಜಮ್ಯಾನೇಜರ ಎಂಬವನೂ ಬಹುವಾಗಿ ಒಂದು ಪಾತ್ರವೇ ಆಗಿರಬೇಕು. ಈ ಪಾತ್ರವು ನಾಟಕಗಳಲ್ಲಿ ಬರುವ ಮೊದಲನೆಯ ಪಾತ್ರವಾಗಿದ್ದು ಸರ್ವ ನಾಟಕದಲ್ಲಿ ಈ ಪಾತ್ರದ ಕಡೆಗೆ ಮುಖ್ಯ ಕೆಲಸವಿದ್ದಂತೆ ತೋರುತ್ತದೆ. ಈ ಪಾತ್ರವು ಗ್ರೀಕರ 'ಪ್ರೋಟಗೋನಿಸ್ಟ' ಅಥವಾ ರೋಮನ್ ಜನರ 'ಡುಕ್ಸ ಗ್ರೆಗಿಸ್' ಪಾತ್ರವನ್ನು ತೋರುತ್ತದೆ ಎಂದು ವಿಂಡಿಶ್ ಇವರ ಅಭಿಪ್ರಾಯ. ಆದರೆ ಸೂತ್ರಧಾರನ ಕೆಲಸಗಳು ಮೂಲದಲ್ಲಿ ಅವುವಿದ್ದುವೆಂಬುದನ್ನು ನಮ್ಮ ದಾಸ ಭಾಗವತರ ಆಟಗಳಲ್ಲಿ ಸಹಜವಾಗಿ ನೋಡಬಹುದು.

ಸಂಸ್ಕೃತ ನಾಟಕಗಳಲ್ಲಿ ನಾಟಕ ಪ್ರಾರಂಭದಲ್ಲಿ ಪ್ರಸ್ತಾವನೆಮಾಡಿ ಅಡಗಿದ ಸೂತ್ರಧಾರನ ಪಾತ್ರವು ಮತ್ತೊಮ್ಮೆ ದೃಷ್ಟಿಗೆ ಬೀಳುವುದೇ ಇಲ್ಲ. ಆದೇ ನಮ್ಮ ದಾಸ ಭಾಗವತರ ಆಟಗಳಲ್ಲಿ ಈ ಸೂತ್ರಧಾರನ-ಆಟ ನಡಿಸುವವನ-ಭಾಗವತನ-ಮೂರೂವರೆ ಮೊಳ ದೇಹವು ಆಟ ಮುಗಿವವರೆಗೂ ಕಣ್ಣು ಮುಂದೆ ನಿಂತೇ ಇರುತ್ತದೆ. (ಪ್ರಾರಂಭದಲ್ಲಿ ರಂಗ ಸ್ಥಳದ ಪೂಜೆಮಾಡಿ ವಿಘ್ನೇಶನನ್ನು ಸ್ತುತಿಸುವವನು ಸೂತ್ರಧಾರ, ಮುಂದೆ ಆಟ ಮುಗಿವವರೆಗೆ ಪ್ರತಿಯೊಂದು ಪಾತ್ರದ ಆಗಮನದ ಪೂರ್ವದಲ್ಲಿ ಇಂತಹ ಪಾತ್ರವು ಬರುತ್ತದೆಂದು ವರ್ಣನೆ ಮಾಡಿ ಆ ಪಾತ್ರದ ಪರಿಚಯಮಾಡಿಕೊಡುವವನೂ ಸೂತ್ರಧಾರನೇ. ರಂಗಭೂಮಿಯ ಮೇಲೆ ಬಂದ ಪಾತ್ರಕ್ಕೆ ದೂತನಾಗಿಯೊ ದೂತಿಯಾಗಿಯೊ (ಈ ದೂತಿಯೇ-ಗೊಡ್ಡಿ-ವಿದೂಷಕನ ಜನನಿಯಾಗಿರಬಹುದೊ?) ಸಹಾಯಮಾಡುವವನೂ ಸೂತ್ರಧಾರನೇ. ಆದೊಂದು ವೇಳೆ ಪಾತ್ರಕ್ಕೆ ಹಾಡು ಮಾತುಗಳು ಬರದಿದ್ದರೆ ಅವನ್ನು ಪೂರ್ತಿಮಾಡುವವನೂ ಆಟ ನಡಿಸುವವನೇ.) ಯಾವ ಪಾತ್ರವಾದರೂ ಈತನ ಮುಂದೆ ನಿಲ್ಲಲೇಬೇಕು. ಈತನಲ್ಲನೇ ಆಟದ ನಿಜವಾದ ಸೂತ್ರಧಾರ? ಇದೀಗ ವ್ಯಕ್ತವಾಗಬಹುದು. ಸೂತ್ರಧಾರನ ಕಡೆಗಿದ್ದ ಕೆಲಸಗಳು ಅವುವೆಂಬುದು, ಈ ಪ್ರಾಕೃತ-ಜನಸಾಮಾನ್ಯದ-ಆಟಗಳಲ್ಲಿ ಸುಧಾರಣೆಯಾಗಿ ಸಂಸ್ಕೃತ ನಾಟಕಗಳು ಬರೆಯಲ್ಪಡಲಾರಂಭಿಸಿದಾಗ ಪಾತ್ರಗಳ ಪರಿಚಯವನ್ನು ಮಾಡಿಕೊಡುವ ಕೆಲಸಕ್ಕೆ ವ್ಯವಸ್ಥಿತ ಸ್ವರೂಪ ಕೊಟ್ಟು ಹೊಸದಾಗಿ ರಂಗಭೂಮಿಯಮೇಲೆ ಬರುವ ಪಾತ್ರವನ್ನು ಬೇರೊಂದು ಪಾತ್ರದಿಂದಾಗಲಿ ದಾಸನಾಸಿಯರಿಂದಾಗಲಿ ವಿದೂಷಕನಿಂದಾಗಲಿ ಸೂಚಿಸಲ್ಪಡಬೇಕೆಂದು ನಿಯಮಮಾಡಿಕೊಂಡರು. ನಾಟಕಾರಂಭದಲ್ಲಿ ಬೇರೊಂದು ಪಾತ್ರದ ವ್ಯವಸೆಯಾಗುವುದು ಅಶಕ್ಯವಿರುವುದರಿಂದ ಅಲ್ಲಿ ಸೂತ್ರ ಈ ಕೆಲಸವು ನಾಂದಿಯನ್ನು ಪೂರೈಸುವ ಸೂತ್ರಧಾರನಿಂದಲೇ ಆಗಬೇಕಾಯಿತು. ಮೊದಲಿನ ಕೆಲಸವೆಲ್ಲ ಇಲ್ಲದಂತಾಗಿ ಪೂರ್ವರಂಗವನ್ನು ಅಭಿನಯಿಸುವ ಒಂದೇ ಒಂದು ಕೆಲಸವು ಉಳಿಯಿತು.

ದಾಸ ಭಾಗವತರ ಆಟಗಳಲ್ಲಿ ಮುಮ್ಮೇಳದಲ್ಲಿ ಸೂತ್ರಧಾರನೂ-ಆಟ ನಡಿಸುವವನು-ಆಟದಲ್ಲಿ ಬರುವ ಒಂದು ಪಾತ್ರವೂ ಇರುತ್ತಾರೆ. ಇವರಿಗೆ ಹಿಮ್ಮೇಳವಾಗಿ ಒಂದೋ ಎರಡೋ ವ್ಯಕ್ತಿಗಳಿರುತ್ತವೆ. ಮುಮ್ಮೇಳದವರು ಪದಗಳನ್ನು ಹಾಡುವಾಗ ಅವರಿಗೆ ಸಹಾಯಕರಾಗಿ ಧ್ವನಿಗೂಡಿಸುವದೇ ಹಿಮ್ಮೇಳದವರ ಕೆಲಸ. ಇದೂ ಅಲ್ಲದೆ ಸೂತ್ರಧಾರನು ಪಾತ್ರವನ್ನು ಸೂಚಿಸುವಾಗಲೂ ಆಗ ಆಗಲಕ್ಕೆ ಕೆಲಸವನ್ನು ಎಂದರೆ ಸಂಸ್ಕೃತ ನಾಟಕಗಳಲ್ಲಿ ವಿಷ್ಕಂಭಕ ಪ್ರವೇಶಗಳಲ್ಲಿ ಆಗುವ ಭಾಗವನ್ನು ನಡೆಸುವಾಗಲೂ (ಪ್ರಾಕೃತ ಆಟಗಳಲ್ಲಿ ಈ ಭಾಗ ನಡೆಯಿಸುವುದೂ ಸೂತ್ರಧಾರನ ಕೆಲಸವೇ) ಅವನಿಗೆ ಸಹಾಯಕರು ಈ ಹಿಮ್ಮೇಳದವರೇ. ಈ ಹಿಮ್ಮೇಳದವರೇ ಸಂಸ್ಕೃತ ನಾಟಕಗಳಲ್ಲಿ ಪೂರ್ವರಂಗದಲ್ಲಿ ಸೂತ್ರಧಾರನ ಕೂಡ ಬರುವ ಪರಿಪಾರ್ಶ್ವಕರೆಂಬವರು. ನಾಟಕಕಾರರಲ್ಲಿ ಕೆಲವರಿಗೆ ನಾಟಕಾರಂಭದಲ್ಲಿ ಬರಿಯ ಗಂಡು ಪೋರೆಗಳನ್ನೇ ನೋಡುವುದು ಸರಿಬೀಳದೆ ಅವರು ಪರಿಪಾರ್ಶ್ವನ ಮಾಸೆ ಕೆಗೆದು ಸೀರೆಯನ್ನುಡಿಸಿ ನಟಿಯನ್ನಾಗಿ ಮಾಡಿದರು. ಸಾಮಾನ್ಯರ ಆಟಗಳಲ್ಲಿ ಸೂತ್ರಧಾರನು ಅಭಿನಯಿಸುವ ಗೊಡ್ಡಿಯ ಭಾಗವು ಸಂಸ್ಕೃತ ನಾಟಕಗಳಲ್ಲಿ ವಿದೂಷಕನೆಂಬ ಹೆಸರಿನ ಪಾತ್ರವಿಂದ ಅಭಿನಯಿಸಲ್ಪಡು

* ಆಮೇರಿಕನ್ ಓರಿಯಂಟಲ್ ಸೊಸಾಯಿಟೀ ಜರ್ನಲ್ ವಾಲ್ಯೂಮು ೨೦, ದ್ವಿತೀಯಾರ್ಧ—ಮಹಾರಾಷ್ಟ್ರೀಯ ಜ್ಞಾನಕೋಶ ವಿ. ೧. ಪು. ೬೬.

ವಂತೆ ಹಿಮ್ಮೇಳದವರಿಂದ ಎಂದರೆ ಪರಿಪಾರ್ಶ್ವಕರಿಂದ ಅಭಿನಯಿಸಲ್ಪಡುವ ಭಾಗವು ವಿಟ ಶಕಾರ ಮೊದಲಾದ ಹೆಸರಿನ ಪಾತ್ರಗಳಿಂದ ಅಭಿನಯಿಸಲ್ಪಡಲಾರಂಭವಾಯಿತು.

ನಾಟಕಾರಂಭದಲ್ಲಿ ಬರುವ ಸೂತ್ರಧಾರ ಪರಿಪಾರ್ಶ್ವಕರೇ ನಾಟಕದ ಮಧ್ಯದಲ್ಲಿ ಬರುವ ವಿದೂಷಕ ವಿಟ ಶಕಾರ ಮೊದಲಾದ ಪಾತ್ರಗಳು. ಸಾಮಾನ್ಯರ ಆಟಗಳಲ್ಲಿ ಇವರಿಗೆಯೆ ಭಾಗವತ-ಆಟ ನಡಿಸುವನ-ಹಿಮ್ಮೇಳದವ ಎಂದು ಹೆಸರು. ಇದೆಲ್ಲವನ್ನು ನೀಕ್ಷಿಸುವಲ್ಲಿ ದಾಸ ಭಾಗವತರ ರಂಗ ಭೂಮಿಯು ಸಂಸ್ಕೃತ ರಂಗಭೂಮಿಯ ವಿಕೃತ ಸ್ವರೂಪ ವಾಗಿರದೆ ಪ್ರಾಥಮಿಕ ಸ್ವರೂಪವಾಗಿದ್ದುದು ಸ್ಪಷ್ಟವಾಗು ವುದು. ಸೂತ್ರಧಾರ ವಿಟವಿದೂಷಕ ಶಕಾರ ಮೊದಲಾದ ಪಾತ್ರಗಳ ಪ್ರಾಥಮಿಕ ಸ್ವರೂಪವು ಈ ನಮ್ಮ ಭಾರತೀಯ ಪ್ರಾಕೃತ ನಾಟಕಗಳಲ್ಲಿ ಕಂಡುಬರುವುದರಿಂದ ಈ ಪಾತ್ರಗಳು ನಮ್ಮ ದೇಶದಲ್ಲಿಯೇ ಸ್ವತಂತ್ರವಾಗಿ ಹುಟ್ಟಿರಬೇಕೆಂಬುದು ಸಹಜವೇ ಇದೆ. ಸಂಸ್ಕೃತನಾಟಕಗಳು ಅಭಿನಯಿಸಲ್ಪಡು ತ್ತಿರುವ ಪೂರ್ವದಲ್ಲಿನ ರಂಗಭೂಮಿಯು ಈ ದಾಸ ಭಾಗ ವತರ ಆಟಗಳಲ್ಲಿ ಕಂಡುಬರುವುದರಿಂದ ಆ ಪ್ರಾಚೀನ ಪರಂ ಪರೆಯನ್ನು ಕಾಯ್ದುಕೊಂಡು ಒಂದ ಮಾನವು ಈ ದಾಸ ಭಾಗವತರ ಆಟಗಳಿಗೆ ಅರ್ಥಾತ್ ಕರ್ನಾಟಕ ರಂಗಭೂಮಿ ಗಿರುತ್ತದೆ. ಕರ್ನಾಟಕ ರಂಗಭೂಮಿಯು ಪ್ರಾಚೀನ ಪರಂ ಪರೆಯನ್ನು ಕಾಯ್ದುಕೊಂಡು ಬಂದು ಆಧುನಿಕ ರಂಗ ಭೂಮಿಗೆ ಜನನಿಯಾಗಿದೆ.

——:——

ಲೇಖಕ :—ಶ್ರೀ।
ಎಂ.ಜಿ. ವೆಂಕಟೇಶಯ್ಯ
ಬಿ.ಎ., ಬಿ.ಟಿ.,
ಬಳ್ಳಾರಿ.

ಅಟ್ಟದಾಟ.

"ದೀಪ, ಎಲ್ಲಿಗೆ?"

"ಆಟ ಸ್ವಾಮಿ. ಇಲ್ಲೇ ನಾಲ್ಕನೇ ಬೀದಿ ಮೇಲಗಡೆ ಆ ಮಂಟಿಗರ ಜೌಕ, ಬುದ್ಧಿ."

"ಏನಾಟ?"

"ಬಾಣಸುರನ ಕೇಳಿಕೆ"

"ಯಾರಾಡುತ್ತಾರೆ?"

"ಕ್ಯಾತಸಂದ್ರದಿಂದ ಬಂದಿದ್ದಾರೆ. ಅವರು ಸೊಸ್ಟೆ ಗುಟ್ಟ ಳ್ಳಿಲಿ, "ಗಂಗೆ ಗೌರಿ" ಆಡಿದರು ಬುದ್ಧಿ. ಬೆಂಚು ಹಾಕೈತೆ. ಬನ್ನಿ ಬುದ್ಧಿ."

"ಅಟ್ಟದಾಟವೇನು?"

"ಹೌದು, ಬುದ್ಧಿ. ಇದಕ್ಕೆ ಅಟ್ಟ ಇಲ್ಲದಿದ್ದರೆ ಆಗೆ ತೈತೇನ್ರು"

ಈ 'ಅಟ್ಟದಾಟ' ಎಂಬ ಪದವನ್ನು ಕೇಳಿಯೇ ಇರಬಹುದು. ಆದರೆ ಬೀದಿಗಳಲ್ಲಿ "ಅಟ್ಟ"ವನ್ನು ಕಟ್ಟಿ, ಅದರ ಮೇಲೆ ನಾಟಕಗಳನ್ನು ಪ್ರದರ್ಶಿಸುವುದನ್ನು ನೋಡದೇ ಇರುವವರು ಅತಿ ವಿರಳ. ಇಂಥಹ ನಾಟಕಗಳನ್ನು ನಮ್ಮಲ್ಲಿ 'ಅಟ್ಟದಾಟ' ವೆನ್ನುತ್ತಾರೆ. ಇವುಗಳಲ್ಲಿ "ಗಂಗೆ ಗೌರಿ" "ದುಶ್ಯಾಸನ ಕಾಳಗ" "ಬಾಣಸುರನ ಕೇಳಿಕೆ" ಇವುಗಳನ್ನಾಡುವಾಗ ಲಂತೂ ಜನರು ಸುಮ್ಮನೆ ಕಿಕ್ಕಿರಿಸಿರುತ್ತಾರೆ.

ಕೆಲವರು ಇವುಗಳನ್ನು "ನಾಟಕ"ಗಳೆಂದು ಕರೆಯಲು ಆಕ್ಷೇಪಿಸಬಹುದು. ದೊಂಬರ ಆಟಕ್ಕೂ ಸರ್ಕಸ್(Circus) ಗೂ ಎಷ್ಟು ತಾರತಮ್ಯವಿದೆಯೋ ಇವುಗಳಿಗೂ ನಾಟಕ ಗಳಿಗೂ ಅಷ್ಟು ತಾರತಮ್ಯ. ಆವಾಗ್ಯೂ ರಂಗ ಸ್ಥಳದ ವಾತಾವರಣವು ಇವುಗಳಲ್ಲಿಯೂ ಕಂಡುಬರುತ್ತದೆ; ಇವೇ ಮೊಟ್ಟಮೊದಲು ಹುಟ್ಟಿದ ನಾಟಕಗಳೆಂದು ನಾವು ಹೇಳ ಬೇಕಾಗಿದೆ. 'ಪಾರ್ಸಿ' ಕಂಪೆನಿಯ "ಸೀನರಿ"ಯ ಬದಲು, ಹಿಂದೆ ನಿಂತು ತಾಳ ಹಾಕುವ ಗುಂಪೇ ಕಣ್ಣಿಗೆ ಬೀಳುತ್ತದೆ. 'ಪಾತ್ರ' ಗಳು ಬಣ್ಣ ಬಳಿದುಕೊಂಡು ಬರುತ್ತಾರೆಂದು

ಹೇಳಬೇಕಾಗಿಲ್ಲ. ಅವುಗಳಿಗೆ ಬಹಳವಾಟ್ಟಿಗೆ ನಾಲ್ಕು ಕೈಗ ಗಳಿರುತ್ತವೆ; ಆದರೆ ಎರಡೇ ಅಲ್ಲಾಡುವವು. ನಾನಾ ವಿಧ ವಾಗಿ 'ಪಾತ್ರ' ಗಳನ್ನು ಏಂಬೆ ಹಿಮ್ಮೇಳದವರು ಹೊಗಳು ತ್ತಾರೆ. ಬಹಳ ಸಂದರ್ಭಗಳಲ್ಲಿ ಇದಲ್ಲದೆ ಪಾತ್ರಗಳೂ ಸಹ ತಮ್ಮನ್ನು ತಾವೇ ಹೊಗಳಿಕೊಳ್ಳುತ್ತವೆ.

ಸಾಧಾರಣವಾಗಿ ಪ್ರತಿ ಒಂದು ಆಟಕ್ಕೂ ಸೂತ್ರಧಾರ ನಟಿ ಪ್ರವೇಶಿಸುತ್ತಾರೆ. ಆದರೆ ಇಲ್ಲಿ ಸೂತ್ರಧಾರನ ಬದಲಾಗಿ "ಗಣೇಶ" ಬರುತ್ತಾನೆ. ಪ್ರತಿಯೊಂದು ಕೆಲಸವಾಡ ಬೇಕಾದರೂ, ಗಣೇಶನನ್ನು ಪೂಜಿಸಿ, ಆತನ ವರವನ್ನು ಬೇಡಿ, ಪ್ರಸಾದ ಪಡೆದ ನಂತರ ಬೇರೆ ಪೂಜೆಮಾಡಬೇಕೆಂಬುದು ಎಲ್ಲ ರಿಗೂ ತಿಳಿದ ವಿಷಯವಾಗಿದೆ. ಅದನ್ನು ಜನರಿಗೆ ಸೂಚಿಸು ವುದಕ್ಕಾಗಿಯೋ ಏನೋ, ಇದರಲ್ಲಿಯೂ ಮೊದಲು ಗಣೇಶ ನನ್ನು ರಂಗಸ್ಥಳದಲ್ಲಿ ಬಿಡುತ್ತಾರೆ. ಅಲ್ಲದೆ ಇಲ್ಲಿ ಪ್ರತಿ ಒಂದು ಪಾತ್ರಕ್ಕೂ ಸೂತ್ರಧಾರನಿದ್ದಂತೆ ಕಾಣಬರುತ್ತದೆ. ಇವನನ್ನು ಸೂತ್ರಧಾರನೆನ್ನುವುದಿಲ್ಲ; ಸಾರಥಿ ಎನ್ನುತ್ತಾರೆ. ಸಾರಥಿಗೆ ರಥವನ್ನು ನಡೆಸುವುದು ಧರ್ಮವಾದರೂ ಈ ಸಂದರ್ಭದಲ್ಲಿ ಪಾತ್ರವನ್ನೇ ನಡೆಯಿಸುತ್ತಾನೆ; ಇವನು ಇಲ್ಲಿ ಮುಖ್ಯವಾದ ಪಾತ್ರವಲ್ಲವೆಂಬುದನ್ನು ತೋರಿಸುವುದಕ್ಕೂ ಅಲ್ಲದೆ 'ಪಾತ್ರ' ನೇ ಯಜಮಾನನೆಂಬುದನ್ನು ತೋರಿಸುವುದಕ್ಕೂ ಆಗಾಗ "ಹೀಗೆ ಬರುವಂಥಾವನಾಗೈ ಸಾರಥಿ"—"ಮತ್ತೂ ಹೀಗೆ ಬರುವಂಥಾವನಾಗೈ ಸಾರಥಿ" ಎಂದು ಯಜಮಾನನು ಇಲ್ಲಿಂದಲ್ಲಿಗೆ ತಳ್ಳುವುದೂ ಉಂಟು. ನಾಟಕದಲ್ಲಿ ನಾಟ್ಯವೂ ಒಂದು ಮುಖ್ಯವಾದ ಅಂಶ; ಇಲ್ಲಿ ಪ್ರತಿ ಒಂದು ಪಾತ್ರವೂ ಕುಣಿಯಬೇಕು. ಒಟ್ಟಿಗೆ ಇಬ್ಬರು ಕುಣಿಯುವುದೂ ಉಂಟು. ಆದರೆ ಇದು ಅತಿ ವಿರಳ. ಪಾತ್ರಗಳು ಬಹಳ ಕಷ್ಟಪಟ್ಟಾಗ್ಯೂ ನೋಟಕರಿಗೆ ಆನಂದವುಂಟಾಗುತ್ತದೆಂದು ಹೇಳಲಾಗುವು ದಿಲ್ಲ. ಪಾರ್ಸಿ ಡ್ಯಾನ್ಸ್ ಇಲ್ಲಿ ಬರಬೇಕೆಂದರೆ ಹೇಗೆ ಬಂದೀತು!

ರಾಮಾಯಣ, ಮಹಾಭಾರತ, ಇವುಗಳನ್ನು ಓದುವುದ ಕ್ಕಾಗದೆ ಇರುವವರಿಗೆ, ಆದರ ಮುಖ್ಯ ವಿಷಯಗಳನ್ನು ತಿಳಿ ಸುವುದೇ ಈ ಆಟಗಳ ಉದ್ದೇಶ. ಇದನ್ನು ನೋಡಲು ಸೇರು ವವರಲ್ಲಿ ಮುಕ್ಕಾಲು ವಾಲು ಬರವಣಿಗೆಗಸ್ತರಲ್ಲ. ಅವರಿಗದು ದೊಡ್ಡ ನಾಟಕವೇ ಸ. ಹೇಗೆ ಓದು ಈ ಜನರಲ್ಲಿ ಮುಂದ ರಿಯುತ್ತಾ ಬಂದಿತೋ ಹಾಗೆಯೇ ಈ ಆಟಗಳೂ ಸಹ ಬದ ಲಾಯಿಸಿದವು. ಇದರಲ್ಲಿ ವಿದೂಷಕನೂ ಉಂಟು; ಇವನು ಬಹಳವಾ 'ಸಾರಥಿ' ಯನ್ನೇ ಎದುರಿಸುವುದು. ಇವ ರಿಬ್ಬರ ಮಾತುಗಳನ್ನು ಕೇಳಿದೊಡನೆಯೇ, ಸುತ್ತ ಮುತ್ತ ಲಿನ ಜವರೆಲ್ಲರೂ ಚಮಕಿತರಾಗಿ, ನಕ್ಕು ನಕ್ಕು ಸಾಕಾಗಿ, ನೀರು ಕುಡಿಯಲು ಏಳುವರು. ಈ ಮಾತುಗಳು ತಿಳಿವಳಿ ಕೆಸ್ಥರಿಗೆ ಅಷ್ಟು ರುಚಿಸದಿದ್ದರೂ ಅಲ್ಲಿ ಸೇರುವ ಜನರಿಗೆ ಬಹಳ ರುಚಿ. ಈ "ಆಟ"ಗಳ ಮೊದಲಿನ ಉದ್ದೇಶವು ಜನಗಳಲ್ಲಿ ಶಕ್ತಿಯನ್ನು ಹೆಚ್ಚಿಸುವುದೆಂದಿದ್ದರೂ, ಕ್ರಮೇಣ ಜನರನ್ನು ಸಂತೋಷಪಡಿವುದೇ ಆಗಿ ಪರಿಣಮಿಸಿತು.

ಈ 'ಆಟ'ದಲ್ಲಿ ಪ್ರತಿ ಒಂದೂ "ಗುಂಪಿನಲ್ಲಿ ಗೋವಿಂದ" ಎಂದಹಾಗೆ ಪಾತ್ರಗಳಿಗೆ ವ್ಯಕ್ತಿತ್ವ ಇಲ್ಲ. ಹಿಮ್ಮೇಳದವರು ಹೇಳಿದಂತೆ ಕೇಳಬೇಕು. ಹಿಂದೆ ಮತ್ತೊಬ್ಬನು ಮಾಡಿದಂ ತೆಯೇ ತಾನೂ ಮಾಡಬೇಕು. ಅಲ್ಲಿ ಕುಣಿಯುವುದು 'ಗರಡಿ' ಮಾಡುವುದಕ್ಕಿಂತಲೂ ಹೆಚ್ಚು ಶ್ರಮ! ಹೀಗಿರುವಲ್ಲಿ ಅವರು ಕುಣಿಯುತ್ತ ಹಾಡುವ ಬಗೆ ಹೇಗೆ? ಪ್ರತಿಯೊಂದು ಹಾಡನ್ನೂ ಹಿಂದೆ ಹಿಮ್ಮೇಳದವರೇ ಹೇಳಬೇಕು. ಒಟ್ಟಿಗೆ ಏಳೆಂಟು ಜನ, ಬೇರೆ ಬೇರೆ ಸ್ಥಾಯಿಗಳಲ್ಲಿ ಒಂದೇ ಹಾಡನ್ನು ಹೇಳಿದರೆ ಹೇಗಿರುತ್ತೆಂಬುದನ್ನು ಕೇಳಬೇಕಾದರೆ ಇದೇ ಸಮಯ. ತಾಳದ ಮಾತನ್ನು ಹೇಳಬೇಕಾಗಿಲ್ಲ. ಹೇಳಿದ್ದೇ ರಾಗ, ಹಾಕಿದ್ದೇ ತಾಳ.

ಕೆಲವೆಡೆಗಳಲ್ಲಿ ಈ ನಾಟಕದಲ್ಲಿ ಮದುವೆ ಮುಂತಾದ್ದು ಆದಲ್ಲಿ, ಕೂತಿದ್ದ ಜನರಲ್ಲಿ ಓಡಿಸುವ ಪದ್ಧತಿಯೂ ಉಂಟು. ಒಂದುಕಡೆ 'ಪ್ರಹ್ಲಾದ ಚರಿತ್ರೆ'ಯನ್ನಾಡಿದರು; ಆಗ ಹಿರಣ್ಯ ಕಶಿಪುವಿಗೆ ಬಹಳ ಜನ ಉಡುಗರೆಯನ್ನೊದಿಸಿದರು. ಓದಿ ಸುವವನು ತಮಿಳು ಭಾಷೆಯಲ್ಲಿ ಓದಿಸಿದನಾದುದರಿಂದ ನನಗೆ ಅದರ ಅರ್ಥ ಅಷ್ಟು ಚೆನ್ನಾಗಿ ತಿಳಿಯಲಿಲ್ಲ. ಪಕ್ಕದಲ್ಲಿ ನಿಂತಿ ದ್ದಾತನನ್ನು ಕೇಳಿದೆ. "ಇದು ಅವನು ಹಿರಣ್ಯ ಕಶಿಪುವಿಗೆ ಕೊಡುವ ಕಪ್ಪುಕಾಣಿಕೆ" ಎಂದು ಆತನು ಹೇಳಿದನು. ಈ ಆಟದಲ್ಲಿ ಮತ್ತೊಂದು ವಿಶೇಷ. ಹಿರಣ್ಯಕಶಿಪುವು ಮನೆ ಯನ್ನು ಬಿಡಬೇಕಾದರೆ ಓಲಗವನ್ನು ಅವನ ಮನೆಯ ಯತ್ತಿರಕ್ಕೆ ತೆಗೆದುಕೊಂಡು ಹೋಗಿ, ಕರೆದುಕೊಂಡು ಬರ ಬೇಕು. ದಾರಿಯಲ್ಲಿ ಅಲ್ಲಲ್ಲಿ ಹುಲಿವೇಷದಂತೆ ಆಡಬೇಕು! ರಂಗಸ್ಥಳಕ್ಕೆ ಬಂದೊಡನೆಯೇ ಅವನನ್ನು ಕುರ್ಚಿಯಮೇಲೆ ಕೂಡಿಸಿ, ಹೂವಿನ ಹಾರವನ್ನು ಆತನಿಗೆ ಹಾಕಬೇಕು!

ಅವನೆದ್ದು ಮಾತನಾಡುವುದಕ್ಕೆ ಮೊದಲು ಮಾಡಿದ ತಕ್ಷ ಣವೇ ಬೆಳ್ಳುಳ್ಳಿ ಪಕಾಕೆಯನ್ನು ಹೊಡೆದರು. ಅವನು ಕೈಗ ಳನ್ನು ಎತ್ತಿದೊಡನೆಯೇ ಪಕ್ಕದಲ್ಲಿ ನಿಂತಿದ್ದ ಇಬ್ಬರು ಅವನ ಕೈಗಳನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಿದ್ದರು. ಇವನೆಲ್ಲೋ ಹೆಚ್ಚಾಗಿ...ದಿರಬೇಕೆಂದು ನನಗೆ ಸಂಶಯಹುಟ್ಟಿತು. ಆದರೆ ಪಕ್ಕದಲ್ಲಿದ್ದಾತನು "ಇವರಲ್ಲೆಲ್ಲಾ ಹೀಗೆಯೇ" ಎಂದನು.

ಇವುಗಳಲ್ಲಿ ಕಂಡುಬರುವ ಆಭರಣಗಳನ್ನೂ ಮಾತುಗ ಳನ್ನು ಜೋಡಿಸಿರುವ ರೀತಿಯನ್ನೂ, ನೋಡಿ ಸಂತೋಷಪಡ

ಬೇಕಾದರೆ, ವರ್ಣನೆಯನ್ನು ಓದುವುದಕ್ಕಿಂತಲೂ ಅಡುವ ಕಡೆ ಹೋಗಿ, ಪಾಠಕರೇ ಸಂತೋಷಪಡಬೇಕು. ಆದರೆ ಓದುವವರಿಗೂ ಸ್ವಲ್ಪಮಟ್ಟಿಗೆ ತಿಳಿಯಲೋಸುಗ ಭೀಮನಿಗೂ ಸಾರಥಿಗೂ ನಡೆದ ವಾಗ್ವಾದವನ್ನು, ಇಲ್ಲಿ ಕೊಟ್ಟಿರುತ್ತೇನೆ.

ಸಾರಥಿ :—ಅಯ್ಯಾ ನೀನು ದಾರು ?

ಭೀಮು :— ಯಲ್ಲೈ, । ರಂಗದ್ವಜ್ರಮಣೀ | ಗಾಂಗೇಯ ಸಂಘಟಿತ | ಶೃಂಗಾರ । ಸಭಾರಂಗನ ಪ್ರಾಂಗಣದೊಳ್| ಅಂಗಜಪಿತನ । ಹಿಂಗದೇ । ಧ್ಯಾನಿಸುವ | ಪುಂಗಳಾತ್ಮಕ, ನೀನು ದಾರು ॥

ಸಾರಥಿ :—ಅಯ್ಯಾ | ನೀನು | ದಾರು ॥

ಭೀಮು :—ಶಾಂಭವೀ | ವರ ಝಟಿ ಝ್ಝುಂಬಿತ | ಶುಂಭತ್ | ಗಂಭೀರ । ಶಬ್ದ | ಸನು ಕುಂಭಿತ । ವಜನ ಕದಂಬವಂ | ಬೆಂಬಿಡದೆ | ಕೇಳು । ಧಯಾ ನಿಧಿಯಾದ ಸಾರಥಿಯೇ ॥ ಆದರೆ | ದಿಗ್ಗಗನ ಪಾತಾಳಂಗಳು । ಸ್ವರ್ಗವು | ಕುಗ್ಗಿ | ಮುಗ್ಗಾರುವಂತೆ । ದಿಟ್ಟ ಘಟೆ | ಪಡಿಗಳು | ತಾರ ತಟ್ಟಾಗಿ। ನಿಟ್ಟುವಂತೆ । ನೆಟ್ಟಿದ | ಪದ ಜರಣ | ಘಟ್ಟಣೆಯಿಂದ | ಬಂದ | ಜಗಜಟ್ಟಿಯು | ದಾರೆಂದು | ಕೇಳುವಿಯೊ ॥

ಸಾರಥಿ :—ಆಹಾ—

ಭೀಮು :—ಧರ್ಮಗುಣ ಕಲಾಪ । ಭೂಪ | ಕುಲದೀಪ | ಸತ್‌ಪ್ರತಾಪ | ಜಪ್ಪನ್ನಾರು ದೇಶದೊಳ್ | ಕಪ್ಪಕಾಣಿಕೆಯಂ ಮೆಪ್ಪು ಗೊಂಡಿಪ್ಪರಾಯರ | ತಲೆ ಚಿಪ್ಪುಗಳು | ಗಪ್ಪನೆ | ಉದುರುವಂತೆ | ಜಪ್ಪಳಿಸಿ | ಕೆಡಹಿ । ಕಡು ಶೌರ್ಯ ಧೀರನಲ್ಲದೆ | ಹೆಕ್ಕಳಿ । ಬಲದಿ ಕದನಕ್ಕೆ । ಬಂದ ಬಕ ಪಿಡಂಬ ರಕ್ಕಸರ | ಕಕ್ಕಸಿ ಧಿಕ್ಕರಿಸಿ | ವಕ್ಕಲಿಕ್ಕಿ | ದಿಕ್ಕುಪಾಲ್ | ಮಾಡಿಕ್ಕಿದ | ಪ್ರಚಂಡ ಭಂಡನೋದ್ದಾನು ಹರಿ ಬಲವಿರಾಮ । ಭೀಮಶೇನನೆಂದು | ಘಣ ಘಣೆಲ್ ಯೆಂದು । ಜಯ ಭೇರಿಯಂ ವಡಿಸಲೈ | ದೂತ ಸೌಖ್ಯ ಪ್ರದಾತ ॥

ಸಾರಥಿ :—ಅಲ್ಲನೇ; ಆಹಾ॥

ಭೀಮು :—ರಾಜ ಮಂದಿರ ಬಿಟ್ಟು | ಸಭಾ ಮಂದಿರಕ್ಕೆ ಬಂದ । ತಾತ್ಪರ್ಯ ವೇನೆಂದರೆ | ಯಿದಿಗೋ ಯೆನ್ನ ಕರದೊಳ್ | ಪೆರೆಯುವ | ಗದಾ ಮಂಡಲದಿಂದ | ಯಾಬಂಡ | ಬೊಬ್ಬ್ರವಾಹನ | ರುಂಡಕ್ಕೆ | ಶರಿಯಂ ಯಿಟ್ಟ| ಪೋಗಿ ಬರವಣ ಜಾ ॥—ದೂತ—ಸೌಖ್ಯಪ್ರದಾತ ॥

—:—

ಬಿಡಿನುಡಿಗಳು

ಚಿತ್ರ ಪರಿಚಯ:—« ಪರಿತ್ಯಕ್ತೆ! » ಎಂಬ ಮೂರು ವರ್ಣಗಳ ಚಿತ್ರವು ಬಂಗಾಳದ ದೇವೀ ಪ್ರಸಾದರಾಯ್ ಚೌಧರಿಯವರಿಂದ ಚಿತ್ರಿಸಲ್ಪಟ್ಟಿರುವುದು. ಚಿತ್ರದಲ್ಲಿ ಸಬಲನೆನಿಸಿದ ಮಾನವನ ಕಾಮೋದ್ರೇಕಗಳಿಗೆ ಬಲಿಬಿದ್ದ ಅಬಲೆಯೊಬ್ಬಳು ಸಮಾಜದಿಂದ ಬಹಿಷ್ಕೃತಳಾಗಿ ಕಾಡುಪಾಲಾಗಿರುವಳು. ಅವಳನ್ನೇಲೆ ಅತ್ಯಾಚಾರವೆಸಗಿದ ಮಾನವನು ಸಮಾಜದಲ್ಲಿ ಕೇವಲ ಬಿಟ್ಟಹಾಸದಿಂದ ಮೆರೆಯುತ್ತಿರಬಹುದು. ಅಬಲೆಯನ್ನು ಬಹಿಷ್ಕರಿಸಿದ ಸಮಾಜವೂ ತನ್ನ ಕಾರ್ಯದಿಂದ ಅಬಲೆಯು ನಾಶಹೊಂದುವಳೆಂದು ತಿಳಿದು ಹಿಗ್ಗಿರಬಹುದು. ಆದರೆ ಸ್ತ್ರೀಯು ಅಬಲೆಯೆನಿಸಿದರೂ ಪ್ರಕೃತಿ ಸ್ವರೂಪಳು. ಆದುದರಿಂದ ತಾನು ಮಾಡಿದ ಕೃತ್ಯವು ಪ್ರಕೃತಿ ನಿಯಮಾನುಸಾರವಾಗಿದೆಯೆಂದು, ತನ್ನ ಪಾಪವನ್ನಿಸಿಕೊಂಡ ಕಾರ್ಯದ ಫಲವಾದ ತನ್ನ ಶಿಶುವನ್ನು ಸಮಾಜ ನಿಯಮದಂತೆ ಬಿಸುಡದೇ ಆದರ ರಕ್ಷಣೆಯನ್ನು ಕುರಿತು ಮರುಗುತ್ತಿರುವಳು. ಪ್ರಕೃತಿ ದೇವಿಯ ಸ್ವಭಾವಕ್ಕೆ ಸಹಜವೆನಿಸಿದಾ ದಯಾಮಯ-ವಾತ್ಸಲ್ಯ ಪೂರ್ಣವಾದ ಕಾರ್ಯವನ್ನು ನಿಸರ್ಗ ದೇವತೆಯು ಮೆಚ್ಚಿ ಅವಳೊಂದಿಗೆ ಸಹಕರಿಸುತ್ತಿರುವುಳೊ ಎಂಬಂತೆ ದೊಡ್ಡಮರವೊಂದು ಅವಳಿಗೆ ನೆರಳನ್ನಿತ್ತಿರುವುದು. ಸುತ್ತಲೂ ಇರುವ ಪಸುರು ಗಿಡಗಳು ಗಾಳಿಯನ್ನು ಬೀಸಿ, ಅವಳ ತಾಪವನ್ನು ನಿವಾರಿಸುತ್ತಿರುವವು. ಸೂರ್ಯದೇವನು ಗಿರಿಗಳ ಹಿಂದಿನಿಂದೆದ್ದು ಪರಿತ್ಯಕ್ತ **ಮಾತೆ**ಯೊಂದಿಗೆ ತನ್ನ ಸಹಾನುಭೂತಿಯನ್ನು ತೋರಿಸುತ್ತಿರುವನೋ ಎಂಬಂತೆ ಅವಳ ಮತ್ತು ಅವಳ ಶಿಶುವಿನ ಮುಖದಮೇಲೆ ತನ್ನ ಪ್ರಕಾಶವನ್ನು ಬೀರಿ, ಅವಳಲ್ಲಿ ಆಶೆಯ ಕಿರಣಗಳನ್ನು ತುಂಬುತ್ತಿರುವನು! ಸಮಾಜವೂ, ಅದರಲ್ಲಿ ಸಬಲನೆನಿಸಿರುವ ಪುರುಷನೂ ತಂತಮ್ಮ ಕರ್ತವ್ಯ ಧರ್ಮಗಳನ್ನೂ ತ್ಯಜಿಸಿದ್ದರೂ, ಪ್ರಕೃತಿ ದೇವಿಯು ಮಾತ್ರ ತನ್ನ ಕರ್ತವ್ಯ ಧರ್ಮವನ್ನು ಹೇಗೆ ನೆರವೇರಿಸುತ್ತ, ಪ್ರಪಂಚದ ಉಸ್ತುತ್ಪತ್ತಿಗೂ ಕಾರಣವಾಗಿದೆಯೆಂಬ ಪಾಠವನ್ನು ಚಿತ್ರವು ಜೋಧಿಸುತ್ತಿರುವುದಲ್ಲವೆ ?

ದಾನಶೂರ ಕರ್ಣ:-ಕಳೆದೆರಡು ತಿಂಗಳುಗಳಿಂದಲೂ ಬೆಂಗಳೂರಿನಲ್ಲಿ ಕಲಾ ಕೌಶಲ್ಯ, ಅಭಿನಯಾದಿಗಳಿಂದ ಪ್ರೇಕ್ಷಕವರ್ಗದವರ ಮನಸ್ಸನ್ನು ಆಕರ್ಷಿಸಿ, ಅಪೂರ್ವವಾದ ಜೋಧ

ವನ್ನುಳ್ಳುಮಾಡುತ್ತಿರುವ ಶ್ರೀ ಚಾಮುಂಡೇಶ್ವರೀ ನಾಟಕ ಸಭೆಯವರ 'ದಾನಶೂರ ಕರ್ಣ' ನಾಟಕದ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಬೇರೊಂದೆಡೆಯಲ್ಲಿ ಪ್ರಕಟಿಸಲಾಗಿದೆ. ಈ ಬಾರಿ ಆ ನಾಟಕದಲ್ಲಿ ಕರ್ಣನ ಪಾತ್ರವನ್ನು ವಹಿಸುವ ಶ್ರೀ। ಕೊಟ್ಟೂರ ಬಸಪ್ಪನವರ ಭಾವಚಿತ್ರವನ್ನು ಕೊಡಲಾಗಿದೆ.

ತುಕಾರಾಮ ನಾಟಕ:-ಮೇಲೆ ಹೇಳಿದ ಶ್ರೀ ಚಾಮುಂಡೇಶ್ವರೀ ಕಂಪನಿಯವರು ಅಭಿನಯಿಸುವ ನಾಟಕಗಳಲ್ಲಿ ಮಹಾರಾಷ್ಟ್ರ ದೇಶದ ಪ್ರಸಿದ್ಧ ಸಾಧುಪುರುಷನೆನಿಸಿದ ತುಕಾರಾಮನ ಜೀವನ ಚರಿತ್ರೆಯ ನಾಟಕವೂ ಒಂದು ಉತ್ತಮ ನಾಟಕವಾಗಿರುವುದು. ಆದರೆ ಈ ನಾಟಕದ ಅಂಶಗಳೆಲ್ಲವೂ ಶಿವಾಜಿ ಮತ್ತು ತುಕಾರಾಮರ ಐತಿಹಾಸಿಕ ಚರಿತ್ರೆಯ ಪ್ರತಿಬಿಂಬವಾಗಿಲ್ಲ. ನಾಟಕದ ಅನುಕೂಲತೆಗೆ ತಕ್ಕಂತೆ ಐತಿಹಾಸಿಕಾಂಶಗಳು ಬಹಳ ಮಾರ್ಪಾಟುಗಳನ್ನು ಹೊಂದಿರುವವು. ಈ ನಾಟಕದ ಶಿವಾಜಿಯು ಶತ್ರುಗಳು ಬಂದ ಕಾಲದಲ್ಲಿ ಕಾರ್ಯ ಪ್ರಕಾಶಮಾಡುವುದಕ್ಕೆ ಬದಲು ಗಾನಪ್ರಿಯನಾಗಿರುವಂತೆ ಕಾಣುವುದು. ಶಿವಾಜಿಗೆ ಸಂಗೀತವು ವಿಶೇಷವಾಗಿರುವುದರಿಂದಲೂ ಅವನ ಅಂಗಜಲಸೆಯು ವಿಶೇಷವಾಗಿರುವುದರಿಂದಲೂ ಹಿಂದೂ ಸಾಮ್ರಾಜ್ಯ ಸಂಸ್ಥಾಪಕನಾದ ಹಿಂದಿನ ಶಿವಾಜಿಯ ಧೀರನ್ಯಭಾವದ ನೆನಪನ್ನು ಈ ಶಿವಾಜಿಯು ಉಂಟುಮಾಡುವುದಿಲ್ಲ. ಮಹಾ ಶಾಂತನಾದ ತುಕಾರಾಮನು, ಈ ನಾಟಕದ ತುಕಾರಾಮನಂತೆ ಪತ್ನೀ ಪುತ್ರರಿಂದ ಬೇಸರ ಹೊಂದಿದವನಾಗಿರಲಿಲ್ಲ. ಎಂದರೆ ಈ ನಾಟಕದ ಕಥೆಯ ರಚನೆಯಲ್ಲಿ ಈ ದೋಷಗಳು ಸೇರಿರುವವು. ಆದರೆ ಈ ನಾಟಕದಲ್ಲಿ ಪಾತ್ರವನ್ನು ವಹಿಸಿದವರಲ್ಲಿ ಒಬ್ಬಿಬ್ಬರನ್ನುಳಿದು ಉಳಿದವರ ಅಭಿನಯಗಳೆಲ್ಲವೂ ಸರಿಯಾಗಿಯೆ ಇದ್ದುವು. ದೃಶ್ಯಗಳ ವಿಚಾರದಲ್ಲಂತೂ ಈ ಸಭೆಯವರು ಇತರ ಕನ್ನಡ ನಾಟಕ ಮಂಡಳಿಗಳನ್ನು ಮೀರಿಸಿರುವರು. ನಾಟಕದಲ್ಲಿ ಪಾತ್ರಗಳನ್ನು ವಹಿಸಿದ್ದವರಲ್ಲಿ ತುಕಾರಾಮ ಪಾತ್ರವನ್ನು ವಹಿಸಿದ್ದ ಶ್ರೀ।ಕೊಟ್ಟೂರು ಬಸಪ್ಪನವರೂ, ಜೀಜುಬಾಯಿ ಪಾತ್ರವನ್ನು ವಹಿಸಿದ್ದ ಶ್ರೀ। ನಾಗೇಂದ್ರರಾಯರೂ, ಮುಖಾಧಿಕಾರಿಗಳಾಗಿದ್ದ ಶ್ರೀ। ಕೃಷ್ಣಮೂರ್ತಿಗಳೂ, ಶ್ರೀ। ಲಕ್ಷ್ಮೀಪತಿ ಶಾಸ್ತ್ರಿಗಳೂ, ವೇಶ್ಯಾಂಗನೆಯ ಪಾತ್ರವನ್ನು ವಹಿಸಿದ್ದ ಶ್ರೀ। ಸುಬ್ಬಣ್ಣನವರೂ ಇತರ ಕೆಲವರೂ ಅಭಿನಂದನಾರ್ಹರು.

ಬೆಂಗಳೂರು ಮೆಡಿಕಲ್ ಕಾಲೇಜಿನ ಸಂಘದವರು ಕಳೆದ ತಿಂಗಳು ೯ನೆಯ ತಾರೀಖಿನ ದಿನ ಸರ್ ಜಾಲ್ಸ್ಟನ್ ಟಾಡ್ ಹಂಟರ್ ಸಾಹೇಬರ ಅಧ್ಯಕ್ಷತೆಯಲ್ಲಿ ತಮ್ಮ ವಿದ್ಯಾಲಯದ ವಾರ್ಷಿಕೋತ್ಸವವನ್ನು ನೆರವೇರಿಸಿದರು. ಈಗಲಾಗ ವ್ಯತಿಯೊಂದು ಪಾಠಶಾಲೆಯ ವಾರ್ಷಿಕೋತ್ಸವದ ದಿನ ಒಂದೊಂದು ನಾಟಕವನ್ನಾಗಲಿ, ದೃಶ್ಯವನ್ನಾಗಲಿ ಪ್ರದರ್ಶಿಸುವುದು ಪದ್ಧತಿಯಾಗಿರುವುದು. ಆ ಪದ್ಧತಿಗನುಸಾರವಾಗಿ ಮೆಡಿಕಲ್ ಕಾಲೇಜಿನ ಸಂಘದವರೂ 'ದಿ ಸರ್ಜನ್ ಜನರಲ್ಸ್ ಪ್ರಿಸ್ಕ್ರಿಪ್ಷನ್' ಎಂಬ ಚಿಕ್ಕ ನಾಟಕವನ್ನಭಿನಯಿಸಿದರು, ಈ ನಾಟಕದಲ್ಲಿ ನಮ್ಮ ಅಮೆಚೂರ್ ನಾಟಕ ಸಂಘದ ಸದಸ್ಯರೂ, ವಿದ್ಯಾರ್ಥಿ ಶಾಖೆಯ ಕಾರ್ಯದರ್ಶಿಗಳೂ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳೂ ಆದ ಶ್ರೀ। ಬಿ. ಎಲ್. ಶಾಮಣ್ಣನವರು 'ಸೀತಾಪತಿ' ಎಂಬ ಪಾತ್ರವನ್ನು ಜೆನ್ನಾಗಿ ಅಭಿನಯಿಸಿ, ಅಧ್ಯಕ್ಷರ ಮತ್ತು ಪ್ರೇಕ್ಷಕರ ಮೆಚ್ಚುಗೆಯನ್ನೂ ಅಭಿನಯದಲ್ಲಿ ಮೊದಲನೆಯ ಬಹುಮಾನವನ್ನೂ ಹೊಂದಿದುದು ಅಮೆಚೂರ ಸಂಘಕ್ಕೆ ಗೌರವಾಸ್ಪದವಾಗಿದೆ. ಶ್ರೀ। ಇ. ವಿ. ರಾಮಚಂದ್ರಯ್ಯನವರು 'ದೇವಿ' ಎಂಬ ಸ್ತ್ರೀ ಪಾತ್ರವನ್ನು ಜೆನ್ನಾಗಿ ಅಭಿನಯಿಸಿ ಎರಡನೆಯ ಬಹುಮಾನವನ್ನು ಹೊಂದಿದರು. ಶ್ರೀ। ಎಲ್. ಎಸ್. ದೊರೆಸಾಮಿ ಎಂಬವರು 'ಸರ್ಜನ್ ಜನರಲ್' ಪಾತ್ರವನ್ನು ಜೆನ್ನಾಗಿ ಅಭಿನಯಿಸಿದರು. ಇವರು ಮೂವರನ್ನೂ ನಾವು ಮನಃಪೂರ್ವಕವಾಗಿ ಅಭಿನಂದಿಸುವೆವಲ್ಲದೇ, ಅವರವರ ಅಭಿನಯ ಕಲಾಭಿರುಚಿಯು ಇತೋಭ್ಯತಿಶಯವಾಗಿ ಅಭಿವೃದ್ಧಿಹೊಂದಲೆಂದು ಹಾರೈಸುವೆವು. ಈ ನಾಟಕದಲ್ಲಿ ಪಾತ್ರವನ್ನು ವಹಿಸಿದವರ ಭಾವ ಚಿತ್ರದ ಅಚ್ಚು ಸಕಾಲದಲ್ಲಿ ನಮ್ಮ ಕೈ ಸೇರಲಿಲ್ಲವಾದುದರಿಂದ ಅದನ್ನು ಮುಂದಣ ಸಂಚಿಕೆಯಲ್ಲಿ ಪ್ರಕಟಿಸುವೆವು.

ಸ್ವೀಕಾರ-ವಿಮರ್ಶೆ

ಕುರುಬರ ಚರಿತ್ರೆ—ಲೇಖಕರು ಮತ್ತು ಪ್ರಕಾಶಕರು **ಶ್ರೀ। ವಿ. ರ್. ಹನುಮಂತಯ್ಯನವರು**. ಮ್ಯಾನೇಜರ್ ಬಾಯ್ಸ್ ಪ್ರೈಮರಿ ಸ್ಕೂಲು, ಕಂಬಳಿ ಮಿಷ್ಟ್ ರೋಡು, ಬೆಂಗಳೂರು ಸಿಟಿ. ಬೆಲೆ ೧-೮-೦, ಪುಟ ಡೆಮ್ಮಿ ೪ಪ್ಪ ಮಾಂಶದ ೧೮೮.

ಕನ್ನಡ ನಾಡಿನ ಪ್ರಸಿದ್ಧ ಸಾಧುಪುರುಷರಲ್ಲೊಬ್ಬರೆನಿಸಿದ ಕನಕ ದಾಸರು, ಇವರ ಮೂಲ ವಂಶವಾದ ಕುರುಬರ ಜಾತಿ, ಮೊದಲಾದವುಗಳ ಸಾದ್ಯಂತ ಇತಿಹಾಸವೂ, ಈ ಸಂಗಡದಲ್ಲಿ ಹುಟ್ಟಿ ಭರತಖಂಡದ ವಿವಿಧ ಭಾಗಗಳನ್ನಾಳಿದ ಅನೇಕ ಶೂರ ರಾಜರ ಐತಿಹಾಸಿಕ ವೃತ್ತಾಂತವೂ ಈ ಗ್ರಂಥದಲ್ಲಿ ಅನೇಕ ಆಧಾರಗಳ ಸಹಿತ, ಬಹು ಸುಲಭವೂ ಲಲಿತವೂ ಆದ ಶೈಲಿಯಲ್ಲಿ ವರ್ಣಿತವಾಗಿರುವುದು. ಇದರಲ್ಲಿಹೇಳಿರುವ ಆಧಾರ ಗ್ರಂಥಗಳು ವಿಶೇಷ ಮಹತ್ವವುಳ್ಳವುಗಳಾಗಿವೆ. ಕನ್ನಡದಲ್ಲಿ ಯಾವುದೊಂದು ವೈತಿಹ್ಯಾನ್ವಳ್ಳ ವಿಚಾರದಲ್ಲಿ ಗ್ರಂಥಗಳು ಕಡಿಮೆ. ಇಂತಹ ಪುಸ್ತಕಗಳಿಂದ ಅವುಗಳ ನ್ಯೂನತೆಯನ್ನು

ನಿವಾರಿಸಬಹುದು. ಪುಸ್ತಕವು ಹಲವು ಭಾವ ಚಿತ್ರಗಳನ್ನೂ ಒಳಗೊಂಡಿರುವದು. ಇತಿಹಾಸಪ್ರಿಯರೆಲ್ಲರೂ ಈ ಗ್ರಂಥವನ್ನು ತರಿಸಿ ಓದಬೇಕು.

ಕರ್ನಾಟಕ ನವಜೀವನ (ಮಾಸ ಪತ್ರಿಕೆ) ಸಂಪಾದಕರು ಬಿ. ಸಿ. ಪುರಾಣಿಕ, ಬಬಲೇಶ್ವರ-(ವಿಜಾಪುರ ಜಿಲ್ಲೆ) ವಾರ್ಷಿಕ ಚಂದಾ ೨-೧೨-೦. ಬಿಡಿ ಸಂಚಿಕೆ ೪ ಆಣೆ. ಶುಟ ದಿಮ್ಮೆ ಅಷ್ಟವಾಂಶದ ೪೮ ಪುಟಗಳು.

ಸಾಹಿತ್ಯದ ಬೆಳವಣಿಗೆಯು ನಾಡಿನ ಉನ್ನತಿ ಮಾರ್ಗವನ್ನು ಸೂಚಿಸುವ ಶುಭ ಚಿಹ್ನೆಯು. ಆದರಲ್ಲಿಯೂ ಮರಾಠಿಯ ಪ್ರಾಬಲ್ಯವುಳ್ಳ ನೆರೆ ನಾಡಾದ ವಿಜಾಪುರದಂತಹ ಜಿಲ್ಲೆಯಲ್ಲಿ ಕರ್ನಾಟಕ ವೈಭವ, ಶಿವಾನುಭವ, ಕನ್ನಡಿಗ, ನವಕರ್ನಾಟಕ ಪತ್ರಿಕೆಗಳು ನಾಡಿನ ಸೇವೆಯಲ್ಲಿ ಮುಗ್ನವಾಗಿ, ಕನ್ನಡಿಗರ ನಡೆ ನುಡಿ, ಸಂಸ್ಕೃತಿಗಳ ವಿಚಾರದಲ್ಲಿ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡುತ್ತಿರುವವು. ಈಗ ಅವುಗಳ ಜತೆಗೆ **'ಕರ್ನಾಟಕ ನವಜೀವನ'**ವು ಸೇರಿರುವುದು. ಈ ಪತ್ರಿಕೆಯಲ್ಲಿ 'ಶಾಸ್ತ್ರೀಯ ದೃಷ್ಟಿಯಿಂದ' ಭರತಖಂಡದ ಮತ್ತು ಕರ್ನಾಟಕದ ಆರ್ಥಿಕ, ರಾಜಕೀಯ, ಸಾಮಾಜಿಕ, ವಿದ್ಯಾ ವಿಷಯಕ, ಮತ್ತು ಸಾಹಿತ್ಯೋನ್ನತಿ ವಿಚಾರಗಳನ್ನು ವಿವೇಚಿಸಬೇಕೆಂಬುದು ಪತ್ರಿಕೆಯ ಧ್ಯೇಯವಾಗಿರುವುದು. ಈ ಧ್ಯೇಯವನ್ನು ಕಾರ್ಯರೂಪದಿಂದ ಪ್ರಕಾಶಗೊಳಿಸಲು ಪತ್ರಿಕೆಯು ಚಿರಂಜೀವಿಯಾಗಿ ಬಾಳಲೆಂದು ಪ್ರಾರ್ಥಿಸುವೆವು ಅಲ್ಲಲ್ಲಿ 'ಮತ್ತು' ಎಂಬುದಕ್ಕೆ ಬದಲಾಗಿ ಉಪಯೋಗಿಸಿರುವ 'ವ' ಎಂಬುದನ್ನು ವರ್ಜಿಸುವದೊಳ್ಳೆಯದೆಂದು ನಮ್ಮ ಸೂಚನೆ.

ಸ್ವೀಕಾರ

ಮುಂದೆ ಹೇಳುವ ಪುಸ್ತಕಗಳನ್ನು ನಮ್ಮ ವಿಮರ್ಶೆಗಾಗಿ ಕಳುಹಿಸಿರುವುದಕ್ಕಾಗಿ ನಾವು ಅವುಗಳ ಪ್ರಕಾಶಕರನ್ನೂ ಗ್ರಂಥಕರ್ತರನ್ನೂ ವಂದಿಸುವೆವು. **ರಂಗಭೂಮಿಯಲ್ಲಿ ಪುಸ್ತಕಗಳನ್ನು ವಿಮರ್ಶಿಸಬೇಕಾದರೆ ದಯೆಯಿಟ್ಟು ಪ್ರತಿಯೊಂದು ಗ್ರಂಥದ ಎರಡು ಪ್ರತಿಗಳನ್ನು ಕಳುಹಿಸಬೇಕು. ಅದಿಲ್ಲದೇ ಒಂದೇ ಪ್ರತಿಯು ಬಂದರೆ ಅದರ** ಲೇಖಕರು, **ವಿಳಾಸ, ಬೆಲೆಗಳನ್ನು ಮಾತ್ರ ಪ್ರಕಟಿಸಲಾಗುವುದು.** ಆದುದರಿಂದ ಇನ್ನು ಮುಂದೆ ನಮ್ಮ ಕಾರ್ಯಾಲಯಕ್ಕೆ ಪುಸ್ತಕಗಳನ್ನು ಕಳುಹಿಸುವವರು ಈ ಸೂಚನೆಯನ್ನು ಜ್ಞಾಪಕದಲ್ಲಿಡಬೇಕಾಗಿ ವಿನ್ನಪ—ಸಂ.

(೧) ನಾಟಕ (ಒಂದು ಸಣ್ಣ ಉಪನ್ಯಾಸ) ಲೇಖಕರು ಶ್ರೀ/ ದೇವ್ರಡು, ಸುಬೋಧ ಮುದ್ರಾಣಾಲಯ, ಬೆಂಗಳೂರು ಸಿಟಿ. (೨) ರಾಜಭಕ್ತಿ ಆಥವಾ ಮೈಸೂರು ಮಾಣಿಕ್ಯ-ಬರೆದವರು ಚಿ/ ನಮಾತಿವಯ್ಯ, ದೇಶೀಯ ವಿದ್ಯಾಶಾಲೆ, ಬಸವನಗುಡಿ, ಬೆಂಗಳೂರು ಸಿಟಿ ಬೆಲೆ ೦-೨-೬ (೩) ಕಾಡದ್ದು ನಾಲ್ಕು ಸರ್ತಿ (ಸಣ್ಣ ಕಥೆ) ಲೇಖಕರು ಶ್ರೀ/ ಕೆ. ಗೋಪಾಲಕೃಷ್ಣರಾವ್, ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು ಬೆಂಗಳೂರು. (೪) ಮಗುವಿನ ಕೂಗು ಶ್ರೀ/ ಹೊಯಿಸಳ ಪ್ರಕಾಶಕರು ಕೃಷ್ಣಾಕಂಪನಿ, ಬೆಂಗಳೂರು ನಗರ. (೫) ಭಾರತಕಲೆಯ ಚಿತ್ರಕಲೆಯ ಸಂಕ್ಷಿಪ್ತ ಇತಿಹಾಸ-ಲೇಖಕರು ಅ. ನ ಕೃಷ್ಣರಾಯರು, ವಿಶ್ವೇಶ್ವರಪುರ, ಬೆಂಗಳೂರು ಸಿಟಿ. (೬) **ಕರ್ಣಾರ್ಜುನ** (ನಾಟಕ) ಲೇಖಕರು :—ಶ್ರೀ/ ತಿಪರಾಮ ಕಾರಂತ, **ಕೋಟ** ಸಂಪಾದಕ, ವಸಂತ, ಮುಂಗಳೂರು ಬೆಲೆ ೧ ರೂಪಾಯಿ—ವಿಮರ್ಶೆ ಯಥಾವಕಾಶದಿಂದ.

ಹಿಂದೀ ಪುಸ್ತಕಗಳು.

(೭) **ಋಗ್ವೇದಾಲೋಚನ**-ಪ್ರಣೇತಾ ಪಂಡಿತ ನರದೇವ ಶಾಸ್ತ್ರೀ, ವೇದತೀರ್ಥ. ಪ್ರಕಾಶಕರು ಶಾಂತಿ ಪ್ರೆಸ್, ಲಿಗ್ರಾ—ಬೆಲೆ ೧-೧೨-೦

(೮) **ಹಮಾರಾ ಪ್ರಾಚೀನ್ ಗೌರವ್**-(ಮನೋಹರ ವಾರ್ತಾಕಲಾಪ್) ಲೇಖಕ. ಶ್ರೀ/ ಆನಂದ ಭಿಕ್ಷು, ಪ್ರೇಮ ಮಹಾವಿದ್ಯಾಲಯ, ವೃಂದಾವನ. ಬೆಲೆ ೦-೧-೦ (೯) **ಸರಲ್ ಭಾರತೀಯ ಶಾಸನ**-ಲೇಖಕ, ಶ್ರೀ/ ಭಗವಾನ್ ದಾಸ್ ಕೇಲಾ, ವೃಂದಾವನ ಬೆಲೆ ೦-೮-೦ (೧೦) **ಭಾರತೀಯ ಚಿನ್ತನ**-ಲೇಖಕ, ಭಗವಾನ್‌ದಾಸ್ ಕೇಲಾ ವೃಂದಾವನ ಬೆಲೆ ೦-೧೪-೦ (೧೧) **ಭಾರತೀಯ ರಾಜಸ್ಥ** ಲೇಖಕ, ಶ್ರೀ/ ಭಗವಾನ್ ದಾನ್ ಕೇಲಾ, ವೃಂದಾವನ ಬೆಲೆ ೦-೧೪-೦ ವಿಮರ್ಶೆ ಯಥಾವಕಾಶವಾಗಿ.

—o—

ಶೇಷಗಿರಿ :—ಪೇಟೆ ಹುಡುಗರು ನೀವ್ರು. ಮೋಟಾರ್ನಲ್ಲೇ ಓಡಾಡೋರೂ-ಆದ್ರಿಂದ ಟಂಗಾ ಟಂಗಾ ಅನ್ನೋ ಹಾಳು ಗಾಡಿಯಾಕೆ, ಸುಖವಾಗಿ ಬಸ್ಸಲ್ಲೇ ಒಂದುಬಿಡ್ಲಿಯಂತ ಕಳುಹಿಸ್ಲಿಲ್ಲಪ್ಪಾ-ನೀನು ಆರೋಗ್ಯವಾಗಿದ್ದೀಯಾ?

ಗಂಗಾಧರ :—ಏನಾರೋಗ್ಯವೋ ? ಬೆಂಗಳೂರೊಂದು ಕಡೆ ಮಲೇರಿಯಾ ಕೊಂಪೆಯಾಗ್ತಿದೆ. ಊರಲ್ಲೆಲ್ಲಾ ಖಾಯಿಲೆ ಕಸಾಲೆ-ಇವ್ವತ್ರಲ್ಲಿ ನಾನೇ ಪಾಸು. ಈ ವರ್ಷ ಖಾಯಿಲೆ ಗೀಯಲೆ ಬೀಳ್ಲಿಲ್ಲ. ಅದಿರ್ಲಿ-ಮನೆ ವಿಚಾರ ಮಾತಾಡು ದೊಡ್ಡಪ್ಪ-ನೀನು ಹುಷಾರಾಗಿದ್ದೀಯಾ.

ಶೇಷಗಿರಿ :—ಏನೋ ಇದ್ದೇನಪ್ಪಾ, "ಮನೆಗೆ ಮನುಷ್ಯನಲ್ಲ, ಸ್ಮಶಾನಕ್ಕೆ ಹೆಣವಲ್ಲ " ನನಗೂ ವಯಸ್ಸಾಯಿತು-ನೀನೇ ಯಸ್ನೋರು ದಿಕ್ಕಿಲ್ಲ ?

ಗಂಗಾಧರ :—ಹೌದು ದೊಡ್ಡಪ್ಪ ! ನಿನಗೆ ಹೊತ್ತು ಕಳೆಯೋದೇ ಬಂದು ಒಗಟಾಗಿದೇಂತ ಕಾಣತ್ತೆ ! ಪೂರ್ವ ಕಾಲದವರಾಗೋ ಹೊತ್ಗೆ ನೀವೆಲ್ಲಾ ಕಷ್ಟ ನಷ್ಟಗಳ್ನೆಲ್ಲಾ ನಿಭಾಯಿಸ್ಕೊಂಡು ಇಷ್ಟರಮಟ್ಟಿಗಾದ್ರೂ ನಗ ನಗ್ತಾ ಇರ್ತೀರಿ. ನಾವಾಗಿದ್ರೆ ಕೊರಗಿ ಕೊರಗಿ ಎಂದೊ ಒರಗ್ತಿದ್ವು ! ಜೋರಾ ನಂಜಮ್ಮ ಹೇಗಿದ್ದಾರೆ ದೊಡ್ಡಪ್ಪ ? ನಾನು ಕ್ರಿಸ್‌ಮಿಸ್‌ಗೆ ಬಂದಿದ್ದಾಗ ನಂಜಮ್ನೋರ್ಗೆ ವಿಷಮ ಶೀತ ಜ್ವರಾ ಆಗಿತ್ತು. ಈಗ ಹುಷಾರಾಗಿದ್ದಾರ್ಯೇ ದೊಡ್ಡಪ್ಪಾ ?

ಶೇಷಗಿರಿ :—ಎಲ್ಲಾ ಚೆನ್ನಾಗಿದ್ದಾರೆ ಮಗೂ. ಆ ಜೋರನ ಗೇನು ? ಏಮ್ಮೆ ಹಾಗೆ ತಿಂತಾನೆ ಮೂಡೇವಿ ಹಾಗೆ ಬಿದ್ದಿರ್ತಾನೆ. ಸರಿ ! ಆಕೆ ಹೇಳು. ಕೆಲಸ ಮಾಡ್ಬೇಕೂದ್ರೆ ಎಲ್ಲೂ ಇಲ್ಲದ ರೋಗ. ಇವರ ವಿಚಾರದಲ್ಲಿ ದಯಾ ದಾಕ್ಷಿಣ್ಯ ತೋರಸ್ತಾ ಹೋದ್ರೆ ಬರಬಾರ್ದ ಪಾಪ ಬಂದು ತಲೆಗೆ ಸುತ್ತಿಕೊಳ್ಳುತ್ತೆ. ಮಗೂ ಜೋಕೆ !-ಶಾನೆ ಸ್ತುತಿ ನೋಕೆ ಹೋಗಬೇಡ. " ಅತಿ ಸರ್ವತ್ರ ವರ್ಜಯೇತ್"

ಗಂಗಾಧರ :—ಹಾಗಂದ್ರೇನು ದೊಡ್ಡಪ್ಪಾ ! ಅವರ ವಿಚಾರದಲ್ಲಿ ನ್ಯಾಯವಿಲ್ಲೆ ನೀನು ಬಹಳ ಕಠಿಣಚಿತ್ತನಾಗಿದ್ದೀ. ಏನೋ ಒಡಪರು-ಹುಳು ಹೊಟ್ಟೇ ಪಾಡಿಗಾಗಿ ಬಂದು ಚಾಕ್ರಿಗೆ ಸೇರಿಕೊಂಡಿದ್ದಾರೆ. ದೇವರವರಿಗೆ ಕೊಟ್ಟಿಲ್ಲ. ನಿನಗೂ ಕೊಟ್ಟಿದ್ದಾನೆ. ಅವಲೀಮರಾನಾಶ್ರಯಿಸಿ ಬಡ ಹಕ್ಕಿಗಳು ಜೀವಿಸೋ ಹಾಗೆ ನಿನ್ನನ್ನಾಶ್ರಯಿಸಿ ಅವರು ಜೀವಿಸ್ತಿದ್ದಾರೆ. ನಿನಗೂ ಅವರಿಗೂ ಕೊಡೋ ದಾತ ಒಬ್ಬನೇ ಅಲ್ವೇ ? ಅವರ ವಿಚಾರದಲ್ಲಿ ನೀನಿನ್ನೂ ದಯೆ ತೋರಿಸ್ಬೇಕು ದೊಡ್ಡಪ್ಪಾ.

(ತೆರೆಯ ಒಳಗೆ)

ಜೋರ :—ಅಯ್ಯೋ ನಮ್ಮಪ್ಪಾ ! ನಮ್ಮ ಭಾಗದ್ದೇವ್ರೇ ! ನಿನ್ನ ಹೊಟ್ಟೆ ತಣ್ಣಗಿರ್ಲಪ್ಪಾ. ಇಂಥಾ ಪಾಳ್ಕಾಲ್ದಲ್ಲೂ ಧರ್ಮರಾಯನಂಥಾ ಮಾರಾಯ ನೀನಾದ್ರೂ ಒಬ್ಬ ಇರೋ ಹೊತ್ಗೇ ಒಸಿಯಾಡ್ರೂ ಮಳೆ ಬೆಳೆಯಾಗ್ತೈತೆ ತಿಪ ನಿಂಗೆ ನೂರು ವರ್ಷ ಆಯುಸ್ಸೊಟ್ಟು ಚಂದಾಕಿರ್ಲಪ್ಪಾ !

(ನಂಜಮ್ಮನು ಎರಡು ಲೋಟಗಳಲ್ಲಿ ಕಾಫಿಯನ್ನು ತಂದು ಮುಂದಿಡುವಳು)

ಗಂಗಾಧರ:—(ಕಾಫಿಯನ್ನುಕುಡಿಯುತ್ತಾ) ಜೆನ್ನಾಗಿದ್ದೀರಾ ನಂಜಮ್ನೋರೇ ?

ನಂಜಮ್ಮ:-ಏನೆ ಕೂಇಷ್ಟರಮಟ್ಟಿಗಿದ್ದೇನಪ್ಪಾ. ನೀವು ಹುಷಾರಾಗಿದ್ದೀರಾ ? ಯಾವಾಗ ಬಂದದ್ದು ?

ಗಂಗಾಧರ :—ಜೆನ್ನಾಗಿದ್ದೇನಮ್ಮ-ಕಲ್ಲು ಗುಂಡು ಇದ್ದಹಾಗಿದ್ದೇನೆ ಮುಖ್ಯ ನಿಮ್ಮೆಲ್ಲರ ವಿಶ್ವಾಸ. ಇಗೊಳ್ಳಿ ಈಗ್ತಾನೆ ಬರ್ತಾಯಿದ್ದೇನೆ. ಹಾಳು ಬಸ್ಸು ಪ್ರಯಾಣ ; ಅಯಾಸ ಹೆಚ್ಚು-ತಿಂಡೀ ಕಡಿಮೆ-ಕಂಡ್ರಾ ಆದಕ್ಕೇ ಇಷ್ಟು ಒಡವಾಗಿ ಹೋಗಿರೋದು. ನೋಡೀ ಇಲ್ಲಿದ್ರೆ ಸುಲಭವಾಗಿ ಸೇರಕ್ಕಿ ಇಳಸ್ತೀನಿ ಬೆಂಗಳ್ಳೂರ್ಗೆ ಹೋದ್ರೆ ಆರ್ಧ ಪಾವುಕೂಡ ಇಳಿಯೋ ಹಾಗಿಲ್ವಲ್ಲಾ-ನೋಡೀ-ಮರ್ತಿದ್ದೆ ಇವತ್ತು ಸ್ವಲ್ಪ ಜೋರಾಗಿರಬೇಕು-ಹಿತ್ಲಲ್ಲಿ ಬೂದುಗುಂಬಳ ಕಾಯಿ ಇದ್ಯೇನೋ ನೋಡಿ. ಒಳ್ಳೆ ಪೊಸರು ಹಾಕೋ ಸ್ಮರೀಬ್ಯಾಡಿ-ಬೆಂಗಳೂರು ಹೋಟಲ್ ಮಜ್ಜಿಗೆ ತಿಂದೂ ತಿಂದೂ ತಲೆ ಜೇಜಾರು ಹಿಡಿದ್ಹೋಗಿದೆ. ಮನೆ ಮೊಸರೆಲ್ಲಾ ಇವತ್ತು ನಂಗೇ ಹಾಕ್ಬೇಕು-ತಿಳೀತೋ.

ನಂಜಮ್ಮ :—ಸಂತೋಷ. ನೀವ್ರ ತಿನ್ನೋ ಆಸ್ಟು ಹಾಕ್ತೀನೆ. ದೇವರು ಯಾವದಕ್ಕೂ ಕಡಿಮೆ ಮಾಡಿಲ್ಲ (ನಿಷ್ಕ್ರಮಿಸುತ್ತಾ ಆತ್ಮಗತ) ಎಂಥಾ ರತ್ನದಂಥ ಹುಡುಗ. ದಿಕ್ಕು ದಿವಾಳಿಯಿಲ್ದ ಬಡವ! ನನ್ನೋಗಚ್ಚೇವು ಕೂಡ ಹೊಟ್ಟೇಲಿ ಹುಟ್ಟಿದ ಮಗನಿಗಿಂತಲೂ ಹೆಚ್ಚಾಗಿ ವಿಚಾರಿಸಿದ ಮಾರಾಯ ! ಇಂಥಾ ಮಗನ್ನ ಹೆತ್ತ ತಾಯಿ ಹೊಟ್ಟೆ ತಣ್ಣಗಿರಲಿ.

ಗಂಗಾಧರ :—(ದೊಡ್ಡಪ್ಪನ ಕಡೆ ತಿರುಗಿ) ಆಕೆಯದೆಂಥಾ ಸರಳ ಸ್ವಭಾವ ದೊಡ್ಡಪ್ಪ ! ನಾನು ನಾಲ್ಕು ಒಳ್ಳೇಮಾತಾಡಿದ್ದಕ್ಕೇ ಆಕೆಗಾದ ಆನಂದ ನೀನು ನೋಡಲಿಲ್ಲ. ಒಳ್ಳೇ ಮಾತಾಡೋದಿಕ್ಕೆ ನಮ್ಮ ತಾತನ ಮನೆ ಗಂಟೇನು ಹೋಗತ್ತೆ ದೊಡ್ಡಪ್ಪಾ !

ಶೇಷಗಿರಿ:—(ಕುಪಿತನಾಗಿ) ಗಂಗೂ! ಇದೇ ಪೊದಲು ಇದೇ ಕೊನೆ. ಇನ್ಮೇಲೆ ನನಗೀ ಉಪದೇಶ ಬೇಕಿಲ್ಲ. ಬೆಂಗಳೂರ್ಗೆ ಹೋಗಿ ನಾಲ್ಕು ಇಂಗ್ಲೀಷು ಮಾತು ಕಲತ್ತಾ ಕ್ಷಣ ನೀನೇನೂ ಬೃಹಸ್ಪತಿ ಪೊಮ್ಮಗನಾಗ್ಲಿಲ್ಲ-ನನಗೂ ಸ್ವಲ್ಪ ಇಂಗ್ಲೀಷು ಬರತ್ತೆ-ಕೆಲ್ಸಕ್ಕೆ ಜಾರ್ದೇಯಿದ್ದ ಜವಾನ್ರಿಗೆಲ್ಲಾ ಮರ್ಯಾದೆ ತೋರಿಸ್ಬೇಕಂತೆ-ಒಳ್ಳೇ ಮಾತ್ನಾಡಬೇಕಂತೆ-ದಯೇ ತೋರಬೇಕಂತೆ! ನೀನೇನೋ ಸುಜಾಯೋಗ್ಯಾಂತಿದ್ದೆ. ಆಕೆ ಎದುರಿಗೆ ಹಾಗೆ ಜೆಲ್ಲಾಟಾ ಆಡ್ದಯಲ್ಲಾ! ನಾನ ಮರ್ಯಾದೆ-ಘನತೆ ಸ್ವಲ್ಪವೂ ಜ್ಞಾಡ್ಸೇ? ನೀನೆಲ್ಲಿ ಅವಳೆಲ್ಲಿ! ನೀನು ಮನೆಗೆ ಎರಡನೆ ಯಜಮಾನ. ಅವಳು ಅಡಿಗೆ ಕೆಲಸ ಮಾಡ್ಕೊಂಡು ಬಿದ್ದಿರೋ ಕೂಲಿ ಹೆಂಗಸು. ಪೂರ್ವ ಜನ್ಮದಲ್ಲಿ ಎಷ್ಟು ಸಾಪಸಾಡಿ ಏನು ಮಾಡ್ಬಾರದ್ನೆಲ್ಲಾ ಮಾಡಿದಳೋ ಈಗ ವಿಧವೆಯಾಗಿದ್ದಾಳೆ. ಅಂಥಾ ಚಂಡಾಲ ಹೆಂಗಸನ್ನ ಮನೇ ಅಕ್ಕತಂಗಿಯರ್ನ ಮಾತಾಡಿಸೋ ಹಾಗೆ ಮಾತಾಡಿಸ್ಬಹುದೇ?

ಗಂಗಾಧರ:—ದೊಡ್ಡಪ್ಪಾ-ನಂಗೆ ಆ ಭೇದ ತಾರತಮ್ಯಗಳೊಂದೂ ಗೊತ್ತಿಲ್ಲ: ನಿಮ್ಮ ಜಾತಿ ರೀತಿ ಮತಗಳ ನಡವಳಿಕೆಗಳೊಂದೂ ಗೊತ್ತಿಲ್ಲ. ನಿಮ್ಮ ಘನತೆ ಮರ್ಯಾದೆ ಡಬಡ್ಡಾಳಿಕೆಗಳೊಂದೂ ಅರ್ಥವಾಗಲಿಲ್ಲ ಹೆಂಗಸ್ರೆಲ್ಲಾ ನನಗೆ ಅಕ್ಕ ತಂಗೀರೇ. ಗಂಡಸ್ರೆಲ್ಲಾ ನನ್ನ ಅಣ್ಣತಮ್ಮಂದಿರೇ. ಅವರು ನಮಗೇನನ್ಯಾಯಮಾಡಿದಾರೆ ದೊಡ್ಡಪ್ಪ, ಹೀಗೆ ನಿಷ್ಕಾರಣವಾಗಿ ಬೈಗಳ ಮಳೆ ಸುರಿಸೋಕೆ? ಕೊಡೋ ಜೀತಕ್ಕೆ ರಟ್ಟೆ ಮುರಿದು ಚಾಕರೀ ಮಾಡೇ ಮಾಡ್ತಾರೆ. ಎಲ್ಲರೂ ನಮ್ಮ ಹಾಗೇ ದೊಡ್ಡಪ್ಪಾ. ನಾವು ಹೆಚ್ಚೇನು, ಅವರು ಕಡಿಮೆಯೇನು?

ಶೇಷಗಿರಿ:—ಮುಖ್ಯ ನಮ್ಮ ತಪ್ಪು. ನಿನ್ನ ಆ ಹಾಳು ಇಂಗ್ಲೀಷ್ ಓದೋಕೆ. ಬೆಂಗಳೂರಿಗೆ, ಕಳುಹಿಸ್ದೇಯಿದ್ರೆ ನೀನು ಹೀಗೆ ಕೆಟ್ಟು ಹಾಳಾಗ್ತ ಇರ್ಲಿಲ್ಲ. ಇನ್ನೇನು ಮಾಡೋದು! ಕೈವಿಚಾರಿ ಹೋಯಿತು! ಚಿಕ್ಕೋನು ದೊಡ್ಡೋನಾದೆ-ರೆಕ್ಕೆಗಳು ಬಲೀತು-ಕೊಬ್ಬದೆ. ಈಗ ಗುರುವಿಗೇ ತಿರುಮಂತ್ರ ಹೇಳ್ತಾಯಿದ್ದೀ! ಕಾಲ ಹೀಗೇ ತಾನೇ. ಇರ್ಲಿ ಇರ್ಲಿ ಬದುಕಿದ್ರೆ ನಾನು ನೋಡ್ದೇ ಹೋಗ್ತೇನ್ಯೆ? ಈ ನೀತಿ-ಈ ಧರ್ಮ-ಈ ದಯೆ ಇನ್ನೆಷ್ಟು ದಿನ ಇರತ್ತೆ ಅನ್ನೋದ. ಸಂಸಾರದ ಕಷ್ಟ ಸುಖ ಕಂಡ್ರೆ ಆಗ ಗೊತ್ತಾಗತ್ತೆ ಈ ನೀತಿಚಿಂತಾಮಣಿಯೆಲ್ಲಾ ಆವಾಗ ಸಾಗರ ಪಾಲಾಗತ್ತೆ! ಆಪ್ಪಾ ತಿಳಿದುಕೋ, "ಬಯ್ದು ಹೇಳ್ದೋನು ಬದುಕ ಹೇಳಿದ, ಹೊಗಳಿ ಹೇಳ್ದೋನು ಪಾಳಾಗ ಹೇಳಿದ" ಅನ್ನೋ ಹಾಗೆ ಬದ್ಕೋ ಮಾರ್ಗ ತಿಳಿದ್ಕೊಂಡು ಬುದ್ಧಿವಂತನಾಗಿರು. ಇನ್ಮೇಲೆ ಹೀಗೆಲ್ಲಾ ಹುಚ್ಚು ಹುಚ್ಚಾಗಿ ಆಡಬೇಡ.

ಗಂಗಾಧರ:—(ಆತ್ಮಗತ) ಸುಮ್ನೆ ಯಾಕೆ ಬಂದ ದಿನಾನೇ ದೊಡ್ಡಪ್ಪನ ಹತ್ರ ವ್ಯಾಜ್ಯ (ಪ್ರಕಾಶ) ನಾನೆಷ್ಟಾದ್ರೂ ಹುಡುಗ. ಕೋಪಿನೆಕ್ಕೊಬೇಡ ದೊಡ್ಡಪ್ಪ. ಹಿಂದಿನದೆಲ್ಲಾ ಒಳ್ಳೇ ಪದ್ಧತಿಯಂತ ಹೇಳೋಕಾಗೋದಿಲ್ಲ-ಹೋಗಲಿ ಆ ಮಾತು ಬಿಡು-ಯಾವದೋ ಕಷ್ಟ ವ್ಯಸನ ಪಟ್ಟಿ ಕೊಂಡು ನಾವ್ಯಾಕೆ ಮನಸ್ತಾಪ ಕಟ್ಕೊಳ್ಬೇಕು

ಶೇಷಗಿರಿ:—ಇವೀಗ ಸರಿ. ಹಾಗ್ತಾನೆ ಇರಬೇಕು ಹುಡುಗರು. ಸುಮ್ಮನೆ ಚರ್ಚೆ ಯಾಕೆ? ಕಾಲ್ತೊಕ್ಕೋ ಒಳು-ಹಸಿದು ಬಂದಿದ್ದಿ ಬ್ರಾಹ್ಮಣ! ಅಯ್ಯೋ ಹುಚ್ಚಾ ಹುಚ್ಚಾ! ಎಷ್ಟು ಕಲ್ತುಬಿಟ್ಯೋ ಗಂಗೂ, ನನ್ನೆದುರಿಗೆ ಹುಟ್ಟಿದೋನು-ನನ್ನೆದುರಿಗೆ ಬೆಳೆದೋನು-ಆಗಲೇ ಒಪ್ಪು ಕಲ್ತು ಬಿಟ್ಟೋ?

ಗಂಗಾಧರ:—ಬೇಗ ಜಾ ದೊಡ್ಡಪ್ಪ. ನಾನು ಎಲೇ ಗಿಲೇ ಹಾಕಸ್ತಾ ಇರ್ತೀನಿ (ನಿಷ್ಕ್ರಮಣ)

ಶೇಷಗಿರಿ:—ಇದ್ಯಾಕೋ ಜೆನ್ನಾಗಿ ಕಾಣೋದಿಲ್ಲ. ನಾನು ಏನಿ ಅಂದದ್ದಕ್ಕೆಲ್ಲಾ ಇವನು ಪ್ರೋತಿ ಆಂತಾ ಹೋದ್ರೆ ಬಹುನಾಯಕ ಪಾಳ್ಯವಾಗಿ ಈ ಮನೇಲಿ ಬಾಳೋದೇ ಕಷ್ಟವಾಗತ್ತೆ. ಈಗಿನ ಕಾಲದ ಹುಡುಗರಿಗೆಲ್ಲಾ ಇದೊಂದು ರೋಗ. ಹಿರಿಯರಲ್ಲಿ ಸ್ವಲ್ಪವೂ ಗೌರವವಿಲ್ಲ. ಪೂರ್ವ ಕಾಲದ ನಡತೆಯಂದರೆ ಅಸಹ್ಯ.-ನನ್ನ ವಿವಾಹ ಪ್ರಯತ್ನ ಗಂಗೂಗೆ ಗೊತ್ತಾಪ್ರೇನುಗತಿ! ಈ ಮನೇಲೀಗ ಗೋದಗಳಿಗೂ ಕಿವಿಗಳು ಬಂದುಬಿಟ್ಟಿವೆ. ಅವಧಾನಿ ಬಾಯಿ ಗೀಯಿ ಬಿಟ್ಟಾನೋ!-ಛೆ! ಛೆ! ಅವನೆಲ್ಲಾದ್ರೂ ಬಿಡ್ತಾನ್ಯೆ —ಅವನ ಬಾಯಿಗೇ ಮಣ್ಣಾಬೀಳತ್ತಷ್ಟೆ-ಹೇಗಾದರೂ ಮುಹೂರಾಗಿರೋದು ಮೇಲು (ಒಳಗಿನಿಂದ ಗಂಗಾಧರನು ಕರೆಯುವನು) ಬಂದೇ ಗಂಗೂ-ಬಾಂದೇ-ಪರಿಷಂಜನೆ ಮಾಡು (ಆತ್ಮಗತ) ಅನ್ನ ಯಾರಿಗ್ಬೇಕು-ನೀರು ಯಾರಿಗೆ ಬೇಕು-ಮದ್ವೇ ಹುಚ್ಚು ಹಿಡಿದವೇಲೆ-ಊಟಪ ಶಾಸ್ತ್ರ ಮಾಡ್ತೀನಿ- (ನಿಷ್ಕ್ರಮಣ)

———:———

ದೃಶ್ಯ ೨.

[ಶೇಷಗಿರಿರಾಯನ ಮನೆಯ ಮುಂಭಾಗ. ಗಂಗಾಧರ ಸೊಂಡು ವೃತ್ತಪತ್ರಿಕೆಯನ್ನೋದುತ್ತಾ ಕುಳಿತಿರುವನು]

ಗಂಗಾಧರ:—ಇದೇನು ಮನೆಯೋ ದೇವರೇ ಒಲ್ಲ! ಒಂದು ಲೈಬ್ರರಿಇಲ್ಲ ಒಂದು ಹೊಸ Newspaper ಇಲ್ಲ! ಹೋ

ಗಳಿದ್ರೆ ಒಂದು ನಾಲ್ಕು ಕಥೆಪುಸ್ತಕಗಳು ಕೂಡಾ ಇಲ್ಲ. ಈ ಹಾಳು ಹಬ್ಬೇಲಿ ಹೊತ್ತು ಹ್ಯಾಗೆ ಕಳೀಬೇಕೋ ದೊಡ್ಡ Problem! ದೊಡ್ಡಪ್ಪಂಗೇನು ಬರಾ-ಒಂದೆರಡು ಪೇಪರ್, ಒಂದೆರಡು Magazines ತರೊಸ್ತೀಕೆ? ದ.ಡ್ಡಿ ಕೋರೆಲ್ಲಾ ಹೀಗೆ ಬೊಂಬಿಗಳಾಗ್ತಾ ಬಂದ್ರೆ Local enterprises ತಲೆಯೆತ್ತೋದು ಹ್ಯಾಗೆ? ಇನ್ನು ಹತ್ತು ಪ್ರಕಮಾನಗಳಾದರೂ ನಮ್ಮ ಜನರ ಬಾಳು ಬೇರೆ ಬದ ಲಾಯಿಸೋಹಾಗಿಲ್ಲ. ನಮ್ಮಪ್ಪ ಇದ್ದಾಗ್ತಾ, ನಮ್ಮಜ್ಜ ಅಮ್ಮಾಡದ ಅಂತ ಲಲ್ಲೇ ಹೊಡಿತಾರೆ೯ವಿನಾ ' ಎಲಾ ನಾನೇನ್ಮಾಡ್ದೆ—ನಾನೇನು ಮಾಡೋಕೆ ಸಾಧ್ಯಾಂತ ಮಾತ್ರ ಯೋಚಿಸೋದಿಲ್ಲ! ಮದುವೆ, ಮುಂಜಿ ಹಬ್ಬ ಹರಿದಿನಗಳು, ವ್ರತಗಳೂಂದ್ರೆ ಬಟ್ಟಲು ನೀರು ಹರ ಯೋಹಾಗೆ ಹರೆಸ್ತೀಕೆ ಡುಡ್ಡಿದೆ ಜಿದ್ರೆ ಒಂದು Noble cause ಗೆ ಸಹಾಯಮಾಡೋಕ್ಮಾತ್ರ ಕೈಲಿ ಕಾಸಿರೋದಿಲ್ಲ—ಎಂದೂ ಇಲ್ಲ Bank Deposit ಬಂದು ಬಿಡೋದಾಗ್ಲೀ-Cheque Book ನ Leaves ಎಲ್ಲಾ ಮುಗಿದು ಹೋಗಿರೋದಾಗ್ಲೀ-ಹೆಣ್ಣು ಮಕ್ಕಳೆಲ್ಲಾ ಬಾಣಂತನಕ್ಕೆ ಒರೋದಾಗ್ಲೀ-ಅಪ್ಪಾ ಅಮ್ಮನ ತಿಥಿಗಳು ಬರೋವಾಗ್ಲೀ-ತಾಪತ್ರಯಗಳೆಲ್ಲಾ ಒಟ್ಟೊಟ್ಟಿಗೆ ಅಗ್ಲೇ ಬಂಸುಬಿಡತ್ವೆ! ಇಷ್ಟರಮೇಲೆ ಅಪ್ಪಿತಪ್ಪಿ ಯಾವನಾದರೂ ಮೂರ್ಕಾಸು ಕೊಟ್ಟನೋ ಮಾರನೆಯದಿವನವೇ Newspapers ನಲ್ಲೆಲ್ಲಾ ಅವನ Photo, ಅವನ Munificent charity ಯ ಪೂರ್ವೇತಿಹಾಸಯೆಲ್ಲಾ ಬಂದು ಬಿಡಬೇಕು ಸಾಲದ್ದಕ್ಕೆ ಬಂದು ರಾವ್‌ಬಹದ್ದೂರ್ ಗಿರಿಯೋ ಧರ್ಮಪ್ರಕಾಶ್ವನ್ನೋ ಬಂದುಬಿಡಬೇಕು. ಇದಕ ತಪ್ಪಸ್ಥೆಲ್ಲಾ ಇವರಿಗೆ ಸರಿಯಾಗಿ ತಿಳಿಸೋ ''

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥

ಎಂಬ ಯಾವೊನು ಹುಟ್ಟಬೇಕೋ ಕಾಣೆ. ನಾವೇನಾದ್ರೂ ಕೇಳೋಕೆ ಹೋದೆಲ್ರೂ ಬೈಗಳ ಬಿರುಮಳೆ! '' ಈಗಿನ ಕಾಲ ದೋರು ಧರ್ಮ ಹೀನರು, ಮಾನರಹಿತರು, ಭಂಡರು, ಗುರು ನಿಂದಕರು '' ಎಂತ ನಮ್ಮನ್ನೆಲ್ಲಗಳೆದು ಹಿಗ್ಗೋ ಕ್ಮಾತ್ರಾನರಿ! ಈ Conservative Nature ಯೆಲ್ಲಾ ಹೋಗಿ Liberal Spirit ಜಿಳೀಬೇಕಾದ್ರೆ ಯಾವ ಮಾರ್ಟಿ ನ್‌ಲ್ಯೂಥರು ಹುಟ್ಟಬೇಕೋ ಕಾಣೆ (ಎಂದು ಪತ್ರಿಕೆಯ ನ್ನೋದಲು ಪ್ರಯತ್ನಿಸಿ-ಪಕ್ಕಕ್ಕೆ ಅಕಸ್ಮಾತ್ ತಿರುಗಿ) ಯಾರೋ ಈಕಡೆ ಬರ್ತಾ ಇದ್ದಾರೆ—ನಂಜಮ್ಮೋರು-ಯಾಕ್ಹೀಗೆ ಬೆದರಿದ ಜಿಕ್ಕಿನ ಹಾಗಿದ್ದಾರೆ?—ಆಯ್ಯೋ ಪ್ರಾಣೀ (ನಂಜಮ್ಮನು ಪ್ರವೇತಿಸುವಳು) ಏನ್ನಂಜಮ್ಮೋರೇ ಬಂದದ್ದು? ಏನು ವಿಶೇಷ ಹೇಳಿ.

ನಂಜಮ್ಮ :—ಅಪ್ಪಾ! ನೀವ್ಬಂದು ವಿಶ್ವಾಸದಿಂದ **ನನ್ನ** ಯೋಗಕ್ಷೇಮ-ನನ್ನಂಥಾ ಹೀನ ಜಂತುವಿನ ಯೋಗ ಕ್ಷೇಮ ವಿಚಾರಿಸ್ದಾಗ ಮನಸ್ಸಲ್ಲಿ ಏನೋ ಸಂತೋಷ ವಾಯಿತು. ಈ ಮನೇಲಿ ಒಳ್ಳೇ ಮಾತೂನೊಸ್ನೋದು ಕೂಡ, ಕೇಳಿ, ಎಷ್ಟೋ ದಿವಸಗಳಾಗಿತ್ತು. ನಿಮ್ಮ ವಿಶ್ವಾಸ ನೋಡಿ ಮನಸ್ಸಲ್ಲಿ ಹೊಸದೊಂದು ಆಸೆಹುಟ್ಟಿತು. ಈ ಬಡವಾಪಿ ದುಃಖ ನೀವಾದ್ರೂ ಹರಿಸ ಒಲ್ತೇನೋ ಎನ್ನೋ ನಂಬಿಕೆಯಾಯ್ತು-ಮುಖ್ಯ ಪ್ರಪಂಚದಲ್ಲಿ **ಗಂಡಾ** ಅನ್ನೋ ವಸ್ತು ಕಳ್ಕೊಂಡಮೇಲೆ ಹೆಂಗಸ್ರಾದ ನಾವು ಜೀವಸಿರ್ಬಾರದು-ತೋಗಲಿ-ಹೊಟ್ಟೇಲ್ಲುಟ್ಟಿದ **ಕಂದ ಆ ಶಾಮೂ** ಅವನಾರೂ **ಇದ್ದಿದ್ರೆ**.....(ಕಂಬನಿಗರೆಯುವಳು)

ಗಂಗಾಧರ:—(ಮರುಕದಿಂದ) ಅಮ್ಮಾ ಅಳ್ಬೇಡಿ. ದುಃಖ ವ್ಯಸನಗಳು ಯಾರನ್ನೂ ಬಿಡೋದಿಲ್ಲ. ಊರೂರ್ನ ಆಳೋ ಅರಸರ್ನ ಕೂಡಾ ಬಿಡೋದಿಲ್ಲ. ಆಪ್ತೇಷ್ಟರನ್ನ ಕಳ್ಕೊಳ್ಳೋ ಸೌಭಾಗ್ಯ (?) ಎಲ್ಲಾರೂ ಕೇಳ್ಕೊಂಡ್ಬಂದಿದ್ದಾರೆ. ದುಡ್ಡಿ ದ್ದಾಕ್ಷಣ ಜನಗಳ ಬಾಳು ಸುಖವಾಗಿರತ್ತೆಂತ ತಿಳ್ಕೊಂ ಡಿದ್ದೀರೇನು?

ನಂಜಮ್ಮ :—ಹಾಗಂದ್ರೇನಪ್ಪಾ—ಲೋಕದಲ್ಲಿ ಎಲ್ಲಕ್ಕಿಂತ ದುಡ್ಡೇ ಪ್ರಾಧಾನ್ಯವಲ್ವೇ! ದುಡ್ಡಿಗೆ ಗೌರವ—ದುಡ್ಡಿಗೇ ಮರ್ಯಾದೆ. ಗುಣಕ್ಕೂ ಮನುಷ್ಯರಿಗೂ ಯಾರಪ್ಪಾ ಕೊಡ್ತಾರೆ ಮನ್ನಣೆ ಈ ಕಾಲ್ದಲ್ಲಿ?

ಗಂಗಾಧರ :—ನಿಜ ನಿಜ! ನೀವು ಹೇಳೋದು ನಿಜ. ಪ್ರಪಂಚದ ನಡವಳಿಕೆಯೇ ಹೀಗಾಗಿದೆ—ಪ್ರಪಂಚವೇಕೆ—ಪ್ರಪಂಚ ಸೃಷ್ಟಿಮಾಡಿದ ಪರಮಾತ್ಮನೂ ಹೀಗೆಯೇ! ಗುಣಕ್ಕೆ ಮನ್ನಣೆಯಿದ್ರೆ ನನ್ನ ರಕ್ಷದಂಥಾ ತಾಯಿ ಏಕ್ಸಾ ಯಜೇಕಾಗಿತ್ತು ?-ನ್ನೆತರಿಂದ ಪೂಜಿಸಲ್ಪಡ್ತಿದ್ದ ತಂದೆ ಯಾಕ್ಸಾಯಜೇಕಾಗಿತ್ತು? (ಕಂಬನಿಗಳು ತುಂಬುವವು)

ನಂಜಮ್ಮ :—(ಆತ್ಮಗತ) ಶಾಮೂನ ಅವರ್ನ ಕಳೆದುಕೊಂಡ ನಾನೊಬ್ಳೇ ದುಃಖಪಡೋಳೂಂತಿದ್ದೆ. ತಂದೆತಾಯಿಗಳ್ನ ಕಳೆದ್ಕೊಂಡ ಈಕನ್ದುಷ್ಟು ಹೇಳಲು ತೀರದಾಗಿದೆ! ಅಯ್ಯೋದೇವರೆ—ದೇವರಂತೆ ದೇವರು—ದೇವರಿದ್ದೆ ಹೀಗೆಲ್ಲಾ ಯಾಕಾಬ್ಬೇಕಾಗಿತ್ತು? (ಪ್ರಕಾಶ) ನಿಮ್ಮ ವ್ಯಸನ ನೋಡಿದ್ರೆ ತುಂಬಾ ಸಂಕಟವಾಗತ್ತೆ. ನಾನೂ ಅವರೂ ಇಬ್ಬರೂ ತೀರ್ಕೊಂಡಮೇಲೆ ಶಾಮೂ ಇದ್ದಿದ್ರೆ

ನಿವ್ಮ ಹಾಗೇ ಹಗಲೂ ರಾತ್ರೀ ದುಃಖಿಸ್ತಿದ್ನೇನೋ? ಕಷ್ಟಾಕಾಣದ ಕಂದ-ಸಾಯುವಾಗಕೂಡ "ಅಮ್ಮಾ. ನನ್ಬಿಟ್ಟು ಹೋಗಬೇಡ್ವೇ" ಎಂದ-ಈಗವನೇ ನಮ್ಬಿಟ್ಟು ಹೊರಟುಹೋದ—

ಗಂಗಾಧರ :—(ಆತ್ಮಗತ) ಆಹಾ! ಮಕ್ಕಳ್ನ ಕಳ್ಕೊಂಡ ತಾಯಂದಿರ ದುಃಖ ಇಷ್ಟು ಘೋರವಾದದ್ದೇ. ಈಕೆ ಬಂದ ಕೆಲ್ಸಾ ವಿಚಾರಿಸಿ ಮನಸ್ಸಿಗೆ ಸ್ವಲ್ಪವಾದ್ರೂ ಸಮಾಧಾನ ಉಂಟುಮಾಡಿ ಕಳುಹಿಸ್ದೆ ಪೆಂಗಸ್ಹಾಗೆ ನಾನೇ ಅಳ್ತಾಕೂತೆ-Disgracetul! (ಪ್ರಕಾಶ) ಅಮ್ಮಾ, ನಮ್ಮ ನಮ್ಮ ಪೂರ್ವಾರ್ಜಿತ ಕರ್ಮಗಳೇ ಇಂಥಾ ದುಃಖಗಳ್ನ ತಂದೊಡ್ಡತ್ವೆ. ಅವುಗಳ್ನೆಲ್ಲಾ ನಾವು ಧೈರ್ಯವಾಗೆದು ಏಸ್ಬೇಕಲ್ದೆ ಸುಮ್ನೆ ಅಳ್ಕೋದೇ! ಇಂಗ್ಲೀಷ್ನಲ್ಲಿ "Dear ones to God depart frow us soon' ಅಂತಾ ಒಂದು ಗಾದೆಯಿದೆ ಕೇಳೆ. ಹಾಗಂದ್ರೆ- "ಪರಮಾತ್ಮನಿಗೆ ಸಂಪ್ರೀತರಾದವರು ನಮ್ಮಿಂದ ಬೇಗ ಹೊರಟು ಹೋದರು. ಹಾಗ್ತಿಳ್ಕೊಂಡು ನಾವು ದುಃಖ ನೀಗಿಕೋಬೇಕು ತಾಯಿ. ಇರಲೀ—ನೀವು ಬಂದ ವಿಚಾರ ತಿಳಿಸ್ಲೇ ಇಲ್ಲವಲ್ಲಾ—

ನಂಜಮ್ಮಾ:—ಅದೂ ಹೇಳಿ ನಿವ್ಮನಸ್ಸು ಯಾಕೆ ನೋಯಿಸ್ಲಪ್ಪಾ. ಮುಖ್ಯ ನಮ್ಮ ಅದೃಷ್ಟ.

ಗಂಗಾಧರ:—ಅಮ್ಮ, ಹಾಗಲ್ಲ. ನಿರ್ವಂಚನೆಯಾಗಿ ನೀವು ನನ್ನಲ್ಲಿ ಹೇಳಲೇಬೇಕು. ನನ್ನ ಕೈಯಲ್ಲಿ ಸಾಧ್ಯವಾಗುವ ಪಕ್ಷ ಕ್ಕೆ ಖಂಡಿತವಾಗಿಯೂ ಮಾಡಿ ಕೊಡ್ತೇನೆ. ಹೇಳಿ, ಸಂಕೋಚವಿಲ್ದೆ ಹೇಳಿ.

ನಂಜಮ್ಮ :—ಈ ಮನೆ ಅಡಿಗೆ ಕೆಲ್ಸಕ್ಕೇಂತ ನಾನ್ಬಂದು ನಾಳೇ ಕಾರ್ತೀಕಕ್ಕೆ ಒಂದು ವರ್ಷವಾಯ್ತು. ನಿಲ್ಲೋಕೆ ನೆರಳಿಲ್ದೆ, ತಿನ್ನೋಕೆ ಅನ್ನವಿಲ್ದೆ ಬಂದ ಪರದೇಶೀಗೆ ಆಶ್ರಯ ಕೊಟ್ಟ ಮಾರಾಯನಿಗೆ ಎರಡು ಬಗೆಯಬಾರದು ಆದರೂ—ನೋಡಿಯಪ್ಪಾ! ದೇವರು ನಮಗೂ ಅಲ್ಪ ಸ್ವಲ್ಪ ಕೊಟ್ಟಿದ್ದ-ಅವರು ತೀರ್ಕೊಂಡಮೇಲೆ ಎಲ್ಲಾ ಮೈದಂದರ ಯಜಮಾನಿಕೇಗೇ ಬಂತು. ಒಂದು ಭಾಗ ಶಾಮೂಗೆ ತೆಗೆದಿಟ್ಟಿದ್ದೀನೀಂತ ಹೇಳೀ ಹೇಳಿ ಎಲ್ಲಾನೂ ಮೂರೆಲೆ ಆಟ್ದಲ್ಲಿ ಕಳ್ದುಬಿಟ್ಟರು. ಕುಡಿಯೋದು ಜೇಡಿ ಬಂತು ಜೊತೆಗೆ, ಹೀಗಾಗಿ ತಾವು ಭಿಕಾರಿಯಾದ್ದಲ್ದೆ, ಶಾಮೂ ತೀರ್ಕೊಂಡಮೇಲೆ, ನನ್ನ ಮನೆ ಬಿಟ್ಬೋಡ್ಸಿ ನನ್ನೂ ಪರದೇಶಿ ಮಾಡ್ಬಿಟ್ರು. ಈ ಮಾರಾಯ ಆಶ್ರಯ ಕೊಟ್ಟು ತಿಂಗಳಿಗೆ ೮ ರೂಪಾಯಿ ಸಂಬಳಾಂತ ಗೊತ್ತು ಮಾಡಿದ್ರು. ಮೊದಲ್ನೆ ತಿಂಗಳು ಸಂಬಳಾ ಕೊಟ್ಟು ಎರಡನೇ ತಿಂಗ್ಳಿಂದ ಬ್ಯಾಂಕಿಗೆ ಹಾಕ್ತೀನೀಂತಹೇಳಿ ಇದುವರೆಗೆ ಮೂರಾಕ್ಷರೂ ಕೊಟ್ಟಿಲ್ಲ. ನನಗೆ ದುಡ್ಡಿನ ಅಗತ್ಯವೂ ಇರ್ಲಿಲ್ಲ-ಸುಮ್ನೇನೆ ಇದ್ದೆ—ಮೊನ್ನೆ ನವರಾತ್ರೀಲಿ ಋಷಿ ಪಂಚಮಿ ಉದ್ಯಾಪನೆ ಬಂದಾಗ ಒಂದಿಪ್ಪತ್ತು ರೂಪಾಯಿ ಬೇಕೂಂತ ಕೇಳಿದ್ದಕ್ಕೆ ರೇಗ್ಕೊಂಡು ಹೊರೆಯೋಕ್ಕೆ ಬಂದ್ರು. ಅಪ್ಪಭಟ್ರು ಒಳ್ಳೆಯರಾಗೋ ಹೊತ್ತಿಗೆ ವ್ರತ ನಿಷ್ಫಲವಾಗ್ಲಿಲ್ಲ. ಈ ಅಮಾವಾಸ್ಯೆ ಕಳೆದು ಒರೋ ತ್ರಯೋದಶೀಗೆ ನಮ್ಮ ಶಾಮೂಗೆ ಸತ್ತು ಎರಡು ವರ್ಷ. ಶಾಮೂಗೆ ಶಾವಿಗೆ ಪಾಯಿಸ- ಹಣ್ಣೂ ಹಂಪಲೂಂದ್ರೆ ಬಹು ಪ್ರೀತಿ ನಾಯೋಕೆ ಕೆಲವು ದಿವಸಕ್ಕೆ ಮುಂಚೆ "ಅಮ್ಮ-ಜಮಕಿ ಟೋಪಿ ಮಾಡಿಸ್ಕೊಡೇ-ಜಮಕಿ ಟೋಪಿ ಮಾಡಿಸ್ಕೊಡೇ" ಎಂದು ಕೇಳ್ತಾಯಿದ್ದ-ತ್ರಯೋದಶೀ ದಿನ್ವ ಒಂದು ನಾಲ್ಕು ಹುಡುಗರ್ನ ಕರೆದು ಶಾವಿಗೆ ಪಾಯಿಸದ ಆಡಿಗೇ ಮಾಡಿ ಹಾಕಿ ತಿನ್ಸೋಕೆ ತುಂಬಾ ಹಣ್ಣೂ ಹಂಪಲೂ ಕೊಟ್ಟು-ಶಾಮೂ ಹೆಸರ್ನಲ್ಲಿ ಒಂದೊಂದು ಜಮಕೀ ಟೋಪಿ ಕೊಡೋಣಾಂತ ಮಾಡ್ಕೊಂಡಿದ್ದೀನಿ. ಮುಂದೇನಾದ್ರೂ ದುಡ್ಡುಗಿಡ್ಡು ಮಿಕ್ಕೆ ಕಾತೀಯಾತ್ರೆ ಮಾಡೋಣಾಂತಲೂ ಇವೆ ಸಂಕಲ್ಪ. ನೋಡ್ಬೇಕು ನಮ್ಮಪ್ಪ ವಂಕಟಾಚಲಪತಿ ಅನುಗ್ರಹ ಹ್ಯಾಗಿದೆಯೋ' ಮನಸ್ಸೊಂದು ಜನ್ಮಾಗಿದ್ರೆ ಎಲ್ಲಿದ್ರಲ್ಲೇ ಕಾತಿ. ಎಲ್ಲ ಮುಂದರಲ್ಲೇ ಗಂಗಾ ಪುಣ್ಯ ಸಿಕ್ಕುತ್ತೆ-ನೀವ್ ಕೊಂಚ ಮನಸ್ಮಾಡಿದ್ರೆ ನನ್ನ ಇಷ್ಟಾರ್ಥ ನೆರವೇರತ್ತೆ.

ಗಂಗಾಧರ :— ಅಮ್ಮ, ಆ ವಿಚಾರ ನನಗ್ಬಿಡಿ, ನೀವ ನಿಶ್ಚಿಂತರಾಗಿರಿ. ನಿಮ್ಮ ದುಡ್ಡು ನಾನು ಕೊಡಸ್ತೇನೆ ನೀವು ಯೋಚನೆ ಮಾಡ್ದೆ ನಿರಾತಂಕವಾಗಿರಿ-ಹೂಂ! ಮರ್ತಿದ್ದೆ—ಆ ನಾಲ್ಕು ಹುಡುಗರಲ್ಲಿ ನಾನೂ ಒಬ್ಬ-ಪುರೀಬ್ಯಾಡಿ—

ನಂಜಮ್ಮ :—ಈ ಜನ್ಮ ವಿರೋವರೆಗೂ ನಿಮ್ಮುಪ್ಕಾರ ಮರಿತೇನೇ? ಇನ್ನಾಸ್ಪತ್ತೇನಪ್ಪಾ. (ನಿಷ್ಕ್ರಮಿಸುತ್ತಾ ಆತ್ಮಗತ) ನನ್ಯಾಚಾ ತಣ್ಣಗೆ ಬಾಳು ನನ್ರತ್ನಾ ಹೀಗೆ ದಿಕ್ಕಿಲ್ದ ಬಡಪೇರ ದುಃಖ ನಿವಾರಣೆ ಮಾಡು. ಅಮೃತದಂಥಾ ಬಾಯಿ, ಚಿನ್ನದಂಥಾ ಹೃದಯ-ನಮ್ಮಪ್ಪಾ ಚೆನ್ನಾಗಿ ಬಾಳು.

—:—

ಅಂಕ ೨.

ದೃಶ್ಯ ೧.

[ಶೇಷಗಿರಿರಾಯನ ಮನೆಯ ಒಳಭಾಗದ ಒಂದು ಸೋಟ ಹೊರಗಡೆ ಒಬ್ಬ ಭಿಕ್ಷುಕನ ಆರ್ತನಾದವು ಕೇಳಿಬರುವುದು.]

ಗಂಗಾಧರ :—ಯಾರದು ಹೊರಗೆ Beggar. ಇವರ್ಗೇನು ಹೊತ್ತೂ ಗೊತ್ತೂ ಒಂದೂಯಿಲ್ಲ ! ಇದು ನಮ್ಮ indescriminate charity ಯ ಫಲ. ಹೂ ಹೋಗಲಿ -ಪಾಪ, ಮುದುಕನೋ ಮೋಟೆನ್ಕೋ ಇರಬಹುದು. ಲೋ ಬೋರಾ ! ಬೀನಿಲ್ಲಾರೋ ಭಿಕ್ಷುಕ್ಕೆ ಬಾಡಿನ್ದಾರೆ; ಒಂದು ಹಿಡಿ ಅಕ್ಕಿ ಹಾಕಿ ಕಳುಹಿಸೋ. (ಬೋರನು "ಅಪ್ಪಣೆ ಬುದ್ದಿ" ಎನ್ನುವನು—ಪುನಃ ಭಿಕ್ಷುಕನ ಕೂಗು ಕೇಳಿಬರುವುದು. ಗಂಗಾಧರನು ಬೇಸರಪಟ್ಟುಕೊಂಡು) ಥೂ ! ಅಕ್ಕೀ ಹಾಕಿದ್ರೂ ಯಾಕ್ಹೀಗೆ ಅರಚಿಕೋತಾನೆ. ಹೊಟ್ಟೆಗಾಯ್ತು ಇನ್ನು ಬಟ್ಟೆಗೋ ಗುರ (ಕೆಲಸದ ಕಡೆ ನೋಡಿ) ಹೋಗ್ಹೋಗು. ನಿಮಗಿದೆಲ್ಲಾ ತಮಾಷೆಯಾಗ್ಹೋಯ್ತು ! ಏನೋ ಪಾಪಾಂತ ಅಕ್ಕಿ ಹಾಕ್ಸಿದ್ದೇ ತಪ್ಪಾಗಿಹೋಯ್ತು. ಹೋಗ್ಹೋಗು! (ಒಳಗಿನಿಂದ ಗಂಗಾಧರನ ಗೆಳೆಯನಾದ ಕೃಷ್ಣಸ್ವಾಮಿಯು ಬಿದ್ದು ಬಿದ್ದು ನಗುತ್ತಾ ಪ್ರವೇಶಿಸುವನು) ದೇವ್ರೇಗತಿ ! ನೀನೇಯೋ ಆ Troublesome Beggar ಕಿಟ್ಟೀ? ಯಾವಾಗ್ನಿಂದ ಈ ಹೊಸ Proffession ?

ಕೃಷ್ಣಸ್ವಾಮಿ :—ಗಂಗೂ, ನಾವಿಷ್ಟು close friends ಆಗಿದ್ರೂ ನನ್ನ ಧ್ವನಿ ಗುರ್ತಿಸ್ಲಾರ್ದೆ ಹೋದ್ಯಲ್ಲಾ! ಏನಾಶ್ಚರ್ಯ !

ಗಂಗಾಧರ :—ನಿಜ್ವಾಗಿಯೂ ಸಾಧ್ಯವಾಗ್ಲಿಲ್ಲ ಕಣೋ. ನಿನ್ನ imitation ಬಹಳ realistic ಆಗಿತ್ತು ನೋಡು. Pathos ಮಾತ್ರ Permanent ಆಗಿ absent ಆಗಿತ್ತು ಅಷ್ಟೇ !

ಕೃಷ್ಣಸ್ವಾಮಿ :—ಹೋಗಲೀ-ಊದ್ಕಡ್ಡಿ ಇದ್ಯೇ-ಇಲ್ಲೊಂದು ತಾ (ಗಂಗಾಧರನು ಸಿಗರೇಟಿನ ಪೆಟ್ಟಿಗೆಯನ್ನೂ, ಬೆಂಕೀ ಪಟ್ಟಣವನ್ನೂ ಕೊಡುವನು. ಕೃಷ್ಣಸ್ವಾಮಿಯು ಸಿಗರೇಟೊಂದನ್ನೆಳೆದು ಪರೀಕ್ಷಿಸುತ್ತಾ) ಇದೇನೀ Degradation ಗಂಗೂ, Scissiors ಗೆ ಹಾಕಿದ್ಯೋ ಕತ್ರೀನ Elephant ಮೇಲೇರೋಕೆ. Arise awake ಮಗೂ and stop not till Scissors are reached.

ಗಂಗಾಧರ :— ಇದಕ್ಕಾರಣ ಏನೂಂತ ಕಿಟ್ಟಿ. ಈಜೆಗೆ ನನ್ದೊಡ್ಡಪ್ಪ Family Budget ನಲ್ಲಿ retrenchment ಪುರುಮಾಡಿದ್ದೇ-ಇದು ನನ್ನ ಪ್ರಾಣಕ್ಕೇ ಬಂತು.

ಕೃಷ್ಣಸ್ವಾಮಿ :—ಅಯ್ಯೋ ಪಾಪ ! How I pity him-poor Postman-ತಿಂದಾ ಎರಡಾಣೇಗೆ ತಿಂದಾಡಕ್ಕಾಸ. ಇದಕ್ಕೊಂದು Condolence meeting ಮಾಡ್ಬೇಕು ಕಣೋ-ಯಾಕೇಂದ್ರೆ These are days of condolence meetings.

ಗಂಗಾಧರ :—(ಜಕಿತನಾಗಿ) wonderful fool ! ನನಗೆ ದುಡ್ಡು ಜಕ್ಕಾ ಬಿದ್ರೆ Post-man ಗೆ condolence ಕೊಡ್ತೀಯಲ್ಲಾ-ಛೇಪಪ್ಪ ! ಇದೊಳ್ಳೆ ನ್ಯಾಯ ಕಿಟ್ಟೀ Chief Court ನಲ್ಲಿ ನಿಂಗೋಸ್ಕರ ಒಂದು Seat ಖಾಲಿಯಿದೆಯಂತೆ.

ಕೃಷ್ಣಸ್ವಾಮಿ :—ಹೌದು ಗಂಗೂ ನಿಜ. ನಿಂಗೂ ಒಂದು Seat ಖಾಲಿಯಿದೆಯಂತೆ-Royal Guest House ನಲ್ಲಿ !-ಎಷ್ಟು unreasonable fellow ನೋ ನೀನು! ದೊಡ್ಡೊಡ್ಡ ಸಂಸಾರಗಳ್ನ ನಿಭಾಯಿಸ್ಬೇಕೂಂದ್ರೆ Poor Postmen ಎಷ್ಟು ಕಷ್ಟ ನೋಡು. ಅದರಲ್ಲೂ ನಿನ್ನಂಥಾ ಒಬ್ಬಖಾಯಿಂ ಗಿರಾಕಿ ತಪ್ಪಾಂದ್ರೆ ಎಂಥಾ Heavy loss ನೋಡು. ಎರಡಾಣೇಂದ್ರೆ ನಿನಗಲ್ಪ-ಆವನಿಗಾದ್ರೋ ಮಹದೈಶ್ವರ್ಯ ! ನೀನು ಹೇಗಾದ್ರೂ ಚಾಣಕ್ಯ ಸಂಧಾನ ಮಾಡಿ ಲುಬ್ಧ ದೊಡ್ಡಪ್ಪ ಹತ್ರ ಹಾಗೂ ಹೀಗೂ ಕಸೀತಿ. ಉದಾಹರಣೆಗೆ ಕೆಲವು ತೊಗೋ—ಎಂಟು ತಿಂಗಳು School fees ಗೆ ಹತ್ತು ತಿಂಗಳ್ದು ವಸೂಲಿ-Sports and Library fees ವರ್ಷಕ್ಕೆ ಮೂರ್ನಾಕು ಸಲ-ವರ್ಷವಾರೋ ಮೇಷ್ಟ್ರುಗಳಿಗೆಲ್ಲಾ Entertainments-Hostel Extras-ಒಟ್ಟೆ ಬರೇ ಕಳೆದ್ಹೋಯ್ತೂಂತ ಅದು ಜೇರೆ Lumpsum Grant-etc. etc. ಅಂತ ಇಟ್ತೋ ! ಗಂಗೂ ಇನ್ನೂ ಹೇಳಲೇ ?

ಗಂಗಾಧರ :—ಸಾಕು ಸುಮ್ಮನಿರೋ. ಅನೆಲ್ಲಾ Trade secrets--ಹೊರಗೆಲ್ಲಾ Expose ಮಾಡ್ತಾರೇನೋ ಕಿಟ್ಟಿ. ನಿನಗೆ ಸ್ವಲ್ಪವಾದರೂ ಗೊತ್ತಿಲ್ಲ.

ಕೃಷ್ಣಸ್ವಾಮಿ :—ಹೋಗಲೀ ! ಇನ್ನೊಂದು ವಿಚಾರ ನಿನಗೆ ಹೇಳೋಣಾಂತಲೇ ಬಂದೆ ಮಾತಿನ ಕಂತೇಲೆ Business ಮುತ್ತೇಹೋಯ್ತು. ಗಂಗೂ, For heavens sake ನೀನು ನಾಳೆ ಹೆಸರು ಬದಲಾಯಿಸ್ಕೋಳೋ-ಶುದ್ಧ ಶ್ರೀ ವೈಷ್ಣವರ ಸಂಪ್ರದಾಯ ಇದ್ದಹಾಗಿದೆ.

ಗಂಗಾಧರ :—ಶ್ರೀ ವೈಷ್ಣವರ ಸಂಪ್ರದಾಯಕ್ಕೂ ನಿನ್ನ ಹೆಸರಿಗೂ ಏನೋ ಸಂಬಂಧ ಕಿಟ್ಟು! ನೀನು ಯಾಕೋ ಇಮಾಂ ಸಾಬ್ರಿಗೂ, ಗೋಕುಲಾಷ್ಟಮಿಗೂ ಸಂಬಂಧ ಬೆಳ್ಸೋಕೆ ಹೊರಟ್ಹಾಗಿದೆ.

ಕೃಷ್ಣಸ್ವಾಮಿ :—Argumentation ಕೇಳೋಕೆ ಮುಂಚೇನೆ Decision-ಅದಕ್ಕೇ ನಿನ್ನ Hasty fellow ಅಂತ ನಾನನ್ನೋದು. ಕೇಳು, ಅದೇ Explain ಮಾಡೋಣಾಂತಿದ್ದೆ. ಹೊಟ್ಟಿಗಿಟ್ಟಿದ್ದೆ "ಭವತಿ ಭಿಕ್ಷಾಂ ದೇಹಿ" ಸಪ್ತಾಕ್ಷರಿ ಜಪಿಸ್ಕೊಂಡು, ಮನೆ ಮನೆಗೂ ಭಿಕ್ಷದ ಜೋಳಿಗೆ ಹಾಕ್ಕೊಂಡು ಬಂದ್ರೂ ಅವರು ಹೆಸರುಗಳ್ಮತ್ರಾ ಬಲೇ ಜಬರ್ದಸ್ತು. ಸಂಪತ್ಕುಮಾರನ್, ಲಕ್ಷ್ಮೀಕಾಂತಯ್ಯಂಗಾರ್, ಶ್ರೀವತ್ಸ--ದ್ವಾರಕಾವಾಸ.-ಹೀಗೇ ಹೇಳ್ತಾ ಹೋದ್ರೆ ಒಂದು ಸೋಮವಾರ ಅಮಾವಾಸ್ಯೆ ಪೂಜೆಗೆ ಹಾಕೋ ಅಷ್ಟಾಗತ್ತೆ -ಅವರ ಹಾಗೆ ನೀನು, ನೀರಿನ ಅಡ್ಡೆ ಹೊರೋಕೆ ಯೋಗ್ಯತೆ ಇಲ್ದೇ ಇದ್ರೂ ಗಂಗಾಧರ ಮಾತ್ರ ಆಗಿ ಹೋಗಿದ್ದಿ. ಹೋಗ್ಲಿ. ಗಂಗಾ ಅನ್ನೋ "ಕನ್ಯಾರತ್ನವನ್ನಾದರೂ, ಗುರುಹಿರಿಯರ ಇಚ್ಛೆಯಂತೆ, ಶ್ರೀಹರಿ ಪ್ರೇರಣೆಯಿಂದ, ಅಗ್ನಿಸಾಕ್ಷ್ಯವಾಗಿ ವಿವಾಹಮಾಡಿಕೊಂಡ್ರೆ" ಆಗಾದರೂ ಗಂಗಾಧರನಾಗ್ತಿ

ಗಂಗಾಧರ :—ಶಟಾಸ್ ಕಿಟ್ಟೀ! Kitti the witty ಎಂತ ನಿಂಗೆ ಇವತ್ತಿಂದ Title. ನೀನು ಬಯ್ದರೂ ಸಂತೋಷವಾಗೋ ಹಾಗೆ ಬಯ್ತೀಯೋ-ಇತರರು ಹೊಗಳಿದ್ರೂ ಬಯ್ದಹಾಗೇ ಇರತ್ತಪ್ಪಾ-ಅವಿರ್ಭಿ ಕಿಟ್ಟಿ ಇವತ್ತಿನ Beggar role ಯಾವಾಗ್ನಿಂದ ಅಭ್ಯಾಸಮಾಡ್ಕೊಂಡಿದ್ದೆ ನನ್ನ ಹತ್ರಾನೆ ಸಮ್ಮತ ಹೊಡ್ಸಿಬಿಟ್ಯೆಲ್ಲಾ ! ಕಿಟ್ಟೀ, ನನ್ನ ಹತ್ರ ಮರೆಮಾಚಬೇಡ. ನಿಜ್ವಾಗ್ಲೂ ಹೇಳು-ನಿನ್ನ wit ನೀನು Enjoy ಮಾಡ್ತಿಯೇನೋ

ಕೃಷ್ಣಸ್ವಾಮಿ :—ಈಗ್ಯಾಕೋ ಆ ಕಥೆ ?-ಶಿವಪೂಜೇಲಿ ಕರಡಿ ಬಿಟ್ಟಹಾಗೆ-ನನ್ನ Policy ಇಷ್ಟೇ ನೋಡು-ಪ್ರಪಂಚಕ್ಕೆ ತನ್ನದೇ ಹೊರೆಹೊರೆ Misery ಇದೆ. ಅದಕ್ಕೆ ನಾವೂ ಯಾಕೆ ನಮ್ಮಕೊರೇನೂ ಸೇರ್ಸಿ ಭಾರ ಹೆಚ್ಚು ಮಾಡ್ಬೇಕು? Direct ಆಗಿ ಒಂದು ಒಳ್ಳೇ ಕೆಲ್ಸ ಮಾಡೋಕಾಗೆಯಿದ್ರೂ ಸುತ್ತಮುತ್ತಲಿರೋರ ದುಃಖಾನ ನಾವು ಹೆಚ್ಚಿಸ್ಬೇಯಿದ್ರೆ ಸಾಕಾಗಿದೆ. ಸಾಕು ಈ ಕಂತೆ ಪುರಾಣ-ನಡಿ walking ಅದ್ರು ಹೋಗೋಣ (ತೆರೆಯಕಡೆ ನೋಡಿ) ಆಗೋ ಅಲ್ಲಿ ನೋಡು. ನಿಮ್ಮ ದೊಡ್ಡಪ್ಪ ಪ್ರೇಮ ತಿಷ್ಯ-ಹೊಟ್ಟೆಬಾಕ ಹಿಡಂಬಾಸುರ, ಏನು ವಿಚಾರ್ಸವನ ಗೋಳ್ನ

(ಬೋರನು ಪ್ರವೇಶಿಸಿ (ಇಬ್ಬರಿಗೂ ನಮಸ್ಕರಿಸುವನು

ಗಂಗೂ ! ಈ "ಪ್ರಣಾಮ" ನಿನ್ನ "ಪ್ರಪ್ರಣಾಮ" ಕ್ಕೇಂತ ಕಾಣತ್ತೆ. ಹುಷಾರಾಗಿರು ಮಗೂ-ಬಲೆಬೀಸ್ಬರ್ತ್ರು ಹಲ್ಲಲ್ಲುಗಿರೀಬೇಡ.

ಬೋರ :—ತಾವು ಪೇಟೆಯಿಂದ ಯಾವಾಗ್ಬತ್ತೀದೋಂತ ಬಕಪಕ್ಷಿ ಹಾಂಗ್ಯಾದ್ಕೊಂಡಿದ್ದೆ ಬುದ್ದಿ.

ಕೃಷ್ಣಸ್ವಾಮಿ :—ಹಾಹಾ ! ಲಕ್ಷಣವಾಗಿ ಜಾಯಿಬ್ಟುಟ್ಟು ನಾಲಕ್ಕಾತಾಡೋಕೆ ಬರದು-ಉಪವಾಸ ಉಪದೇಶಗಳು ಬೇರೇ ಕೇಡು-ಪೇಟೆಯಿಂದ ಒಂದಿದ್ದಾರಲ್ಲಾ, ಒಕಪಕ್ಷೀ, ಬಾಯ್ಬಿಡು.

ಬೋರ :—(ನಗುತ್ತಾ) ನಮ್ಮ ಕಿಟ್ಟಪ್ಪೋರು ಯಾವಾಗ್ಲೂ ಇಂಗೇ.—

ಗಂಗಾಧರ :—ಬೋರಾ, ಏನೋ ಬಂದದ್ದು. ನನ್ನಿಂದೇನಾಗಬೇಕೊ ?

ಬೋರ :—ಏನಿಲ್ಲ ಬುದ್ದಿ. ಒಂದು ಇಗ್ಗಾಪ್ಪೆ ಐತೆ. ತಾವ್ ಮಡಸ್ಕೊಡಬೇಕು. ಏನೋ ಬುಡ್ಯೋರು ಮನಸ್ಮಾಡಿ ಬಂಡ ಮುಂಡೇದ್ನ ಉದ್ಧಾರಮಾಡ್ಬೇಕೂಂತ.....

ಕೃಷ್ಣಸ್ವಾಮಿ.—ಕಣೇ ಇರಲಿ ಹೇಳೋದು ಹೇಳು. ನಡ್ಸೊಡೋ ಮಾತು ಆಮೇಲೆ.

ಬೋರ :—ನಮ್ಮದಸ್ಯೋರ ಪಾಡಸೇಪ್ಗೆ ಬಂದು ಮುಂದಿನ ಕಾಮಣ ಆಬ್ಬಕೆ ಎಂಟು ವರ್ಸವಾಯ್ತು. ನಿಮ್ಮಪ್ಪಾವರ್ತಾವಿದ್ದೆ ಧರ್ಮರಾಯನಂಧಾ ಮಾರಾಯ್ರು-ಕಂಪೌಂಡ್ಲೆ ನೆನಸ್ಕೋಬೇಕು-ಮನೇ ಮಗಾಂತ ಕಾಣ್ತೆದ್ರು ಬುದ್ದಿ ನನ್ನ-ನಮ್ಮಣೇ ಬರಾ ಅವರು ತೀರೋದ್ರು. ಕಲ್ಲ ಅಂತ ಮಾರಾಯ ಈವಯ್ನ ಕೈಗೆ ಸಿಕ್ಕೊಂಡೆ. ಜಮಾನಾನ್ಗೋಳೇ ಮಾಡ್ತೀನೀಂತ ಎಲ್ಡವರ್ಸದ್ದಿಂದೆ ಸಾವ್ರ ರುಪಾಯ್ಯಡಾ ಇಸ್ಕೊಂಡೆ-ಬಡ್ಡಿ ಕೊಡ್ಬೋಕೂಂದ್ರು--ಊದಣೇ ಚಿತ್ತಾ ಅಂದೆ. ಓದು ಬರಾ ಬರ್ದೆ ಬಡ ಮುಂಡೇದ. ಬುದ್ದಿ ಕಾಗ್ತಾ ಪಸ್ರಕ್ಕೆಲ್ಲಾ ಅವರೇಳ್ದಂಗೆ ಗುದ್ಲಿಗೀಟಾಕ್ತೆ ನೀವ್ಮಂಡಂಗೆ ವಾದವರ್ಸ ಮಳೇ ಬೆಳೇ ಎಲ್ಲಾ ಓಯ್ತು ಎಲ್ಡೊರ್ಸಕ್ಕೆ ಬಡ್ಡೀನೇ ಮಾಸ್ತಾಗೈತಂತೆ !! ಏನ್ಗತಿ ಮಾಡಾನಾ ಬುದ್ದಿ. ದಣ್ಯೋರು ಲಾಯರಿ ಬಿಟ್ಟು ದಾವ ಆಕಸ್ತೀನಿ-ಕೋಲ್ಬೆಗೆಳ್ದು ಜಮ್ಮಾಅರಸ್ತೀನಿ-ಮನೇಮಟಾ ಎಂಡ್ರೂ ಮಕ್ಳೂ ಎಲ್ಲರ್ನೂ ಅರಾಜಾಕಸ್ತೀನಿ ಅಂತಾರೆ ನೀವೇ ಏಳಿ ಬುದ್ದಿ. ಅಣಾ ಎಲರ್ನಿ ! ನಾನೂ, ಇಬ್ರೆಂಡ್ರೂ, ಮಕ್ಳೂ ಎಲ್ಲಾ ದಣೇ ಪಾದಾ ನಂಬಿ ರಟ್ಟೆ ಮುರ್ಕಾದುಡೀತೀವಿ. ಈ ವರ್ಸ ನಮ್ಮಪ್ಪೇನಾದ್ರು ಕಣ್ಬಟ್ಟು ಮಳೇ ಬೆಳೇ ಕೊಟ್ರೆ ತಿನ್ನೋಕೋಸಿ ರಾಗಿ ಇಟ್ಕೊಂಡು ಒತ್ತಾ

ಮಹಾರಿ ಅಣಾ ತೀರಸ್ತೀನಿ. ಕಬ್ಬು ಆಕಾನಾಂತ ಮಾಡ್ಕೊಂಡಿಪ್ಪೆ. ಒಬ್ಬಂಟಿಗ ಬುದ್ದಿ ನಾನು-ಎಲ್ಲಾ ನಾನೇ ಮಾಡ್ಬೇಕು-ಮಾಯಾದಿಗ್ಳ ಕಾಟ ಬ್ಯಾರೇ!

ಕೃಷ್ಣಸ್ವಾಮಿ :—ಗಂಗೂ, ಇವನು ಹೇಳೋದೆಲ್ಲಾ ನಿಜ್ವೇ?

ಜೋರ :—ನಮ್ಮಪ್ರಾಣಾ ನಿಜಾ ಬುದ್ದೀ ತಮ್ಮ ಪಾದ್ದಲ್ಲಿ ಆಪದ್ಧ ಬೇಳಾಕೆ ನಂಗೇನು ಗುಂಡಿಗೆ ಬುದ್ದಿ. ಜೀಕಾದ್ರೆ ಪರಾಂಬರ್ಸಿ ಪಶ್ರದ ನಕಲ್ನ (ಎಂದು ಕೊಡುವನು)

ಕೃಷ್ಣಸ್ವಾಮಿ :—This is terrible—ಅಸಲು ಪಾವಿಶ—ಎರಡು ವರ್ಷಕ್ಕೆ ಬಡ್ಡಿ ಶೇಕಡ ೩೪ ರಂತೆ ದೀಪ್ರೇಗತ್ತಿ. ಗಂಗೂ ನಿಮ್ಮ ದೊಡ್ಡಪ್ಪ Shylock ಜೊತೇಲಿ Competition ಗೆ ನಿಂತ್ಹಾಗೆ ಕಾಣುತ್ತೆ-Fiendish.

ಗಂಗಾಧರ :—ನಿಜ ಕಿಟ್ಟಿ ನಿಜ! This really Bad. ನಮ್ಮ uncle reasoning ಕೇಳೋ ಮನುಷ್ಯನಲ್ಲ. Litigation ಅನ್ನೋದು ಅವನಿಗೆ ನೀರು ಕುಡಿದಹಾಗೆ. ಆದ್ರೂ ನಾನು ಹೇಗಾದ್ರೂ ಮಾಡಿ ಜೋರನ್ನ Save ಮಾಸ್ಲೇಬೇಕು.

ಕೃಷ್ಣಸ್ವಾಮಿ :—Brave ಗಂಗೂ ಹಾಗೇ ಮಾಡು. ಬಡವೈತನ್ನ ಹೀಗೆ Litigation ಗೆ ತಂದು ಸಿಕ್ಸಿ ಅವರ್ಮನೆ ಹಾಳ್ಮಾಡೋ ಈ Arisotocrats ಗೆ ಯಮಪಾಶ ಯಾವಾಗ ಸಿದ್ಧವಾಗುತ್ತೋ ಕಾಣೆ.

ಗಂಗಾಧರ :—(ಯೋಚಿಸುತ್ತಾ) ಒಂದೇ ಉಪಾಯ ಕಿಟ್ಟೋ. ನಾನೂ ಹ್ಯಾಗೂ Major ಪಟ್ಟಕ್ಕೆ ಏರ್ದ್ದೀನಿ..... ಇರಲೀ ಜೋರಾ ನಿನಗೆ ಬಡ್ಡಿ ಎಲ್ಲಾ ಬಿಸ್ಸಿಬಿಡ್ತೀನಿ ಧೈರ್ಯವಾಗಿರೋ.

ಜೋರ :—(ಕಂಬನಿ ಸುರಿಸುತ್ತಾ) ನನ್ಕೊಡ್ಯಾ. ಮಾನಾ ಪ್ರಾಣಯಲ್ಲಾ ಈರಭದ್ರ ದ್ಯಾವ್ರಾಗೆ ಬಂದ್ಮಾಸಾಡಿದ ಮಾರಾಯ ನಿನ್ಮಪಕ್ಕಾರಕ್ಕೆನಾನೇನೆಕ್ಕೊಟ್ಟೀನು ವೇವರೇ. ಈ ಜನ್ಮದಾಗಾಗ್ದೇಯಿದ್ರೂ ಮುಂದಿನ್ಜನ್ಮಾಗಾದ್ರೂ ತೀರಸ್ತೀನಿ ನನ್ಮುನ್ನಾ (ನನುಸ್ಕರಿಸಿ ನಿಷ್ಕ್ರಮಿಸುವನು ಸ್ವಲ್ಪಹೊತ್ತು ನಿಶ್ಯಬ್ದ. ಕಿಟ್ಟುವೆದ್ದು ಗಂಗಾಧರನ ಪಾದಗಳನ್ನು ಹಿಡಿದು)

ಕೃಷ್ಣಸ್ವಾಮಿ :—ಗಂಗೂ, ಈ ಹಾಳು Modern Education ಪಡೀತಿದ್ರೂ Peasant redeemer ಆದ್ಯಲ್ಲಾ ಆದೇ ನನಗೊಂದು ಹೆಮ್ಮೆ ಕಿಟಿಯರು ಬರೇ ಮಾತಿನ ಮಲ್ಲರಲ್ಲ, ಕೆಲಸಗಾರರೂ ಕೂಡ ಎನ್ನೋದ್ನ ನೀನೇ ತೋರಿಸ್ದೆ. Godspeed ಗಂಗೂ, Worthy son of a worthy mother-ಈಗ ನಿನ್ನ ಹೆಸ್ರು ಸಾರ್ಥಕ್ವಾಯ್ತು. (ಗಡಿಯಾರವನ್ನು ನೋಡಿ) ಹೊತ್ತಾಯ್ತು. ಇನ್ನು ನಾನು ಬರ್ಲೇ? ಸಾಯಂಕಾಲ ನೀನೇ ಬಂದು ಬಿಡು. (ನಿಷ್ಕ್ರಮಿ) (ಜೋರನು ಪ್ರವೇಶಿಸಿ ಗಂಗಾಧರನಿಗೆ ಕೆಲವು ಅಂಚೆಯ ಕಾಗದಗಳನ್ನು ತಂದುಕೊಡುವನು)

ಗಂಗಾಧರ :—(ಕಾಗದಗಳನ್ನು ನೋಡುತಾ) Newspaper ನಮ್ಮ ಮನೆಗೆ Newspaper! ದೊಡ್ಡಪ್ಪ ಹೆಸರ್ಗೆ! ಏನೋ ನೋಜೆಗವಾಗಿದ್ಯೆಲ್ಲಾ. (ಒಡೆದು ನೋಡುತ್ತಾ) "Bangalore Herald"—Latest—ಇದೇನು ಕಾಗದ ಬೇರೆ (ಓದುವನು)

SIR,

Under the same wrapper we have sent you a voucher copy of our Paper while heartily thanking you for the kind patronage we beg to remind you of the Balance (of Rupees 13 as. 8) whose remittance we hope at an early date.

Thanking you once again for the kind patronage,

We have the Honor to remain Sir,

Yours faithfully,

"THE MANAGER"

ಪತ್ರಿಕೆಯಲ್ಲಿ ಪ್ರಕಟಣೆ! uncle ದು! O, Lord ಯಾತಕ್ಕೆ (ಪತ್ರಿಕೆಯನ್ನು ತಿರುವಿಹಾಕುತ್ತಾ ಒಂದು ಜಾಹೀರಾತನ್ನು ಹುಡುಕಿ)

WANTED :

An accomplished Smartha Brahmin Bride for a well-to-do middle aged Zamindar.

Apply with Photograph to :

"S"

Care of "BANGALORE-HERALD"

Bangalore City.

Lord Lord! ಇದು ನಿಜ್ವೇ! ನಮ್ಮ ದೊಡ್ಡಪ್ಪ ಎಷು ಕೆಟ್ಟೋದ್ರೂ ಇಂಥಾ ದುರ್ಬುದ್ಧೀಗೆ ಕೈಹಾಕ್ತಾನ್ಯೆ? ನನಗ್ಯಾವ್ದೂ ಬಗೆ ಹರಿಯೋಹಾಗೆ ಇಲ್ವಲ್ಲಾ. ಯಾರಿಗೋಸ್ಕರ

ದೊಡ್ಡಪ್ಪ ಈ Correspondence ನಡೆಸಬೇಕು ?-ನನಗೋಸ್ಕರವೇ ?-ಛೆ! ಇದಕ್ಕೆ Paper advertisement ಏನೂ ಬೇಕಿಲ್ವಲ್ಲಾ ! ಆಯ್ಯೋ ! ಕಿಟ್ಟಿನಾದ್ರೂ ಇವಿದ್ರೆ ಜೆನ್ನಾಗಿತ್ತು—consult ಆದ್ರೂ ಮಾಡ್ಬೋದ್ದಾಗಿತ್ತು. (ಯೋಚಿಸಿ) ಅವನೂ ಈಗ್ತಾನೆ ಹೊರಟಿದ್ದಾನೆ. ದಾರೀಲೆ ಸಿಕ್ಕಿದ್ರೂ ಸಿಕ್ಕಬಹುದು ಇರಲಿ. ನೋಡ್ತೀನಿ (ಸಡಗರದಿಂದ ಓಡುವನು)

ದೃಶ್ಯ ೨

[ಬೀದಿಯ ನೋಟವು ಕಾಣಬರುವುದು. ಕಿಟ್ಟುವು ಗೃಹಾಭಿಮುಖಿಯಾಗಿದ್ದಾನೆ. ಆಗ ಗಂಗಾಧರನ ಕೂಗು ಕೇಳಿಬರುವುದು.]

ಕೃಷ್ಣಸ್ವಾಮಿ :—(ಚಪ್ಪಾಳೆ ಧ್ವನಿಕೇಳಿ) ಯಾರದು ನನ್ನ ಕರೆಯೋದು ? ಯಾರೋ ಹೀಗೇ ಓಡಿ ಬರ್ತಾಯಿರೋ ಹಾಗಿದೆ! (ದಿಟ್ಟಿಸಿ ನೋಡಿ) ಗಂಗೂ—ಇಷ್ಟು ಹೊತ್ತು ಆಯ್ತಲ್ಲ ಪ್ರಸಂಗ, ಈಗೇನ್ತಿರುಗೀ ರಾಜತಾರ್ಯ. (ಗಂಗಾಧರನು ನಿಟ್ಟುಸಿರು ಬಿಡುತ್ತಾ ಕೈಯಲ್ಲೊಂದು ವೃತ್ತ ಪತ್ರಿಕೆಯನ್ನು ಹಿಡಿದುಕೊಂಡು ಪ್ರವೇಶಿಸುವನು) ಗಂಗೂ-ಇದೇನಿನ್ನವಸ್ಥೆ—ಯಾಕೆ ಹೀಗೆ ಒಂದೇ ಉಸಿರಿಗೆ ಓಡಿಬಂದೆ ಸುದಾರಿಸ್ಕೊ ಸುದಾರಿಸ್ಕೋ ! ಸುದಾರಿಸ್ಕೊಂಡು ನಿಧಾನವಾಗಿ ಹೇಳು.

ಗಂಗಾಧರ :—(ಮಾತನಾಡದೆ ವೃತ್ತ ಪತ್ರಿಕೆಯನ್ನು ಕೈಗೆ ಕೊಟ್ಟು ತಾನು ನೋಡಿದ ಜಾಹೀರಾತನ್ನು ತೋರಿಸುವನು)

ಕೃಷ್ಣಸ್ವಾಮಿ :—(ನಗುತ್ತಾ) ಇದೇನ್ದೊಡ್ಡ ವಿಷ್ಯಾಂತ ಹೇಳೋಕೆ, ಹೀಗೆ, ಸಾಯೋದೂ ಬೀಳೋದೂ ಏಂದೂ ನೊಡ್ದೆ ಬಂದ್ಯೋ ಗಂಗೂ. ಪೇಪರ್ನಲ್ಲಿ ಗ್ರಾಸ ಸಿಕ್ದೇಯಿದ್ದಮೇಲೆ Brides ಮತ್ತು Bridegroom ಸೇಗತಿ !

ಗಂಗಾಧರ:—ಕಿಟ್ಟೀ, ಮಾತಾಡೋಕೆ Excitement ಯಿಂದ ನನಗೆ ಬಾಯೇಯಿಲ್ಲ! ಈ ಕಾಗ್ದ ನೋಡು ಆಮೇಲೆ ನಿನಗಾ Advertisment ಅರ್ಥವಾಗತ್ತೆ.

ಕೃಷ್ಣಸ್ವಾಮಿ: (ಕಾಗದವನ್ನೋದುತ್ತಾ ಕನಲಿ) Fhiendis ಗಂಗೂ ಇದೆಲ್ಲಾ ನಿನ್ನ Satanic ದೊಡ್ಡಪ್ಪನ ಪ್ರಭಾವ.

ಗಂಗಾಧರ:—ಕಿಟ್ಟೀ ಕಿಟ್ಟೀ! ಯೋಚನೆಮಾಡು. ಯಾರನ್ನೂ ನಾವು ವೃಥಾ ನಿಂದಿಸಬಾರದು ಇದು ನಮ್ಮ ದೊಡ್ಡಪ್ಪಂದೂಂತಾಲೇ ಹ್ಯಾಗೆ ಗೊತ್ತು ! ದಾಯಾದಿಗಳ ಮೋಸವಾಗಿರ್ಬಹುದು.

ಕೃಷ್ಣಸ್ವಾಮಿ:—ನಿಮ್ಮ ದೊಡ್ಡಪ್ಪಂದೂಂತಾಲೇ ನನಗೆ ನಿಶ್ಚಯ ಗಂಗೂ. ನಿಮ್ದೊಡ್ಡಪ್ಪ ಮುದ್ವೇಗೆ ಪ್ರಯತ್ನ ಮಾಡ್ತಿದ್ದಾನೇಂತ ನಾನು ಹಿಂದೇನೇ ಕೇಳಿದ್ದೆ-ಆದ್ರೆ ನಂಬಿರ್ಲಿಲ್ಲ ! ನಿನ್ನ ಮುದ್ವೇಗೆ ಪ್ರಯತ್ನ ಮಾಡ್ತಿದ್ದಾನೇಂತಾ ನಂದೇಹಪಟ್ಟೆ. ಆದರೀಗ Truth ಗೊತ್ತಾಯ್ತು. ನೀನೇ ಹೇಳು ಇದು ನಮ್ಮೂರಲ್ಲಿ ಇನ್ಯಾರಿಗೆ ಅಸ್ವಮಿಸೋಕೆ ಸಾಧ್ಯ ?

ಗಂಗಾಧರ :—ಯಾರೂ ಇಲ್ಲ ನಿಜವೇ. ಆದರೆ ನಮ್ಮ uncle ಅಂತಾಲೇ ಏನು ಗೊತ್ತು ! ಇಷ್ಟಕ್ಕೂ ಅವನ ವಯಸ್ಸನ್ನು Middle age ಅಲ್ಲಿವಲ್ಲಾ.

ಕೃಷ್ಣಸ್ವಾಮಿ :—ನೀನು ಕುದ್ಧ Simpleton ಗಂಗೂ, ಅಷ್ಟ ಯೋಚಿಸ್ಲಿಲ್ಲವಲ್ಲಾ-ಸುಳ್ಳು ವಯಸ್ಸು ಕೊಟ್ಟಿರೋ ದೂಂತ-ಇದೆಲ್ಲಾ ನಿಮ್ಮ uncle, private secretary ಇದಾನಲ್ಲಾ 'ರಾಮಾನಧಾನಿ' ಅವನ ಕುತಂತ್ರಾಂತ ಕಾಣತ್ತೆ. ಮುದುಕರಿಗೆ ಮದ್ವೇ ಚಪ್ಲಾ ಹಿಡಿಸ್ಬೇಕೂಂದ್ರೆ ಆ Orthodax Rogue ಬಿಟ್ರೆಲ್ಲಾ. ಬ್ರಾಹ್ಮಣರು ಅನಿಸ್ಕೊಂಡ Leaders of Societyಲೀ ಇಂಥಾ Weaknesses ಬೆಳೆಯೋ ಹೊತ್ತಿಗೇ ನಮ್ಮ Society ಹೀಗೆ ಹಾಳಾದ್ದು.

ಗಂಗಾಧರ:—ಈಗ ಸಂಶಯ ನಿವೃತ್ತಿಯಾಯ್ತು ಕಿಟ್ಟೂ, ಏನಾದರೂ ಮಾಡಿ ಈ ಹಾಳ್ಮದ್ವೆ ನಾವು ನಿಲ್ಲಿಸ್ಲೇ ಬೇಕಾಗಿದೆ ನೋಡು. ನಮ್ಮ ಸಮಾಜಾನಾ Reform ಮಾಡ್ಬೇಕೂಂತ ನಾವು ಹೇಳ್ತಿದ್ದ ಸುಮ್ನೆ ಜೊಗಳೇಲೆ ಮುಕ್ತಾಯ ಮಾಡ್ಬಿಟ್ರೆ ಏನು ಸಾರ್ಥಕ ? ಇದನ್ನಾವ್ರೆ ಕೈಹಾಕಿ ನಿಲ್ಲಿಸಿಬಿಟ್ರೆ, ಬರೋ ಆಸ್ತೀ ಆ ಪಾಲು ಕಮ್ಮಿಯಾಗತ್ತಲ್ಲಾಂತ ಸ್ವಂತ ಮಗನೇ ಆಸ್ಪನ್ನಸ್ಸಿಂಕ್ಕೆ ವಿಘ್ನ ಬಂದಾಂತ ಸಮಾಜ ದೂರತ್ತೆ. ದೂರಿದರೆ ದೂರಲಿ ಕಿಟ್ಟೂ, ನಮ್ಮ ಕೆಲಸ ನಾವು ಮಾಡ್ಲಿಕ್ಕೇಬೇಕು.

ಕೃಷ್ಣಸ್ವಾಮಿ :—ನಿಜ ಗಂಗೂ, ನಿಜ. ಹಾಗೆ ನಿನ್ನ ಅಂದೇ ಅಂತಾರೆ. ಆನ್ನೋರ ಮಾತಿಗೆಲ್ಲಾ ಬೆಲೆ ಕೊಡ್ತಾ ಕೂತ್ಕೊಂಡ್ರೆ ಕುದ್ರೆ ಮಾರೋಕೆ ಸಂತೆಗ್ಹೋದ ಅಪ್ಪ ಮಕ್ಕ ಕಥೆ ಆದ್ಹಾಗಾಗತ್ತೆ.

ಗಂಗಾಧರ :—ಆದ್ನಿರಿ ಕಿಟ್ಟಿ ! ಮುದ್ವೆ ಕೂಡಿದ್ರೂ ದೊಡ್ಡಪ್ಪ ಮುಂದಿಮುಂದು ನೋಡಿದಮೇಲೆ ಯಾವ ತಾಯಿತಂದೆಗಳು ತಾನೇ ಒಪ್ಪೀಒಪ್ಪಿ ಮೃತ್ಯುಕ್ಕೆಗೇ ಕೊಟ್ಟು ಮದ್ವೇ ಮಾಡ್ತಾರೆ ?

ಕೃಷ್ಣಸ್ವಾಮಿ :—ನಿನ್ನದು ಶುದ್ಧ ತಪ್ಪು ತಿಳಿವಳಿಕೆ. ಕೇಳು, Heartless parents ತುಂಬಿರೋ ನಮ್ಮೂರಲ್ಲಿ ಇದ

ಹಿಸಬೇಕೆಂಬುದು ಅವನ ಸಂಕಲ್ಪ. ಆದರೆ, ಬೈರಣ್ಣನು ಸುಲಭವಾಗಿ ಇದಕ್ಕೆಲ್ಲಾ ಒಪ್ಪುವಂತಿರಲಿಲ್ಲ. ಕೊನೆಗೆ ಹನುಮಂತೇಗೌಡನು " ಎಲಾ ಹೈದ! ನನ್ನ ಕಣ್ಣುಮುಂದಿನ ಹರೆಯದಹುಡುಗ, ನೀನು. ನಿನಗೇ ಕಲೇ ಈ ಹಠ! ಇದು ತರವಲ್ಲ ಕಣೋ. ಬುಡಪ್ಪ; ಈ ಹಠ ಬುಟ್ಟು ಬುಡೋ. ಕಚೇರಿ ಹತ್ತಬೇಡ. ಅದರಿಂದ ಮುಡ್ಡಿ ಕಳಕೋತೀಯೆ," ಎಂದು ಹೇಳಿದನು.

ಬೈರಣ್ಣ:—" ಸುಮ್ಮಗಿರೋ! ಯಜಮಾನಪ್ಪ; ನಿನಗೆ ಶರಣುಮಾಡ್ತೀನಿ, ಸುಮ್ಮಗಿರೋ. ಅವನ ಸುದ್ದಿ ನೆನಸಿಕೊಂಡೇ ಅಂದರೆ ನನ್ನ ಮೈಯೆಲ್ಲಾನೂ ಉರೀತದೆ. ಇದರದೆಸೇಲಿ ನನ್ನ ಆಸ್ತಿಯೆಲ್ಲಾ ಮುಟ್ಟು ಗೋಳಾಗಿ ಹೋಗ್ಲಿ. ನಾನ್ಬೇಡ ಬುಡೋನಲ್ಲ."

ಹನುಮಂತೇಗೌಡ:—" ಅಲ್ಲವೋ. ಮನೆಹಾಳ, ನಿನ್ನ ಮೂಗೇ ಹೋಗ್ತೈತೆ. ಅವನಿಗ್ಯಾಕೋ ಅಪಸ ಕುಣ ಕೋರೀಯೆ? ಏನ ಮಾಡಾನೆ. ನಿಮ್ಮ ಆಟಾ ನೋಡಿ ಸೈಸಲಾರೆ."

ಅಷ್ಟು ಹೊತ್ತಿಗೆ ಸರಿಯಾಗಿ ರಂಗೇಗೌಡನೂ, ಅವನ ಹಿಮ್ಮೇಳದವರೂ, ಅಲ್ಲಿಗೆ ಬಂದರು. ರಂಗೇಗೌಡನು ಕೋಪದಿಂದ ಅರಳಿದ್ದ ತನ್ನ ಕೆಂಗಣ್ಣುಗಳನ್ನು ತಿರುಗಿಸುತ್ತಾ, " ಬಯ್ಯಿ, ಬಯ್ಯಿ, ಹನುಮಂತೇಗೌಡ. ಕೆನೆ ಮೊಸರಿನ ಕೆಚ್ಚು ಹಂಗೆ ಮಾಡೈತೆ," ಎಂದನು. ನಮ್ಮ ಧನಕೋಟಿಗೌಡನೂ ಮುಂದೆ ಬಂದು, " ಅಷ್ಟುತಾನೇ ರಂಗೇಗೌಡ! ಇನ್ನೊಬ್ಬರ" ಒಡವೆ ಸಿಕ್ಕಿದರೆ ಯಾರುತಾನೇ ಬುಟ್ಟಾರು? ಹನುಮಂತೇಗೌಡ ಹರೆಯಕ್ಕೆ ಬಂದಕಣಪ್ಪೋ. ಹುಡುಗರ ಹಂಗೆ ನನ್ನ ಮಾಸೇನ ಹಾಸ್ಯೆ ಮಾಡ್ತಾನೆ. ನನ್ನ ಮಾನ ನಾನೇ ಹೊರ್ತೀನಿ. ಇವನ್ಗೇನ್ಕಷ್ಟ?" ಎಂದು ಹೇಳಿದನು.

ಹನುಮಂತೇಗೌಡ:—" ಧನಕೋಟಿ, ಲೇ ಧನಕೋಟಿಗೌಡ, ಇದು ನಿಂಗೆ ಚಂದವಲ್ಲ. ವ್ಯಾಜ್ಯ ಮಾತೋಗೆ ಘೂಪಹಾಕಜಾರದು ಅದು ಪಾಪ ಕಣಯ್ಯೋ. ನಿನ್ನ, ನನ್ನ, ಮಾತಿದೆ, ನನ್ನಮುಂದಾಡು. ನಾನು ನರಸಕ್ಕ ಅಂದದ್ದೇ ವಿರಸವಾಯಿತಾ? ನನ್ನೂ ಬಯ್ಯಿ. ಬಂಜರು ನೆಲದ ಬಿಳೀಗರಿಕೆಯ ಹುಲ್ಲಿನ ಹಂಗೂ, ಬೇಸಿಗೆ ಕಾಲದ ಹಂಗರು ಬರಲಿನಹಂಗೂ, ಕುರುಚುಮಿಸೆ—ಅಂತ ಹೇಳಿ ಮುಯ್ಯಿಗೆ ಮುಯ್ಯಿ ತೀರಿಸು. (ಎಲ್ಲರೂ ಘೊಳ್ಳೆಂದು ನಕ್ಕರು. ಧನಕೋಟಿಗೌಡನ ಕೋಪದ ಕೃತಿಯು ಪಾತಾಳಕ್ಕಿಳಿದುಹೋಯಿತು. ಅವನಿಗೂ ನಗು ಬಂದಿತು. ಆದರೆ, ಮುಯವೇನೋ ಪೆಚ್ಚು). ಸಮಾಧಾನ ಇರಬೇಕಪ್ಪೋ."

ರಂಗೇಗೌಡ:—" ಈ ಬೆಡಗು ಬುಡಪ್ಪಾ. ಮೊಸರಿನ ರುಚಿ ಎಂದಿನಿಂದಲೋ ಎಷ್ಟೆಷ್ಟೋ ಸಾರಿ ನೆತ್ತಿಗೇರಿ ಹಿಂಗೆ ಹೇಳ್ತೀಯೆ. ನೆನ್ನೆ ರಾತ್ರಿ ಕರಿಬೇವಿನ ಮರಕ್ಕೆ ಏನೋ ನಡದದೆ ಕರಾಮತ್ತು. ಇವತ್ತು ನಿಂಗೆ ಮೊಸರೂ ಬಂತು. ನಿಂಗೆ ಸುಮಾನ. ನಾನು ಮೊಸರೆಲ್ಲಿ ತರಾನೆ. ನನಗೇನು ಬೈರಣ್ಣನ ಹಂಗ ಹೆಂಡತಿಕಡೇ ಆಸ್ತಿ, ಅವ್ವನಕಡೇ ಆಸ್ತಿ ಎಡೂ ಬಂದೈತೇನು? ನಮ್ಮನೇಲಿ ರವಿವರ್ಮನ ಪಠಗಳವೇನು? ನಂಗೆ ಅವನಷ್ಟು ಆಸ್ತಿ ಆದೇನು? ಅವನಿಗೆ ಶಿಕ್ಷೇ ಮಾಡ್ಸೇ ಬಿಡ್ತೀನಿ."

ಬೈರಣ್ಣ:—" ನೋಡ್ದೋ ಹನುಮಂತೇಗೌಡ! ಹೆಂಗೆಸರ ಮಾತು ಇವನ್ಗೇಕೆ; ಚಿತ್ರದ ಮಾತು ಇವನ್ಗೇಕೆ? ಇವನೂ ಮನೆಗೆ ಅಲಂಕಾರಮಾಡ್ಕೊಳ್ಳಿ. ನಾನೇನು ಬ್ಯಾಡಾ ಅಂದಿಲ್ಲ. ಈಗ ಹೇಳ್ತೀನಿ ಕೇಳು. ನ್ಯಾಯ ನನ್ನ ಕಡೆ. ನನ್ನ ಕಣ್ಣಾಣೆಗೂ ಪ್ರಮಾಣವಾಗಿ ಕರಿಬೇವಿನ ಗಿಡದ ಕಡೆಗೇ ನಾನು ರಾತ್ರಿಯಿಂದ ಹೋಗಿಲ್ಲ. (ಎಲ್ಲರೂ ಲೊಚಗುಟ್ಟಿದರು. ಧನಕೋಟಿಗೌಡನೂ, 'ಪಾಪ ಬೈರಣ್ಣ ಒಳ್ಳೇ ಮನುಸ' ಎಂದನು. ಇದನ್ನು ನೋಡಿ ರಂಗೇಗೌಡನಿಗೆ ತನ್ನ ಕಡೆಗಿದ್ದವನು ಹೀಗೆ ಕ್ಷಣದಲ್ಲಿ ಬದಲಾಯಿಸಿದನಲ್ಲಾ ಎಂಬ ವಿಷಾದ.) ಹನುಮಂತೇಗೌಡನ ಬುದ್ದಿಗೆ ಬಿರಗಾಗಿ ನಾವು ಇವತ್ತು ಕೆನೆಮೊಸರು ಕೊಟ್ಟದ್ದುಂಟು. ಇನ್ಮೇಲೆ ದಿನಾ ಕೊಡ್ತೀವಿ. (ಕೆಲವರು ಈರ್ಷ್ಯೆಯಿಂದ ಹನುಮಂತೇಗೌಡನ ಕಡೆಗೆ ನೋಡತೊಡಗಿದರು.) ಇವನೇನು ಹೇಳೋದು. ನಾವೇನಾದರೂ ಹಿಂದೆ ಮೊಸರು ಕೊಟ್ಟ

ದ್ದರೆ ನಾನು ಬದುಕೋದೇ ಸಾಕ್ಷಿ. ಪುನಾಣವಾಗೂ ಕೊಟ್ಟಿಲ್ಲ. ನನಗೆ ಶೀಕ್ಷೆ ಮಾಡಿಸೋಕೆ ಇವನಲ್ಲ ಇವರ ಅಪ್ಪನ ಹಣೇಲೂ ಬರೆದಿಲ್ಲ. (ರಂಗೇಗೌಡನ ತಂದೆಯು ಸತ್ತು ಎಷ್ಟೋ ವರುಷಗಳಾಗಿದ್ದುವು.) ಇವರ ಬುರುಜೇ ಬರಹ ನಾನು ಕಂಡಿಲ್ಲವಾ. ನಮ್ಮ ಲಾಯರು ಗುಮಾಸ್ತರು ಹೇಳವರೆ. ಈಗ ನೂರುವರುಷದ ಹಿಂದಿನ ಪುಸ್ತಕಗಳೆಲ್ಲಾ ನನಗೇ ಅನುಕೂಲವಾಗೆವೇ-ಅಂತ. ಹೊಸದು, ಅಣ್ಣಾ, ಈ ವರುಸ ಅಚ್ಚಾದ್ದೂ ತರಸ್ತಾರಂತೆ. ಆಗಲೇ ದುಡ್ಡುಕೊಟ್ಟು ಬಂದೆ; ನಾಳೆ ಬೀಳ್ತದೆ ರಂಜಕದ ಮದ್ದು. ಮುಂದೆ ಎಲ್ಲಾನೂ ಕೊಡವಿ ಮೇಜುಬಡಿದು ಲಾಯರು ವಾದಿಸ್ತಾರೆ. ಇವನು, ಹಾಕ್ಹೋಗಬೇಡವಾ. ಈ ಕುಳ್ಳ ರಂಗೇಗೌಡ ಭೂಪತಿ. ನನ್ನ ಕೆಣಕ್ತಾನೆ. ನನ್ನ ; ಶಿಡ್ಲುಮರೀನ!"

ಹನುಮಂತೇಗೌಡ:—"ಕೋಪ ಹತ್ತಿದ್ರೇ ಕಣ್ಣೇ ಸರಿಯಾಗಿ ಕಾಣಿಸೋದಿಲ್ಲ. ನಾನು ಲಂಚರುಷುವತ್ತಿಗೆ ಕೈಯೊಡ್ಡಿದೋನಲ್ಲ. ನಾನುಕೆಂಡದಂಥ ಮನುಸ. ನಿಮ್ಮಪ್ಪ,ಅವರಪ್ಪ, ಇಬ್ಬರೂ ಅಣ್ಣ ತಮ್ಮಂದಿರೇ ಅನ್ನೋ ಹಂಗಿದ್ದರು. ನೀವು ಬೆಕ್ಕುಗಳ ಹಂಗೆ ಕಚ್ಚಾಡ್ತೀರಿ. ನಮ್ಮೂರು ಯಜಮಾನ ರುಸ್ತುಂ ರಾಮೇಗೌಡ ಹೋದ ಮ್ಯಾಲೆ ಈ ಊರಿನ ಕಳಸವೇ ಹೋಯ್ತು. ನಮ್ಮೂರಿಗೆ ಉಪ್ಪು, ಬೆಂಕಿಕಡ್ಡಿ, ಶೀಮೇ ಎಣ್ಣೆ, ಈ ಮೂರು ಸಾಮಾನು ಹೊರಗಿನಿಂದ ತರ್ತಾ ಇದ್ದೊ. ಉಳಿದ್ದೆಲ್ಲಾ ಇಲ್ಲೇ ಹೊಂಚಿಕೊತಾ ಇದ್ದೊ. ಈಗ ಹೆಸರುಕಾಳೂ ಹೊರಗಿನಿಂದ ಬರಬೇಕು. ಈ ಊರಾಗೆ ಬೆಳದಿಂಗಳಾಗೆ ಎಲ್ಲಿ ನೋಡು 'ಜರ್, ಜರ ಜರ ಜರ್' ಅಂತ ರಾಟೇಲಿ ನೂಲೋ ಹೆಂಗೆಸರು ಗೆಂಡಸರು! ದೇವತೆಗಳಂಗೆ ಬಿಳೀ ಬಟ್ಟೆ ಉಟ್ಕೊಂಡು ನೂಲ್ತಾ ಇರೋರು. ಹೊಲಸುಗ್ಗೆದಾಗೆ ಬಟ್ಟೆ. ಊರ ಮಗ್ಗೆದಾಗೆ ಬಟ್ಟೆ. ಅಗಸನ ಮಡಿ. ಈ ಊರಾಗೆ ಈಗ ಅಗಸನೇ ಇಲ್ಲ. ಈಗ ರಾಟೆಯೂ ಇಲ್ಲ. ಮಗ್ಗೆ ಮೊದಲೇ ಇಲ್ಲ ಸತ್ಯದ ಕಾಲವೂ ಆಗ್ಲೇ ಹೋಯ್ತು. ಪತ್ರಾ ಬರೆದು ಸಾಲಾ ತರೋದು ಅಂದ್ರೇನು? ಗುಟ್ಟಾಗೆ ಒಳಗೆರೆ ಅರಳೀ ಮರದ ತಾವ ಸಾಲ ಕೊಡೋನೂ, ಸಾಲಾ ಮಾಡೋನೂ ಇಬ್ರೂ ಹೋಗಿ ಹಣದ ಲೆಕ್ಕಾ ಚಾರ ಮಾಡ್ಕೊಳೋರು. ಪಗಾ ಹಾಕ್ಕೊಂಡೋನು ಒಬ್ಬನೂ ಕಾಣೆ. ಪಾಪ ಬರ್ತದೇ ಅಂತ ಹೆದರೋನು ಜನ. ಒಂದೂ ವ್ಯಾಜ್ಯಗಳು ನಡೆಯೋವು ಆದರೆ, ಜನ ಬೇಗ ರಾಜೀ ಆಗ್ತಾ ಇದ್ದರು. ಊರ ಯಜಮಾನ ಅಂದ್ರೆ ಎಲ್ಲಾ ನಡುಗೋರು. ಅವನು ಹೇಳಿದ ಹಂಗೆ ಕೇಳೋರು. ಊರೆಲ್ಲಾ ಹಿಡೀಲಿ ಹಿಡಕೊಂಡು ತಂದೇ ಹಂಗೆ ಎಲ್ಲರ್ನೂ ಅವನು ಕಾಪಾಡ್ತಾ ಇದ್ದ. ಈಗೆ ಏನದೆ ಇಲ್ಲಿ? ಎಲ್ಲಾ ಕಟ್ಟುಕಿತ್ತ ಪಂಜು. ಬೆಳಗೆದ್ದರೆ ವ್ಯಾಜ್ಯ. ಹೊಡೆದಾಟ. ತಲೆಗೆ ರೇಸ್ಮೆ ವಸ್ತ್ರ, ಜರೀ ರುಮಾಲು ಸುತ್ತಿಬಿಟ್ಟರೆ, ದೊಡ್ಡೋರಾದಾರಾ ಜನರು? ಹಿಂಗೆ ಹರಳೀ ಜಳ್ಳು ಬಿದ್ದಿರುವಾಗೆ ಹೊಡೆದಾಟಕ್ಕೇಕಪ್ಪಾ ಅಳೋಣ? ಆಗಲಿ. ಇದೂ ಆಗಲಿ. ನೋಡ್ರಪ್ಪ. ಕೆಳಗೆ ಭೂಮಿತಾಯಿ. ಮ್ಯಾಲೆ ಧರ್ಮತಾಯಿ. ಮನುಸರು ನಾವು ಕೆಟ್ಟು, ಕಾಲಕೆಡ್ತೂ ಅಂತ ಬಯ್ಯೋಗೋಳು ಬಂದದೆ. ಧರ್ಮದೇವತೆ ಒಪ್ಪೋಹಂಗೆ ನಡದ್ರೆ ಚಂದ. ಮಾತಿನ್ಹಂಗೆ ಮನವಿರಬೇಕು. ದೊಂಬರಾಟಾ ಆಡಿದರೆ, ಧರ್ಮರಾಯ ಒಪ್ಪ್ಯಾನಾ? ಅವನ ಕಡೆ ಚಿತ್ರಗುಪ್ತರು ನಮ್ಮ ತೋಳುಗಳಾಗೆ ಅವರೆ. ಅವರ ಕಣ್ಣಿಗೆ ಮಣ್ಣೆರಚಾಕಾದಾತಾ? ಇದರಮ್ಯಾಲೆ ನಿಮ್ಮ ನಿಮ್ಮ ಮನಸು. ನೀವು ಓದು ಬಂದೋರು. ಇದೆಲ್ಲಾ ಮೂಡ ಭಕ್ತಿ ಅಂತೀರಿ. ಹಿಂಗೆ ಓದು ಬರದೇ ಇದ್ದೂ ನಮ್ಮಪ್ಪನ ಕಾಲದಾಗೆ ಸುಳ್ಳು ಹೇಳೋಗೌಡ ಈ ಊರೊಳಗೆ ಒಬ್ಬನೂ ಇರಲಿಲ್ಲ. ಈಗ ಯಾವ ಜಾತೀಲಿ ನೋಡ್ಕೋ ಸುಳ್ಳು ಹೇಳೋರು ಎಷ್ಟು ಜನಾ-ಅಂತ. ತಾಯಿ ಕಲಿಸಿದ ಬುದ್ದಿ. ಅವರೇನು ಮಾಡಾರು? ಈಗೆ ನೋಡಯ್ಯಾ, ನಮ್ಮೂರು ಶಾನುಭೋಗರ ಹೆಂಡತಿ, ಮೂರು ಬಿಟ್ಟಂಚಿನ ಸೀರೆ ಉಡ್ತಾಳೆ; ಮಹಾತಾಯಿ ಅವರು. ಅವರ ಮಕ್ಕಳೆಲ್ಲಾ ಹುಡುಗರಾಗಿದ್ದಾಗೆ ತಮ್ಮ ಮನೇ ಮಕ್ಕಳಿಗೆ ಅವರು ತಿಂಡಿ ಕೊಡೋರು. ನೆರೆಹೊರೆ ಹುಡುಗರು ಅಲ್ಲಿದ್ದರೆ 'ಅವರಿಗೂ ಕೊಟ್ಟು ನೀವೂ ತಿನ್ನಿ' ಅನ್ನೋರು. ಅವರ ಮಗೆಳು ಮೊಳಮೊಳ ಅಂಚಿನ ಬಣ್ಣದ ಸೀರೆ ಉಡ್ತಾಳೆ. ಬೆಂಗಳೂರು ಪಟ್ಟಣದಲ್ಲಿ ಗಂಡಂಗೆ ಕೆಲಸ. ಈಗ ಬಂದವಳೆ ಇಲ್ಲಿಗೆ. ನಾನು ತಿನ್ನಿಸಿದ ಹುಡುಗಿ ಅಲ್ಲ.

ಚಿಕ್ಕಪ್ಪು ಇವತ್ತು ತನ್ನ ಹುಡುಗಂಗೆ ಊರಿಂದ ತಂದಿದ್ದ ಬಣ್ಣ ಬಣ್ಣದ ಬಗೆ ಬಗೆ ತಿಂಡಿಕೊಟ್ಟು ಹೇಳ್ತಾಳೆ, 'ಯಾರಿಗೂ ತೋರಿಸಬ್ಯಾಡ. ಯಾರಾರು ಕೇಳಿದರೆ ಜೇಬಿನಲ್ಲಿ ಮುಚ್ಚಿಕೊ. ನನ್ನ ಹತ್ತಿರ ಏನೂ ಇಲ್ಲ.' ಅನ್ನೂ-ಅಂತ. ಮುಕ್ಕಳ್ಳಿ ನಾವೇ ಸುಳ್ಳು ಹೇಳೋ ಪಾತಾ ಕಲಿಸಿ, ಆಮ್ಯಾಲೆ ತಲೇ ಚಚ್ಚಿಕೊಂಡರೆ ತಪ್ಪುಯಾರದೋ ಹೇಳಿ. ಅವರ ಅಕ್ಕ ಹಂಗಿಲ್ಲ. ಅವಳೂ ದೊಡ್ಡೋರಮನೆ ಸೇರವಳೆ. ನೀವು ಜಗಳ ಬುಟ್ಟು ಬಿಡಿ. ಕಾಯಿ ಬೈರಣ್ಣನ ಮರದ್ದು. ತಿನಸೇ ಬಂದು ಶೂಲಾ ಎದೆಗೆ ಆನಿಸಿ ಕೇಳಿದರೂ ನಾನು ಹಿಂಗೇ ಹೇಳೋನೆ. ಒಂದು ತೆಂಗಿನಕಾಯಿ ಬುರುಡೆಗೆಲ್ಲವೇ ಇಷ್ಟು ವ್ಯಾಜ್ಯ? ನಮ್ಮ ತೋಟಕ್ಕೆ ಹೋಗಿ ಇಬ್ಬರೂ ಇಪ್ಪತ್ತು ಕಾಯಿ ಕೆಡವಿಕೊಳ್ಳಿ. ನಾನು ಬೇಡ ಅಂದರೆ ನನಗೆ ಬದಲು ಹೆಸರಿಡಿ. ವ್ಯಾಜ್ಯ ಮಾತ್ರ ಕಾಯಬೇಡಿ. ಊರಿಗೆ ದೊಡ್ಡ ಒಕ್ಕಲಾಗಿ, ಎಲ್ಲರಿಗೂ ನೆರಳುಕೊಡೋ ನಮ್ಮೂರ ಮುಂದಿನ ನೇರಿಲ ಮರವಹಾಗಿರೋದು ಚಂದ. ಅದರ ಹಣ್ಣು ಎಷ್ಟು ಜನ ತಿಂತಾರೆ? ಎಷ್ಟು ಹಕ್ಕಿಗಳು ತಿಂತವೆ! ನಾನು ನಿಮ್ಮಿಬ್ಬರಿಗೂ ರಾಜೀಮಾಡಿದ ಪುಣ್ಯಾ ಕಟ್ಕೊಂಡು ಇವತ್ತು ರಸಬಾಳೆ ಹಣ್ಣಿನ ರಸಾಯನ ಮಾಡ್ಸಿ ದೇವರಿಗೆ ಮಂಗಳಾರತಿಮಾಡಿಸಬೇಕೂ ಅಂತ ಇದ್ದೀನಿ. ಪೂಜಾರಪ್ಪ. ಮಾಡೋ ಮಂಗಳಾರತಿ."

ಪೂಜಾರಿಯು ಘಣಘಣನೆ ಘಂಟೆಯನ್ನು ಬಾರಿಸುತ್ತಾ ಮಂಗಳಾರತಿಯನ್ನುಮಾಡಿದನು. ಹನುಮಂತೇಗೌಡನು ಮಾಗಿದ ರಸಬಾಳೆಯ ಹಣ್ಣಿನ ಗೊನೆಯನ್ನು ತಾನು ಹೋಗಿದ್ದ ಊರಿನಿಂದ ತಂದಿದ್ದನು. ಮೊದಲು ಅವನಿಗಿದ್ದ ಉದ್ದೇಶವು ತಾನೊಬ್ಬನೇ ಆ ಹಣ್ಣುಗೆಳನ್ನು ತಿಂದು ಮುಗಿಸಬೇಕೆಂಬುದು. ಏಕೆಂದರೆ, ಗೊನೆಯ ಹಣ್ಣುಗೆಳಲ್ಲಿ ಯಾವುದೋ ಒಂದರಲ್ಲಿ ಅಮೃತವಿರುತ್ತದೆಂದು ಹಳ್ಳಿಯಜನರಲ್ಲಿ ನಂಬಿಕೆ. ಆ ಅಮೃತವು ತನ್ನ ಹೊಟ್ಟೆಗೇ ಸೇರಬೆಂಬುದು ಅವನ ಹಾರೈಕೆ. ಆದುದರಿಂದ, ಒಂದು ಹಣ್ಣನ್ನೂ ಯಾರಿಗೂ ಕೊಡದೆ ಎಲ್ಲವನ್ನೂ ತಾನೇ ತಿನ್ನಬೇಕೆಂದಿದ್ದ ಅವನ ಸಂಕಲ್ಪವನ್ನು ಅವನ ಉದಾರ ಮನಸ್ಸಿನ ವೈಸಿಯಿಂದ ಹೀಗೆ ತಿರುಗಿತು.

ಆದರೆ; ರಂಗೇಗೌಡನ ಕೋಪವು ಹೆಚ್ಚಲು ಅದೇ ಕಾರಣವಾಯಿತು: ಆ ಹಳ್ಳಿಯಲ್ಲಿ ರಸಬಾಳೆಯ ಗಿಡ ಗಳಿದ್ದುದು ಬೈರಣ್ಣನ ತೋಟದಲ್ಲಿ ಮಾತ್ರವೇ. ರಂಗೇಗೌಡನೂ ತಿಜಸ್ಥಿತಿಯನ್ನರಿಯದೆ ವಿಚಾರವಿಲ್ಲದ ಊಹೆಗಾರಂಭಿಸಿದನು. ತನ್ನನ್ನು ಬಹಳವಾಗಿ ಹೊಡೆದಿದ್ದ ಬೈರಣ್ಣನೇ ನ್ಯಾಯಸ್ಥಾನದ ಶಿಕ್ಷೆಯ ಭೆಯದಿಂದ ಈ ಆಟವನ್ನೆಲ್ಲಾ ಹೂಡಿರಬೇಕೆಂದೂ, ಕ್ಷಣಮಾತ್ರದಲ್ಲಿ ನಿರ್ಧಾರಂತ ಮಾಡಿದನು. ಆ ವೇಳೆಗೆ ತನ್ನ ಕೈಗೆ ಬಂದಿದ್ದ ರಸಾಯನದ ದೊನ್ನೆಯನ್ನು ಅದು ದೇವರ ಪ್ರಸಾದ ವೆಂಬುದನ್ನೂ ಮರೆತು ನೆಲಕ್ಕೆ ಹಾಕಿತುಳಿದು, "ಬೈರಣ್ಣನ ತೋಟದ ಬಾಳೇಹಣ್ಣಿನಿಂದ ಆಟಾಕಟ್ಟಿದರೆ, ನನಗೇನೂ ಮುಂಕು ಹಿಡಿದಿಲ್ಲ. ನಮ್ಮಪ್ಪ, ನಂಗೊಕಿವಿ ದೊಡ್ಡದಾಗೆ ಚುಚ್ಚವಳೆ" ಎಂದುಕೊಂಡು ದಡದಡನೆ ಹೊರಟೇ ಹೋದನು. ಅವನು ಮಾಡಿದುದು ತಪ್ಪೆಂಬುದನ್ನು ಎಲ್ಲರೂ ಒಪ್ಪಿಕೊಂಡರು. ಬೈರಣ್ಣನ ತೋಟದ ಪಕ್ಕದ ತೋಟದವನೇ ರಸಬಾಳೆಯ ಗೊನೆಯು ಯಾವುದೂ ಬೈರಣ್ಣನ ತೋಟದಲ್ಲಿರಲಿಲ್ಲವೆಂದು ಆಣೆಯಿಟ್ಟು ಹೇಳಿದನು. ಆ ಬಳಿಕ ಹನುಮಂತೇಗೌಡನು ನಿಜಸ್ಥಿತಿಯನ್ನು ನಿವರಿಸಿದನು. ಅವನ ಹೃದಯವು ಎಷ್ಟು ಉದಾರಭಾವವುಳ್ಳದೆಂಬುದನ್ನು ತಿಳಿದು ರಸಾಯನದ ಸವಿಯು ನಾಲಗೆಗಿಳಿದಮೇಲಂತು ಎಲ್ಲರಿಗೂ ರಂಗೇಗೌಡನ ಅಪರಾಧವು ಅಕ್ಷಮ್ಯವಾಗಿ ಕಂಡುಬಂದಿತು. ಬೈರಣ್ಣನಿಗೂ ದ್ವೇಷವು ಹೆಚ್ಚಿತು. ಹನುಮಂತೇಗೌಡನ ವಿವೇಕದ ಮಾತುಗಳನ್ನು ಕೇಳಿದುದರಿಂದ ಅವನ ಮನಸ್ಸಿನಲ್ಲಿ ಉಂಟಾಗಿದ್ದ ಸತ್ವರಿಣಾಮವು, ರಂಗೇಗೌಡನ ದುಡುಕುಮಾತಿನಿಂದ ಎಲ್ಲಿಗೋ ಹಾರಿಹೋಯಿತು. ಅವನು ಹನುಮಂತೇಗೌಡನೊಡನೆ, "ನೋಡಿದೋ, ಯಜಮಾನಪ್ಪ ನೀನು ರಾಮದೇವರನ್ನ ಮಾಡೋಕೆ ಹೋಗಿ ಹನುಮಂತರಾಯನ್ನ ಮಾಡಿದ ಹಂಗಾಯ್ತು. ಇವನಿಗೇ ಇಷ್ಟು ಜೂರತ್ತಾದರೆ, ನಾನೇನು ಬಳೆತೊಟ್ಟಿದ್ದೀನೇನು? ಆಗಲಿ, ಒಂದು ಕೈ ನೋಡೇ ಬಿಡ್ತೀನಿ," ಎಂದನು.

ಆದರೂ, ಹನುಮಂತೇಗೌಡನು ಇದಕ್ಕೆ ಅನುಪಲ್ಲವಿಯನ್ನು ಹಾಡಲಿಲ್ಲ. ಬಹುವಾಗಿ ಸಮಾಧಾನಪಡಿಸು

ಹೇಳಿದನು. ಅದರ ಸಾರಾಂಶವು ಇಷ್ಟು:—ಹೀಗೆ ಹತಮಾಡುವುದು ಅವಿವೇಕ. ದೊಡ್ಡವರು ದುರಾಗ್ರಹವನ್ನು ತೋರಿಸಿಯೂ, ಚಿಕ್ಕವರು ತಾಳ್ಮೆಯನ್ನು ತೋರಿಸಿದರೆ ಮತ್ತೂ ವಿಶೇಷ. ಹೊಡೆದಾಟವೇನೋ ಆಯಿತು. ನಡೆಯುವ ಕಾಲು ಎಡವಿದರೆ ಹೋಗಲಿ; ಕಾಣದೆ ಕಲ್ಲನ್ನು ಇಬ್ಬರೂ ಎಡವಿದಮೇಲೆ ಒಬ್ಬರಕಾಲನ್ನು ಮತ್ತೊಬ್ಬರು ಜಜ್ಜಬಾರದು; ಇತ್ಯಾದಿ. ಮುದುಕನ ಬೋಧನೆಯನ್ನು ಕೇಳಿ, ಧನಕೋಟಿಗೌಡನು, "ಹನುಮಂತೇಗೌಡ, ನಿನ್ನ ತಾಳ್ಮೆ ನೋಡಿ ನಿನಗೆ ಅಡ್ಡಬಿದ್ದು ಶರಣುಮಾಡಿದರೂ ಕಡಮೇ—ಆಂತ ನನಗೆ ತೋರ್ತದೆ," ಎಂದನು. ಬೈರಣ್ಣನ ಮನಸ್ಸಿನಲ್ಲಿಯೂ ಸ್ವಲ್ಪ ಪುರಾಣ ವೈರಾಗ್ಯವು ಹುಟ್ಟಿತು. ಬೆಳಗಾದರೆ ಸೋಮವಾರ. ಗಂಡನ ವೈರಾಗ್ಯವನ್ನು ಕಂಡು ಕಾಳಮ್ಮನು, "ಅರುಳು ಮರುಳು ಮುದುಕ, ಆಗೆಲೋ ಈಗೆಲೋ ಕಣ್ಣು ಮುಚ್ಚಿಕೊಳ್ಳುವ ಬೆಳ್ಳಿಯ ತಲೆಯ ಒಡೆಯನ, ಮಾತು ಕೇಳಬೇಡಿ. ಈಗ ಮೊಕದ್ದಮೆ ನಡೆಸದೆ ಬಿಟ್ಟರೆ, ಊರನಾಗೆಲ್ಲಾ ಅವಮಾನ. ಸರೀ ಕರಲ್ಲಿ ತಲೆ ತಗ್ಲು" ಎಂದು ಮುಂತಾಗಿ ವಾದಿಸಿದಳು. (ಈ ಮಾತುಗಳೂ ಹನುಮಂತೇಗೌಡನ ಕಿವಿಗೆ ಮುಟ್ಟಿದುವು. ಊರಿನವರೆಲ್ಲರೂ ಅವನ ಬೀಹುಗಾರರಾಗಿರುವಾಗ ಅವನಿಗೇನು ಯೋಚನೆ?) ಬೈರಣ್ಣನ ಪುರಾಣ ವೈರಾಗ್ಯಕ್ಕೂ, ಕಾಳಮ್ಮನ ಸವಿನುಡಿಯ ಪ್ರೋತ್ಸಾಹಕ್ಕೂ, ಎಷ್ಟೋ ಹೊತ್ತು ಪರಸ್ಪರ ಯುದ್ಧವು ನಡೆಯಿತು. ಕೊನೆಗೆ ರಂಗೇಗೌಡನು ಸುಮ್ಮನಿದ್ದರೆ ತಾನೂ ಸುಮ್ಮನಿರುವುದೆಂದೂ, ಅವನೇನಾದರೂ, ಮೊದಲು ನ್ಯಾಯಸ್ಥಾನದಲ್ಲಿ ವ್ಯಾಜ್ಯವನ್ನು ಹೂಡಿದರೆ, ತಾನೂ ಒಡನೆಯೇ ವ್ಯಾಜ್ಯವನ್ನು ಹೂಡುವುದೆಂದೂ, ಅವನು ನಿರ್ಧಾರ ಮಾಡಿಕೊಂಡನು. ಸೋಮವಾರ ರಂಗೇಗೌಡನು ವ್ಯವಹಾರವನ್ನು ಉಪಕ್ರಮಿಸಿಯೇ ಬಿಟ್ಟನು. ಬೈರಣ್ಣನೂ ಹಿಂದೆ ಬೀಳಲಿಲ್ಲ. ಅವನೂ ಮೊಕದ್ದಮೆಯನ್ನು ಹೂಡಿದನು. ಈ ವಿಷಯವನ್ನು ನಾನು ಹಿಂದೆಯೇ ಅರಿಕೆ ಮಾಡಿದ್ದೇನೆ.

ಮುಂಗಳವಾರ ಮತ್ತೊಂದು ಹಗರಣವು ನಡೆಯಿತು. ರಂಗೇಗೌಡನ ಮನೆಯವರಿಗೆ ಕರಿಬೇವಿನ ಸೊಪ್ಪು ಬೇಕಾಯಿತು. ಕರಿಬೇವಿನ ಗಿಡವಿದ್ದುದು ಬೈರಣ್ಣನ ಮನೆಯ ಹಿತ್ತಿಲಿನಲ್ಲಿ. ರಂಗೇಗೌಡನ ಮಗನಾದ ತಿಮ್ಮನು ಗೋಡೆಯಮೇಲೆ ಹತ್ತಿ, ಗೆಳುವನ್ನು ಒಡಿದು ಕೊಂಡು ಕರಿಬೇವಿನ ಸೊಪ್ಪನಸಣ್ಣ ಪುಟ್ಟ ಕೊನೆಗೆಳು ಕೆಳಗೆಬೀಳುವಂತೆ ಬಡಿಯತೊಡಗಿದನು. ಆ ವೇಳೆಗೆ ಸರಿಯಾಗಿ (ಅಲ್ಲಿಯೇ ಹತ್ತಿರದಲ್ಲಿದ್ದ) ಅಮಟೆಯ ಗಿಡದ ಮೇಲೆ ಒಂದು ಕಾಗೆಯು "ಕಾ ಕಾ" ಎಂದು ಕೂಗಿತು. ತನ್ನ ಮಗ ತಿಮ್ಮನು ಕರಿಬೇವಿನ ಸೊಪ್ಪನ್ನು ಕೇಳಲು ಶಕುನವು ಸರಿಯಾಗಿರಲಿಲ್ಲವೆಂದು ಭಾವಿಸಿಕೊಂಡು, ಕೆಳಗೆ ಸೊಪ್ಪನ್ನು ಆರಿಸಿಕೊಳ್ಳುತ್ತಿದ್ದ ಚೆನ್ನಮ್ಮನು ಅವನನ್ನು ಕೆಳಕ್ಕಿಳಿದು ಬರುವಂತೆ ಹೇಳಿದಳು. ಅವನು ಬರಲಿಲ್ಲ. "ಹಾಳುಮನೇ ಮರ; ಅದರಮೇಲೆ ಕಾಗೆ. ಕೂಗ್ತೈದೆ; ಮನೆಯೋರ ಹಂಗೇ ಅದೂ ಮಾತ್ತದೆ ಸಾಕು, ಬಾರೋ ಮಗೆ, ಇದಕ್ಕೂ ಬಡುಕೊಂಡಾರು. ಇನ್ನು ಬಡೀಬೇಡ." ಎಂದಳು. ಆ ವೇಳೆಗೆ ಸರಿಯಾಗಿ ಕಾಳಮ್ಮನು ತಮ್ಮ ಮನೆಯ ಹಿತ್ತಿಲಿಗೆ ಬಂದಳು. ಹುಡುಗನು ಅದನ್ನು ನೋಡಲಿಲ್ಲ. ಅಲ್ಲದೆ, ತಾನು ಕೊಂಬೆಯನ್ನು ಬಡಿಯುವ ರಭಸದಲ್ಲಿ ಬುಟ್ಟೀನಾನಾನು, ವಜೀರ, ಬಡಿದುಹಾಕಿಬಿಡೋದೆ." ಎಂದು ಕೊಂಡು ತನ್ನ ಕೆಲಸವನ್ನು ತಾನು ಮಾಡುತ್ತಾ ಇದ್ದನು. ಆದಿನ ಬೈರಣ್ಣನು ಎತ್ತಿನ ವ್ಯಾಪಾರಕ್ಕೆ ಒಂದು ಹಳ್ಳಿಗೆ ಹೋಗಿದ್ದನು. ಈ ಸಮಯದಲ್ಲಿ ವ್ಯಾಜ್ಯವನ್ನು ತೆಗೆಯಬೇಕೆಂದು ಸನ್ನಾಹವು ನಡೆಯುತ್ತಿದೆಯೆಂದೂ, ತಾನು ಬಂದರೆ ಬಡಿದು ಹಾಕಿಬಿಡುವುದಾಗಿ ತಿಮ್ಮನು ತಮ್ಮ ತಾಯಿಗೆ ಹೇಳುತ್ತಿದ್ದನೆಂದೂ, ಕಾಳಮ್ಮನು ತಪ್ಪಾಗಿ ತಿಳಿದುಕೊಂಡಳು. ಎಷ್ಟಾದರೂ ಚಿಕ್ಕ ವಯಸ್ಸಿನವಳು. ಪರಿಯನ್ನು ಬಿಟ್ಟು ಹಾವು ಹೆಡೆಯನ್ನು ತುಳಿದವರ ಮೇಲೆ ಹಾರಿ ಬೀಳುವಂತೆ, "ವಜೀರನಂತೆ ವಜೀರ. ಬಡಿದು ಹಾಕೆತ್ತಾನಂತೆ, ಇವನ ಬಾಯಿ ಸೇದಿಹೋಗ. ಲೇ ಹಂದಿ ಮರಿ, ಇನ್ನೇನಾದ್ರೂ ಮರವನ್ನ ಬಡಿದ್ರೋ, ನೋಡ್ಕೋ ನೀನು ಹುಟ್ಟಿಲಿಲ್ಲಾ ಅಸ್ತಿಸಿಬಿಡ್ತೀನಿ," ಎಂದು ಗರ್ಜಿಸಿದಳು. ಗೋಡೆಯ ಆಚೆಗೆ ಇದ್ದ ಚೆನ್ನಮ್ಮನು ತನ್ನನ್ನು ಹಂದಿಯೆಂದವಳ ತಾಯಿಯನ್ನು ನಾಯಿ

ಯುಂ[redacted] ಬೈದು, ಮನವನ್ನು ಸುತ್ತಷ್ಟು ಹೆಚ್ಚಾಗಿ ಬಡಿಯುವಂತೆ ಹುಡುಗನನ್ನು ಪ್ರೋತ್ಸಾಹಿಸಿದಳು. ಅವನೂ ಮಾತೃವಾಕ್ಯವನ್ನು ಚೆನ್ನಾಗಿ ನಡೆಸಬೇಕೆಂಬ ಉದ್ದೇಶದಿಂದ ಗೋಡೆಯಮೇಲೆ ಜಗ್ಗಿ ಜಗ್ಗಿ ಕುಣಿದು ರಭಸದಿಂದ ಕೊಂಬೆಯನ್ನು ಬಡಿಯತೊಡಗಿದನು. ರೋಷದಿಂದ ಉರಿಯುತ್ತಿದ್ದ ಚೆನ್ನಪ್ಪನಿಗೆ ತನ್ನ ಮಗನು ಮಳೆಯಿಂದ ನೆನೆದ ಗೋಡೆಯಮೇಲೆ ಹೀಗೆ ಮಾಡಿದುದು ಸರಿಯಲ್ಲವೆಂಬುದು ತೋರಲಿಲ್ಲ. ಅವಳ ಅವಿವೇಕವನ್ನು ಕ್ಷಮಿಸಿ ಸುಮ್ಮನಿರಲು ಅಜೀತನ ವಸ್ತುವಾದ ಗೋಡೆಗೆ ತಕ್ಕಷ್ಟು ವಿವೇಚನೆಯೂ ಇರಲಿಲ್ಲ. ಅಂತು, ಗೋಡೆಯು ಕುಸಿದುಬಿದ್ದಿತು. ತಿಮ್ಮನು ಕೆಳಗೆ ಬಿದ್ದನು. ಗೋಡೆಯು ಬಹಳ ಎತ್ತರವಾಗಿಲ್ಲದ ಕಾರಣ, ಅವನ ಮುಂಡಿಯೂ, ಕೈಗಳೂ, ತರಿದುಹೋಗಿ, ರಕ್ತವು ಬರುವುದರಲ್ಲಿ ಮಾತ್ರವೇ ಈ ನಾಟಕವು ಕೊನೆಗಂಡಿತು. ತಿಮ್ಮನು ನೋವಿನಿಂದ ನರಳುತ್ತಾ, ತನ್ನ ಕೋಪದ ಕಾಲುವೆಯನ್ನು ಕಾಳಮ್ಮನಮೇಲೆ ತಿರುಗಿಸಿದನು ಒಂದು ಹೆಂಟೆಯನ್ನು ಅವಳ ಕಡೆಗೆ ಎಸೆದನು. ಅದು ಧೂಪ್ಪನೆ ಅವಳ ಬೆನ್ನಿಗೆ ತಗಲಿತು. ಕೆಳಕ್ಕೆ ಬಿದ್ದು ವಿಭಾಗವಾಗಿದ್ದ ಅದೇ ಹೆಂಟೆಯ ಒಂದು ಚೂರನ್ನೇ ಅವಳೂ ಅವನಮೇಲೆ ಬಲವಾಗಿ ಬೀರಿ ಮನೆಯೊಳಕ್ಕೆ ಓಡಿಹೋಗಿ ಬಾಗಿಲನ್ನು ಹಾಕಿಕೊಂಡು, ಒಳಗಿನಿಂದ ಬೈಯಲಾರಂಭಿಸಿದಳು. ಆಳುಗಳೂ ಮನೆಯಲ್ಲಿರಲಿಲ್ಲ. ತಿಮ್ಮನು ಗಳಗಳನೆ ಅಳುತ್ತಿದ್ದನು. ಚೆನ್ನಮ್ಮನೂ ಯಥಾಶಕ್ತಿಯಾಗಿ ಸಹಸ್ರನಾಮ ಪಾರಾಯಣಕ್ಕೆ ಪ್ರಾರಂಭಿಸಿದಳು.

ನೆರೆಹೊರೆಯ ಮನೆಗಳಲ್ಲಿ ಗಂಡಸರು ಯಾರೂ ಇರಲಿಲ್ಲ. ಹೆಂಗೆಸರೆಲ್ಲರೂ "ಮುಸಿ ಮುಸಿ" ನಗುತ್ತಾ ಇದ್ದರು. ಕೆಲವರಿಗೆಂತು ನಿವಾರದಂತೆ ಹೊಡೆದಾಟವಾಗದೆ ಇಷ್ಟರಲ್ಲಿಯೇ ಕಲಹವು ಕೊನೆಗೆಂಡಿತಲ್ಲಾ- ಎಂಬ ತಳಮಳ. ಅವರಿಗೆ ಕೆಲಸವೇ ತೋರದು. ವ್ಯಾಜ್ಯವು ಬಲವಾಗಲೆಂಬುದೇ ಅವರ ಹಾರೈಕೆ. ಊರಿಗೇನೋ ಶನಿಕಾಟವು ಬಂದು ದೊಡ್ಡವರ ಮನೆಯಿಂದಲೇ ಪ್ರಾರಂಭವಾಗುವುತಿದೆಯೆಂದು ಒಬ್ಬ ಮುದುಕಿಯು ಗೊಣಗುತ್ತಿದ್ದಳು. ಅವಳ ಸೊಸೆಯು ಸೆರಗಿನಿಂದ ಬಾಯಿಯನ್ನು ಮುಚ್ಚಿಕೊಂಡು ವ್ಯಂಗ್ಯವಾಗಿ ನಗುತ್ತಾ "ನೀವಾರಾ ಹೋಗಿ ಸಮಾಧಾನ ಹೇಳಿ" ಎಂದು ಹೇಳಿದುದಕ್ಕೆ ಅವಳು, "ಅಂಥಾ ಹನುಮಂತೇಗೌಡ ಹಾಕಿದ ಕಲ್ಲುಕಟ್ಟೆಗೇ ನಿಲ್ಲದ ನೀರು, ನನ್ನ ಮರಳು ಕಟ್ಟೆಗೆ ನಿಂತಾತಾ ಹೇಳು? ಕಾಯಲಿ, ಕಾಯಲಿ, ಜಗಳಾನ. ಒಲೆ ಉರಿದುರಿದು ಕೊನೆಗೆ ತಣ್ಣಗಾಗಬೇಕು." ಎಂಬ ಪ್ರೌಢವಾಣಿಯನ್ನು ನುಡಿದು ಸುಮ್ಮನಾದಳು.

ಅಂದು ನಡೆದ ವಿದ್ಯಮಾನಗಳೆಲ್ಲಾ ಊಹೆ ಉತ್ಪ್ರೇಕ್ಷೆಗಳಿಂದ ಕೂಡಿ ರಂಗೇಗೌಡನ ಕಿವಿಗೆ ಬಿದ್ದುವು. ಯಥಾ ಸಮಯದಲ್ಲಿ ಕಾಳಮ್ಮನೂ ಗುಣಾಕಾರ, ತ್ರೈರಾಸಿ, ಪಂಚರಾಸಿಗಳ ಸಮೇತ ಎಲ್ಲವನ್ನೂ ಬೈರಣ್ಣನ ಕಿವಿಯಲ್ಲಿ ಊದಿದಳು. "ಛೀ, ಛೀ" ಎಂದರೆ ಮುಂದೆ ನುಗ್ಗಿ ಕಾಳಗವಾಡುವ ಟಗರುಗಳಂತೆ ಇಬ್ಬರೂ ನ್ಯಾಯಸ್ಥಾನವಲ್ಲಿ ಮತ್ತೆರಡು ಮೊಕದ್ದಮೆಗಳನ್ನು ಹಾಕಿದರು. ಇಬ್ಬರೂ ತಮತಮಗೆ ಅನುಕೂಲ ತೋರಿದಹಾಗೆ ನಿಜ ವಿದ್ಯಮಾನಗಳಿಗೆ ಸುಳ್ಳಿನ ರಕ್ತಮಾಂಸಗಳನ್ನು ತುಂಬಿ, ತಾವು ರಚಿಸಿದ ಸಿಡಿವೀರಣ್ಣನ ಅಂದ ಚಿಂದಗಳನ್ನು ನೋಡಿ ತಾವೇ ಹಿಗ್ಗುತ್ತಿದ್ದರು. ಇದರ ಫಲಿತಾಂಶವು, ಯಾರು ಕೇಳಿದರೂ ಮೊಕದ್ದಮೆಯು ಸುಳ್ಳೆನ್ನುವ ಹಾಗಾಯಿತು. ಆದರೆ, ಆ ಸಂಗತಿಯು ಇವರೀರ್ವರಿಗೂ ತಿಳಿಯಲಿಲ್ಲ. ದ್ವೇಷದ ಕತ್ತಿಯನ್ನು ಮಸೆದು ಮಸೆದು ಹರಿತಮಾಡುತ್ತಿದ್ದ ಅವರೀರ್ವರೂ ಈ ಚಿಲ್ಲರೆ ವಿಷಯಗಳಿಗೆ ಗಮನಕೊಡುವ ಹಾಗಿರಲೂ ಇಲ್ಲ. ಹನುಮಂತೇಗೌಡನು ಮತ್ತೆಮತ್ತೆ ಸಮಾಧಾನ ಹೇಳಿದುದೂ ವ್ಯರ್ಥವಾಯಿತು ಕಡಿದಾಪ ಬೆಟ್ಟದಮೇಲಿನಿಂದ ಕೆಳಕ್ಕುರುಳುತ್ತಿರುವ ಕಲ್ಲುಬಂಡೆಯನ್ನು ಹಿಡಿದು ನಿಲ್ಲಿಸುವವರಾರು?

ಅಲ್ಲಿಂದ ಮುಂದೆ ಮೊಕದ್ದಮೆಯ ಮೇಲೆ ಮೊಕದ್ದಮೆಗಳಿಗೆ ಪ್ರಾರಂಭವಾಯಿತು. ಒಂದುದಿನ ರಂಗೇಗೌಡನ ಮನೆಯಲ್ಲಿ ಕರುವು ಗೊಟವನ್ನೇ ಕಿತ್ತು ಕೊಂಡು ಹಾಲನ್ನು ಕುಡಿಯಿತು. ಆದರೆ, ಅಂದು ಚೆನ್ನಮ್ಮನು ಮರೆತು ಮನೆಯ ಬಾಗಿಲಿಗೆ ಒಳಗಿನ ಚಿಲಕವನ್ನು ಹಾಕಿರಲಿಲ್ಲ. ಸರಿ, ನೆರೆಯ ಮನೆಯವರೇ ಇದಕ್ಕೆ

ಕಾರಣವೆಂದು ನ್ಯಾಯಸ್ಥಾನಕ್ಕೆ ಅರ್ಜಿ. ಒಂದು ದಿನ ರಾತ್ರಿ ಬೈರಣ್ಣನ ಮನೆಯವರು ಆಚಾಗೆರೂಕರಾಗಿದ್ದಾಗ, ಒಂದು ನಾಯಿಯು ಒಳಗೆ ನುಗ್ಗಿ ಅನ್ನದ ತಪ್ಪಲೆಯನ್ನು ಎಳೆಯ ಹೊರಟು, ಅದು ಸಾಧ್ಯವಿಲ್ಲದೆ ತೊಂದರೆ ಪಡುತ್ತಿದ್ದು, ಏಳುನೇರಾಗಿ ಜೋಡಿಸಲ್ಪಟ್ಟಿದ್ದ ಕೆಲವು ಪಾತ್ರೆಗಳು ಆ ವೇಳೆಗೆ ಸರಿಯಾಗಿ ಉರುಳಿಕೊಂಡುದರಿಂದ ಭೀತಿಗೊಂಡು, ಹಾರಿ ಹಾಲಿನ ಪಾತ್ರೆಯನ್ನುರುಳಿಸಿ ಓಡಿಹೋಯಿತು. ಕಾಳಮ್ಮನು ಪಾತ್ರೆಗಳು ಬಿದ್ದ ಸದ್ದನ್ನು ಕೇಳಿ ಹಿತ್ತಿಲಿನಿಂದ ಓಡಿ ಬಂದಳು. ತಾನು ಹೊಸದಾಗಿ ಕ್ರಯಕ್ಕೆ ತಂದಿದ್ದ ಎತ್ತಿಗೆ ತನ್ನ ಕೈಯಿಂದಲೇ ಅಲ್ಲಿ ಜೋಳದ ಕಡ್ಡಿಯನ್ನು ತಿನ್ನಿಸುತ್ತಾ ಇದ್ದ ಬೈರಣ್ಣನೂ ಒಳಕ್ಕೆ ಬಂದನು. ಇದು ನೆರೆಯವರ ಕೃತ್ಯವೆಂದೇ ಅವರೀರ್ವರೂ ನಿರ್ಧರಿಸಿದರು. ಅದರ ಮೇಲೆ ಬೈರಣ್ಣನು ಮತ್ತೊಂದು ಮೊಕದ್ದಮೆಯನ್ನು ಹಾಕಿದನು. ದ್ವೇಷವು ಉಕ್ಕಿ ಹರಿಯುವ ಹಾಗಾಯಿತು. ಈ ಎರಡು ಮೊಕದ್ದಮೆಗಳೂ ಹಾಲಿಗೆ ಸಂಬಂಧಪಟ್ಟು, ನಿರಪರಾಧಿಗಳಮೇಲೆ ತರಲ್ಪಟ್ಟವುಗಳು. ದ್ವೇಷವು ಹುಟ್ಟಿದರೆ ಹೀಗೆಯೇ. ನಾವು ಓದಿಲ್ಲವೇ ತೋಳ ಮತ್ತು ಕುರಿಯಮರಿಯ ಪಾಠದಲ್ಲಿ, "ನೀನೋ, ನಿಮ್ಮಪ್ಪನೋ, ನಿಮ್ಮಜ್ಜನೋ, ಯಾರಾದರೇನು? ನಾನು ನಿನ್ನನ್ನು ಕೊಲ್ಲುವುದಕ್ಕೆ ನೆವವುಸಾಕು." ಎಂದು. ರಂಗೇಗೌಡ ಬೈರಣ್ಣರ ವಿಷಾದರಸಮಿಶ್ರವಾದ ಪ್ರಹಸನವೂ ಹೀಗೆ ಇಲ್ಲದ ಸಲ್ಲದ ನೆವಗಳ ಆಧಾರದಮೇಲೆ ಕೊಂಚಕಾಲ ನಡೆದು, ಇಬ್ಬರ ಮೊಕದ್ದಮೆಗಳೂ ಸಾಲುಗಟ್ಟಿ ನಿಂತುವು. ಯತ್ನವಿಲ್ಲದೆ ಯುದ್ಧಕ್ಕೆ ಹೋಗಿ ತೊಪೆಯು ನಡುಗುತ್ತಿದ್ದರೂ "ಟೆಂಚ್" ಮೇಲೆ ನಿಂತು ಮುಖವನ್ನು ಮೇಲಕ್ಕೆತ್ತಿ ಹಿಡಿದು ಅಷ್ಟರಿಂದಲೇ ತಾವು ಶೌರ್ಯವನ್ನು ತೋರಿಸಿ ತೃಪ್ತರಾದ ಅಂಜುಬುರುಕ ಸಿಪಾಯಿಗಳ ಹಾಗೆ ಅವೂ ಕೂಡ ಹೊರಗಿನ ಆಡಂಬರದ ಪೌಲಿನ ಹೊರೆಯನ್ನು ಹೊರಲಾರದೆ ಹೊತ್ತು ನಿಂತಿದ್ದುವು. ಮುಖಾಕಾಲದಲ್ಲಿ ಹುರುಳಿಲ್ಲದ ಆ ಮೊಕದ್ದಮೆಗಳಿಗೂ "ವಜಾ" ಮಾಡಲ್ಪಟ್ಟುವು. ಇದರಿಂದ ಅವರ ದ್ವೇಷವು ಮತ್ತೂ ಹೆಚ್ಚಿತು. ಅಹತವಾದ ಹುಲಿಯು ತನ್ನನ್ನು ಹೊಡೆದವನನ್ನು ಕೆಳಕ್ಕೆ ಸೆಳೆದು ಪ್ರಾಣ ಸೇಡನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಹಾರಿ, ಆ ಬಳಿಕ ಆಯತಪ್ಪಿ ಕೆಳಕ್ಕೆ ಬಿದ್ದಂತಾಯಿತು, ಅವರ ಆಗಿನ ಸ್ಥಿತಿ.

ದಿನಗಳು ಉರುಳಿದಷ್ಟೂ ಅವರ ದ್ವೇಷವು ಹೆಚ್ಚಲಾರಂಭವಾಯಿತು. ಚಾಡಿಕೋರರ ಬಣ್ಣ ಹಚ್ಚಿದ ಮಾತುಗಳು ಉರಿಯುವ ಒಲೆಗೆ ತೈಲಧಾರೆಯನ್ನೆರೆದುವು. ಹಟಮಾರಿತನದ ಆವೇಗದಿಂದಲೂ, ದ್ವೇಷದ ಕಿಚ್ಚಿನಿಂದಲೂ ಆಹತವಾದ ಅವರ ಅಂತರಂಗದಲ್ಲಿ ಯುಕ್ತಾಯುಕ್ತ ವಿವೇಚನೆಯೇ ಮಾಯವಾಗಿ ಹೋಯಿತು. ಅವರು ಉದ್ದೇಶಪೂರ್ವಕವಾಗಿ ಕಿರುಕುಳಕ್ಕಾರಂಭಿಸಿದರೆಯು ಸುಟ್ಟು ಕೆಳಗೆಬಿದ್ದ ಗುಬ್ಬಚ್ಚಿಯ ಆರ್ತನಾದದಂತೆ ಪಾಪಭೀತಿಯು ಅವರ ಹೃದಯ ತಲದಿಂದ ಕೇಳುತ್ತಿದ್ದ ಪ್ರಶ್ನೆಗಳನ್ನು ಅವರು ಕಿವಿಗಳಮೇಲೆ ಬೀಳಗೊಡುತ್ತಲೇ ಇರಲಿಲ್ಲ. ದಾಂಧಲೆಯಮೇಲೆ ದಾಂಧಲೆಗಳನ್ನು ನಡೆಸಿ, ಹುರುಳಿರುವ ಮೊಕದ್ದಮೆಗಳನ್ನೇ ಹೆಪ್ಪುಗೊಡಿಸಿದರು. ಇದರ ಫಲಿತಾಂಶವಾಗಿ ವ್ಯವಸಾಯವು ಹಿಂದೆ ಬಿದ್ದು, ನ್ಯಾಯಸ್ಥಾನದ ನೆಚ್ಚು ಹೆಚ್ಚಿತು. ಅವರ ಮನೆಯೊಳಕ್ಕೆ ಹೊನ್ನು ಹೊಳೆಯು ಹರಿಯುತ್ತಿದ್ದುದು ತಪ್ಪಿ, ಮನೆಯ ಹೊರಕ್ಕೆ ಹೊನ್ನು ಹೊಳೆಯು ಹರಿಯಲುಪಕ್ರಮವಾಯಿತು. ಅವರಲ್ಲಿ ಯಾರೂ ಸೋಲಲಿಲ್ಲ. ಯಾರೂ ಇದನ್ನು ಕಂಡು ಅಳುಕಲಿಲ್ಲ. ಜೋಳಿಗೆಯನ್ನು ಹಿಡಿಯುವ ಗತಿಯು ಬರುವವರೆಗೂ-ಆಮೇಲೂ-ಛಲವನ್ನು ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿಯೂ ಮಾಡುತ್ತಲೂ ಇರುವವರು ಸುಮ್ಮನಾಗುವ ಬಗೆ ಹೇಗೆ? ಊರಿನಲ್ಲಿ ಜಾತ್ರೆಯ ಕಾಲವು ಸನಿಹಾಪಿಸಿತು. ಇಬ್ಬರ ಮನೆಗೂ "ನೆಂಟರಿಷ್ಟರು" ಬಂದು ತುಂಬಿದರು. ಇದರಿಂದ ಅವರಿಬ್ಬರಿಗೂ ಪರಸ್ಪರ ದ್ವೇಷಸಾಧನೆಯಲ್ಲಿ ಒತ್ತಾಸೆಯು ದೊರೆಯಿತು. ತೂಕಡಿಸುತ್ತಿದ್ದವರಿಗೆ ಹಾಸಿಗೆಯೂ ದೊರೆತಹಾಗಾಯಿತು. ಇನ್ನು ಕೇಳಬೇಕಾದುದೇನು? ಜನಗಳು ಹೆಚ್ಚಿದಷ್ಟೂ, ಜಗಳವೂ ಹೆಚ್ಚಿತು. ಸಾಲಗಾರನು ಸುಮ್ಮನಿದ್ದರೂ ಸಾಕ್ಷಿಗಾರನು ಸುಮ್ಮನಿರಲೊಲ್ಲನು. ಮನೆಯಲ್ಲಿ ಜಗಳ. ಹೆಂಗೆಸರು ನೀರಿಗೆ ಹೋದಲ್ಲಿ ಜಗಳ. ದೊಡ್ಡವರ ಮಾದರಿಯನ್ನು

ನ್ನೆಗಾಣಿಸಿಕೊಂಡು ಹುಡುಗರು ಮಾಡುತ್ತಿದ್ದ ಯುದ್ಧಗಳು. ದೊಡ್ಡವರು ಯಥಾಶಕ್ತಿಯಾಗಿ ಒಂದು ಕೈ ನೋಡುತ್ತಿದ್ದ ಹೊಡೆದಾಟಗಳು. ಅವುಗಳ ಫಲಿತಾಂಶವಾಗಿ ಮತ್ತೆ ಮೊಕದ್ದಮೆಗಳು. ನ್ಯಾಯಾಧೀಶರಿಗೂ ಇವರ ಮೊಕದ್ದಮೆಗಳು ಬಂದುವೆಂದರೆ ಅಸಹ್ಯ.

ಒಂದು ಮೊಕದ್ದಮೆಯಲ್ಲಿ ರಂಗೇಗೌಡನಿಗೆ ಜುಲ್ಮಾನೆಯಾದರೆ ಮತ್ತೊಂದರಲ್ಲಿ ಬೈರಣ್ಣನಿಗೆ ಜುಲ್ಮಾನೆ; ಅವನ ಒಂದು ಮೊಕದ್ದಮೆಯು ಕೆಟ್ಟುಹೋದರೆ, ಇವನ ಮತ್ತೊಂದು ಮೊಕದ್ದಮೆಯು ಕೆಟ್ಟುಹೋಗುವುದು; ಇತ್ಯಾದಿ. ಇಬ್ಬರ ಮನೆಗೆ ಬಂದ ಬಂಧುಗಳೂ ತಮ್ಮ ಊರಿಗೆ ಹೊರಡಲೇ ಒಲ್ಲರು. "ಮನೆಗಿಂತ ಮಠವೇ ಭದ್ರವೆನಿಸಿತು."

ಈ ಮಧ್ಯದಲ್ಲಿ ಬೈರಣ್ಣನಮೇಲೆ ದೊಡ್ಡ ಆಪಾದನೆಯೇ ಬಂದಿತು. ಸುಂಟರಗಾಳಿಯು ಹೋಗಿ ಚಂಡ ಮಾರುತವೇ ಎದ್ದಿತು. ರಂಗೇಗೌಡನ ಮನೆಗೆ ಬಂದಿದ್ದ ಬಂಧುಗಳಲ್ಲಿ ಒಬ್ಬ ಹುಡುಗನು ರಾತ್ರಿ ಮಲಗಿದ್ದವನು ಬೆಳಗ್ಗೆ ಪತ್ತೆಯಿಲ್ಲ. ಹಿಂದಿನರಾತ್ರಿ ಚೆನ್ನಮ್ಮನೇ ಬೀದಿಯ ಬಾಗಿಲನ್ನು ಮುಚ್ಚಿ ಚಿಲಕ ಹಾಕಿ, ಅದನ್ನು ಮುಟ್ಟಿಮುಟ್ಟಿ ನೋಡಿ ಅನುಮಾನವನ್ನು ಹೋಗಲಾಡಿಸಿಕೊಂಡು, ಮಲಗಿದ್ದಳು. ಆದರೂ ಬೀದಿಯ ಬಾಗಿಲು ತೆರೆದಿದೆ. ಕರುಗಳಲ್ಲಿ ಒಂದೂ ಕೊಟ್ಟಿಗೆಯಲ್ಲಿಲ್ಲ. ಕೆಲವು ಕರುಗಳು ಬೀದಿಯಲ್ಲಿವೆ. ಕೆಲವು ಕರುಗಳು ಓಡಿಹೋಗಿವೆ. ಹುಡುಗನಂತು ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಅವನ ತಾಯಿಯು ಗೋಳಾಡುತ್ತಿದ್ದಾಳೆ. ಎಲ್ಲಿ ನೋಡಿದರೂ ಅವನು ಸಿಕ್ಕಲಿಲ್ಲ. ಬೈರಣ್ಣನೇ ಈ ಮನೆಮುರುಕತನವನ್ನು ಮಾಡಿರಬೇಕೆಂಬುದು ಸಿದ್ಧಾಂತವಾಯಿತು. ರಾಗರಾಗೆವಾಗಿ ಬೈಗೆಳಗಳು ಪ್ರಾರಂಭವಾದುವು. ಅಷ್ಟರಲ್ಲಿ ಜೋಯಿಸನೂ ಬಂದು ಹುಡುಗನ ಗುರುತುಗಳನ್ನು ಕಾಣಿಸಿ ಪೋಲೀಸಿನವರಿಗೆ ವರದಿಯನ್ನು ಬರೆದನು. ಅವರೂ ಬಂದು ವಿಚಾರಣೆ ಮಾಡಿದರು. ಹುಡುಗನ ತಂದೆಯು ಮೂರು ಹರಿದಾರಿಗಳಿಗಿಂತಲೂ ಹೆಚ್ಚು ದೂರದ ಹಳ್ಳಿಯಲ್ಲಿದ್ದನು ಪೋಲೀಸಿನವರು ಹುಡುಗನ ತಂದೆಯ ಹೆಸರನ್ನು ಕೇಳಿದಾಗೆ, ಹುಡುಗನು ತಪ್ಪಿಸಿಕೊಂಡುದನ್ನು ಆತನಿಗೆ ತಿಳಿಸಬೇಕಾಗಿದ್ದಿತೆಂಬುದು ರಂಗೇಗೌಡನಿಗೆ ಅರಿವಾಯಿತು. ಅಂದು ಅವನಿಗೆ ದಿಗ್ಭ್ರಮೆ. ಆದ ಕಾರಣ, ಅದು ತೋರಿರಲಿಲ್ಲ. ಸಾಯಂಕಾಲವು ಸಮಾಪಿಸುತ್ತಿದ್ದುದರಿಂದ; ಮರುದಿನ ಬೆಳಗ್ಗೆ ಆಳನ್ನು ಕಳುಹಿಸಬೇಕೆಂದು ಅವನು ನಿರ್ಧರಿಸಿದನು. ಪೋಲೀಸಿನವರು ಎಲ್ಲರನ್ನೂ ವಿಚಾರಣೆಮಾಡಿದರು

ಯಾರು ಎಷ್ಟು ಸಾರಿ ತಲೆಯನ್ನು ಕೆರೆದುಕೊಂಡು ಏನೇನು ಯೋಚನೆಮಾಡಿದರೂ ಸಮಸ್ಯೆಯ ಗಭೀರತೆಯು ಬಗೆಹರಿಯಲಿಲ್ಲ. ಬೆಳಗಿನಿಂದಲೂ ಊರಿನವರೆಲ್ಲರೂ ಹುಡುಗನನ್ನು ಹುಡುಕಿ ಸಾಕಾಗಿದ್ದರು. ಇನ್ನು ಹುಡುಕಿಸಿದರೆ ಹುಡುಗನು ಸಿಕ್ಕುವ ಸಂಭವವೂ ಅವರಿಗೆ ತೋರಲಿಲ್ಲ. ರಂಗೇಗೌಡನೇನೋ ತನಗೆ ಬೈರಣ್ಣನಮೇಲೆ ಅನುಮಾನವೆಂದು ತಿಳಿಸಿದನು. ಅಲ್ಲದೆ, ತಮ್ಮಿಬ್ಬರಿಗೂ ಬಹು ಕಾಲದಿಂದಲೂ ದ್ವೇಷವೆಂದೂ, ಆದಕಾರಣ, ಈ ಮನೆಹಾಳು ಕೆಲಸವನ್ನು ಅವನೇ ಮಾಡಿರಬೇಕೆಂದೂ, ಹುಡುಗನನ್ನು ಅವನು ಕೊಂದಿದ್ದರೂ ಕೊಂದಿರಬಹುದೆಂದೂ, ಪುಂಖಾನುಪುಂಖವಾಗಿ ಅವನು ಅವರಿಗೆ ಹೇಳಿದನು. 'ಈ ಅನುಮಾನಕ್ಕೆ ಸರಿಯಾಗಿ ಬೈರಣ್ಣನು ಅಂದು ಬೆಳಗಿನಿಂದಲೂ ಊರಿನಲ್ಲಿರಲಿಲ್ಲ.

ಚೆನ್ನಮ್ಮನು 'ಬುದ್ಧಿ, ಆ ಹುಡುಗನುದ್ದುಗಾರ ಹುಡುಗ. ಈಗ ತಿಂಗಳ ಕೆಳಗೆ ಮೊನ್ನೆತಾನೇ ಮಲೆಯಾಳದ ಸೀಮೆಯಿಂದ ಒಬ್ಬಗೋಸಾಯಿ ಬಂದಿದ್ದ. ಬೈರಣ್ಣ ಅವನಿಗೆ ಅಡಿಗ್ಗೆ ಸಾಮಾನು ಕೊಟ್ಟ. ಅವನ ತಾವ ಬೈರಣ್ಣ ಎಲ್ಲೋ ಪಿಶಾಚೀನ ವಶಮಾಡಿಕೊಂಡವನೆ. ಇಲ್ದೇ ಇದ್ದರೆ ನಿನ್ನೇ ರಾತ್ರೆ ಅವನು ಮಾರಮ್ಮನ್ನ ಧೈರ್ಯವಾಗಿ ಹೊಡೀತಾ ಇರಲಿಲ್ಲ. ಅಂತು, ಆ ಪಿಶಾಚಿ ಸಹಾಯದಿಂದ ಚಿಲ್ಕಾ ತೆಗೆಸಿ, ಹುಡುಗನ್ನ ಬೈರಣ್ಣನೇ ಹೊತ್ತುಕೊಂಡು ಹೋಗವನೆ. ಅದಕ್ಕೇ ಅವನು ಬೆಳಗಿನಿಂದ ಊರಲ್ಲಿಲ್ಲ. ಅವನ್ನ ಕರೆಸಿ ನೇಣು ಹಾಕಿಸಿಬಿಡಬೇಕು ಬುದ್ಧಿ." ಎಂದು ತಿಳಿಸಿಬಿಟ್ಟಳು.

ಇದನ್ನು ಕೇಳಿ ಪೋಲೀಸಿನವರಿಗೂ ನಗು ಬಂದಿತು. ಮಾರಮ್ಮನನ್ನು ಹೊಡೆದುದರ ಅರ್ಥವೇನೆಂದು ಪೊ

ಲೀಸು ಅಧಿಕಾರಿಯು ಕೇಳಿದನು. ರಂಗೇಗೌಡನ ಹೆಂಡತಿಯು ಅದನ್ನು ಒಂದು ಘಂಟೆಯಕಾಲ ವಿಸ್ತರಿಸಿ ಹೇಳಿದಳು.ಅದು ನನಗೂ ಅಪ್ರಕೃತವಲ್ಲ. ಏಕೆಂದರೆ, ಅದರಿಂದ ರಂಗೇಗೌಡನ ಮಾನವು ಹೋಗದೆ ಇದ್ದಿದ್ದರೆ, ಅವನಿಗೆ ಬೈರಣ್ಣನಮೇಲೆ ದ್ವೇಷವು ಈಗಿದ್ದಷ್ಟು ಹೆಚ್ಚುತ್ತಿರಲಿಲ್ಲ. ಆದಕಾರಣ, ಅದನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ.

ಆ ಊರಿಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ಲೇಗು ರೋಗವು ಕಾಣಿಸಿಕೊಂಡಿದ್ದಿತು. ತಮ್ಮ ಊರಿಗೂ ಅದೆಲ್ಲಿ ಬರುವುದೋ ಎಂದು ಅಲ್ಲಿನವರೆಲ್ಲರಿಗೂ ಶಂಕೆಯುಂಟಾಯಿತು. ಹಳ್ಳಿಯವರು ಇಂತಹ ಸಂದರ್ಭಗಳಲ್ಲಿ ಮಾರಮ್ಮನಿಗೆ ಪೂಜೆಮಾಡಿ ಆಕೆಯು ಕುಶಲ ಹೇಳುವಂತೆ ಕೇಳುವುದುಂಟು. ವಿಗ್ರಹದ ಮೇಲಿರುವ ಹೂಗಳು ಬಲಗಡೆಗೆ ಬಿದ್ದರೆ ಊರು ಕ್ಷೇಮವಾಗಿ ಪ್ಲೇಗು ಬಾರದೆ ಇರುವುದೆಂದೂ, ಎಡಗಡೆಗೆ ಬಿದ್ದರೆ ಪ್ಲೇಗು ಬರುವುದು ನಿಜವೆಂದೂ ಅವರು ನಿರ್ಧರಿಸುವುದುಂಟು. ಕೆಲವುಕಡೆ ಮಾರಮ್ಮನೇ ಇತರರಂತೆ 'ಮ್ಯೆದುಂಬಿ' (ಆವೇಶಬಂದು) ಮಾತನಾಡುವುದೂ ಉಂಟು. ಅನೇಕ ಸಂದರ್ಭಗಳಲ್ಲಿ ಇದು ಬಯಲು ಬಿನ್ನಾಣ. ಆದರೆ, ಒಟ್ಟಿನಲ್ಲಿ ಇದು ನಿಜವೋ, ಸುಳ್ಳೋ-ಎಂದು ನನ್ನನ್ನು ಕೇಳಬೇಡಿ. ಅದನ್ನು ನಂಬುವುದೂ ಬಿಡುವುದೂ, ತಮ್ಮ ಇಷ್ಟ. ತಮ್ಮ ಊರಿಗೆ ಪ್ಲೇಗು ಬರುವುದೋ, ಇಲ್ಲವೋ ಎಂಬುದಾಗಿ ಆ ರಾತ್ರಿ ಊರಿನವರೆಲ್ಲರೂ ಮಾರಮ್ಮನನ್ನು "ಕುಶಲ" ಕೇಳಿದರು. ಎಲ್ಲರೂ ಅಡ್ಡಬಿದ್ದರು. ದೇವಿಯು ಏನು ಸೂಚಿಸುವಳೋ—ಎಂದು ಪೂಜಾರಿಗೆ ಎಲ್ಲರಿಗಿಂತಲೂ ಹೆಚ್ಚಿನ ತವಕ. ಏಕೆಂದರೆ, ಅವನ ಮನೆಯ ಕಲಗಚ್ಚಿನ ಬಾನಿಯಲ್ಲಿ ಅಂದು ಪ್ರಾತಃಕಾಲ ಒಂದು ಸತ್ತ ಇಲಿಯು ತೇಲುತ್ತಾ ಇದ್ದಿತು. ಅವನು ಅದನ್ನು ಯಾರಿಗೂ ಹೇಳಲಿಲ್ಲ. ಇಲಿಯನ್ನು ತೆಗೆದು ಬಿಸಾಡಿ ಸುಮ್ಮನೆ ಇದ್ದನು. ಊರನ್ನು ಬಿಡಬೇಕಾಗಿ ಬಂದರೆ, ಗುಡಿಸಲು ಹಾಕಿಕೊಳ್ಳಲು ಅವನಿಗೆ ಚೈತನ್ಯ ವಿರಲಿಲ್ಲ. ಆದುದರಿಂದ, ಅದು ಪ್ಲೇಗಿನ ಇಲಿಯಲ್ಲವೇ ಅಲ್ಲವೆಂದು ಅವನು ಸಿದ್ಧಾಂತಮಾಡಿ ಬಿಟ್ಟಿದ್ದನು. ಆದರೂ, ಕೊಂಚ ಕಳವಳ, ಮನಸ್ಸಿನಲ್ಲಿ ಏನೋ ಚಪಲ. ಪ್ರತಿಮೆಯ ಯಾವ ಕಡೆಗೆ ಹೂಗಳು ಬೀಳುವುವೋ ಎಂದು ಎಲ್ಲರೂ ಆತುರದಿಂದ ಎದುರುನೋಡುತ್ತಿದ್ದರು. ಇದ್ದಕ್ಕಿದ್ದ ಹಾಗೆ "ಹುಃ ಹುಃ" ಎಂದು—ಚಳಿ ಬಂದವರು ನಡುಗಿದಂತೆ—ಕುದುರೆಯ ಮರಿಯು ಕೆನೆದಂತೆ—ಶಬ್ದವಾಯಿತು. ಎಲ್ಲರೂ ಕಕ್ಕುಬಿಕ್ಕಾಗಿ ನೋಡಿದರು. ರಂಗೇಗೌಡನು ತಲೆಯನ್ನು ತೂಗುತ್ತಾ, ಹೂಂಕಾರ ಮಾಡುತ್ತಿದ್ದನು. ಮಾರಮ್ಮನು "ಮ್ಯೆದುಂಬಿ"ದಳೆಂದು ಎಲ್ಲರಿಗೂ ಸಡಗರ. ಬೈರಣ್ಣನಿಗೆ ಮಾತ್ರ ಮಾರಮ್ಮನೂ ಪಕ್ಷಪಾತಿಯೆಂದು ತೋರಿತು. ಮಾರಮ್ಮನು ತನ್ನಮೇಲೆ ಏಕೆ ಆವೇಶ ಬರಕೂಡದಾಗಿದ್ದಿತೆಂಬುದು ಅವನ ಯೋಚನೆ. ಅವನಿಗೆ ಸ್ವಲ್ಪ ಕೋಪ. ಸೂರಯ್ಯ ಚಂದ್ರಯ್ಯನ ಕಥೆಯಲ್ಲಿ ಬ್ರಾಹ್ಮಣರು "ಸದಾಪಶ್ಯಂತಿ ಸೂರಯಾಃ" ಎಂದುದನ್ನು ಕೇಳಿ "ಸದಾಪಶ್ಯಂತಿ ಚಂದ್ರಯಾಃ" ಎಂದು ಹೇಳಲಿಲ್ಲವೆಂದು, ದೇವಸ್ಥಾನದ ಪಾರಪತ್ತೇಗಾರ ಚಂದ್ರಯ್ಯನು ಕೋಪಿಸಿಕೊಂಡುದನ್ನು ನಾವು ಕೇಳಿಲ್ಲವೆ? ಬೈರಣ್ಣನ ಕೋಪವೂ ಅದೇ ಬಗೆಯದು. ಪೂಜಾರಿಯು ಸಡಗರದಿಂದ ಓಡಾಡುತ್ತಾ ಮಾರಮ್ಮನಿಗೆ—ರಂಗೇಗೌಡನ ರೂಪದಲ್ಲಿ ಘುಡುಘುಡುಸುತ್ತಿದ್ದ ಮಾರಮ್ಮನಿಗೆ—ಮಂಗಳಾರತಿಯನ್ನು ಮಾಡಿದನು. ದೇವರ ವಿಗ್ರಹದ ಬಳಿಯಲ್ಲಿ ಪೂಜೆಗಿಟ್ಟಿದ್ದ ಕೊರಡೆಯನ್ನು ರಂಗೇಗೌಡ-ಮಾರಮ್ಮನಿಗೆ ಭಕ್ತಿಯಿಂದೊಪ್ಪಿಸಿ "ತೆಗೆದು ಕೊಳ್ಳವ್ವಾ, ಕೊರಡೆಯನ್ನೊಪ್ಪಿಕೊಳ್ಳವ್ವಾ ನಿನ್ನ ಆಯುಧ ನಿನ್ನ ಕೈಯಲ್ಲಿಟ್ಟುಕೋ ನಮ್ಮವ್ವಾ" ಎಂದು ಹೇಳುತ್ತಾ, ಅರಿಬಗ್ಗು ಬಾಗಿ ಪ್ರದಕ್ಷಿಣೆ ಮಾಡಿ ಅಡ್ಡಬಿದ್ದನು. ರಂಗೇಗೌಡ-ಮಾರಮ್ಮನು ಕೊರಡೆಯನ್ನು ಬೀಸಿ, ಪೂಜಾರಿಯ ಬೆನ್ನಿನ ಮೇಲೆ ಒಂದು ಏಟನ್ನು ಕೊಟ್ಟು, "ಮಂಡೆ ಬೋಳರ ಊರು ಇದು. ನಾ ಹಸಿದು ಬಂದರೆ ಕೈಗೆ ಕೊರಡೆಯ ಕೊಡುವರೇ ಮೂಢ ಬಾ, ಸೀಳಿ ಬಿಸುಡುವೆನಿನ್ನ" ಎಂದು ಗರ್ಜಿಸಿದಳು. ಭಾಗವತರ ಆಟದಲ್ಲಿ ಹಿಂದೆ ರಂಗೇಗೌಡನು ಪಾತ್ರವನ್ನು ವಹಿಸುತ್ತಿದ್ದವನು-ಇದು ಹಾಗಿರಲಿ. ದೇವರ ಮಹಿಮೆಯನ್ನು ನೋಡಿ ಎಲ್ಲರಿಗೂ ಅಚ್ಚರಿ. ಏಕೆಂದರೆ ಕೆಲವರು ತಿರುಪತಿಗೆ ಹೋಗಿ ಮುಡಿಯನ್ನು

ಕೆ[illegible] ಹಿಂದಿರುಗಿದ್ದರು. "ಮಾರಮ್ಮನು ಅರಿಯದ ಕ[illegible]ಯುಂಟೆ" ಎಂಬ ಗಾದೆಯು ನಿಜವೆಂಬುದಕ್ಕೆ ರಂಗೇಗೌಡ-ಮಾರಮ್ಮನು "ಮಂಜೆಬೋಳರ ಊರು" ಎಂದುದಕ್ಕಿಂತಲೂ ಹೆಚ್ಚಿನ ನಿದರ್ಶನವೇ ಇಲ್ಲವೆಂದು ಅವರೆಲ್ಲರೂ ಅಭಿಮಾನದಿಂದ ಹಿಗ್ಗಿದರು. ಊರು ಯಜಮಾನ ಹನುಮಂತೇಗೌಡನಂತು ಮಾರಮ್ಮನು ತನ್ನನ್ನು ಮಾತ್ರವೇ ಉದ್ದೇಶಿಸಿ ಹಾಗೆ ಹೇಳಿರಬೇಕೆಂದು ಕೂದಲು ಮುಕ್ಕಾಲುಪಾಲು ಉದುರಿಹೋಗಿದ್ದ ತನ್ನ ಪಟ್ಟತಲೆಯನ್ನು ಸವರಿಕೊಂಡು ಆನಂದಪಟ್ಟನು. ಪೂಜಾರಿಯು "ಬೆನ್ನಿನಮೇಲೆ ಹೊಡೆದೆ. ಹಸಿದಿದ್ರೆ ಬೋನಕೊಡ್ತೀನಿ. ಹೊಟ್ಟೆಯಮೇಲೆ ಹೊಡೀಬೇಡ ನಮ್ಮವ್ವಾ." ಎಂದು ದೊಡ್ಡದೊಂದು ದಬರಿಯ ತುಂಬ ರಸಾಯನವನ್ನೂ, ಅಭಿಷೇಕಮಾಡಿ ಉಳಿದಿದ್ದ ಹಾಲನ್ನೂ, ತಂದಿಟ್ಟನು. ಕೆಲವರು ಬೇವಿನ ಕೊಸೆಗಳಿಂದ ಬಿಜ್ಜಣವಿಕ್ಕಿ, ಅರಿಸಿನವನ್ನು ಎರಚಿದರು. ದೇವಸ್ಥಾನದ ಅರಿಸಿನದ ಬಟ್ಟಲು ಬರಿದಾಯಿತು. ರಂಗೇಗೌಡ-ಮಾರಮ್ಮನು ಆಗಾಗೆ ಘರ್ಜಿಸುತ್ತಾ, ತುಂಬಿದ ತೊರೆಯಂತೆ ಮೊರೆಯುತ್ತಾ, ಪದೇ ಪದೇ ಹಲ್ಲುಕಡಿಯುತ್ತಾ, ರಸಾಯನವನ್ನೂ, ಹಾಲನ್ನೂ, ಸಮರ್ಪಣೆ ಮಾಡಿಕೊಂಡುದು ಮುಗಿಯಿತು. ಬಳಿಕ, "ಈಗೆ ಹೊಟ್ಟೆ ತುಂಬದೆ. ಮಗನೇ ಬೇಕಾದ್ದು ಬೇಡು." ಎಂಬ ಉತ್ತರವು ಹೊರಟಿತು. ಬೈರಣ್ಣನಿಗೆ ಹೊಟ್ಟೆಯುರಿ. ಅವನ ಹೃದಯದಿಂದ ಹಾವು ಬಾಣಗಳೂ, ಚೇಳು ಬಾಣಗಳೂ ಸುರಸುರನೆ ಎದ್ದು ಹೊರಗೆ ಹೋಗಲು ಮಾರ್ಗವನ್ನು ಹುಡುಕುತ್ತಿದ್ದುವು. ಪೂಜಾರಿಯು ಭಕ್ತಿಭಾವದಿಂದ ಕೂಡಿ, ತನ್ನ ಸೊಂಟದಿಂದ ನಸ್ಯದ ಡಬ್ಬಿಯು ಕೆಳಗೆ ಬಿದ್ದುದನ್ನೂ ಗಮನಿಸದೆ, "ಮಹಾತಾಯಿ. ಕೊಪಡೆಯು ಕೆಳಗೆ ಬಿದ್ದದೆ. ಈಗ ಧೈರ್ಯವಾಗಿ ಹ್ಞೇಳ್ತೀನಿ. ಸುತ್ತ ಮುತ್ತಲಿನ ಹಳ್ಳಿಗಳಾಗೆ ಪ್ಲೇಗು ಮಾರಮ್ಮನ ದಳ್ಳುರಿಯು ಎದ್ದದೆ. ಸದ್ಯ ನಮ್ಮೂರು ಸ್ವಸ್ಥವಾಗಿದ್ದಾತ?" ಎಂದು ಕೇಳಿದನು. ರಂಗೇಗೌಡ-ಮಾರಮ್ಮನು, "ಮಾರಮ್ಮ ನಾನೊಬ್ಬಳೇ. ಈಗೆ ಬಂದಿರೋವು ನೆಲೇ ಪರಿಯದೆ ದಿಕ್ಕೆಟ್ಟು ಅಲಿಯೋ ಮುಕ್ಕಗಳು. ಒಂದಲ್ಲ-ಎರಡಲ್ಲ, ಐದು ಬಂದನೆ ಹಾಳು ದೇವತೆಗಳು. ಪಿಳೇಕು (ಪ್ಲೇಗು) ದೇವತೆ ಅವುಗಳಾಗೆ ದೊಡ್ಡ ಪೀಡೆ. ಐದೂ ಬಲೇ ಬಲವಾಗವೆ. ಊರು ಬಾಗಿಲಿಗೆ ಬಂದು ಆತುಕೊಂಡವೆ; ನುಗ್ಗೆಬೇಕು ಒಳಕ್ಕೇ ಅಂತ. ನಾನು ಕಷ್ಟಪಟ್ಟು ತಡೀತಾ ಇದ್ದೀನಿ. ಆದರೂ, ಪೂರ್ತಾ ತಡೆಯೋ ಹಂಗೆ ಕಾಣೆ. ಆದರೂವೆ ಸಕ್ತಿಯಿರಾ ತಡೀತೀನಿ." ಎಂದುದಾಯಿತು. ಈ ಉತ್ತರವನ್ನು ಕೇಳಿ ಎಲ್ಲರಿಗೂ ತಳಮಳ. ಪೂಜಾರಿಯು "ಹೋಗಲಿ, ನಮ್ಮವ್ವ ನೀನು ಮಾಡೋದೇನು. ಕೈಲಾದಷ್ಟು ಮಾಡ್ತೀಯೆ. ಒಂದು ಸಮಯ ಪಿಳೇಕು ದೇವತೆ ಬಂದರೆ ಯಾರ ಮನೇ ಮುರಿದಾಳು? ನಮ್ಮ ಮನೇಗೇನಾರಾ ಭಯನಾ?" ಎಂದು ಕೇಳಿದನು. ಅದಕ್ಕೆ ಉತ್ತರ: "ನೀನು ನನ್ನ ಭಕ್ತ. ನಿಂಗೆ ಭಯವಿಲ್ಲ. ಅವರು ಬಂದರೆ ಈ ಊರಾಗೆ ದೊಡ್ಡ ತಲೆಯೆನಿಸಿಕೊಂಡಿರೋ ಕಾಗೆ ಬಣ್ಣದ ಹೈದನಿಂದ ಮುರೀತಾರೆ. ಅವನು ನನ್ನ ಭಕ್ತನ್ನ ಕಾಡ್ತಾನೆ. ಅವನು ನಂಗೂ ನನ್ನ ಭಕ್ತಂಗೂ ಶರಣು ಬಿದ್ದರೆ, ಪಿಳೇಕುದೇವತೆಗೆ ಬಲಿಯಾಗದಹಂಗೆ ಕಾಪಾಡ್ತೀನಿ."

ಬೈರಣ್ಣನಿಗೆ ಇದನ್ನು ಕೇಳಿ ಕೋಪವು ಉದ್ರೇಕವಾಗಿ ಮೈಮೇಲೆ ಎಚ್ಚರತಪ್ಪಿದಂತಾಯಿತು. ನಾನು ಹಿಂದೆ ಹೇಳಿದ ಬಾಣಗಳು ಹಾರಲು ಅವಕಾಶವಾಯಿತು. ಹೊರಟತು ದಳ್ಳುರಿಯ ಸಿಡಿಲು. ಬೈರಣ್ಣನು ನೆಲದಮೇಲೆ ಬಿದ್ದಿದ್ದ ಕೊರಡೆಯನ್ನು ಕೈಗೆ ತೆಗೆದುಕೊಂಡು ರಂಗೇಗೌಡನಿಗೆ ಯಥಾಶಕ್ತಿಯಾಗಿ ಸೇವೆ ಮಾಡಲು ಆರಂಭಿಸಿದನು. ರಂಗೇಗೌಡನು "ಅ, ಆ; ನಾನು, ನಾನು ಮಾರಮ್ಮ. ನನ್ನ ಮ್ಯಾಗೆ ಕೈಮಾಡ್ತೀಯ?" ಎಂದು ತತ್ತರಿಸಿದನು. ಬೈರಣ್ಣನು "ನೀನು ಮಾರಮ್ಮನಾದರೆ, ನಾನು ಬೀರೇದೇವರು. ನನ್ನ ಭಕ್ತನ ಮಾತೇಕೆ ನೀನು ಎತ್ತಿದ್ದು." ಎಂದು ಮತ್ತೆ ನಾಲ್ಕು ಏಟುಗಳನ್ನು ಕೊಟ್ಟನು. ಮಾರಮ್ಮನು ಪಲಾಯನವಾಗಿ ರಂಗೇಗೌಡನುಮಾತ್ರವೇ ಉಳಿಯಬೇಕಾಯಿತು. ಪೂಜಾರಿಯು ಅಪ್ರತಿಭನಾಗಿ ಬೈರಣ್ಣ-ಬೀರೇದೇವರಿಗೂ ಮಂಗಳಾರತಿಯನ್ನು ಮಾಡಿದನು. ದೇವರು "ತಡಿ, ತಡಿ, ಇವಳನ್ನ ತೀರಿಸಿಬಿಡ್ತೀನಿ." ಎಂದು ರಂಗೇಗೌಡನಿಗೆ ಮತ್ತೆ ನಾಲ್ಕು ಏಟುಗಳನ್ನು ಕೊಟ್ಟುದನ್ನು ಕಂಡು

ಎಲ್ಲರೂ ಬೆರಗಾದರು. ಕೆಲವರು ಮನೆಗಳಿಗೆ ಓಡಿ ಹೋದರು. ತಮಗೆಲ್ಲಿ ದೇವರ ಪ್ರಸಾದವು ದೊರೆಯುವುದೋ ಎಂಬ ಭಯವೇ ಅದಕ್ಕೆ ಕಾರಣ. ರಂಗೇಗೌಡನು "ನಾನೋ, ನಾನೋ, ರಂಗೇಗೌಡ. ಇದುವರೆಗೆ ಮಾರಮ್ಮನಾಗಿದ್ದ ನನ್ನ ಹೊಡಿಯೋದೇಕೋ ನೀನು ?" ಎಂದನು. ಬೈರಣ್ಣ-ಬೀರೇದೇವರು "ನಿನ್ನ ಕೋರ್ಟಿಗೆ ಒಪ್ಪಿಸಿದ್ದೀನಿ. ಅವರೇ ನಿನಗೆ ಉಡುಗೆರೆ ಕೊಡ್ತಾರೆ. ನಾನ್ಯಾಕೆ ಹೊಡೀಲಿ. ನಾನು ಹೊಡೀಲೆ ಇಲ್ಲವಲ್ಲಾ. ನಾನೆಲ್ಲಿ ಹೊಡೆದೆ. ಈ ಚಾವಟಿಯಾಕೆ ನನ್ನ ಕೈಲಿ ಬಂತು." ಎಂದು ಉತ್ತರ ಹೇಳಿ ಕೊರಡೆಯನ್ನು ಕೆಳಕ್ಕೆಸೆದು ಓಡಿಹೋದನು. ಎಲ್ಲರಿಗೂ ಊಟದ ವೇಳೆಯು ಸಮೀಪಿಸಿತು. ಹನುಮಂತೇಗೌಡನು ಒಬ್ಬನ ಹೊರತು ಉಳಿದವರೆಲ್ಲರೂ ಮಾರಮ್ಮನಿಗಿಂತ ಬೀರೇದೇವರ ಬಲುಮೆಯೇ ದೊಡ್ಡದೆಂದು ಸಿದ್ಧಾಂತಮಾಡಿಕೊಂಡು, ಮೇಲಕ್ಕೆ ಕೈಮುಗಿದು ಮನೆಗಳಿಗೆ ಹೋದರು. ಆ ಮುದುಕನೊಬ್ಬನು ಮಾತ್ರ ಏನೋ ಒಂದು ವಿಧದ ಅನುಮಾನದಿಂದ ಕೂಡಿ ಕಿರುನಗೆಯನ್ನು ತಾಳಿ, "ನೊದಲು ನಾನೂ ಮೋಸಹೋಗಿದ್ದೆನಲ್ಲಾ. ಮಾರಮ್ಮನಿಗೆ ತಕ್ಕ ಬೀರೇದೇವರು ಸಿಕ್ಕಿದ್ದ." ಎಂದು ತನ್ನ ಮನಸ್ಸಿನಲ್ಲೇ ಹೇಳಿಕೊಂಡನು. ರಂಗೇಗೌಡನ ಮೋಸವು ಬೆಚ್ಚುಬಿದ್ದಿದ್ದಿತು. ನುಂಗಲಾರದ ತುತ್ತನ್ನು ನುಂಗಿ ಅನುಭವಿಸಿದ್ದವನು ಅವನು. ಆಗೆ ಅವನ ಕೋಪವೆಲ್ಲವೂ ಬೈರಣ್ಣನಮೇಲೆ. ಮರುದಿನಸ ಹುಡುಗೆನೂ ತಪ್ಪಿಸಿಕೊಂಡನು. ರಂಗೇಗೌಡನ ಟೊಪ್ಪಿಯು ತುಪ್ಪಕ್ಕೆ ಬಿದ್ದಂತಾಯಿತು. ಬೈರಣ್ಣನೇ ಅವನನ್ನು ವಧೆ ಮಾಡಿರಬೇಕೆಂಬುದು ಸಿದ್ಧಾಂತವಾಯಿತು.

ಪೋಲೀಸಿನವರು ಮುಂದೆ ನಡೆಸಿದ ಕಾರ್ಯಕಲಾಪಗಳು ಇಲ್ಲಿ ಅಪ್ರಕೃತ. ಬೈರಣ್ಣನಿಗೆ ನೇಣುಬೀಳುವುದು ಖಂಡಿತವೆಂದೂ, ಕಾಳಮ್ಮನ ತಾಳಿಯನ್ನು ಹೋಗುವ ಪುರದೃಷ್ಟವನ್ನು ಕಂಡು ತನಗೆ ಅನುತಾಪವೆಂದೂ, ಚಿನ್ನಮ್ಮನು ತನ್ನ ಗೆಳತಿಯರೆಲ್ಲರಿಗೂ ಹೇಳುತ್ತಲೇ ಇದ್ದಳು. ಆದರೆ, ಅವಳ ಮುಖವನ್ನು ನೋಡಿದರೆ ಅನುತಾಪದ ಸೂಚನೆಯೇನೋ ಇರಲಿಲ್ಲ. ಹುಡುಗೆನು ತಪ್ಪಿಸಿಕೊಂಡು ಹೋದ ಎರಡನೆಯ ದಿನ ಅವನ ತಂದೆಯನ್ನು ಕರೆದು ತರಲು ರಂಗೇಗೌಡನು ಆಳನ್ನು ಕಳಿಸಿದನು. ದಾರಿಯಲ್ಲಿ ಹೊಳೆಯನ್ನು ದಾಟಿ ಹೋಗೇಗ ಬೇಕಾಗಿದ್ದಿತ್ತು. ಹೊಳೆಯಲ್ಲಿ ಅಂದು ಪ್ರವಾಹ. ಅದು ಇಳಿಯುವವರೆಗೂ ಮರುಮಾತೇ ಇಲ್ಲ. ತಾನು ರಂಗೇಗೌಡನಮೇಲೆ ಎಸೆದ ಕೆಲವು ಕಲ್ಲುಗಳು ಗುರಿತಪ್ಪಿ ಹೋಯಿದೊಂದು. ತಾನು ಇನ್ನೂ ಅವನನ್ನು ಕೋಟಲೆ ಪಡಿಸಬೇಕೆಂದಿರುವಾಗಲೇ ಈ "ಸೆಡಂ ಭೂತವು" ಒದಗಿದುದೊಂದು. ಇವುಗಳಿಂದ ಬೈರಣ್ಣನೂ ಮುಂಕು ಬಿದ್ದನು. ಯಾವಾಗ ಪೋಲೀಸಿನವರು ತನ್ನನ್ನು ಹಿಡಿಯುವರೋ ಎಂಬ ತಳಮಳ. ರಂಗೇಗೌಡನನ್ನು ನಿಂಬೆಯ ಹಣ್ಣಿನಂತೆ ಹಿಂಡಿಬಿಡಬೇಕೆಂದು ಅವನಿಗೆ ಆಸೆ. ಆದರೆ, ನಿಂಬೆಯ ಹಣ್ಣು ನುಣಿಚಿಕೊಂಡಿದೆ. ಮಾಡುವುದೇನು ? ಉರಿಯುವ ಕೊಳ್ಳಿಯು ದೊಡ್ಡ ಉರಿಯನ್ನು ತೋರಿ ಕೊನೆಗೆ ಆರಿಹೋಗುವಂತೆ ತಾನೂ ಏನಾದರೂ ಮಾಡಿ ರಂಗೇಗೌಡನಮೇಲೆ ಮತ್ತೊಂದು ಅಪರಾಧವನ್ನು ಹೇರಲು ಅವನಿಗೆ ಕಾತರ.

ಇಷ್ಟರಲ್ಲಿ ತೂಕಡಿಸುವವರಿಗೆ ತಲೆದಿಂಬೂ ಹಾಸಿಗೆಯೂ ದೊರೆದಂತಾಯಿತು. ಬೈರಣ್ಣನ ತೋಟದಲ್ಲಿ ಅವನ ಎತ್ತು ಕಾಲುಮುರಿದು ಬಿದ್ದಿದ್ದಿತು. ಅದಕ್ಕೆ ರಂಗೇಗೌಡನೇ ಹೊಣೆಯೆಂಬುದು ಗೊತ್ತೇ ಇದೆ. ರಂಗೇಗೌಡನು ತನ್ನ ಕಾಲಿನ ಒಂದು ಗಾಯಕ್ಕೆ ಔಷಧದ "ಹಸುರನ್ನು" ಹುಡುಕುತ್ತಾ ಅಲೆದಾಡುತ್ತಿದ್ದನು. ಅದೂ ಬೈರಣ್ಣನ ತೋಟದ ಬೇಲಿಯ ಅಂಚಿನಲ್ಲಿ. ಬಹಳ ದೂರವಾಗಿ ನಿಂತಿದ್ದವರು ಕೆಲವರು ಅಂದಿನ ಅಲೆದಾಟನನ್ನು ನೋಡಿದರು. ಅವರೆಲ್ಲರೂ ಬೈರಣ್ಣನಿಗೆ ಆಪ್ತರಾದವರು. ಎತ್ತಿಗೆ ಚಿಕಿತ್ಸೆಮಾಡಿಸಿ, ಬೈರಣ್ಣನು ರಂಗೇಗೌಡನ ಮೇಲೆ ಮೊಕದ್ದಮೆಯನ್ನು ಹಾಕಿದನು. ಅವನ ಆಪ್ತರೆಲ್ಲರೂ ಸಾಕ್ಷ್ಯವನ್ನು ನುಡಿಯಲು ಸಿದ್ಧವಾದರು. ವ್ಯವಹಾರವು ಪ್ರಾರಂಭವಾಯಿತು.

ಈ ವೇಳೆಗೆ ಹುಡುಗೆನು ತಪ್ಪಿಸಿಕೊಂಡು ಐದಾರು ದಿನಗಳು ಕಳೆದುಹೋದುವು. ಬೈರಣ್ಣನಿಗೆ ಮುಖದ ಮೇಲೆ ಕಳೆಯೇ ಇಲ್ಲ. ಯಾವಾಗ ಪೋಲೀಸಿನವರು

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು ಲೋಕ ಕರ ಪತ್ರಿ.

ಆರಂಭ ದಿನಾಂಕ 1 ವರ್ಷ 1924

ಪ್ರಕಟನಾ ಸ್ಥಳ ಶಿವಮೊಗ್ಗ ಜಿಲ್ಲೆ

ಸಂಪಾದಕರ ಹೆಸರು ಶ್ರೀ ಗೌರವಾಧ್ಯಕ್ಷರು

ಮಾಲೀಕರ ಹೆಸರು

ಸೌಜನ್ಯ ಕೃಪೆ

ಅಲಭ್ಯಲಾಭ ! !

ಕನ್ನಡದಲ್ಲಿ ಅಪೂರ್ವವಾದ ಪ್ರಯತ್ನ ! ! !

ಆವು ಓದಿನೋಡಿ ತಮ್ಮ ಮಿತ್ರರಲ್ಲಿ ಪ್ರಕಟಿಸಿರಿ !

ಈಗ ಬೊಂಬೈಯಲ್ಲಿ ಇದನ್ನು ಛಾಪಿಸಿ

ಮೊದಲು ವಿಲಾಯಿತಿಯಲ್ಲಿ

೫೦ ರೂ. ಕ್ರಯಕ್ಕೆ ಮಾರುತ್ತಿದ್ದಾರೆ ! !

ಛಾಪಿಸಿದಾಗ ಇದಕ್ಕೆ ೫೦೦ ರೂ. ಕ್ರಯವಿತ್ತು !

ತ್ವರೆಮಾಡಿರಿ !

ಈಗಲೇ ಕೇರಿರಿ !

ಋಗ್ವೇದಭಾಷ್ಯ

ಇದನ್ನನುಸರಿಸಿದ

ಕೇವಲ ೧೬ ರೂ. ಮಾತ್ರ ! ! ಪ್ರತಿಪದಭಾಷ್ಯ, ಅದರ ಕನ್ನಡ ಟೀಕೆಯು. ಕೇವಲ ೧೬ ರೂ. ಮಾತ್ರ ! !

(ಹಾಸಲು ಮಾಫಿ)

ಈಗಲೇ ಕೇರಿದರೆ ಬೆಲೆ ಸುಲಭ ! ! !

(ಹಾಸಲು ಮಾಫಿ)

ಮು ದೆ ಕ್ರಯ ಜಾಸ್ತಿಯಾಗುವದು ! ! !

ಇದೇ (೧೯೧೮ನೆ) ಅಕ್ಟೋಬರ್ ೧೫ಕ್ಕೆ ಒಳಗಾಗಿ ಈ (ಮೊದಲನೇ) ವರ್ಷದ ಚಂದಾ ೬ ರೂ ಗಳನ್ನು ನಮ್ಮಲ್ಲಿಗೆ ಕಳುಹಿಸುವಂಥ ಋಗ್ವೇದ ವೆಲ್ಲವನ್ನೂ ಕೇವಲ ೧೬ ರೂ. ಗೇ ಕೊಡುವೆವು ! ಈ ವಾಯಿದೆ ಕಳೆದನಂತರ ೨೫ ರೂ. ಗಳ ಬೆಲೆಯಾಗುವದು ! ! ಈ ಋಗ್ವೇದದ ಉಪೋದ್ಘಾತವನ್ನು ಈ ವರ್ಷ ದಿಂದ ಪ್ರಕಟವಾಗುತ್ತಲಿದೆ. ಚಂದಾದಾರರು ದಿನೇದಿನೇ ಸೇರುತ್ತಿದ್ದಾರೆ ಈ ವಾಯಿದೆ ಕಳೆದರೆ (ಸ್ವಲ್ಪ ಪ್ರತಿಗಳೇ ಛಾಪಿಸಲ್ಪಡ [illegible] ಪುಸ್ತಕಗಳೇ ಅನೇಕರಿಗೆ ದೊರಿಯಲಾರವು. ತ್ವರೆಮಾಡಿರಿ ! ಇಂತಹ ಪ್ರಕಟಣೆಯು ಕನ್ನಡದಲ್ಲಿ ಮತ್ತೆಲ್ಲಿಯೂ ಇಲ್ಲವೇ ಇಲ್ಲ ! !

ಮಂಗಳೂರಿನ ಸುಂದರವಾದ ಅಕ್ಷರಗಳಿಂದ, ದಪ್ಪನಾದ ಗ್ಲೇಜ್‌ಕಾಗದದಲ್ಲಿ ಅಂದವಾಗಿ ಛಾಪಿಸಲ್ಪಟ್ಟ ಋಗ್ವೇದ [illegible]

ಯಿತಿ ಬೈಂಡಿನ ೫೧ ಸಂಪುಟ [ವ್ಯಾಲ್ಯೂಂ] ಗಳಲ್ಲಿ ಇನ್ನು ೩೧ ವರ್ಷದೊಳಗಾಗಿ ಪೂರ್ತಿಗೊಳಿಸಲ್ಪಡ [illegible]

ಪೂರ್ವಕಾಲದಲ್ಲಿ ಯಾವ ದಿವ್ಯದೇಶದ ಆಶ್ರಮಗಳಲ್ಲಿ ಬ್ರಹ್ಮವಿದ್ಯಾರತರಾದ ಮಹರ್ಷಿಗಳೂ, ಬ್ರಹ್ಮವಾದಿನಿಯರೂ ವೇದಾದಿ ಸಚ್ಛಾಸ್ತ್ರಗಳನ್ನು ಪ್ರವಚನಮಾಡುತ್ತಾ ಜಗತ್ತನ್ನೇ ಪಾವನವನ್ನಾಗಿ ಮಾಡುತ್ತಿದ್ದರೋ ? ಯಾವ ಮಹರ್ಷಿಗಳ ಪರ್ಣಶಾಲೆಗಳು ಸಕಲ ಮಾನವಜಾತಿಗೂ ಸದುಪದೇಶಸ್ಥಾನಗಳಾಗಿದ್ದವೋ ? ಇಂತಹ ಭರತಖಂಡದಲ್ಲಿ ಮಹಾಭಾರತ ಯುದ್ಧದಿಂದ ಕ್ಷತ್ರಿಯೋತ್ತಮರು ಹತರಾದ್ದರಿಂದ, ಅನಂತಾನವಾದ ವೈದಿಕ ಧರ್ಮವು ಖಿಲವಾಗತೊಡಗಿ, ದುರ್ಮತಗಳು ಸರ್ವತೋಮುಖಗಳಾಗಿ ತಲೆಯತ್ತಿದವು. ಕಾಲಾಂತರದಲ್ಲಿ ಬೌದ್ಧ, ಜೈನ, ತುರುಷ್ಕಾದಿ ವಿಧರ್ಮಿಗಳು ಈ ದೇಶವನ್ನಾಳಲಾರಂಭಿಸಲು, ಅವರಲ್ಲನೇಕರು ನಮ್ಮ ವೈದಿಕಮತ ನಿರಸನಾರ್ಥವಾಗಿ ಅಸಮಾನಸಾಹಸ ಮಾಡಿದರು. ಹೀಗೆ ನಮ್ಮ ಮತವು—(ಶತೃಗಳ ಶಸ್ತ್ರಧಾರೆಗೆ ತುತ್ತಾಗಿ, ಅನೇಕಾನೇಕ ಗ್ರಂಥಗಳೂ, ಜನರೂ ಲಯವಾದರೂ,) ನಮ್ಮ ಪೂರ್ವಜರಾದ ಮಹರ್ಷಿಗಳ ತಪಃಪ್ರಭಾವದಿಂದ, ಇಂತಹ ಯಾವ ಕಂಟಕಕ್ಕೂ ಜಗ್ಗದೆ, ಲುಪ್ತವಾಗದೆ, ಇನ್ನೂ ಜಗತ್ತನ್ನಲಂಕರಿಸುತ್ತಲಿರುವದು. ಹೀಗೆ ಪೂರ್ವದಿಂದಲೂ ನಮ್ಮ ಹಿರಿಯರು ವಿಧವಿಧ ಹಿಂಸೆಗಳಿಗೆ ಶಿಲುಕಿ, ನಮಗಾಗಿ ಈ ಶುದ್ಧವಾದ ವೈದಿಕ ಮತವನ್ನು ಕಾಪಾಡಿಕೊಂಡು ಬಂದಿದ್ದರೂ—ಈಗಿನವರಲ್ಲಿ ಅನೇಕರು (ತಮ್ಮ ಮತವೇನೆಂಬುದನ್ನು ತಿಳಿಯಲು ಸ್ವಲ್ಪವೂ ಯತ್ನಿಸದೆ) ವೇದಗಳಲ್ಲಿ ಅನಾದರಣೆಯನ್ನು ತೋರಿಸುತ್ತಿರುವದು ಆಶ್ಚರ್ಯಕರವಾಗಿದೆ !

ಈ ಮಧ್ಯಕಾಲದಲ್ಲಿ ನಾಸ್ತಿಕಾಧಿಷ್ಠಿತವಾಗಿದ್ದ ನಮ್ಮ ಖಂಡವನ್ನು ತಮ್ಮ ಪಾದಪಾಂಸುಗಳಿಂದ ಪವಿತ್ರೀಕರಿಸಿ, ಪರಿಶುದ್ಧವಾದ ವೈದಿಕ ಮತವನ್ನು ಉದ್ಧಾರಮಾಡಿದ —ಶ್ರೀಮದಾದಿಶಂಕರಾಚಾರ್ಯರವರೂ, ಶ್ರೀಮದ್ರಾಮಾನುಜಾಚಾರ್ಯರವರೂ, ಶ್ರೀಮನ್ಮಧ್ವಾಚಾರ್ಯರವರೂ ಯಾವ ಪುಣ್ಯಪ್ರಾಬಲ್ಯವನ್ನು ತಮ್ಮ ಮುಖ್ಯಾಶ್ರಮ(ಪೀಠ)ಸ್ಥಾನವನ್ನಾಗಿ ಮಾಡಿಕೊಂಡು ತನ್ಮೂಲಕ ಇದನ್ನು ಧರ್ಮಭೂಮಿಯಂಬಡಾಗಿ ಅನುಗ್ರಹಿಸಿದರೋ ? ಅನಂತರ ಅಲ್ಲಲ್ಲಿ ಖಿಲವಾಗಿ, ಹಾಳಾಗುತ್ತಿದ್ದ ವೇದಬ್ರಾಹ್ಮಣಾರಣ್ಯಕಾದಿ ಪೂಜ್ಯ ಗ್ರಂಥಗಳನ್ನು (ತಾವಿದ್ದ ಅಮಾತ್ಯಪದವಿಯ ಬಲದಿಂದ) ಎಲ್ಲಿದ್ದರೂ ಬಿಡದೆ ಸಂಗ್ರಹಿಸಿ, ಲಕ್ಷಣಪ್ರಕಾರ ಪ್ರತಿಯೊಂದು ಮಂತ್ರವನ್ನೂ ಜತೆಗೊಳಿಸಿ, ಪುನಃ ಯಾರ ವಿದ್ವತ್ತೂ ತಲ್ಪದಂತೆ ಅವುಗಳಿಗೆ ಭಾಷ್ಯವನ್ನೂ ಬರೆದು ಜಗತ್ತಿಗೆ ಪರೋಪಕಾರ ಮಾಡಿದ ಶ್ರೀಮದ್ವಿದ್ಯಾರಣ್ಯ ಸ್ವಾಮಿಗಳವರು ಯಾವ ನಾಡನ್ನೇ ತಮ್ಮ ವಿಶ್ರಾಂತಿಸ್ಥಾನವನ್ನಾಗಿ ಕಲ್ಪಿಸಿಕೊಂಡಿದ್ದರೋ ? ಇಂತಹ ನಮ್ಮ ಕನ್ನಡ ದೇಶದ ಮಹತ್ವವು ಸಾಮಾನ್ಯವಾದದ್ದಲ್ಲ !!!

ಹೀಗೆ ವೇದಾದಿಸಚ್ಛಾಸ್ತ್ರಗಳನ್ನು ಸುಲಭವಾಗಿತಿಳಿದುಕೊಂಡು, ತದುಕ್ತಧರ್ಮಗಳನ್ನನುಷ್ಠಿಸಲು ಆಚಾರ್ಯರುಗಳೂ, ಅವರ ಶಿಷ್ಯರುಗಳೂ ಅವುಗಳಿಗೆ ಭಾಷ್ಯ, ವೃತ್ತಿ, ಟೀಕಾ, ಟಿಪ್ಪಣಿ ಮುಂತಾದ [illegible] ಈ ಕಾಲದಲ್ಲಿ ಸಂಸ್ಕೃತ ಭಾಷೆಯಲ್ಲಿ ಅಭಿರುಚಿ [illegible] ರುವದರಿಂದ, ಅವು ಪ್ರತ್ಯಕ್ಷವಾಗಿ ತಮ್ಮ ರಸವನ್ನು ಆಸ್ವಾದನೆ ಮಾಡಿಸಲ್ಲ ಸಮರ್ಥವಾಗಿರದರಿಂದ, ಸಾಂಪ್ರತಕ್ಕೆ ದೇಶಭಾಷೆಗಳಲ್ಲಿ ಈ ಜ್ಞಾನ ಕೋಶಗಳನ್ನು ಪರಿವರ್ತನೆಮಾಡುವ ಪದ್ಧತಿಯು ಸರ್ವತ್ರ ಅನುಷ್ಠೇಯವಾಗುತ್ತಲಿದೆ. ನಮ್ಮ ಕನ್ನಡ ಭಾಷೆಯು ಬಹು ಲಲಿತವಾದದ್ದೂ, ಪೂರ್ಣವಾದದ್ದೂ ಆಗಿದೆ. ಈ ಭಾಷಾಭಿಜ್ಞರು ಕೋಟ್ಯಧಿಕ ಸಂಖ್ಯಾತರಾಗಿದ್ದಾರೆ. ಇಷ್ಟುಜನ ಬಾಹುಳ್ಯವಿಲ್ಲದಿರುವ ಇತರ ದೇಶೇಯರು ತಮ್ಮ ಭಾಷೆಗಳಲ್ಲಿ ವೇದ, ದರ್ಶನಗಳೇ ಮುಂತಾದ ಜ್ಞಾನಕೋಶಗಳನ್ನು ವೃದ್ಧಿಪಡಿಸಿಕೊಳ್ಳುತ್ತಿರುವಾಗ, ನಮ್ಮ ಕನ್ನಡಿಗರು ಅಪರರಾತ್ರಿಯ ನಿದ್ರಾಲೋಲರಾಗಿರುವದು ಹೇಗೆ ಸಹನೀಯವಾದೀತು ? ಪ್ರತಿ ಮಾನವನಿಗೂ ತತ್ಪ್ರಾಪಿಬ್ರಾಹ್ಮಣನಿಗಂ — "ವೈದಿಕ ಮತವೆಂಬುದೇನು ? ವೇದದಲ್ಲಿ ಏನಿದೆ ? ನಮ್ಮನ್ನು ಶಾಶ್ವತಾನಂದಕರವಾದ ಮೋಕ್ಷದಲ್ಲಿ ಸೇರಿಸಲು ಏನು ಅನುಷ್ಠೇಯವಾದದ್ದು ?" ಎಂಬುದನ್ನು ತಿಳಿಯುವದು ಮುಖ್ಯವಾದದ್ದು ! ಇಂದೋ, ನಾಳೆಯೋ ಎಂದಾದರೊಂದುದಿನ ನಾವು ಪರಲೋಕ ಪ್ರಯಾಣವನ್ನು ಬೆಳಿಸಬೇಕಷ್ಟೆ ? ಈ ಜಗತ್ತನ್ನೇ ಸಂಪಾದಿಸಿದ್ದರೂ ನಮ್ಮೊಂದಿಗೆ ಯಾವದೂ ಅಲ್ಲಿಗೆ ಬರಲಾರದು ! ಅಲ್ಲಿ ಧರ್ಮಮಾತ್ರ ಸಹಾಯ ಮಾಡಬಲ್ಲುದು. ವೇದೋಕ್ತ ಧರ್ಮವನ್ನರಿತು, ಅದರಂತೆ ಆಚರಿಸುವದು ಅತ್ಯಗತ್ಯವಷ್ಟೆ ?

ಇದಕ್ಕಾಗಿ ಪ್ರಕೃತಕ್ಕೆ ವೇದಗಳಲ್ಲಿ ಮುಖ್ಯವಾದ ಋಗ್ವೇದವನ್ನು ಕನ್ನಡ ಅರ್ಥಸಮೇತ ಛಾಪಿಸಲು ಯತ್ನಿಸಿದ್ದೇವೆ. ವೇದದಲ್ಲಿ ಶಬ್ದಗಳವ್ಯುತ್ಪತ್ತಿಯನ್ನು ಬ್ರಾಹ್ಮಣ, ನಿರುಕ್ತ, ನಿಘಂಟುಗಳ ಮತದಂತೆ ಭಾಷ್ಯಕಾರರು ಬರದಿರುವದನ್ನು ತಿಳಿಸದೆ, ಕೇವಲ ಮೂಲ ಮೂಲಾರ್ಥವನ್ನುವಾತ್ರ ಛಾಪಿಸುವುದಾದರೆ—"ಬ್ರಹ್ಮಾದೇವಾನಾಂ ಪದವೀಃ ಕವೀನಾಂ ಋಷಿರ್ವಿಪ್ರಾಣಾಂ ಮಹಿಷೋಮೃಗಾಣಾಮ್ ಶ್ಯೇನೋಗೃಧ್ರಾಣಾಮ್...." ಎಂಬ ಮಂತ್ರಾರ್ಥದಲ್ಲಿ—"ಮೃಗಗಳಲ್ಲಿ ಕೋಣನಂತೆಯೂ, ಪಕ್ಷಿಗಳಲ್ಲಿ ಗಿಡಗನಂತೆಯೂ ಬ್ರಹ್ಮವಸ್ತುವು ಇರುವದು"—ಎಂದು ಬರಿಯಬೇಕಾಗುವದು. ಇದರಿಂದ ಜನರಿಗೆ ಲಾಭವುಂಟಾಗಲಾರದು. ಇದಕ್ಕಾಗಿ ಬ್ರಾಹ್ಮಣ, ಆರಣ್ಯಕ, ನಿರುಕ್ತ, ವೈದಿಕ ನಿಘಂಟು, ಶ್ರೀಮದ್ವಿದ್ಯಾರಣ್ಯಸ್ವಾಮಿಗಳು ಮುಂತಾದವರ ಭಾಷ್ಯಗಳು ಇವುಗಳನ್ನನುಸರಿಸಿ, ಪ್ರತಿಪದ ವ್ಯುತ್ಪತ್ತಿಕ್ರಮವಾದ ಸಂಸ್ಕೃತಭಾಷ್ಯ ಅದರ ಕನ್ನಡಟೀಕಾಸಹಿಂ

Reg. No. M. 1255.

WORLD NEWS PAPER EXHIBITION
REGARAVALLI
Shimoga Dist, Karnataka

ಸಂಪುಟ 12, ಸಂಚಿಕೆ 10. ಅಕ್ಟೋಬರ್ 1927.

ಶ್ರೀರಸ್ತು

ಭಾರತಿ

BHARATHI

(An Illustrated Kanarese Monthly)

"ಆನಂದರಸಭರಿತ"

ಸರ್ವಾರ್ಥಸಂಗ್ರಹ ಸಚಿತ್ರ ಮಾಸಪತ್ರಿಕೆ

Shimoga

ಹರಿಕಥಾ ರತ್ನಾಕರ, ತತ್ವಭೂಷಣ, ಜೀವಕಾರುಣ್ಯ ಸಂಘ ಸಂಸ್ಥಾಪಕ,
ಸನಾತನ ಧರ್ಮ್ಮ ಬೋಧಿನೀ ಸಭಾಧ್ಯಕ್ಷ, ಭವರೋಗ
ವೈದ್ಯಪ್ರಚಾರಕ, ಸುಜನಸೇವಾನಂದವಿಲಾಸ.

ವಿದ್ಯಾನಿಧಿ. ಕಾರುಪಲ್ಲಿ ಶಿವರಾಮದಾಸ್,

ಸಂಪಾದಕ & ಪ್ರಕಾಶಕ.

ಓಂ

ಕಲ್ಪತರು ಪತ್ರಿಕೆ

(ತಿಳಿಗನ್ನಡ ಮಾಸಪತ್ರಿಕೆ)

ಸಂ. ೨—೦—೦.

ತಾಲ್ಲೂಕು ಕಛೇರಿ ಪುಸ್ತಕ

ಸಂಪುಟ ೦.

ಭಾಗ ೨.

೧೮೪೫.

ಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಪತ್ರಿಕಾ ಪ್ರದರ್ಶನ

1962.

ಸಂಪಾದಕ:—

ಕರಣಕೆರೆ ವೆಂಕಟೇಶ ಶರ್ಮ

1921

SHRINIVAS PRESS UDUPI.

WORLD ... MEDAHALLI - 577424
Shimoga District, Karnataka State, INDIA

ಲೋಕಪಾವನ, ತೃತೀಯ ವಿಶೇಷ ಸಂಚಿಕೆ.

1927

ತಾಲಸಿ ಹಾಮು ಗರೀಬಕೀ ಹಂಸೋ ನಹಿನಜಾಯೂ ಮುಕೆಬೈಲಕೀ ಪಾಲಸೆ ಲೋಹ ಭನ್ಮ ಹೋಜಾಯೂ॥

[ಸಂಪುಟ ೩] ಜುಲೈ ತಾರೀಕು ೧೪ನೇ ಗುರುವಾರ.. ೧೯೨೭. [ಸಂಚಿಕೆ ೧

ಸಂಪಾದಕರು– ಬಿ. ಎ. ಬೆಳ್ಳಿಪ್ಪ, ಬಿ. ಎ., ಮಡಿಕೇರಿ.



PRINTED AT THE SRI-CAUVERY PRINTING WORKS., AND PUBLISHED BY THE EDITOR B. A. BELLIAPA, B. A., AT HIS OFFICE, AT MERCARA.

Mo. Kuttappa Napoklu

ಉದಯಭಾರತ

ಅಖಿಲ ಕರ್ನಾಟಕದಲ್ಲಿ ಹಿಂದೂ ಸಂಘಟನೆಗಾಗಿ ಹೋರಾಡುತ್ತಿರುವ

ಏಕಮಾತ್ರ ಕನ್ನಡ ಪತ್ರಿಕೆ

ಸಂಪುಟ ೯ | ವಿಕ್ರಮ ಪುಷ್ಯ — ಫಾಲ್ಗುಣ: ಜನವರಿ — ಮಾರ್ಚ್ ೧೯೪೦ | ಸಂಚಿಕೆ ೨

ಕರ್ನಾಟಕ ಸಿಂಹಾಸನಾಧೀಶ್ವರ
ಶ್ರೀ ಜಯಚಾಮರಾಜ ಒಡೆಯರ್,
ಬಹದ್ದೂರರವರು, ಮೈಸೂರು.

ಕರ್ನಾಟಕ ಪ್ರಾಂತಿಕ ಹಿಂದೂ ಮಹಾಸಭೆಯು ಸೇರಿ, ಶ್ರೀ ಬೆಳವಿ ದತ್ತಾತ್ರೇಯರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಲೆ. ಪಟವರ್ಧನರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಪ್ರಚಾರಕರಾದ ಶ್ರೀ ಬಿ. ಎಲ್. ವಿದ್ಯಾರ್ಥಿಯವರು ಮಂಗಳೂರು, ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳಲ್ಲಿ ಸಂಚರಿಸಿ ಹಿಂದೂ ಸಂಘಟನೆಯ ಕುರಿತು ಭಾಷಣಗಳನ್ನು ಮಾಡಿ ಜನ ಜಾಗ್ರತಿಯೆಬ್ಬಿಸಿದರು. ವಿದ್ಯಾರ್ಥಿಗಳು ಮಂಗಳೂರು ನಗರದ ನೀರೆಶ್ವಾಲ್ಯದಲ್ಲಿ ಹಿಂದೂ ಮಹಾಸಭೆಯ ಒಂದು ಶಾಖೆಯನ್ನು ಸ್ಥಾಪನೆಮಾಡಿದರು.

ಆರ್ಯಸಮಾಜದ ಮುಖಂಡರಾದ ಮಹಾತ್ಮಾ ನಾರಾಯಣ ಸ್ವಾಮಿಯವರು ದ. ಕ. ಜಿಲ್ಲೆಗೆ ದಯಮಾಡಿಸಿದಾಗ, ಹಿಂದೂ ಮಹಾಸಭೆಯವರೂ, ಆರ್ಯಸಮಾಜವರೂ ಅವರಿಗೆ ಸ್ವಾಗತಕೊಟ್ಟು ಅನೇಕ ಭಾಷಣಗಳನ್ನು ಮಾಡಿಸಿದರು.

ದ. ಕ. ಜಿಲ್ಲಾ ಹಿಂದೂ ಮಹಾಸಭೆಯವರು ಉಡುಪಿಯಲ್ಲಿ ವಿದ್ವಾನ್ ವೆಂಕಟರಮಣಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ, ಹರಿಜನ ಮೊದಲಾದವರು ಜನಗಣನೆಯ ಕಾಲದಲ್ಲಿ ಹಿಂದೂಗಳೆಂದೇ ಬರೆಸಬೇಕೆಂದು ಪ್ರಚಾರ ಮಾಡಿದರು. ಶ್ರೀ॥ ಕೆ. ಶಂಕರನಾರಾಯಣ ಉಪಾಧ್ಯಾಯ, ಶ್ರೀ॥ ಟಿ. ವಾಸುದೇವ ಶೆಣೈಯವರ ಭಾಷಣಗಳಾದವು.

ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಪ್ರಚಾರಕರಾದ ಶ್ರೀ॥ ರೆಂಜಾಳ ಮಂಜುನಾಥ ಶ್ಯಾನುಬಾಗರು ಹಿಂದೂ ಧರ್ಮದ ಕುರಿತು ಜಿಲ್ಲೆಯಲ್ಲಿ ಅನೇಕ ಭಾಷಣಗಳನ್ನು ಮಾಡಿದರು.

ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಕಾರ್ಯಕರ್ತರುಗಳಾದ ಶ್ರೀ ಟಿ॥ ವಾಸುದೇವ ಶೆಣೈಯವರೂ, ಶ್ರೀ ಅಲೆವೂರು ಶೇಷಪ್ಪಯ್ಯನವರೂ, ಮೈಸೂರು ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರೂ, ತೀರ್ಥಹಳ್ಳಿ, ಶಿವಮೊಗ್ಗ, ನ್ಯಾಮತಿಗಳಲ್ಲಿ ಹಿಂದೂ ಸಂಘಟನೆಯ ವಿಷಯವಾಗಿ ಭಾಷಣಗಳನ್ನು ಮಾಡಿದರು. ಶ್ರೀ ಅಲೆವೂರು ಶೇಷಪ್ಪಯ್ಯನವರು ಹಾರ್ನಹಳ್ಳಿ, ಕುಂಸಿ, ಸಾಗರ, ಭೀಮನಕೋಣೆ; ಅಂಬರಗೋಡ್ಲು, ಕಲ್ಮನೆ, ತೆಲವಾಟ, ಹಂಸಗಾರು, ಹೆಗ್ಗೋಡು, ಶಿಕಾರಿಪುರ, ಶಿರಾಳಕೊಪ್ಪ, ಸೊರಬ ಮೊದಲಾದ ಶಿವಮೊಗ್ಗ ಜಿಲ್ಲೆಯ ಕೆಲವು ಪ್ರಾಂತ್ಯಗಳಲ್ಲಿ ಪ್ರವಾಸ ಮಾಡಿ ಹಿಂದೂ ಮಹಾಸಭೆಯ ಕಾರ್ಯಕಲಾಪಗಳನ್ನು ಕುರಿತು ೩೫ ಭಾಷಣಗಳನ್ನು ಮಾಡಿ ಹಿಂದೂ ಮಹಾಸಭೆಯ ೮ ಶಾಖೆಗಳನ್ನು ಸ್ಥಾಪನೆಮಾಡಿದರು. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೧೦ ಶಾಖೆಗಳಿವೆ!

ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಗೌರವ ಕಾರ್ಯದರ್ಶಿಗಳಾದ ಶ್ರೀ॥ ಟಿ. ವಾಸುದೇವ ಶೆಣೈಯವರು ತಾ. 7-3-1941ನೇ ಶುಕ್ರವಾರ ದಿನ ಪುತ್ತೂರು ನಗರದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಹಿಂದೂ ಮಹಾಸಭೆಯ ಧ್ಯೇಯಗಳ ಕುರಿತು ಭಾಷಣ ಮಾಡಿದರು. ಪುತ್ತೂರಿನ ಸುಪ್ರಸಿದ್ಧ ವಕೀಲ್ ಶ್ರೀ॥ ಗಣಪತಿರಾವ್, ಇವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಭಾಷಣದ ಪರಿಣಾಮವಾಗಿ ಹಿಂದೂಮಹಾಸಭೆಯ ಶಾಖೆಯನ್ನು ಸ್ಥಾಪಿಸಬೇಕಾಗಿ ಹಲವರು ಅಪೇಕ್ಷಿಸಿದ ಮೇರೆಗೆ ಒಂದು ತಾತ್ಕಾಲಿಕವಾದ ಕಮಿಟಿಯನ್ನು ನೇಮಿಸಲಾಯಿತು.

ಪಾಣೆಮಂಗಳೂರಿನ ಹಿಂದೂ ಮಹಾಸಭೆಯವರೂ, ಪಾಣೆಮಂಗಳೂರು ಕಾಂಗ್ರೆಸ್ ಕಮಿಟಿಯವರೂ, ಇತರ ಹಿಂದೂ ಮಹನೀಯರೂ, ಒಂದು ಅನಾಥಾಶ್ರಮವನ್ನು ಸ್ಥಾಪಿಸುವ ಕುರಿತು ಭಗೀರಥ ಯತ್ನಗಳನ್ನು ಮಾಡುತ್ತಿರುವರು. ಪಾಣೆಮಂಗಳೂರಿನ ಹಿಂದೂ ಮಹಾಜನರ ಪ್ರಯತ್ನಗಳು ಯಶಸ್ವಿಯಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಮಂಗಳೂರು ಆರ್ಯಸಮಾಜದವರು ಗತವರ್ಷದಲ್ಲಿ ಸ್ಥಾಪಿಸಿದ ಶ್ರೀ ಶ್ರದ್ಧಾನಂದ ಅನಾಥಾಶ್ರಮದ ವಾರ್ಷಿಕ ಉತ್ಸವವು ಕಳೆದ ಶಿವರಾತ್ರಿಯ ದಿನ ಸಂಭ್ರಮದಿಂದ ನೆರವೇರಿತು. ಈ ಅನಾಥಾಶ್ರಮವು ಅನೇಕ ನಿರಾಶ್ರಿತ ಹಿಂದೂ ಬಾಲಕ ಬಾಲಕಿಯರಿಗೆ ಆಶ್ರಯವನ್ನಿತ್ತಿರುತ್ತದೆ. ಉದಾರ ಹೃದಯರಾದ ಹಿಂದೂ ಬಾಂಧವರೆಲ್ಲರೂ ಈ ಅನಾಥಾಶ್ರಮಕ್ಕೆ ಧನಸಹಾಯವನ್ನೀಯುವುದರಿಂದ ಪರಮೇಶ್ವರನ ಕೃಪೆಗೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ.

ದ.ಕ. ಜಿಲ್ಲಾ ಹಿಂದೂ ಮಹಾಸಭೆಯ ಗೌರವ ಕಾರ್ಯದರ್ಶಿಗಳಾದ ಶ್ರೀ ಟಿ. ವಾಸುದೇವ ಶೆಣೈ ಮತ್ತು ಶ್ರೀ ಕೆ. ರಂಗರಾಯರು ಮತ್ತು ಶ್ರೀ॥ ಮಲ್ಪೆ ವಾಮನ ಭಟ್ಟರವರು ಒಂದು ಗೌ. ಸಾ. ಬ್ರಾಹ್ಮಣ ಸಮಾಜದ ಅನಾಥ ಕನ್ಯೆಯನ್ನು ದುಷ್ಟರ ಸಹವಾಸದಿಂದ ತಪ್ಪಿಸಿ, ಮಣಿಪಾಲ ಹಿಂದೂ ಅನಾಥಾಲಯಕ್ಕೆ ಸೇರಿಸಿದರು. ಈ ಕಾರ್ಯದಲ್ಲಿ ಉಡುಪಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರವರಾದ ಫುರ್ಟಾಡೋರವರು ಹಿಂದೂ ಮಹಾ

ಮುಲೆನಾಡಿನ ಗ್ರಾಮಪಂಚಾಯಿತಿ."

Registered No. M.

ಚಂದಾಹಣ ವರ್ಷಕ್ಕೆ
ಮುಂಗಡವಾಗಿ ಕಳುಹಿಸುವವರಿಗೆ
ರೂ.
ಅಂಚೆಯವರಿಗೆ
ಸೇರಿ ರೂ.
ಒಂದು ಸಂಚಿಕೆಯೊಂದಕ್ಕೆ
೨—೧—೦ ಆಣೆ.

ಪ್ರಕಟಣೆಗಳನ್ನು ಕೊಡಲು
ಬಹಳ ಉತ್ತಮ
ಪತ್ರಿಕೆ. ಮಲೆನಾ
ವಿಶೇಷ ಸಂಗತಿಗಳು
ಯು, ರಾಮ್ಭೀಮಾಯ
ಪ್ರಪಂಚದಲ್ಲಿ
ತಿಳಿಯಲು
ಚಂದಾದಾರರಾ

ಪ್ರತಿ ಶುಕ್ರವಾರವೂ ತೀರ್ಥಹಳ್ಳಿಯಿಂದ ಪ್ರಕಟವಾಗುವ

ಕರ್ನಾಟಕ ವಾರಪತ್ರಿಕೆ.

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥

ಸಂಪಾದಕರು:—ಚಿನ್ನಭಂಡಾರದ ಸುಬ್ಬರಾಯ ಕಿ. ವಿ.

ವರ್ಷ ೦ | ತೀರ್ಥಹಳ್ಳಿ. ತಾರೀಕು ೬—೨—೧೯೨೮ ಶುಕ್ರವಾರ. | ಸಂಚಿಕೆ ೦

ಲೇಖಕರಿಗೆ ವಿನ್ನಹ:—ವಿಷಯಗಳು ವಿಚಾರಯುಕ್ತವಾಗಿ ಸಂಕ್ಷೇಪವಾಗಿರಬೇಕು. ಸುತ್ತು ಎರಡು ಪುಲ್ಲೆಕೇಪ್ ಪುಟಗಳಿಗೆ ವಿಚಾರವಾಗಿ ಸಂಬಂಧವಾದ ಬರವಣಿಗೆಯನ್ನೂ, ನಿಜವಲ್ಲದ ವರ್ತಮಾನಗಳನ್ನೂ ಅಂಗೀಕರಿಸುವುದಿಲ್ಲ. ಲೇಖನಗಳನ್ನು ಪಾಪಸು ಮಾಡುವುದಿಲ್ಲ. ಲೇಖನಗಳ ಮುದ್ರಣ ವಿಚಾರದಲ್ಲಿ ಸಂಪಾದಕರ ಪೂರ್ಣ ಸ್ವಾತಂತ್ರ್ಯವಿರುತ್ತದೆ. ಲೇಖನಗಳು ಪ್ರತಿ ಸೋಮವಾರದೊಳಗಾಗಿ ಬರಬೇಕು.

ಔಷಧಸೇವೆಗಳಿಗಿಂತಲೂ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಅನಘಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ"ಯೆಂಬ ಆರೋಗ್ಯೋಪಯೋಗಕವಾದ ಮಾಸಪತ್ರಿಕೆಯನ್ನು ಆರೋಗ್ಯವಂತರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಸುಲಭವಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದೇ ಆರೋಗ್ಯಚಂದ್ರಿಕೆಯು. ನಿಸ್ಸು ಸಂಸಾರಿಕ್ಷಿತವಾದುದರಿಂದ, ಬಹುಕಾಲದ ಪ್ರಾಚಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ಸೈಪುಣ್ಯವುಳ್ಳ ಡಾಕ್ಟರ

ಕಲಾನಿವೇದನ

KALANIVEDANA



ಕಲಾಮಂದಿರದ ಕಾಣಿಕೆ

A Humble tribute

from Kalamandiram

Shimoga Dist, Karnataka State, Ki

1929

ಮಕ್ಕಳ ಪುಸ್ತಕ

ಮಕ್ಕಳಿಗಾಗಿಯೇ ಹೊರಡುವ

ಉತ್ತಮ ವರ್ಗದ ಮಾಸಪತ್ರಿಕೆ.

WORLD NEWS PRINTING CO.
Shimoga Dist Karnataka

ಪಂಡಿತ ಮೋತಿಲಾಲ್ ನೆಹರುಯವರು
ಈ ಸಲ ರಾಷ್ಟ್ರಸಭೆಯ ಅಧ್ಯಕ್ಷರಾಗಿದ್ದಾರೆ.

ಸಂಪಾದಕರು :
ದೇವುಡು

ಪ್ರಕಾಶಕರು :
ಕೃಷ್ಣ ಕಂಪೆನಿ

Kannada Research Institute
Karnataka University
Dharwad Dist, Karnataka State
1 2 1971
INTELLECT NEWS & FEATURES AGENCY, NARAYANVALLY, H. SHIRIYUR DIST, MYSORE STATE-INDIA

ಮೈಸೂರಿರ್ಯಮ್

ಸ್ಥಳಕ್ಕೆ ಒಂದರು. ಅಷ್ಟರೊಳಗಾಗಿ ಸ್ಥಳದ ಹತ್ತಿರ ಸೇರಿದ್ದ ಗುಂಪು ಚದರಿ ಹೋಗಿತ್ತು. ಏಕೆಂದರೆ, ಗುಂಡಿನ ಶಬ್ದವನ್ನು ಕೇಳಿಕೊಂಡಲೇ ಎಲ್ಲರೂ ಭಯಪಟ್ಟು ಓಡಿಹೋಗಿದ್ದರು ಅದರೂ ಕೆಲವು ಹುಡುಗೋರು ಆಲ್ಲಲ್ಲೇ ಅಲೆದಾಡುತ್ತಿದ್ದರು. ಸ್ಕೂಲಿನ ಎದುರುಗಡೆ ರಸ್ತೆಯಲ್ಲಿ ಹಿಂದು ಮುಸಲ್ಮಾನರು ಎರಡು ಭಾಗಗಳಾಗಿ ಒಂದು ಕಡೆ ಒಂದು ಜಾತಿಯವರೂ ಇನ್ನೊಂದು ಕಡೆ ಇನ್ನೊಂದು ಜಾತಿಯವರೂ ಜಗಳಕ್ಕೆ ಸಿದ್ಧರಾಗಿ ನಿಂತಿದ್ದರು. ಡಿ॥ ಸೂಪರಿಂಟೆಂಡೆಂಟರು ಗಲಾಟೆ ನಡೆಯದಂತೆ ನೋಡಿಕೊಳ್ಳುವ ಉದ್ದೇಶದಿಂದ ಮುಸಲ್ಮಾನರ ಗುಂಪಿನ ಕಡೆ ನಿಂತ್ಕೊಂಡರು. ॥ ಸೂಪರಿಂಟೆಂಡೆಂಟರು ಅದೇ ಉದ್ದೇಶದಿಂದ ಹಿಂದುಗಳ ಗುಂಪಿನ ಕಡೆ ನಿಂತ್ಕೊಂಡರು.

ಗುಂಡುಗಳು ಒಂದ ಮನೆಗೆ ಸುತ್ತಲೂ ಪೋಲೀಸ್ ನವರು ಕಾವಲಿಟ್ಟಿದ್ದರು. ಅಶ್ಯಕತೆ ಇತ್ತು. ಗುಂಡು ಹಾರಿಸಲ್ಪಟ್ಟ ದಿಸ್ಪಿರೆಕ್ಟ್ ಮ್ಯಾಜಿಸ್ಟ್ರೇಟರಿಗೂ ಪೋಲೀಸಿನ ರಿಗೂ ತಿಳಿದ ಹಾಗೆ ಅವರನ್ನು ಗಮನಕ್ಕೆ ಬಂದುಕೊಳ್ಳಲಿಲ್ಲ. ಆ ರೀತಿ ಕಾವಲಿಡುವುದಕ್ಕೆ ಆ ದಿನ ತಮ್ಮಲ್ಲಿ ಸಾಕಾದಷ್ಟು ಸಿಬ್ಬಂದಿಯಿಲ್ಲವೆಂದೂ, ಮಾರನೇ ದಿನವೂ ಸಹ ಸಾಲದೆಲ್ಲಾ ಕೊಯಿಥಾನೇಂದಿಯುದ್ದಿಂದ ಶಾಂತಿ ಸಮಾಧಾನ ನೆಲಸುವಂತೆ ವರ್ತಿಸಿದು ಮಾಡುವುದಕ್ಕೆ ತಾನು ವಿಶೇಷ ರಾಗಿದ್ದುದರಿಂದ, ಮನೆ ಹತ್ತಿರ ಆಪತ್ತಿನ ಸಮಯದಲ್ಲಿ ಪೋಲೀಸಿನವರು ಬರಲಿಲ್ಲವೆಂದೂ ಹೇಳಿದ್ದಾ ಅದೂ, ಕಡೆಪಕ್ಷ ಮ್ಯಾ॥ ರ್ ಪೋಲೀಸಿನವರು ಬಂದು ಒಡನೆ ಮನೆಗಳ ರಕ್ಷಣೆಗೆ ಹಾಗೆ ಯಾರಾದರೂ ಕೆಲವು ಪೋಲೀಸು ವ್ಯಕ್ತಿಗಳಿಂದ ಮನೆಯ ಸುತ್ತಲೂ ಕಾವಲಿಡಿಸಿ ಪ್ರಜ್ಞೆಯಿಂದ ಯೋಚಿಸಿ ಕಾರ್ಯ ಮಾಡಲಿಲ್ಲವೆಂದೂ ಹೇಳಿದ್ದಾ ಅದೂ ಸರಿಯಲ್ಲ.

ಜೂಲೈ 31 ನೇ ತಾರೀಖಿನ ದಿನ ಗಣಪತಿ ವಿಸರ್ಜನೆಯ ವಿಶೇಷ ಬಂದೋಬಸ್ತಿಗಾಗಿ ಸಾಕಷ್ಟು ಪೋಲೀಸ್ ಸಿಬ್ಬಂದಿಯವರು ಇದ್ದರೆಂದೂ, ಸರ್ಕಾರದವರು ಸಹ ಪೋಲೀಸ್ ಸಿಬ್ಬಂದಿಯನ್ನು ಸಾಕಷ್ಟು ಕೊಟ್ಟಿದ್ದರೆಂದೂ ಹೇಳಿದ್ದಾ ಅದೂ ಸರಿಯಲ್ಲ. ಗಣಪತಿ ವಿಸರ್ಜನೆಯ ದಿನ ಸಾಕಷ್ಟು ಪೋಲೀಸ್ ಸಿಬ್ಬಂದಿಯವರು ಇದ್ದರೆಂಬುದು ನಿಜವಾದರೂ, ಅವರೆಲ್ಲರೂ ಗಣಪತಿ ಮೆರವಣಿಗೆಯ ಬಂದೋಬಸ್ತಿಗಾಗಿ ಮೆರವಣಿಗೆಯ ಜೊತೆಯಲ್ಲಿ ಹೋಗಿದ್ದರು. ಮೆರವಣಿಗೆಯ ಜೊತೆಯಲ್ಲಿ ಹೋಗಿದ್ದ ಪೋಲೀಸರು ಮೆರವಣಿಗೆಯ ಜೊತೆಯಲ್ಲಿಯೇ ಇರಬೇಕಾಗಿತ್ತು. ಅವರು ಮೆರವಣಿಗೆಯ ಜೊತೆಯಲ್ಲಿ ಇರಲಿಲ್ಲ. ಅವರು ಮೆರವಣಿಗೆಯ ಜೊತೆಯಲ್ಲಿ ಇರಲಿಲ್ಲವೆಂಬುದಕ್ಕೆ ಸಾಕ್ಷಿ ಹೇಳಿದವರಲ್ಲಿ ಅನೇಕರು ಕುಡುವಾತು ಕೊಡುವುದಾಗಿ ಹೇಳಿದರು. ಇವರಿಗೆ ಆದೀತಿ ನಿಜವಾತು ಕೊಡಲು ಸಾಕಾಗದಷ್ಟು ಕಾಲವ್ಯವಧಾನವನ್ನು ಕೊಟ್ಟಿದ್ದರೂ ಯಾವ ಯಾವ ಆಧಾರವನ್ನೂ ಕಂಡು ಕೊರಿಸಲಿಲ್ಲ ಈಗಿರುವ ದಿವಾನರನ್ನು ತೆಗೆಸುವುದಕ್ಕಾಗಿ ಏಗಾಧ ಪ್ರಯತ್ನವು ನಡೆಯುತ್ತಿದೆಯೆಂದೂ ನಾವು ನಂಬಲಾರೆವು. ಹಾಗೂ ಸರ್ಕಾರವನ್ನು ಕಲೆಕೆಗಳು ಮಾಡುವುದಕ್ಕಾಗಿ ಯಾವ ಪ್ರಯತ್ನವೂ ನಡೆಯಲಿಲ್ಲ ಮೈಸೂರು ಸರ್ಕಾರದ ಸ್ಥಿತಿ ಈ ಬಗೆಯ ಸಾಹಸಕ್ಕೆ ಸಾಧ್ಯವಾದುದೆಂದು ಯಾವ ಸಂಗಡವರೂ ಭಾವಿಸಲಾರರು.

ಆಯಾತ ಹೃದಯಪ್ರಹಾರ !

(ಶ್ರೀ॥ ಎಚ್. ಎಸ್. ರಾಜಗೋಪಾಲ್‌ರವರಿಂದ)

ನ್ಯಾಯವಿಧಾಯಕ ಸಭೆಯು ರಂಗಸ್ಥಳದಲ್ಲಿ ನಿಂತು ಪ್ರೆಸ್ ಕಾನೂನನ್ನು ರದ್ದುಪಡಿಸುತ್ತೇವೆಂದು ಹೇಳಿದ ಸರ್ಕಾರವು ತನ್ನ ಮಾತಿಗೆ ತಾನೇ ಪುರಸ್ಕಾರ ಕೊಡಬಯಸಿದ್ದಲ್ಲಿ ಅದರಿಂದ ತಿರಸ್ಕಾರವನ್ನು ಬೇರೆ ಏನನ್ನೂ ನಿರೀಕ್ಷಿಸಲು ಅಧಿಕಾರವೇ ಇಲ್ಲ. ಪ್ರೆಸ್ ಕಾನೂನು ಉದ್ದೇಶಗಳೆಗೆ ಮಾತ್ರ ಯೋಗ್ಯವೇ ವಿನಾ ಮತ್ತಾವ್ಯಾವುದಕ್ಕೂ ಯೋಗ್ಯವಲ್ಲ. ಇದನ್ನು ಎಷ್ಟು ಹೇಳಿದರೂ ಕೊಂಚವೇ

ಕೆಜ್ಜೆ ಕೆಜ್ಜೆಗೂ ಅಗಾಧವಾಗಿ ಮೊಸದಿಂದಲೂ ಬೆರೆ ಬೇರೆಯಹರ್ದಾಳಿಂದ ಹೊಸ ಬಿಳಿಯತ್ತಿದ್ದ ಶ್ರೀಮದ್ವೆಂಕಟಕೃಷ್ಣಯ್ಯನವರ ಪ್ರಜಾಸೇವೆಯ ಆಕ್ಷಕತ್ತಿ ಸ್ವರೂಪಗಳಂದ ಪತ್ರಿಕೆಗಳನ್ನು ಈಗಿನ ಸರ್ಕಾರದವರು ನಿಲ್ಲಿಸಿದುವರು ಹೆಜ್ಜೆ ಕೆಜ್ಜೆಗೂ ತಪ್ಪುಗಳನ್ನು ಮಾಡುತ್ತಿರುವ ಕುರ್ಚಿ ಸುಕ್ಷಿಸ್ಟಿಜ್ಞ ಪ್ರಸಿದ್ಧಪಡಿಸಲು ಇಂಗ್ಲೆಂಡಿನ ಪತ್ರಿಕೆಗಳ ಬರೆಗೂ ಓಡಿಹೋದ ನಮ್ಮ ಹೊಟ್ಟೆಪಾಡಿಗೆ ಇದುವರೆಗೆ ಸಮ್ಮನೆ ಮಾನವಿಂದ ಕೂತಿರುತ್ತಿದ್ದಲ್ಲಿ ಸರ್ಕಾರಣಗಳಿಂದ ಕೆಲಸಮಾಡುವ ಮಹಾ ಸರ್ಕಾರವೂ ಈ ವಿಧವಾದ ಹುಮಾರ್ಗಕ್ಕೆ ಬೀಳುವುದಿಲ್ಲ ಕಾರಣಗಳನ್ನು ಸ್ಪಷ್ಟಪಡಿಸದೆ ನ್ಯಾಯಮಾರ್ಗದಿಂದ ಪ್ರವೇಶಿಸದ ಇರುವುಗು ಸರ್ಕಾರದ ದಾರ್ಢ್ಯವನ್ನೇ ಪ್ರಕಾಶಪಡಿಸುತ್ತದೆ.

ತಳ್ಳಿಕಿನಿ ದ ಮೆಕಾರ್ಥಿನಿಸುತ್ತಾ, ಹುಡುಕಿತ್ತಾ ಹೊಡೆಯಲೇ ಹಲೇ ಮೆಟ್ಟಗಳಂದಲೇ ತಲೆಯನ್ನು ತಟ್ಟುವ ಪತ್ರಿಕೆಯ ಪತ್ರಿಕೆಗಳ ರುಜೆಯನ್ನೇ ಆಹ್ವಾನಿಸುವ ರೀತಿಯ ಸಂಸ್ಥೆಗಳ ಸರ್ಕಾರಗಳ ಹೊಟ್ಟೆಗೆ ಬೀಳಾಭಿಮಾನದಿಂದ ಹುಟ್ಟುವ ಪೈಮಸುಧರ ಮುದ್ದಿನ ಪಿಶಾಚಿಯಂತೆ ಹೇಗೆ ಹೊಕ್ಕೀತು? ಸಮ್ಮ ಸರ್ಕಾರಕ್ಕೆ ಹಿತಚಿಂತನೆಯಿದರೆ ಇನ್ನು ತಾತಯ್ಯನವರಿಗಿಂತ ಹೆಚ್ಚಾಗಿ ಮಾಡಬಲ್ಲವರಾರು? ಗಿಣಿಗೆ ಪೆಳಿದಂತೆ ಬೇಳೆ ಹೇಳಿ ಮುಯಿಕರಾಗಿರುವರು! ಈ ಜೀಕಿಜೆಗಾಗಿ ತುಂಬಾ ಹಣ್ಣಾಗಿ ಬಿಟ್ಟುರು ಎಷ್ಟೆಂದು ಹೇಳ್ಳಾರು?

ಪತ್ರಿಕಾಚಾಲಕರಲ್ಲಿ ಶ್ರೀ॥ ವೆಂಕಟಕೃಷ್ಣಯ್ಯನವರನ್ನು ಸಂಸ್ಥಾಪಕರೆಂದೂ ಪಿತಾಮಹರೆಂದೇ ಭಾವಿಸುತ್ತಾರೆ. ಈ ಮಾತನ್ನು ಬಾಯ್ದೆರೆದ ವೆಂಕಟೇತರ ಕರಾರಾ ನಮ್ಮ ಪತ್ರಿಕಾಚಾಲಕರಲ್ಲಿರುವರೆಂದು ನಾನು ನಂಬುವುದಿಲ್ಲ. ಇಂದು ನಮ್ಮ ಸಂಸ್ಥಾನದಲ್ಲಿರುವ ಪ್ರತಿಯೊಂದು ಪತ್ರಿಕೆಗೂ ತಾತಯ್ಯನವರ ವಂಶದ್ದೇ ಆ ಜೀವದಿಂದ ಬೆಳೆದುರುವುದೇ ಅವರ ಉದಾರದಿಂದ ಉದ್ಭವಿಸಿದ ವುದ್ದೇಶ ವೆಂಕಟ ವೈದ್ಧಪಿತಾಮಹರನ್ನೇ ನ್ಯಾಯವ್ಯಭಿಚಾರರೆಂದರೆ, ನಿಸ್ಸಂದೇಹವಾಗಿಯೂ ಆ ವಂಶಕ್ಕೆ ವಂಶವೇ ಹೀನಸುಳಿಯಿಂದ ಬೆಳೆದುದೆಂದಾಗುವುದು ಅವರು ತಪ್ಪುತಸ್ಥರಾದರೆ ಎಲ್ಲರೂ ತಪ್ಪುತಸ್ಥರಲ್ಲರೇ.

ಈ ರೀತಿಯಾದ ಕುಠಿಣ ಅನಾಗರಿಕ ಗದಾಪ್ರಹಾರವು ನಾಗರಿಕ ದೇಶಗಳಲ್ಲೆಲ್ಲೂ ಔಷಧಿಗೂ ದೊರೆಯಲಾರದು ಅಂತಹುದಕ್ಕೆ ಮೈಸೂರು ದೇಶವು ಪಾತ್ರವಾಗಿ ಪರಿಣಮಿಸುವುದೆಂದರೆ ದೇವರೇ ಗತಿ! ಸುತ್ತಿದೆಯೆಂದೂ ಆ ಸಂಸ್ಥೆಯನ್ನು ಈ ಗಿರುವ ಸರ್ಕಾರವನ್ನು ತೆಗೆಸಿ ಹಾಕಿ ಸಾಧ್ಯವಾದರೆ ಈಗಿರುವ ರಾಜ್ಯಾಡಳಿತ ಕ್ರಮವನ್ನು ಬದಲಾಯಿಸಬೇಕೆಂದು ಸನ್ಮಾನ ನಡೆಸುತ್ತಿದ್ದಾರೆಂದೂ ಹೇಳಲ್ಪಟ್ಟಿದೆ. ಈ ಹೇಳಿಕೆಗಳನ್ನು ಗುಪ್ತವಾಗಿ ತೆಗೆದುಕೊಳ್ಳಲಾಯಿತು. ಈ ವಿಚಾರವಾಗಿ ಸಾಕ್ಷಿ ಹೇಳಿದವರಲ್ಲಿ ಅನೇಕರು ಕುಡುವಾತು ಕೊಡುವುದಾಗಿ ಹೇಳಿದರು. ಇವರಿಗೆ ಆದೀತಿ ನಿಜವಾತು ಕೊಡಲು ಸಾಕಾಗದಷ್ಟು ಕಾಲವ್ಯವಧಾನವನ್ನು ಕೊಟ್ಟಿದ್ದರೂ ಯಾವ ಯಾವ ಆಧಾರವನ್ನೂ ಕಂಡು ಕೊರಿಸಲಿಲ್ಲ ಈಗಿರುವ ದಿವಾನರನ್ನು ತೆಗೆಸುವುದಕ್ಕಾಗಿ ಏಗಾಧ ಪ್ರಯತ್ನವು ನಡೆಯುತ್ತಿದೆಯೆಂದೂ ನಾವು ನಂಬಲಾರೆವು. ಹಾಗೂ ಸರ್ಕಾರವನ್ನು ಕಲೆಕೆಗಳು ಮಾಡುವುದಕ್ಕಾಗಿ ಯಾವ ಪ್ರಯತ್ನವೂ ನಡೆಯಲಿಲ್ಲ ಮೈಸೂರು ಸರ್ಕಾರದ ಸ್ಥಿತಿ ಈ ಬಗೆಯ ಸಾಹಸಕ್ಕೆ ಸಾಧ್ಯವಾದುದೆಂದು ಯಾವ ಸಂಗಡವರೂ ಭಾವಿಸಲಾರರು.

ಅಖಿಲಭಾರತ ಬ್ರಾಹ್ಮಣ ಮಹಾ ಸಭೆ

—೦—

ಈ ಸಭೆಯ ವಾರ್ಷಿಕ ಅಧಿವೇಶನವು ಡಿಸೆಂಬರ್ ೨೬ನೇ ತಾರೀಖಿನಲ್ಲಿ ಸಡೆದು ಮೂರು ದಿವಸಗಳಲ್ಲಿ ಬಹಳ ವಿಚಾರ ಸಭೆಯು ನಡೆಯಿತು. ವಿಚಾರ ಸಭೆಗೆ ದಿಗ್ದಂತಿಗಳಾದ 3 ಸಾವಿರ ಜನ ಪಂಡಿತೋತ್ತಮರು ದಯಮಾಡಿಸಿದ್ದರು. ಮಹಾ ಸಭೆಗೆ 20 ಸಾವಿರ ಜನಗಳು ದಯಮಾಡಿಸಿದ್ದರು. ಸೃಷ್ಟಿ, ಸ್ಥಿತಿ ಪ್ರಳಯಗಳಿಗೆ ಮುಖ್ಯ ಕಾರಣಗಳಾದ ವೇದಶಾಸ್ತ್ರ ಪುರಾಣೇತಿಹಾಸಗಳಲ್ಲಿರತಕ್ಕ ವಿಧಿನಿಷೇದ ವಚನಗಳೆಲ್ಲಾ ಪರ್ಯಾಲೋಚನೆಯಲ್ಲಿರುತ್ತವೆ. ಕಾಲದೇಶ ವರ್ತಮಾನಗಳಿಗನುಸಾರವಾಗಿ ನಡೆಯಬೇಕಾದ ತಿದ್ದುಪಾಟುಗಳು ಪರ್ಯಾಲೋಚನೆಯಲ್ಲಿರುತ್ತವೆ. ಇದರ ಫಲಗಳು ಮುಂದಿನ ಸಮ್ಮೇಳನದಲ್ಲಿ ಪ್ರಕಟವಾಗುವವು. ಸಮ್ಮೇಳನದ ಅಧ್ಯಕ್ಷರಾದ ಮಹಾಮಹೋಪಾಧ್ಯಾಯ ವೇದಮೂರ್ತಿ ಬ್ರಹ್ಮಶ್ರೀ ವಿರೂಪಾಕ್ಷಶಾಸ್ತ್ರಿಗಳನ್ನು ಮಹಾರಾಜಕಾಲೇಜು ಸಂಸ್ಕೃತ ಪ್ರೊಫೆಸರರಾಗಿದ್ದ ಶ್ರೀನಿವಾಸಾಚಾರ್ಯ ಎಂ ಎ. ರವರನ್ನು ಕಳುಹಿಸಿದ್ದರು. ಮಾ॥ ಶ್ರೀನಿವಾಸಾಚಾರ್ಯರವರು ಅಲ್ಲಿ ನಡೆದ ವಿಚ್ಛಮೋಸಗಳನ್ನೆಲ್ಲಾ ಬರೆದುಕೊಂಡು ಬಂದಿರುತ್ತಾರೆ ಈ ಮಹಾ ಸಮ್ಮೇಳನದ ಪ್ರೊಸೀಡಿಂಗ್ಸ್ ಸಂಸ್ಕೃತದಲ್ಲಿರುವುದು. ಸದರಿ ಪ್ರೊಸೀಡಿಂಗ್ಸ್‌ನ್ನು ಈರಿಸಿ ಈ ತಿಂಗಳು 13 ನೇ ತಾ॥ ಸಾಯಂಕಾಲ ಶ್ರೀಮನ್ಮಹಾರಾಜಸಂಸ್ಕೃತ ಪಾಠಶಾಲೆಯಲ್ಲಿ ಮಾ॥ ಶ್ರೀನಿವಾಸಾಚಾರ್ಯರವರು ಸುಮಾರು 3 ಗಂಟೆಗಳ ಕಾಲ ಒಂದು ಉಪನ್ಯಾಸವನ್ನು ಮಾಡಿದರು. ವೇ॥ ಮಹಾಮಹೋಪಾಧ್ಯಾಯ ಪಂಡಿತ ವಿರೂಪಾಕ್ಷಶಾಸ್ತ್ರಿಗಳವರು ಅಧ್ಯಕ್ಷಪದವಿಯನ್ನು ವಹಿಸಿ, ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಇವರಿಬ್ಬರ ಉಪನ್ಯಾಸವೂ ಲೋಕೋತ್ತರವಾಗಿತ್ತು. ಎಲ್ಲರೂ ಇಂಥವರಿಂದ ಸಾಧನಗಳನ್ನು ಮಾಡಿಕೊಳ್ಳಬೇಕಾದರೆ ಹೇಗೆ ನಡೆದುಕೊಳ್ಳಬೇಕೆಂಬ ಅವಕ್ಕನುರೂಪವಾದ ವಿಧಿ

ಉಳಿದದ್ದು

Reg. No. M. 1697

ವಾ.ಚಂ.೩೦-೨-೦



18-2-34

ವಾ.ಚಂ.೩೦-೨-೦

ವರ್ಷ ೧೨ ಬೆಂಗಳೂರು ನಗರ—ಫೆಬ್ರವರಿ ೧೮ನೇ ಭಾನುವಾರ ೧೯೩೪ ಸಂಚಿಕೆ ೨೦

ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವ

VISVAKARNATAKA
ವಿಶ್ವಕರ್ನಾಟಕ
ವಿಶ್ವಕರ್ನಾಟಕ
ಕಾಮ್ಮೀಯ ವಾರ ಪತ್ರಿಕೆ

ಸಂಪಾದಕೀಯ ಸೂಚನೆಗಳು

ನರೇಂದ್ರ ಸಂರಕ್ಷಣಾ ಶಾಸನ

ವಾಚಕರ ಗಮನವನ್ನು ಈ ವಿಚಾರದ ಕಡೆಗೆ ಕಳೆದವಾರವೇ ಎಳೆದಿದ್ದೇವೆ. ದೆಹಲಿಯ ಶಾಸನ ಸಭೆಯಲ್ಲಿ ಈ ಮಸೂದೆಯು ಜರ್ಚೆಯಾಗಿ 'ವಿಮರ್ಶಾ ಸಮಿತಿ'ಗೆ ಹೋಯಿತು. ಅಲ್ಲಿ ಕೊಂಚಮಟ್ಟಿಗೆ ಪರಿವರ್ತನೆಹೊಂದಿ ಮತ್ತೆ ಸಭೆಯ ಮುಂದೆ ಬಂತು. ಅಲ್ಲಾದ ಅಲ್ಪ ಸ್ವಲ್ಪ ಪದ, ವಾಕ್ಯ ಪರಿವರ್ತನೆಗಳು ಸಹಾ ಮೂಲ ಮಸೂದೆಯ ತೀಕ್ಷ್ಣತೆಯನ್ನಾಗಲಿ, ನಿಷ್ಠುರತೆಯನ್ನಾಗಲಿ ಕಡಿಮೆಮಾಡಿಲ್ಲ. ಅಲ್ಲದೆ ಶ್ರೇಯುತರುಗಳಾದ ಸರ್ ಅಬ್ದುರ್‌ರಹೀಂ, ಜಗನ್ನಾಥ ಅಗರ್ವಾಲಾ, ಕೆ. ಸಿ. ನಿಯೋಗಿ, ಬಿ.ಎಲ್. ಸಾಟೇಲ್ ಮುಂತಾದವರು ತಮ್ಮ ವಿರುದ್ಧಾಭಿಪ್ರಾಯವನ್ನು ಬಲಹದ ಮೂಲಕ ತಿಳಿಸಿದ್ದಾರೆ.

ಸಾವಿಲ್ಲಿ ಮುಖ್ಯವಾಗಿ ಹೇಳಬೇಕಾಗಿರುವುದಿಷ್ಟೆ:—

(೧) ಇಂಡಿಯಾ ಸರ್ಕಾರದವರು ೧೯೩೫ರಲ್ಲಿ 'ನರೇಂದ್ರ ಸಂರಕ್ಷಣಾ ಶಾಸನ'ವೊಂದನ್ನು ರೂಪುಗೊಳಿಸಿ ಬಕ್ಕಳಿಕೆಗೇರಿಸಿದರು. ಆ ಶಾಸನಜೇಕಂದು ಯಾವ ರಾಜರು ಆಗ ಕೇಳಿದರು? ಹೋಗಲಿ ಆ ಶಾಸನದ ಪ್ರಯೋಗವು ಈ ೧೭ ವರ್ಷಗಳಲ್ಲಿ ಎಷ್ಟುಸಾರೆಯಾಗಿದೆ? ಮೂರು ನಾಲ್ಕೆಗಿಂತ ಅಧಿಕವಿಲ್ಲವೆಂದು ನಮ್ಮ ತಿಳುವಳಿಕೆ. ಇದರಿಂದಲೇ ಅದರ ಅಸಾವಶ್ಯಕತೆಯು ಸಿದ್ಧವಾಗುತ್ತದೆ.

(೨) ಆ ಶಾಸನವಿರುವಾಗ ಮತ್ತೆ ಈ ೧೯೩೫ನೆಯ ವರ್ಷದಲ್ಲಿ 'ನರೇಂದ್ರ ಸಂರಕ್ಷಣಾ ತಾಸನ'ದ ಅವಶ್ಯಕತೆಯೇನು? ಇದರ ಗುಟ್ಟೇ ತಿಳಿಯುವಂತಿಲ್ಲ. ಜೋಗಲಿ. ಈ ಸಂದರ್ಭದಲ್ಲಾದರೂ 'ಇಂತಿಂತಹ ಸಂಸ್ಥಾನಿಕರು ಇಂತಹ ಶಾಸನ ಬೇಕೆಂದರು' ಎಂದು ಸರ್ ಹ್ಯಾರಿ ಹೇಗರು ಹೇಳಬಲ್ಲರೆ?

(೩) ಶ್ರೇಷ್ಠ ಸಂಸ್ಥಾನಗಳು, ಸುವ್ಯವಸ್ಥಿತ ಆಡಳಿತವೇರ್ಪಡಿಸಿರುವ ಸಂಸ್ಥಾನಗಳು ಪತ್ರಿಕೆಗಳ ಕ್ಷುದ್ರ ಖಂಡನೆಯಿಂದ ತಾವೇ ರಕ್ಷಿಸಿಕೊಳ್ಳಲು ಶಕ್ತವಾಗಿವೆ ಇನ್ನು ಸಣ್ಣ ಸಣ್ಣ ಸಂಸ್ಥಾನಗಳ ಮಾತು. ಆಗಾಗ ಕೊಂಚ ಕಹಿಯಾದ ಟೀಕೆಗಳಾಗುತ್ತಿದ್ದರೆ ಸಂಸ್ಥಾನಗಳ ಮೈಗೆ ಒಟ್ಟೆಯದೆಂದು ಅನ್ನಿಸುತ್ತದೆ ಭರತಖಂಡದ ಪತ್ರಿಕೆಗಳು ಟೀಕೆ ಮಾಡಿದರೆ ಈಗದಾಪ್ರಹಾರ ಮಾಡಬಹುದು. ಆದರೆ ವಿದೇಶೀಯ ಪತ್ರಿಕೆಗಳಲ್ಲಿ ಹಸಿ ಹಸಿಯಾದ ಟೀಕೆಗಳು ಬರುವುವಲ್ಲ! ಅವುಗಳಿಂದ ನರೇಂದ್ರನನ್ನು ಉದ್ಧಾರ ಮಾಡುವ ಅವಶ್ಯಕತೆ ಇಲ್ಲವೊ?

(೪) ಈ ೧೦–೧೫ ವರ್ಷಗಳಲ್ಲಿ ಇಂಡಿಯಾ ಸರ್ಕಾರದವರು ಸಣ್ಣ ಪಣ್ಣ ನರೇಂದ್ರರನ್ನು ಕಿವಿ ಹಿಂಡಿರುವಷ್ಟು ಮತ್ತೆ ಯಾವಾಗಲೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಆದರಲ್ಲೂ ಈ ೫–೬ ವರ್ಷಗಳಿಂದ ಒಂದರ ಹಿಂದೊಂದರಂತೆ ಸಂಸ್ಥಾನದ ಬ್ರಹ್ಮಾಂಡ ಪುರಾಣಗಳನ್ನು 'ಪೊಲಿಟಿಕಲ್' ಶಾಖೆಯವರು ಹೊರಗಿಡುತ್ತಿದ್ದಾರೆ. ಇದು ಏನನ್ನು ಸೂಚಿಸುತ್ತದೆ? ಪತ್ರಿಕೆಗಳಲ್ಲಿ ಆಗಾಗ ಜುರುಕಾಗಿ ಟೀಕೆಗಳಾಗುತ್ತಿದ್ದರೆ, ವೇದಿಕೆಗಳ ಮೇಲೆ ಸಾರ್ವಜನಿಕ ವ್ಯಾಖ್ಯಾನಗಳಾಗುತ್ತಿದ್ದರೆ, ನರೇಂದ್ರರು ಕೊಂಚ ಹದ್ದಿನಲ್ಲಿರುವ ಸಂಭವವಿದೆ. ಇಂಡಿಯಾ ಸರ್ಕಾರದವರೂ ಸಹ ಮೇಲಿಂದ ಮೇಲೆ ಕೈಮಾಡುವ ಅಪ್ರಿಯ ಪ್ರಸಂಗಗಳೂ ಕಡಿಮೆಯಾದಾವು.

(೫) ೧೯೩೫ರಲ್ಲಿ ಇಂಡಿಯಾ ಸರ್ಕಾರದವರು ಸತ್ಯಾಗ್ರಹ ಮತ್ತು ಶಾಸನನಿರೋಧ ಚಳವಳಿ ನಿಗ್ರಹಕ್ಕಾಗಿ ಇನೆಯೆ ಪತ್ರಿಕಾ ಶಾಸನವೊಂದನ್ನು ಬಕ್ಕಳಿಕೆಗೇರಿಸಿದರು. ಆ ಶಾಸನದಲ್ಲಿ ಸಹಾ ಸಂಸ್ಥಾನಿಕರ ನುತ್ತು ಅವರ ಆಡಳಿತಗಳ ರಕ್ಷಣೆಗೆ ಅನಕಾಶವಿದೆ. ಆಂದಮೇಲೆ ಪ್ರತ್ಯೇಕವಾಗಿ ಮತ್ತೊಂದು ಶಾಸನಮಾಡಿ, ಪತ್ರಿಕೆಗಳನ್ನು ಮಟ್ಟ ಹಾಕಬೇಕೆ? ಈಗಿನ ಶಾಸನವಾದರೂ ಮೇಲಿನ ಶಾಸನದ ಮರಿ. ಆ ಶಾಸನ ಜೇಕಾದಾಗ ಬ್ರಿಟಿಷ್ ಹಿಂದೂಸ್ಥಾನದ ಪರಿಸ್ಥಿತಿಯು ಉಗ್ರವಾಗಿತ್ತು. ಈಗ ಅಲ್ಲೇನಿಲ್ಲ. ಇನ್ನು ಸಂಸ್ಥಾನಗಳಲ್ಲಿ ಏನಿದ್ದೀತು? ಹಾಗಾದರೆ ಈಗ ಸಂಸ್ಥಾನಗಳಲ್ಲಿ ಇಂತಹ ಶಾಸನವು ಯಾತಕ್ಕೆ ಬೇಕು?

(೬) ಪತ್ರಿಕೆಗಳ ಪಾಲಿಗೀ ಶಾಸನವು ನಿಜವಾಗಿಯೂ ಮೃತ್ಯುವಿನಂತಿದೆಯೆಂಬುದರಲ್ಲಿ ಸಂದೇಹವಿಲ್ಲವೆಂದು ಭಾರತೀಯ ಪ್ರಮುಖರನೇಕರು ನಿಸ್ಸಂದೇಹವಾಗಿ ಹೇಳಿದ್ದಾರೆ. ಅದರ ಜತೆಗೆ ಈ ಶಾಸನವು 'ಕ್ರಿಮಿನಲ್ ಪ್ರೊಸೀಜರ್ ಕೋಡಿ'ನಲ್ಲಿಯೆಯ ವಿಧಿಯ ಅಧಿಕಾರಗಳನ್ನೆಲ್ಲ ಹೊಂದಿ 'ಮ್ಯಾಜಿಸ್ಟ್ರೇಟರು'ಗಳ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ. ಗಳಿಳನೆಯ ವಿಧಿಯ ಕ್ರಮದಲ್ಲಾದರೂ ನ್ಯಾಯ ವಿಚಾರಣೆಯ ವಾಸನೆಯಿದೆ ಇದರಲ್ಲಿ ಅದೂ ಇಲ್ಲ. ಶುದ್ಧ ಪ್ರಭುತ್ವ ಪ್ರಯೋಗವಷ್ಟೆ. ಇದಕ್ಕೆ ಯಾವ ನ್ಯಾಯಸ್ಥಾನದ ಪರಿಹಾರವೂ ಕಾಣಬರುವುದಿಲ್ಲ.

(೭) ಇದನ್ನು ಸರ್ ಹ್ಯಾರಿ ಹೇಗರು ಸಹಾ ಏನೂ ಮರೆಮಾಚಿಲ್ಲ. ೧೯೩೫ನೆಯ ವರ್ಷದ ನರೇಂದ್ರ ಸಂರಕ್ಷಣಾ ಶಾಸನಕ್ಕೆ ಕೊಂಚ ನ್ಯಾಯ ವಿಚಾರಣೆಯ ವಾಸನೆಯಾದರೂ ಇತ್ತು. ೧೯೩೫ನೆಯ ಈ ಶಾಸನವು ಪೂರ್ಣ ಪ್ರಭುತ್ವ ಬಾಣವಾಗಿದೆಯಲ್ಲ' ಎಂದು ಕೇಳಿದರೆ ಸರ್ ಹ್ಯಾರಿಹೇಗರು 'ಹೌದು ಅದು ನಿಜ. ನ್ಯಾಯ ವಿಚಾರಣೆಗೆ ಒಳಪಡಿಸಿದರೆ ವೃಥಾ ಸಾವಕಾಶವಾಗುತ್ತದೆ. ಕೋರ್ಟುಗಳು ಸರಿಯಾದ ತಿಕ್ಕೆಯನ್ನು ವಿಧಿಸುವುದಿಲ್ಲ. ಇದರಮೇಲೆ ಹಿತವಲ್ಲದ ಅನೇಕ ಆಪಾದನೆಗಳು ಪ್ರಕಟವಾಗಿ ಬಯಲಿಗೆ ಬರುತ್ತವೆ' ಇತ್ಯಾದಿ ಇತ್ಯಾದಿಯಾಗಿ ಉತ್ತರ ಕೊಡುತ್ತಾರೆ.

ಹಾಗಾದರೆ 'ಶಾಸನಬದ್ಧವಾಗಿ ಸ್ಥಾಪಿತವಾದ ಸರಕಾರ. ಶಾಸನದ ಪರಮಪವಿತ್ರತೆ ಮತ್ತು ಪರಮಪ್ರಭುತ್ವ ತತ್ವಕ್ಕನುಸಾರವಾದ ಸರ್ಕಾರ'ವೆಂದು ಹೇಳಿಕೊಳ್ಳಲೇಕೆ? 'ಇದು ಶಾಸನ ಪ್ರಭುತ್ವವಲ್ಲ. ಇದು ಸ್ವೇಚ್ಛಾ ಪ್ರಭುತ್ವ' ಎಂದು ಒಂದು ಮಾತಿನಲ್ಲಿ ಹೇಳಿಬಿಟ್ಟರೆ ಜಗಳವೇ ಇಲ್ಲವಲ್ಲ.

ಹಣದ ದುರ್ವಿನಿಯೋಗ

ಬೋರೇಗೌಡನಪಾಳ್ಯದ ಮುನಿಸಿಪಾಲಿಟಿಯಲ್ಲಿ ಅಧಿಕಾರಿಗಳು ಒಬ್ಬರು ಎಷ್ಟೇ ಬೇಡವೆಂದರೂ ಕೇಳದೆ ಒಬ್ಬರೂ ತಮ್ಮ ಮನೆಗಳಲ್ಲಿ ತಮಗೆ ಇಷ್ಟ ಬಂದಾಗ ಬೇಕಾದಾಗ ತೋಚಿದಂತೆ ಮಾಡಿಕೊಳ್ಳುವ ಸಾರ್ವಜನಿಕ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ.

ಮೈಸೂರು ಸರ್ಕಾರದ ಅಧಿಕಾರಿಗಳಲ್ಲೂ. ಇದೊಂದೇ ಅಲ್ಲ, ಈ ಬಗೆಯ ಹಣಕಾಸಿನ ವ್ಯವಹಾರದಲ್ಲಿ, ಅಷ್ಟೇಕೆಯು ಕಡಿಮೆಯೆಂದು ಪ್ರಭುತ್ವ ಪರುಗಳಿಂದಲೇ ಸ್ಪಷ್ಟವಾಗುತ್ತಿದೆ. ಅಧಿಕಾರಿಗಳಿಗೆ ಸರ್ಕಾರದ ಹಣದ ವಿಷ್ಟದ ಮೂಲಭೂತವಾದ ತತ್ವಗಳ ತಿಳುವಳಿಕೆಯೇ ಜಿನ್ನಾಗಿ ಇಂಟಿಗಿಲ್ಲ. ಸರ್ಕಾರದವರಾದರೂ ವಿಷ್ಟವಾಗುವ ವ್ಯವಹಾರಕ್ಕೆ ಒಂದುರೂಪು ಕೊಟ್ಟಿದ್ದಾರೆ ಹೊರವು ವಿಧಿಗಳನ್ನು ಕ್ರೋಢೀಕರಿಸಿದ್ದಾರೆ ಕೈಪಿಡಿಗಳಂತೆ (ಪ್ರತಿಯೊಂದು ಆಡಳಿತ ಶಾಖೆಗೂ) ಈ ವಿಧಿಗಳನ್ನು ಹಂಚಿದ್ದಾರೆ ಇದರಮೇಲೆ 'ಆಡಿಟರ್' ಬೇರೆ ಸತಾಯಿಸುತ್ತದೆ. ಇಷ್ಟಿದ್ದೂ ಅಧಿಕಾರಿಗಳು ಮೇಲಿರುವಮೇಲೆ ಹಣವನ್ನು ದುರ್ವಿನಿಯೋಗ ಮಾಡುತ್ತಿದ್ದಾರೆ.

ರೆವಿನ್ಯೂ, ಕೃಷಿಕಾರಿಕೆ, ಅರಣ್ಯ, ತಿಕ್ಷಣ ಮರಾಮತ್, ಪೈಲ್ಸ್, ಪೊಲೀಟಿಕಲ್, ಪ್ರವಾಸಾಯ, ಪೋಲೀಸ್, ವೈದ್ಯ ಇದೇ ಮುಂತಾದ ಶಾಖೆಗಳಲ್ಲಿ ಪತ್ರಾತೀತ ನೂರಾರು ಉದಾಹರಣೆಗಳನ್ನು ಕೊಡಬಹುದು. ಇಂತಹ ತಪ್ಪು ಮಾಡಿದ್ದೇರೆಂದು ಅಧಿಕಾರಿಗಳಿಗೆ ಮೇಲಿಂದ ಮೇಲೆ ತೋರಿಸುತ್ತಿದ್ದರೂ ತಿದ್ದಿಕೊಳ್ಳದೇ ಇರುವ ಉದಾಹರಣೆಗಳೆಷ್ಟೋ ಇವೆ, ಅಧಿಕಾರವಿಲ್ಲದೆ ಹಣ ವೆಚ್ಚ ಮಾಡುವುದು ಎಲ್ಲ ವಿಧಿಗಳನ್ನು ಅತಿಕ್ರಮಿಸಿ ಹಣ ಕರ್ಚು ಯುವುದು. ಈವೆಚ್ಚಕ್ಕೆ ಆಧಾರಗಳೇನೆಂದು ಕೇಳಿದರೆ 'ಆ ಕಡತವನ್ನೆಲ್ಲ ಗೆದ್ದಲು ತಿಂದಿತು!' ಎಂದುತ್ತರ ಕೊಡುವುದು. 'ಎರಡು ಸಲ ಸಂಬಳವನ್ನೇಕೆ ಕೇಳಿದಿರಿ' ಅಂದರೆ 'ತಪ್ಪಾಯಿತು' ಅನ್ನುವುದು. 'ಏನು ಸಾವಿರಾರು ರೂಪಾಯಿಗಳು ಅಪಹಾರವಾಗಿ ಹೋಗಿದೆಯಲ್ಲಾ! ಎಲ್ಲಿ ನೋಡುವ' ಎಂದು ಎದುರಿಗೆ ಹೋದರೆ ಆತ್ಮಹತ್ಯೆ ಮಾಡಿಕೊಳ್ಳುವುದು!! ಇದು ಬಲವಾಗುತ್ತಿದೆ.

ಎಂಟುಮೂಲೆಗಳಿಂದ

ಬೆಂಗಳೂರು

ಮೈಸೂರು ಸಂಸ್ಥಾನದ ವಾಣಿಜ್ಯ ಪಾಲಕರಾದ ಶ್ರೀ ರಂಗನಾಥರಾವ್ ಸಾಹೇಬರು ಈ ತಿಂಗಳು ಲಂಡನ್ನಿಗೆ ಹೋಗುವರು. ೧೫ನೇ ತಾ|| ಸಂಜೆ ಬೆಂಗಳೂರಿನ ವಾಣಿಜ್ಯ ಭವನದಲ್ಲಿ ಶ್ರೀ ರಂಗನಾಥರಾವ್ ಸಾಹೇಬರು ನವದಸ್ಯರೊಂದಿಗೆ ಮೈಸೂರು ವ್ಯಾಪಾರ ಸಾಪಾರ ಕುರಿತು ಚರ್ಚೆ ಮಾಡಿದರು

೨೬-೨-೩೪ ರಿಂದ ವ್ಯವಸಾಯ ಶಾಖಾಧಿಕಾರಿಗಳಾದ ಶ್ರೀ ಕೂಲ್ಕುನ್ನಿಯರಿಗೆ ೩೩ ದಿನಗಳ ರಜ. ಅನಂತರ ನಿವೃತ್ತರಾಗಲು ಅನುಮತಿ ದೊರಕಿದೆ ಅವರ ಸ್ಥಾನಕ್ಕೆ ಶ್ರೀ ಯಜ್ಞನಾರಣಯ್ಯರವರು ನೇಮಕ ಮಾಡಲ್ಪಟ್ಟಿದ್ದಾರೆ.

ಮಹಾ ಶಿವರಾತ್ರಿಯ ದಿನ ಬೆಂಗಳೂರು ಗೌರಿ ಸಾಳ್ಯದಲ್ಲಿ ಹರಿಜನ ಶಾಲೆಯಲ್ಲಿ ಹರಿಭಜನೆಯು ನಡೆಯಿತು

ಮೈಸೂರು ವಿದ್ಯಾಶಾಖೆಯ ಪಂಡಿತರ ಸಂಘವೊಂದನ್ನು ಸ್ಥಾಪಿಸುವುದರ ಸಲುವಾಗಿ ೧೧ನೇ ತಾ|| ದಿನ ಕೋಟೆ ಹೈ ಸ್ಕೂಲಿನಲ್ಲಿ ಶ್ರೀ ಡಿ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಅನೇಕ ಉಪನ್ಯಾಸಗಳಾದುವು. ಶ್ರೀ ಎ ಎಸ್ ಶುಬ್ಬರಾಯರವರು ಸಭೆಯ ಅಧ್ಯಕ್ಷಸ್ಥಾನಕ್ಕೆ ಏರಿಸಲ್ಪಟ್ಟರು ಶ್ರೀ ವೆಂಕಟರಾಮಯ್ಯನವರು ಉಪಾಧ್ಯಕ್ಷರಾದರು ಶ್ರೀ ಹನುಮಂತಪ್ಪ ಮತ್ತು ಶ್ರೀ ಜಂಗಲರಾಯ ಇವರುಗಳು ಕಾರ್ಯದರ್ಶಿಗಳಾದರು. ಸಭೆಗೆ ೮೦ ಜನ ಸದಸ್ಯರ ಚುನಾವಣೆಯಾಯಿತು

ಹೊಸಕೋಟೆ ಪರಸ್ಪರ ಸಹಾಯ ಸಂಘದವರು ಬಿಹಾರ್ ಭೂಕಂಪದ ಪರಿಹಾರ ನಿಧಿಗೆ ಸಂಘದ ನಿಧಿಯಿಂದ ೩೫ ರೂಗಳನ್ನು ಕೊಡುವುದಾಗಿ ನಿಶ್ಚಯ ಮಾಡಿದ್ದಾರೆ ೧೦ನೇ ತಾ|| ದಿನ ದೀವಾನ್ ಸಂಸ್ಥಾನದ ಮಹಾರಾಜರು ಹರಿವಾರದೊಂದಿಗೆ ಬಂದು ಸಂಘದ ಕಾರ್ಯಕಲಾಪಗಳನ್ನು ನೋಡಿ ಸಂತೋಷಪಟ್ಟು ಹೋದರು.

ಮೈಸೂರು ಬ್ಯಾಂಕಿನವರು ಬಿಹಾರ ಭೂಕಂಪ ಪರಿಹಾರ ನಿಧಿಗೆ ೫೦೦೦ ರೂಗಳನ್ನು ಕೊಟ್ಟಿರುತ್ತಾರೆ.

ಮೈಸೂರಿಯರ ಬಿಹಾರ ಭೂಕಂಪ ಪರಿಹಾರ ನಿಧಿಗೆ ಹಣವನ್ನು ಕೊಡಲಿಚ್ಛಿಸುವ ನಹನೀಯರಿಂದ ನೊಟಲುಗಳನ್ನು ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಖಜಾನೆಗಳೂ ತೆಗೆದುಕೊಳ್ಳಬೇಕೆಂದು ಸರಕಾರದವರು ಜಿಜ್ಞೆ ಮಾಡಿದ್ದಾರೆ.

ಬೆಂಗಳೂರು ಪೌರಸಭೆಯವರು ಬಿಹಾರಿನಲ್ಲಿ ನೊಂದವರ ಸಹಾಯಾರ್ಥವಾಗಿ ಒಂದು ನಿಧಿಯನ್ನು ಸ್ಥಾಪಿಸಿ ಎಲ್ಲರೂ ಶಕ್ತಿ ಮೀರಿ ಸಹಾಯ ಮಾಡಬೇಕೆಂದು ಕೋರಿದ್ದಾರೆ ರಜ ದಿನಗಳನ್ನಿದ ಇತರ ದಿನಗಳಲ್ಲಿ ಪೌರಸಭಾ ಕಚೇರಿಯಲ್ಲಿ ಹಣವನ್ನು ಸ್ವೀಕರಿಸುವರು.

೨೫ನೇ ತಾ|| ದಿನ ಬೆಂಗಳೂರು ಶಂಕರಯ್ಯನವರ ಹಾಲಿನಲ್ಲಿ ೬। ಗಂಟೆಗೆ ಶ್ರೀ ಅರಿಯಾಕುಡಿ ರಾಮಾನುಜ ಅಯ್ಯಂಗಾರ್ಯರ ಹಾಡುಗಾರಿಕೆ, ಕುಂಭಕೋಣಂ ಜಯರಾಮಯ್ಯರ ಪಿಟೀಲು, ತಂಜಾವೂರು ವೈದ್ಯನಾಥಯ್ಯರ ಮೃದಂಗ ಇವುಗಳೆಂದೊಡ್ಡಗೂಡಿದ ಸಂಗೀತ ಕಚೇರಿಯು ನಡೆಯುವುದು

೧೮-೭-೩೪ನೇ ದಿನ ಬೆಂಗಳೂರು 'ಸೆಂಟ್ರಲ್ ಜೈಲಿ'ನಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ನನ್ನೆ ಸಾಬನು ಇನ್ನೊಬ್ಬ ಬಂದಿಯಾದ ಭೋಗಯ್ಯನ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಂದಿದ್ದನು 'ಸೆಷನ್ಸ್ ಜಡ್ಜ್'ರು ಆತನಿಗೆ ಮರಣದಂಡನೆ ವಿಧಿಸಿದರು ಸರಿ ಆತನು ಹೈಕೋರ್ಟಿನ್ನು ಹತ್ತಿದನು. ಈಗ ಅಲ್ಲಿಯೂ ಶಿಕ್ಷೆ ನ್ಯಾಯವೆಂದು ಅಂಗೀಕರಿಸಲ್ಪಟ್ಟಿತು ಮಹಾರಾಜರಿಗೆ 'ದಯೆ' ಗಾಗಿ ಪ್ರಾರ್ಥಿಸಿರುವನಂತೆ!

ದೇಶೀಯ ವಿದ್ಯಾಶಾಲೆಯ ಹಿರಿಯ ತರುಣರ ಸಂಘದವರ ಆಶ್ರಯದಲ್ಲಿ ಫೆಬ್ರುವರಿ ೫ನೇ ತಾರೀಖು ಸಂಜೆ ೫-೩೦ ಸರಿಯಾಗಿ ಬಿ ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಜಿ. ಪಿ. ರಾಜರತ್ನಂ, ಶ್ರೀ ಪಿ. ಟಿ. ನರಸಿಂಹಾಚಾರ್ ಮೊದಲಾದ ತರುಣ ಕವಿಗಳು ತಮ್ಮ ಕೃತಿಗಳನ್ನು ದೇಶೀಯ ವಿದ್ಯಾಶಾಲೆಯ ಸಭಾಂಗಣದಲ್ಲಿ ಓದುತ್ತಾರೆ.

ಮೈಸೂರು

ಶ್ರೀಮನ್ಮಹಾರಾಜರವರು ಮೈಸೂರಾಯರ ಬಿಹಾರ್ ಪರಿಹಾರ ನಿಧಿಗೆ ೫೦೦೦ ರೂಗಳ ಧನ ಸಹಾಯ ಮಾಡಿರವರೆಂದು ತಿಳಿದು ಬಂದಿದೆ.

ಶ್ರೀಮತಿ ಅಮೃತಾಬಾಯಿ ಮತ್ತು ಶ್ರೀಮತಿ ಥಿಯೋಬಾಲ್ಡ್ ಇವರುಗಳನ್ನು ಮೈಸೂರು ಬೆಂಜ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ 'ಸ್ಪೆಷಲ್ ಮ್ಯಾಜಿಸ್ಟ್ರೇಟ್'ರನ್ನಾಗಿ ನೇಮಿಸಿದ್ದಾರೆ

ಮೈಸೂರಿನಲ್ಲಿ 'ಯೂನಿವರ್ಸಿಟಿ ಯೂನಿಯನ್' ಆಶ್ರಯದಲ್ಲಿ ನಿವಂಗತ ತಾತಯ್ಯನವರ ಭಾವಚಿತ್ರ ಅನಾವರಣ ಮಾಡಬೇಕೆಂಬ ಪ್ರಯತ್ನಗಳು ನಡೆಯುತ್ತವೆ

ಮೈಸೂರು ಜಿಲ್ಲಾ ಬೋರ್ಡಿನವರು ಮೈಸೂರಾಯರ ಭೂಕಂಪ ಪರಿಹಾರ ನಿಧಿಗೆ ೧,೦೦೦ ರೂಗಳನ್ನು ಕೊಟ್ಟಿದ್ದಾರೆ.

ಅಮೆರಿಕದ ರಾಜಪುತ್ರ ಚಿಪ್ಪೆರವರು ಸತೀದ್ವಿತೀಯರಾಗಿ ಮೈಸೂರಿಗೆ ಬಂದು ಮಹಾರಾಜರ ಅತಿಥಿಗಳಾಗಿರುವರು ಮೃಗಯಾ ವಿಹಾರ ಹೊರಟಿದ್ದಾರೆ.

ಶ್ರೀಮತಿ ರೋನಾಲ್ಡ್ ಗ್ರೆನ್‌ವಿಲ್‌ರವರು ಸರ್ ಮಿರ್ಜಾಂವರೊಡನೆ ೧೧ನೇ ತಾ|| ಮೈಸೂರಿಗೆ ಹೋದರು ಲಲಿತಮಹಲಿನಲ್ಲಿ ಬಿಡಾರ ಮಾಡಿದ್ದಾರೆ.

೧೪ನೇ ತಾ|| ಭೂಪಾಲ್ ನವಾಬರು ದಯಮಾಡಿಸಿದರು. ಗುಂಡ್ಲುಪೇಟೆ ತಾಲ್ಲೂಕು ಒಂಡಿಪುರದ ಅರಣ್ಯದಲ್ಲಿ ಇವರಿಗಾಗಿ ಮೃಗಯಾವಿಹಾರದ ಏರ್ಪಾಡಾಗಿದೆ.

೧೫ನೇ ತಾ|| ನಡೆದ ಮೈಸೂರು ಪೌರಸಭೆಯಲ್ಲಿ ಮೂಷಿಕ ಧ್ವಂಸಮಾಡುವ ವಿಚಾರವಾಗಿ ಡಾ|| ಸ್ಟೀವರ್ಟ್‌ರವರ ಭಾಷಣವಾಯಿತು ಶ್ರೀ ಕವೆಯವರು ಇಲಿಗಳಿಂದಾಗುವ ಅನಾಹುತಗಳನ್ನು ತಿಳಿಸುತ್ತ 'ಮೈಸೂರಿನಲ್ಲಿ ಪ್ರತಿಯೊಬ್ಬನಿಗೂ ಎರಡು ಇಲಿಗಳಂತೆ ವರ್ಷಕ್ಕೆ ಒಂದೇ ಒಂದು ಇಲಿಯು ಸುಮಾರು ೩ ರೂಗಳ ಧಾನ್ಯವನ್ನು ನಾಶಮಾಡುತ್ತದೆ!' ಎಂದು ತಿಳಿಸಿದರು. ಇಲಿಗಳನ್ನು ಹೇಗೆ ನಾಶಮಾಡಬೇಕು, ಅದಕ್ಕೆ ಎಷ್ಟು ವೆಚ್ಚವಾಗುವುದು ಎಂಬ ವಿಚಾರವಾಗಿ ಮೇಲಿನ ವೈದ್ಯರಿಬ್ಬರು ಪೌರಸಭೆಗೆ ಸಲಹೆ ಮಾಡಿದ್ದಾರೆ ಮುಂದಿನ ಸಭೆಯಲ್ಲಿ ಇದರ ವೆಚ್ಚದ ಮೇಲೆ ಚರ್ಚೆಗಳಾಗುವುವು

ಹಾಸನ

ಹಾಸನದ ಅಮೆಚೂರ್ ನಾಟಕ ಸಂಘವನ್ನು ಪುನರುಜ್ಜೀವನಗೊಳಿಸಲು ೯ನೇ ತಾ|| ಒಂದು ಸಭೆಯಾಯಿತು. ಶ್ರೀ ನಾರಾಯಣಸ್ವಾಮಯ್ಯಂಗಾರ್ಯರು ಬಹಳ ಶ್ರದ್ಧೆ ವಹಿಸಿದರು ಕರ್ನಾಟಕ ಸಂಘ ವಾರ್ಷಿಕೋತ್ಸವ ಕಾಲದಲ್ಲಿ 'ನಿರಾಸಮ' ಮತ್ತು 'ಪಾಂಡವ ವಿಜಯ' ಎಂಬೆರಡು ನಾಟಕಗಳನ್ನಾಡಬೇಕೆಂದು ತೀರ್ಮಾನವಾಯಿತು.

ಹಾಸನದ ಹತ್ತಿರವಿರುವ ಹೊಸಕೊಪ್ಪಲಿನಲ್ಲಿ ೧೩ನೇ ತಾ|| ದಿನ ವೂರಿನ ಶಾಲಕರು ಹುಲ್ಲುಹಾಕಿದ್ದ ಗಾಡಿಯಲ್ಲಿ ಕೂತು ಆಟವಾಡುತ್ತಿದ್ದಾಗ್ಗೆ ಒಬ್ಬ ಹುಡುಗನು ತನ್ನ ಜೇಬಿನಲ್ಲಿದ್ದ ಬೆಂಕಿ ಪೆಟ್ಟಿಗೆಯಿಂದ ಹುಲ್ಲಿಗೆ ಬೆಂಕಿಯಿಟ್ಟನು. ಹೊಗೆ ಮುಚ್ಚಿಕೊಂಡು ಮುಕ್ಕಳಿಗೆ ದಾರಿ ಕಾಣದಾಯಿತು ಜನರು ಬಂದು ಬಿಡಿಸುವ ಹೊತ್ತಿಗೆ ಮೂವರಿಗೂ ಅಸ್ಥಿವಸ್ಥೆಯಾಗಿತ್ತು. ಇಬ್ಬರು ಮೃತಪಟ್ಟರು. ಒಬ್ಬನನ್ನ ಚಿಕಿತ್ಸೆ ಮಾಡಿದ್ದರಿಂದ ಗುಣಮುಖನಾಗುತ್ತಿರುವ ಹಾಗೆ ವರ್ತಮಾನ

ಶಿವಮೊಗ್ಗ

೯ನೇ ತಾ|| ದಿನ ಆಗುಂಬೆಯಲ್ಲಿ ಶ್ರೀ ಗೋವಿಂದ ಪ್ರಭುಗಳ ಮನೆಯಲ್ಲಿ ಯಜ್ಞೇಶ್ವರನು ಅವತಾರ ಮಾಡಿದನು, ೧೫ ಮನೆಗಳನ್ನು ಆಹುತಿ ತೆಗೆದುಕೊಂಡನ 'ಕೃಷ್ಣ ಮೋಟಾರ್ ಸರ್ವಿಸ್'ನವರೂ, 'ಶಂಕರ ಮೋಟಾರ್ ಸರ್ವಿಸ್'ನವರೂ ಹೊಳೆಯಿಂದ ನೀರನ್ನು ಮೋಟಾರುಗಳಲ್ಲಿ ತುಂಬಿಕೊಂಡು ಬಂದು ಬೆಂಕಿಯನ್ನಾರಿಸಲು ಬಹಳ ಸಾಯ ಮಾಡಿದರು ಸುಮಾರು ೧೦,೦೦೦ ರೂಗಳವರೆಗೆ ನಷ್ಟವಾಗಿದೆಯಂತೆ!

ಘಂಟಾಪುರದಲ್ಲಿ ೭ನೇ ತಾ|| ದಿನ ತೀಯನಾಯಕರು ತಿರುಪತಿಯಿಂದ ತಂದ ಶ್ರೀನಿವಾಸ ವಿಗ್ರಹವನ್ನು ಸ್ಥಾಪಿಸಿ ೧೫೦೦ ಮಂದಿಗೆ ಭೋಜನವನ್ನು ಮಾಡಿಸಿದರು.

೧೩ನೇ ತಾ|| ಜಿಲ್ಲಾಧಿಕಾರಿಗಳಾದ ಶ್ರೀ ಉರ್ವರವರು ರಾಂಪುರದ ಜತ್ರೆಯಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿನಿಯೋಗ ಮಾಡಿದರು ಈ ಸಾರಿ ಸುಮಾರು ೩೨,೦೦೦ ರಾಸುಗಳು ಜಾತ್ರೆಗೆಂದಿದ್ದವು

ದಿವಾನ್ ಸರ್ ಎಂ ವಿಶ್ವೇಶ್ವರಯ್ಯನವರು ಶಿವಮೊಗ್ಗ ಜಿಲ್ಲೆಯಲ್ಲಿ ೪ನೇ ತಾ|| ದಿಂದ ಒಂದು ವಾರದ ವರೆಗೆ ಸಂಚಾರ ಮಾಡಲಿರುವರು ೫ನೇ ತಾ|| ಬೆಳಿಗ್ಗೆ ಶಿವಮೊಗ್ಗ ನಗರ ಭವನದಲ್ಲಿ ಪುರಪ್ರಮುಖರೊಡನೆ ಭೇಟಿ. ಅಂದೇ ತೀರ್ಥಹಳ್ಳಿಗೆ ಹೋಗಿ ಶಿವಮೊಗ್ಗೆಗೆ ಹಿಂತಿರುಗುವರು ೬ನೇ ತಾ|| ಆನಂದಪುರದಲ್ಲಿ ನೂತನ ಚಿಕಿತ್ಸಾಲಯದ ಪ್ರಾರಂಭೋತ್ಸವ ಅಂದು ಸಂಜೆ ಗೇರುಸೊಪ್ಪೆಯಲ್ಲಿ ಬಿಡಾರ ೭ನೇ ತಾ|| ತಾಲಗುಪ್ಪೆ, ಮರ್ತೂರು ಇವುಗಳನ್ನು ಸಂದರ್ಶಿಸಿ ಸಾಗರಕ್ಕೆ ಬಂದು ನಗರ ಭವನದ ಪ್ರಾರಂಭೋತ್ಸವ ನಡೆಸುವರ ಸಂಜೆಗೆ ಶಿವಮೊಗ್ಗಿ ೮ನೇ ತಾ|| ಅಂಜನಾಪುರ, ಹೊನ್ನಾಳಿ ಈ ಸ್ಥಳಗಳಿಗೆ ಹೋಗುವರು. ೧೧ನೇ ತಾ|| ಸೂಳೆಕೆರೆ, ಭದ್ರಾವತಿ, ಚನ್ನಗಿರಿ ಈ ಪ್ರಾಂತ್ಯ ಸಂಚರಿಸುವರು.

IN HONOUR OF THE NEW YEARS
ACCURATE WRIST WATCH RS, 2/10/—



Each approved by big Govt Officers and Zamindars Strong, Rascope Lever Machinery Bright Nickel Case, round Military size Rs 2/10/—, Super or small size Rs 3/6, Golden Case Rs 3/15 attractive Rectangular shape as illustration with silver nickel case Rs. 6/12, Gold plated case. 7/8, and 10 years guaranteed Rolled Gold Rs 11/8/-only. If purchased any three watches postage free. Each guaranteed 4 years New Years Calendar and Catalogue free with each order.
Apply to —UNITED WATCH CO,
161 Upper Chitpore Road, Calcutta.

ವಿಶ್ವಕರ್ನಾಟಕ

೧೮–೨–೧೯೩೬ನೇ ಭಾನುವಾರ

ಮೈಸೂರು ವೃತ್ತಪತ್ರಿಕೆಗಳ

ಕರಾಳ

ಶಾಸನವನ್ನು

ಶಾಸನ ಕಡತದಿಂದ

ತೊಡೆದುಹಾಕುವವರೆಗೂ

ನಾವು

ಪ್ರಧಾನ ಲೇಖನ

ವನ್ನು ಬರೆಯುವುದೇ ಇಲ್ಲ

ವೆಂಬುದು ನಮ್ಮ

ಸತ್ಯಸಂಕಲ್ಪ

ಜನರ ಜೀವನವೇ ಅವರ ಇರುವಿಕೆಯ ಸರ್ವಸ್ವ. ಆ ಜೀವನವೇ ಭಾರವಾದರೆ, ದುಃಖವಾದರೆ, ನರಕವಾದರೆ ಇನ್ನವರಿಗೆ ಉಳಿದುದೇನು? ಇಂದಿನ ಭಾರಶೀಯರ ಜೀವನ ಹಾಗಿದೆ.

—ಅನಾಮಕ.

ನಾವು ಮಹತ್ಕಾರ್ಯಗಳನ್ನು ಮಾಡಲಾರೆವು. ಅಲ್ಪಕಾರ್ಯಗಳನ್ನು ಮಾಡೆವು. ಇವೆರಡರ ಮಧ್ಯೆ ಸಣ್ಣಗಾಗುವೆವು.

—ಸ್ಪರ್ಜನ್.

ಶ್ರೀ ರಾಮಕೃಷ್ಣ ಪರಮಹಂಸರ ೯೯ನೆಯ ಜಯಂತ್ಯುತ್ಸವ

(೧೮–೨–೧೯೩೬)

ಬೆಂಗಳೂರು ಬಸವನಗುಡಿ ಮರದಲ್ಲಿ

(೧) ಬೆಳಿಗ್ಗೆ ಭಜನೆ

(೨) ಅನ್ನದಾನ

(೩) ಹರಿಕಥೆ

(೪) ಶ್ರೀ ಆನಂತರಾಮನ್ (ಅಧ್ಯಕ್ಷರು) ಸರ್ ಸಿ. ವಿ ರಾಮನ್ ಮತ್ತು ಶ್ರೀ ಬಿ ಎಂ. ಶ್ರೀಕಂಠಯ್ಯನವರ ಉಪನ್ಯಾಸಗಳು.

ಮೈಸೂರು ಒಂಟಿಕೊಪ್ಪಲು ಮಠದಲ್ಲಿ

(೧) ಬೆಳಿಗ್ಗೆ ವಿದ್ವಾನ್ ದೇವೇಂದ್ರಪ್ಪ, ವಿಶ್ವಕೂಟದವರ ಭಜನೆ, ವಿದ್ವಾನ್ ಚಂದ್ರಶೇಖರ ಶಾಸ್ತ್ರಿಗಳ ಉಪನಿಷದ್ವಾಚನ, ಶ್ರೀ ರಾಮಕೃಷ್ಣ ವಚನಾಮೃತ ಪಠನ

(೨) ಮಹಾನೈವೇದ್ಯ, ಶ್ರೀ ಕೃಷ್ಣರಾಯರ ಎರಕ ವಾಚನ.

(೩) ಸಂಜೆ ಕೈಗಾರಿಕೆ ಶಾಸನಾಧಿಕಾರಿ ಶ್ರೀ ರಾಮನಾಧನ್ (ಅಧ್ಯಕ್ಷರು) ಡಾ|| ಎ ಎನ್ ಸರ ಸಿಂಹಯ್ಯ ಮತ್ತು ಶ್ರೀ ವೀರರಾಘವಾಚಾರ್ಯರ ಉಪನ್ಯಾಸಗಳು.

ರಾಮಕೃಷ್ಣ ವಚನಾಮೃತ

ದೇಹವು ಪಾತ್ರೆಯಂತೆ ಮನಸ್ಸು, ಬುದ್ಧಿ, ಕರ್ಮೇಂದ್ರಿಯಗಳು ಅದರೊಳಗಿರುವ ನೀರು, ಬೇಳೆ, ತರಕಾರಿಗಳಂತೆ, ಪಾತ್ರೆಯನ್ನು ಒಲೆಯಮೇಲಿಟ್ಟು ಕಾಯಿಸಿದ ಮೇಲೆ ನೀರನ್ನಾಗಲೀ ಬೇಳೆಯನ್ನಾಗಲೀ ಮುಟ್ಟಿದರೆ ಕೈ ಸುಡುತ್ತದೆ ಆದರೆ ಆ ಕಾವು ಸಹಜವಾಗಿಯೂ ಆ ಪದಾರ್ಥಗಳಿಗೆ ಸೇರಿದ್ದಲ್ಲ. ಹಾಗೆಯೇ ಮನುಷ್ಯನಲ್ಲಿರುವ ಬ್ರಹ್ಮಶಕ್ತಿಯು ಮನಸ್ಸು, ಬುದ್ಧಿ, ಕರ್ಮೇಂದ್ರಿಯಗಳನ್ನು ಕೆಲಸಮಾಡುವ ಹಾಗೆ ಮಾಡುತ್ತದೆ ಆ ಶಕ್ತಿ ನಿಂತಿತೆಂದರೆ ಎಲ್ಲವೂ ನಿಲ್ಲುತ್ತದೆ.

* * *

ಅದ್ವೈತಜ್ಞಾನವನ್ನು ನೆರಗಿನಲ್ಲಿ ಕಟ್ಟಿಕೊಂಡು ಏನು ಬೇಕಾದರೂ ಮಾಡು ಆಗ ಯಾವ ಕೆಡುಕೂ ನಿನಗೆ ತಟ್ಟುವುದಿಲ್ಲ

ಮುಳ್ಳನ್ನು ಮುಳ್ಳಿನಿಂದ ತೆಗೆದು ಎರಡನ್ನೂ ಬಿಸುಡುವಂತೆ ಜ್ಞಾನದಿಂದ ಅಜ್ಞಾನವನ್ನು ಉತ್ತರಿಸಿ ಎರಡನ್ನೂ ಬಿಡಬೇಕು ವಿಚಾರ ಮಾಡಿದರೆ ಜ್ಞಾನ ಅಜ್ಞಾನಗಳೆರಡೂ ಮಾಯೆಯಲ್ಲಿನೆ. ಬ್ರಹ್ಮಜ್ಞಾನಿ ಯಾದವನು ಜ್ಞಾನ ಅಜ್ಞಾನಗಳೆರಡನ್ನೂ ತೆಗೆದೊಗೆದು ವ್ಯಂಡಾತೀತನಾಗುತ್ತಾನೆ

ವೇದಾಂತಿಗಳು ಯಾರನ್ನು ಬ್ರಹ್ಮವೆಂದು ತಿಳಿಯುತ್ತಾರೋ ಆತನನ್ನು ಯೋಗಿಗಳು ಆತ್ಮನೆಂದು ಹೇಳುತ್ತಾರೆ, ಅವನನ್ನೇ ಭಕ್ತರು ಭಗವಂತನೆಂದು ಕರೆಯುತ್ತಾರೆ. ಬ್ರಾಹ್ಮಣನು ಒಬ್ಬನೆಯಾದರೂ ಪೂಜೆಮಾಡುವಾಗ ಪೂಜಾರಿ ಎಂದೂ, ಅಡಿಗೆ ಮಾಡುವಾಗ ಅಡಿಗೆಯವನೆಂದೂ ಕರೆಯಿಸಿಕೊಳ್ಳುವಂತೆ.

ನಾನು ಯಾವಾಗ ಮುಕ್ತನಾಗುತ್ತೇನೆ? 'ನಾನು' ಎಂಬುದು ಮುಕ್ತಾಯವಾದಾಗ, 'ನಾನು ನನ್ನದು' ಎಂಬುದು ಅವಿದ್ಯೆ. 'ನೀನು ನಿನ್ನದು' ಎಂಬುದು ವಿದ್ಯೆ

ನೂರಾರು ವರುಷಗಳಿಂದ ಕತ್ತಲೆ ಮುತ್ತಿಕೊಂಡಿರುವ ಕೋಣೆಗೆ ದೀಪವನ್ನು ತಂದಕೂಡಲೇ ಹೇಗೆ ಬೆಳಕಾಗುವುದೋ ಹಾಗೆಯೇ ಜ್ಞಾನಜ್ಯೋತಿಯು ಜೀವವನ್ನು ಪ್ರಕಾಶಗೊಳಿಸಿ ಯುಗ ಯುಗಾಂತರದ ಅಜ್ಞಾನವನ್ನು ಪರಿಹರಿಸುತ್ತದೆ.

* * *

ದೇವರು ನಿರಾಕಾರನೂ ಹೌದು; ಸಾಕಾರನೂ ಹೌದು. ಸಾಕಾರ ನಿರಾಕಾರಗಳಿಗೆ ಅತೀತನೂ ಆಗಿದ್ದಾನೆ ಅವನು ಇನ್ನೂ ಏನೇನಾಗಿದ್ದಾನೆ ಎಂಬುದು ಅವನಿಗೊಬ್ಬನಿಗೇ ಗೊತ್ತು.

ಒಧ್ದಾತ್ಮವೇ ಜೀವ ಮುಕ್ತಾತ್ಮವೇ ಈಶ್ವರ

*

ಸೂರ್ಯನ ಕಾಂತಿಯು ಎಲ್ಲಿ ಕೆಡೆಯಲ್ಲಿಯೂ ಬೀಳುತ್ತದೆ ಆದರೆ ನೀರು ಕನ್ನಡಿ ಮೊದಲಾದ ವಸ್ತುಗಳು ಮಾತ್ರವೇ ಆ ಬೆಳಕನ್ನು ಪ್ರತಿಬಿಂಬಿಸುತ್ತವೆ ದಿವ್ಯಜ್ಯೋತಿಯ ವಿಚಾರವೂ ಹಾಗೆಯೆ ಅದು ಹಕ್ಕಿ ಪಾತವಿಲ್ಲದೆ ಎಲ್ಲರಮೇಲೆಯೂ ಬೀಳುತ್ತದೆ ಆದರೆ ಪರಿಶುದ್ಧಾತ್ಮರಾದ ಭಕ್ತ ಸಾದುಗಳು ಮಾತ್ರವೇ ಅದನ್ನು ಪ್ರತಿಬಿಂಬಿಸಲು ಶಕ್ತರಾಗಿರುತ್ತಾರೆ

*

ಸಾಮಾನ್ಯ ಮನುಷ್ಯನು ಮೂಟೆಗಲ್ಬೆಯಾಗಿ ಧರ್ಮೋಪದೇಶ ಮಾಡುತ್ತಾನೆ ಕಾರ್ಯತಃ ಅದರಲ್ಲೊಂದು ಕಣವನ್ನೂ ಆಚರಿಸುವುದಿಲ್ಲ

ಕಾಮಿನಿ ಕಾಂಚನಗಳಿಗಾಗಿ ಕಣ್ಣೀರು ಹೊಳೆ ಹರಿಸುತ್ತಾರೆ. ದೇವರಿಗಾಗಿ ಒಂದು ಹನಿ ಕಣ್ಣೀರು ಹಾಕುವವರು ಯಾರಿದ್ದಾರೆ? ಒಹು ಸ್ವಲ್ಪಮಂದಿ ಸಾಧನೆಯಿಂದ ಸಿದ್ಧಿ, ವ್ಯಾಕುಲತೆಯಿಂದ ಸಾಕ್ಷಾತ್ಕಾರ.

* * *

ನೀರಿನಲ್ಲಿ ಬಿದ್ದು ಮುಳುಗುತ್ತಿರುವವನು ಉಸುರು ಎಳೆಯಲು ಬಯಸಿದಂತೆ ಒಯಸಿದರೆ ದೇವರು ಸಿಕ್ಕುತ್ತಾನೆ

ಪ್ರಿಯನು ಪ್ರೇಯಸಿಯನ್ನು ಪ್ರೀತಿಸುತ್ತಾನೆ, ಕೃಪಣನು ಐಶ್ವರ್ಯಕ್ಕಾಗಿ ಗೋಗರೆಯುತ್ತಾನೆ, ವಿಷಯಿಯು ವಿಷಯಗಳಿಗಾಗಿ ಪ್ರಾಣ ಬಿಡುತ್ತಾನೆ. ಈ ಮೂವರ ಲೋಭ ತೀವ್ರತೆಗಿಂತಲೂ ಅತಿಶಯವಾಗಿ ಈಶ್ವರ ಪರ ವ್ಯಾಕುಲಚಿತ್ತನಾದಾಗ ನಿನಗೆ ಆತನ ದೊರಕುತ್ತಾನೆ.

* *

ಜೀವನಾನೆಂದವನು ಜೀವನಾಗಿಯೇ ಇರುತ್ತಾನೆ. ದೇವನಾನೆಂದವನು ದೇವನೇ ಆಗಿರುತ್ತಾನೆ. ಮನಸ್ಸಿನಂತೆ ಮನುಷ್ಯ.

*

ಈಶ್ವರ ಸಾಕ್ಷಾತ್ಕಾರವಾದ ಮೇಲೆ ವಿಗ್ರಹ ಮೊದಲಾದುವುಗಳೆಲ್ಲವೂ ಮೃಣ್ಮಯವಲ್ಲ ಚಿನ್ಮಯ ಎಂದು ತಿಳಿಯುತ್ತದೆ.

* * *

ಆಟದ ಆನೆಯೂ ಆಟದ ಹಣ್ಣೂ ನಿಜವಾದ ಆನೆಯನ್ನೂ ಹಣ್ಣನ್ನೂ ಮನಸ್ಸಿಗೆ ತರುವಂತೆ ವಿಗ್ರಹ

ಗಳು ನಿತ್ಯನೂ ನಿರಾಕಾರನೂ ಆದ ಭಗವಂತನನ್ನು ನೆನಪಿಗೆ ತಂದುಕೊಡುತ್ತವೆ.

* * *

ಏವೇಕವೂ ವೈರಾಗ್ಯವೂ ಇಲ್ಲದ ಮನಸ್ಸಿನಿಂದ ವೇದ ಶಾಸ್ತ್ರಗಳನ್ನು ಓದಿದರೆ ಏನೂ ಪ್ರಯೋಜನವಿಲ್ಲ.

* * *

ಭೃಣ, ಲಜ್ಜೆ, ಭಯಗಳಿರುವಲ್ಲಿ ದೇವರುಬರುವುದಿಲ್ಲ.

* * *

ಧರ್ಮ ಸಾಧನೆಯಲ್ಲಿ ಮುಂದುವರಿದು ಈಶ್ವರನನ್ನು ಕಾಣಬೇಕೆಂಬುವವರು ಕಾಮಿನಿ ಕಾಂಚನ ಗಳಬಲೆಗೆ ಸ್ವಲ್ಪವಾದರೂ ಬೀಳದಂತೆ ಎಚ್ಚರಿಕೆಯುಂದಿರಬೇಕು. ಇಲ್ಲದಿದ್ದರೆ ಮುಕ್ತಿಲಾಭವಿಲ್ಲ.

* * *

ಮಡಕೆಯಲ್ಲಿ ಒಂದು ಸಣ್ಣ ತೂತಿದ್ದರೂ ನೀರೆಲ್ಲಾ ಸೋರಿ ಹೋಗುವಂತೆ ಸಾಧಕನಲ್ಲಿ ವಿಷಯಾಸಕ್ತಿಯು ಅವಲೇಶವಿದ್ದರೂ ಮಾಡಿದ ಸಾಧನೆಯೆಲ್ಲಾ ನೀರಿನಲ್ಲಿ ಹೋಗಲಾಗುತ್ತದೆ.

* * *

ಸ್ವೈಜ ಸ್ತೋಮದ ಚಿಪ್ಪಿಗಳೆಂದರೆ ಜಗತ್ತಿನ ವಿಸ್ಮೃತಿ ಮುತ್ತು ದೇಹವಿಸ್ಮೃತಿ.

* * *

ಶ್ರೀಮಂತರ ಮನೆಯ ದಾದಿಯು ಯಜಮಾನನ ಮಗುವನ್ನು ತನ್ನದೋ ಎಂಬಂತೆ ಪ್ರೀತಿಸಿ ಸಲಹಿದರೂ ಆ ಮಗುವು ತನ್ನದಲ್ಲವೆಂದು ತಿಳಿದುಕೊಂಡಿರುವ ಹಾಗೆ ನಿನ್ನ ಮಕ್ಕಳನ್ನು ದೇವರ ಮಕ್ಕಳೆಂದು ಭಾವಿಸಿ ದಾದಿಯಂತೆ ಸಾಕಿ ಸಲಹು

* * *

ಮನಸ್ಸೇ ಸರ್ವಸ್ವ. ಮನಸ್ಸಿನಂತೆ ಮಾಯ, ಮನಸ್ಸಿನಂತೆ ಮುಕ್ತಿ.

* * *

ಈಶ್ವರನಿಗೆ ಅಸಂಖ್ಯ ನಾಮಗಳಿವೆ. ಅನಂತ ರೂಪಗಳಿಂದ ಆತನನ್ನು ಆರಾಧಿಸಬಹುದು ಯಾವ ಯಾವ ನಾಮರೂಪಗಳಿಂದ ಆತನನ್ನು ಪೂಜಿಸಿದರೂ ಆಯಾ ಮಾರ್ಗಗಳಿಂದಲೇ ಆತನನ್ನು ಸೇರುತ್ತೀಯೆ.

* * *

ಭಿನ್ನ ಭಿನ್ನ ಮತಗಳು ಒಬ್ಬನೇ ಪರಮಾತ್ಮನಲ್ಲಿಗೆ ನಮ್ಮನ್ನು ಕರೆದೊಯ್ಯುವ ವಿವಿಧ ಪಥಗಳಾಗಿವೆ.

* * *

ಅವರವರು ಅವರವರ ಮತದಂತೆ ನಡೆಯಲಿ. ಕ್ರೈಸ್ತನಿಗೆ ಕ್ರಿಸ್ತಮತವೂ ಮಹಮ್ಮದೀಯನಿಗೆ ಮಹಮ್ಮದೀಯ ಮತವೂ ಲೇಸು. ಹಿಂದುವಿಗೆ ಆರ್ಯಋಷಿಗಳಿಂದ ಪ್ರಣೀತವಾದ ಆರ್ಯಧರ್ಮವೇ ಲೇಸು.

* * *

ಪರರ ಮತಗಳನ್ನೂ ಪರರ ಭಾವಗಳನ್ನೂ ವಿರೋಧಿಸಬೇಡ. ನಿನ್ನ ಮತಭಾವದ ಮೇಲೆ ನೀನು ನಿಲ್ಲುವಂತೆ ಅನ್ಯಮತ ಭಾವಗಳ ಮೇಲೆ ಅನ್ಯರನ್ನು ನಿಲ್ಲಗೊಡು.

* * *

ಒಬ್ಬಳೇ ಮಾತೆಯು ತನ್ನ ಹಲವು ಮಕ್ಕಳಿಗೆ ಅವರವರ ಪ್ರಕೃತಿಗನುಸಾರವಾಗಿ ಬೇರೆ ಬೇರೆ ಊಟ ತಿಂಡಿಗಳನ್ನು ಕೊಡುವಂತೆ ಜಗನ್ಮಾತೆಯು ಭಿನ್ನ ಭಿನ್ನ ಸಂಸ್ಕಾರದ ತನ್ನ ಮಾನವ ಪುತ್ರರಿಗೆ ಅವರವರ ಸ್ವಭಾವಗಳಿಗೆ ಅನುಗುಣವಾಗಿ ವಿಧವಿಧ ಮತಭಾವಗಳನ್ನು ದಯಪಾಲಿಸಿದ್ದಾಳೆ.

* * *

ಜಗತ್ತು ಈಶ್ವರನದು ; ನಿನ್ನದಲ್ಲ; ಭಗವದಿಚ್ಛೆಯನ್ನು ನೆರವೇರಿಸಲು ಬಂದ ಕಿಂಕರಮಾತ್ರನು ನೀನು ಎಂದು ತಿಳಿ.

* * *

ಪ್ರಪಂಚದಲ್ಲಿರು; ಆದರೆ ಪ್ರಾಪಂಚಿಕನಾಗಬೇಡ.

ಬಿಹಾರ ಭೂಕಂಪ ಹಳ್ಳಿಗಳ ದುರವಸ್ಥೆ

ಶ್ರೀ ರಾಮಪ್ರಧಯಾಲ ಸಿಂಹ, ಕಲಕತ್ತಾ, 'ಮಾರವಾಡೀ ರಿಲೀಫ್ ಸೊಸೈಟಿ'ಯ ಪ್ರತಿನಿಧಿಗಳಾದ ಭಗೀರಥರು, 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಸದಸ್ಯರಾದ ಶ್ರೀ ರಾಮು ನಾಜಪೇಯಿ, ಮೋಹನ ಲಾಲ್ ಸಕ್ಸೇನಾ, ಡಾಕ್ಟರ್ ಸೌಪ್, ಮತ್ತು ಸರದಾರ ಗುರುದತ್ತ ಸಿಂಹರವರು ಮುಜಫರ್ ಪುರದ ಜಿಲ್ಲೆಯ ಒಳ ಪ್ರಾಂತ್ಯಗಳ ಕೆಲವು ಹಳ್ಳಿಗಳನ್ನು ಪ್ರತ್ಯಕ್ಷವಾಗಿ ಹೋಗಿ ನೋಡಿದರು. ಅನೇಕ ಗ್ರಾಮಗಳಿಗೆ ಹೋಗಲು ದೋಣಿಗಳನ್ನು ಉಪಯೋಗಿಸಬೇಕಾಗಿ ಬಂತು. ಏಕೆಂದರೆ ಆ ಕಡೆ ಒಂದು ಮೈಲಿನಿಂದ ನಾಲ್ಕು ಮೈಲಿಯವರೆಗೂ ಅಗಲ, ಮತ್ತು ಮೂವತ್ತು ಮೈಲಿವರೆಗೆ ಉದ್ದ, ಪೂರ್ತಿಯಾಗಿ ನೀರು ಭೂಮಿಯನ್ನು ತುಂಬಿಕೊಂಡಿದೆ. ಈ ಹಳ್ಳಿಗಳ ದುರವಸ್ಥೆಯನ್ನು ನೋಡಿದರೆ, ಹೃದಯವು ತುಂಡು ತುಂಡಾಗುತ್ತದೆ. ಅನೇಕ ಗ್ರಾಮಗಳಲ್ಲಿ ಜನರು ಹಸಿವೆಯಿಂದಲೇ ಸಾಯುತ್ತಿದ್ದಾರೆ; ಮತ್ತು ಹಸಿವೆಯಿಂದ ಪೀಡಿತರಾಗಿರುವವರಿಗೆ ಯಾವ ಪ್ರಕಾರದಿಂದಲೂ, ಹೊಟ್ಟೆ ತುಂಬಲು ಅವಕಾಶವಿಲ್ಲ. 'ಮಾರವಾಡಿ ರಿಲೀಫ್ ಕಮಿಟಿ' ಮತ್ತು ಮಿದನಾಪುರಗಳ ರಾಣೆಯಲ್ಲಿ ಎರಡು ಕೇಂದ್ರಗಳನ್ನು ಸ್ಥಾಪಿಸಿ, ಭೋಜನ ಮತ್ತು ವಸ್ತ್ರಗಳನ್ನು ಹಂಚುವುದು, ಮನೆಗಳನ್ನು ತಿರುಗಿ ಕಟ್ಟುವುದು ಮತ್ತು ಬಾವಿಗಳಿಂದ ಮರಳು ತೆಗೆದು ನೀರು ಒರುವಂತೆ ಮಾಡುತ್ತಿದ್ದಾರೆ. ಇದರಂತೆಯೇ ಜಿಲ್ಲೆಯ ಇತರ ಸ್ಥಳಗಳಲ್ಲಿಯೂ ಕೇಂದ್ರಗಳನ್ನು ಸ್ಥಾಪಿಸಲು ಹೊರಟಿದ್ದಾರೆ. ಇಷ್ಟಿಗೆ ಬಂದಿರುವ 'ರಿಲೀಫ್ ಕಮಿಟಿ'ಯವರು ಅವುಗಳಲ್ಲಿ ಕೆಲವು ಕೇಂದ್ರಗಳ ಜವಾಬ್ದಾರಿಕೆಯನ್ನು ವಹಿಸಿಕೊಳ್ಳಬೇಕೆಂದು ಕೇಳಿಕೊಂಡಿರುತ್ತಾರೆ. ಆದರೆ ಒಂದೊಂದು ಕೇಂದ್ರದ ಅಧೀನದಲ್ಲಿ ಸುಮಾರು ಇಪ್ಪತ್ತು, ಇಪ್ಪತ್ತೈದು ಗ್ರಾಮಗಳಿರುತ್ತವೆ. ಅವುಗಳಿಗೆ ಸಾಧಾರಣ ಸುಧಾರಣೆಗೆ ಕನಿಷ್ಠಪಕ್ಷ ಎರಡು ಸಾವಿರ ರೂಪಾಯಿಯಾದರೂ ಬೇಕು.

'ಬನಾರೆಸ್ ಹಿಂದೂ ಯೂನಿವರ್ಸಿಟಿ'ಯ ಡಾಕ್ಟರ್ ಮಂಗಳಸಿಂಹರವರು 'ಬಿಹಾರ್ ಸೆಂಟ್ರಲ್ ರಿಲೀಫ್ ಕಮಿಟಿ'ಯ (ಚಿಕಿತ್ಸಾಶಾಖೆ) ಕಡೆಯಿಂದ ಔಷಧಿ ಎಲ್ಲಾ ಕಡೆಯಲ್ಲಿ ಕೊಡುವದಕ್ಕೋಸ್ಕರ ಮತ್ತು ಮೇಲ್ವಿಚಾರಣೆಗೆ ಚುನಾಯಿಸಲ್ಪಟ್ಟಿದ್ದಾರೆ. ಈಗ ಅವರು ಪಾರುಧಾನೆ ಮತ್ತು ಸದರ್ ಧಾನೆಗಳಿಗೆ ಅನೇಕ ಹಳ್ಳಿಗಳಿಗೆ ಹೋಗಿದ್ದರು. ಅಲ್ಲಿನ ಸ್ಥಿತಿಯನ್ನು ನೋಡಿ ಸ್ತಂಭಿತ ಮತ್ತು ಆಶ್ಚರ್ಯನಿಶ್ಚರಾಗಿಬಿಟ್ಟರು. ಅಲ್ಲಿನ ಜನಗಳಿಗೆ ತಿನ್ನಲಿಕ್ಕೆ ಅನ್ನವಿಲ್ಲ; ವಾಸಕ್ಕೆ ಮನೆ ಇಲ್ಲ. ಕೈಯ್ಯಲ್ಲಿ ಕಾಸಿಲ್ಲ ಅವರ ಈ ವರ್ಷದ ಬೆಳೆಯೆಲ್ಲಾ ಭೂಕಂಪದೇವತೆಗೆ ಅರ್ಪಣವಾಗಿಬಿಟ್ಟಿದೆ ಅವರ ಗದ್ದೆಗಳಲ್ಲಿ ನೀರಿನ ಹಾವಳಿಯಲ್ಲದೆ, ಮರಳಿನಿಂದ ಪೂರ್ತಿಯಾಗಿ ಮುಚ್ಚಲ್ಪಟ್ಟಿರುತ್ತದೆ. ಇದೇ ಅಲ್ಲದೆ ಜನರಿಗೆ ಕುಡಿಯಲಿಕ್ಕೆ ನೀರೂ ಕೂಡ ದೊರೆಯುವದು ಕಷ್ಟವಾಗಿದೆ ಕೈ ಎಡಿಸಲಿಕ್ಕೆ ಬೇಕಾದಷ್ಟು ಇದ್ದರೂ ಕೂಲಿ ಜನಗಳು ಕೆಲಸವಿಲ್ಲದೆ ಪೇಚಾಡುತ್ತಲಿದ್ದಾರೆ. ಕೂಲಿ ಅಳುಗಳಿಂದ ಕೆಲಸಮಾಡಿಸಲಿಕ್ಕೆ ಕೈಯಲ್ಲಿ ರೊಕ್ಕವಿಲ್ಲ, ಏನು ಮಾಡುವುದು? ಪಾರುಧಾನೆಯಲ್ಲಿ ಐದು ಮೈಲು ಚದುರ ಪೂರ್ತಿಯಾಗಿ ನೀರು ಮತ್ತು ಮರಳಿಗೆ ತುತ್ತಾಗಿದೆ ಈಗ ತಾನೆ ಬಂದ ಮಳೆಯ ದೆಶೆಯಿಂದ ಎತ್ತು ಭಯಂಕರವಾದ ಉಪದ್ರವ ಉಂಟಾಗಿರುತ್ತೆಂಬುದನ್ನು ಊಹಿಸಿಕೊಳ್ಳಬಹುದು. ವರ್ಣನೆ ಕೊಡುವದಕ್ಕೆ ಸಾಧ್ಯವಿಲ್ಲ ಒಳಗೆ ಮಂದಿ ಕೇವಲ ಹಸಿವಿನಿಂದಲೇ ಪ್ರಾಣಬಿಡುವವ್ಯ ಸೆ ಅಸಾಧ್ಯವಾದ ಛಳಿ, ಮತ್ತು ಮಳೆಯ ಶಿನಿಕಾಟದಿಂದ ಪ್ರಾಣ ಉಳಿಯುವಂತಿಲ್ಲ

ಬೇಗನೆ ಇವರ ಯೋಗಕ್ಷೇಮವನ್ನು ವಿಚಾರಿಸದೇ ಹೋದರೆ ಇವರ ಸರ್ವನಾಶವಾಗುವುದು ಖಂಡಿತ. ಅಬ್ಬರಿಂದ ಆವರಿಗೆ ಅನ್ನ ವಸ್ತ್ರಗಳ ಸಹಾಯವನ್ನು ಕೊಟ್ಟು ಸಾವಿಗೆ ತುತ್ತಾಗದಂತೆ ಮಾಡಿ ತಕ್ಷಣ ಕರ್ತವ್ಯವನ್ನು ವ್ಯಕ್ತಪಡಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಈ ಜಿಲ್ಲೆಯ ಪರವಾಗಿ ದ್ರವ್ಯ ಸೇಖರಿಸಲು ಕೇಳಿಕೊಳ್ಳುತ್ತೇವೆ ಎಂದು ಡಾ|| ಮಂಗಲ್‌ಸಿಂಗರವರು ಈ ಜಿಲ್ಲೆಗಳ ಪರವಾಗಿ ಎಲ್ಲಾ ಶ್ರೀಮಂತರನ್ನೂ ಮತ್ತು ಸಮಸ್ತ ಮಾನವವರ್ಗದವರನ್ನೂ ಬೇಡಿಕೊಳ್ಳುತ್ತಾರೆ.

ಶ್ರೀ ರಾಮು ಶರ್ಮ ನೇನಿಪುರಿ
ವಿಹಾರಕೇಂದ್ರೀಯ ಸಹಾಯಕ ಸಮಿತಿ,
ಮುಜಫರ್ ಪುರ

ಮತ್ತೆ ಭೂಕಂಪ!

ಈಚಿಗೆ ಮತ್ತೆ ಮತ್ತೆ ಭೂಕಂಪಗಳಾಗುತ್ತಲೇ ಇವೆ ಎಂದೇ ತಾ|| ಭಾನುವಾರ ನೇಪಾಳದಲ್ಲಿ ಭೂಮಿಯು ಜೋರಾಗಿಯೇ ಅದುರಿತು ಹಿಂದೆಯೇ ಬಹಳ ಕಷ್ಟ ನಷ್ಟಗಳಿಗೊಳಗಾಗಿದ್ದ ಅಲ್ಲಿನ ಪ್ರಜೆಗಳಿಗೆ ದಿಕ್ಕೇ ತೋರದಾಗಿದೆ. ಖಟ್ಮಂಡುವಿನಿಂದ ನೂರಾರು ಜನರು ಮನೆ ಮಠಗಳನ್ನು ತ್ಯಜಿಸಿ ಪ್ರಾಣರಕ್ಷಣೆಗೋಸ್ಕರ ಬೇರೆ ಸ್ಥಳಗಳಿಗೆ ಹೋಗುತ್ತಿದ್ದಾರೆ. ಇದರ ಮಧ್ಯ ಕಳ್ಳಕಾಕರ ಕಾಟ ಬೇರೆ! ಜನರನ್ನು ಕೆತ್ತು ತಿನ್ನುತ್ತಿದ್ದಾರೆ. ಜನರ ರಕ್ಷಣೆಗಳನ್ನು ನೋಡಿಕೊಳ್ಳುವುದರ ಮಧ್ಯೆ ಈ ಕಳ್ಳಕಾಕರ ಬೇಟೆ ಬೇರೆ ಒದಗಿದೆ!! ನೇಪಾಳದ ಪ್ರಧಾನರು ಮುಂದೇನು ಮಾಡಬೇಕೆಂಬ ವಿಚಾರದಲ್ಲಿ ಚರ್ಚೆ ನಡೆಸಲೂ ದೆಹಲಿಗೆ ಹೋಗಿರುವರು. ಮತ್ತೆ ಬಿಹಾರ್ ಪ್ರಾಂತ್ಯದಲ್ಲಿಯೂ ಭೂಕಂಪವಾಯಿತು ಅನೇಕ ಮನೆಗಳು ಉರುಳಿದುವು ಕೆಲವು ಕಡೆ ನೀರು ಭೂಮಿಯಿಂದ ಉಕ್ಕಿತು.

ಕ್ಷಾಮದ ಭಯವೆ?

ಶ್ರೀ ಬಾಬು ರಾಜೇಂದ್ರಪ್ರಸಾದರು ಈ ಭೂಕಂಪದದೆಸೆಯಿಂದ ಪೈರು ಪಚ್ಚೆಗಳಿಗೆ ಸಂಬವಿಸಿರುವ ಅನಿಷ್ಟವನ್ನು ಕುರಿತು ವರ್ಣಿಸಿ "ಇಂದು ೨೫ ಲಕ್ಷ ಮಂದಿಗೆ ನಾವು ದಿನ ದಿನ ಅನ್ನ ಒದಗಿಸಬೇಕಾಗಿದೆ ಭೂಮಿಯೇ ತಳಮೇಲಾಗಿರುವುದರಿಂದ ಸದ್ಯಕ್ಕೆ ಬೆಳೆಯು ಆಶೆಯೇ ಇಲ್ಲ. ಪದಾರ್ಥಗಳನ್ನು ಸಂಗ್ರಹಿಸಿರುವವರೂ ಕೂಡ ಕೊಂಚ ಕಾಲದಲ್ಲಿ ನಿರಾಶ್ರಿತರಾಗುವರು. ಆಗ ನಾವು ಅವರಿಗೂ ಸಹಾಯ ಮಾಡಬೇಕಾಗುವುದು ಆದ್ದರಿಂದ ಈಗಲೇ ಸರಕಾರದವರು ಕ್ಷಾಮ ನಿಧಿಯನ್ನು ಸ್ಥಾಪಿಸಿ ಹಣ ಕೂಡಿಸಲು ಮುಂದೆ ಬರಬೇಕು" ಎಂದು ತಿಳಿಸಿದ್ದಾರೆ.

ಬಿಹಾರಿಗೆ ಗಾಂಧೀಜಿಯವರು

ಬಾಬು ರಾಜೇಂದ್ರ ಪ್ರಸಾದರು ಗಾಂಧೀಜಿಯವರಿಗೆ ತಂತಿ ಕಳುಹಿಸಿ ಅದಷ್ಟು ಬೇಗನೇ ಬಿಹಾರಿನ ಪ್ರವಾಸವನ್ನು ಕೈಗೊಳ್ಳಬೇಕೆಂದು ತಿಳಿಸಿದರು. ಅದಕ್ಕೆ ಗಾಂಧೀಜಿಯವರು "ನಾನು ಬರುವುದು ಅಗತ್ಯವಿದ್ದ ಪಕ್ಷದಲ್ಲಿ ಫೆಬ್ರುವರಿ ೨೪ ಅನಂತರ ಬರುವನು. ಇನ್ನೂ ಮುಂಚೆಯೆ ಬರಬೇಕೆಂದರೆ ಒರಿಸ್ಸದ ಪ್ರವಾಸವನ್ನು ನಿಲ್ಲಿಸಿ ಮಾರ್ಚ್ ೯ನೇ ತಾ|| ಅಲ್ಲಿಗೆ ಬರುವೆನು" ಎಂದು ತಿಳಿಸಿದ್ದಾರೆ.

ವೈಸರಾಯರ, ಬಾಬು ರಾಜೇಂದ್ರ ಪ್ರಸಾದರ ಮತ್ತು ಕಲಿಕತ್ತೆಯ ನೇಯವರ ಪರಿಹಾರ ನಿಧಿಗಳಿಗೆ ಹಣ ಕಳುಹಿಸುವವರು 'ಮನಿಯಾರ್ಡರ್ ಕವಿಪಷ್' ಕೊಡಬೇಕಾಗಿಲ್ಲವೆಂದು ಅಂಜೆ ಶಾಖೆಯವರು ತಿಳಿಸಿದ್ದಾರೆ.

"ನಾನು ಪ್ರತಿ ಸೋಮವಾರ ಉಪವಾಸ ಮಾಡಿ ನನಗೆ ಖುಷಿಯವಿ ರೂಪಾಯನ್ನು ಬಿಹಾರ ಪರಿಹಾರಕ್ಕೆ 'ಹಿಂದೂ' ಪತ್ರಿಕೆಯ ಸಂಪಾದಕರಿಗೆ ಕೊಡುತ್ತೇನೆ" ಎಂದು ಮದ್ರಾಸಿನ ಒಬ್ಬರು ಅನಾಮಧಾರಿಗಳು ಬಾಬು ರಾಜೇಂದ್ರ ಪ್ರಸಾದರಿಗೆ ಪತ್ರಬರೆದಿದ್ದಾರೆ.

ಕೈಗಾರಿಕೆ-ಪರಸ್ಪರ ಸಹಾಯ

ಮೈಸೂರು ಪ್ರಭುತ್ವ ಪ್ರಕಟನೆಗಳು

ಪರಸ್ಪರ ಸಹಾಯ ಶಾಖೆಯ ಆಡಳಿತ

೧೯೩೩ನೆಯ ಇಸವಿಯ ಜೂನ್ ತಿಂಗಳಿನ ತಾರೀಖಿಗೆ ಮುಗಿದ ಸಾಲಿನಲ್ಲಿ ಸಂಸ್ಥಾನದ ಪರಸ್ಪರ ಸಹಾಯ ಸಂಘಗಳನ್ನು ನಡೆದ ಆಡಳಿತದ ವಾರ್ಷಿಕ ವರದಿಯ ಮೇರೆ ಸರ್ಕಾರದವರ ಏಮರ್ಶೆ- ಈ ಸಂಘಗಳಿಂದ ತೃಪ್ತಿಕರವಾಗಿ ಕೆಲಸ ನಡೆಯುತ್ತಿದೆಯೆಂದೂ, ಅವು ವೃದ್ಧಿಹೊಂದುತ್ತಿವೆಯೆಂದೂ ಆ ವರದಿಯಿಂದ ಕಂಡುಬರುತ್ತದೆ. ಈ ಪರಸ್ಪರ ಸಹಾಯ ಸಂಘಗಳ ಏರ್ಪಾಟು ಮೈಸೂರು ಸಂಸ್ಥಾನದಲ್ಲಿ ೧೯೧೦ನೆಯ ಇಸವಿಯಲ್ಲಿ ಪ್ರಾರಂಭವಾಯಿತು; ಮತ್ತು ಅದರ ಪ್ರಯೋಜನಗಳು ಈಗ ೩೦ ವರ್ಷಗಳಿಂದಲೂ, ಏಕರೀತಿಯಾಗಿ ಹೆಚ್ಚುತ್ತಲೇ ಇವೆ. ಪ್ರಸಕ್ತ ವರ್ಷದ ಕೊನೆಯ ಹೊತ್ತಿಗೆ ಸಂಸ್ಥಾನದಲ್ಲಿ ೨,೧೮೦ ಸಂಘಗಳು ಕೆಲಸ ನಡೆಸುತ್ತಿದ್ದವು; ಇವುಗಳಲ್ಲಿ ಒಟ್ಟು ೧,೪೪,೪೬೮ ಮಂದಿ ಸದಸ್ಯರುಗಳಿದ್ದರು; ಅವುಗಳ ಕೆಲಸ ನಡೆಸುವ ಬಂಡವಾಳವು ೩೫೫.೦೯ ಲಕ್ಷ ರೂಪಾಯಿಗಳು ಸಂಘಗಳಿಗೆ ಪಾವತಿಯಾಗಿದ್ದ ಪಾಲು ಮೊಬಲಗು ೫೦.೪೦ ಲಕ್ಷ ರೂಪಾಯಿಗಳು, ಮತ್ತು ಸಂಘಗಳಲ್ಲಿ ನಡೆದ ಒಟ್ಟು ಜಮಾಖರ್ಚು ೭೨೮ಲಕ್ಷ ರೂಪಾಯಿಗಳನ್ನಾಗಿದ್ದಿತು. ಜನಗಳು ಈ ಸಂಘಗಳಲ್ಲಿ ೧೩೩ ಲಕ್ಷ ರೂಪಾಯಿಗಳಷ್ಟು ರೇವಣಿಗಳನ್ನಿಟ್ಟಿದ್ದರು. ಈ ಸಂಘಗಳಿಂದ ೧೦೪|| ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಸಾಲವಾಗಿ ಕೊಡಲಾಯಿತು ಕಡೆಯಲ್ಲಿ ಈ ಸಂಘಗಳಿಂದ ೪.೬೪ ಲಕ್ಷ ರೂಪಾಯಿಗಳ ನಿವ್ವಳಲಾಭವು ದೊರಕಿತು; ಅಭದ್ಧನವಾಗಿ ೨೬.೯೦ ಲಕ್ಷ ರೂಪಾಯಿಗಳು ಶೇಖರವಾಗಿದ್ದುವು. ಹಿಂದಣ ಸಾಲಿನಲ್ಲಿದ್ದಂತೆಯೇ ಈ ಸಾಲಿನಲ್ಲಿಯೂ, ನಾನಾ ಸಂಘಗಳಿಗೂ ಅವಲಂಬನವಾಗಿ ಕೆಲಸ ಮಾಡುತ್ತಿದ್ದ 'ಸೆಂಟ್ರಲ್ ಸೊಸೈಟಿ'ಗಳೆಂಬ ಕೇಂದ್ರ ಸಂಘಗಳು ೧೪ ಇದ್ದುವು ಸಂಸ್ಥಾನದಲ್ಲಿ ಕೆಲಸ ನಡೆಸುತ್ತಿರುವ ಪರಸ್ಪರ ಸಹಾಯ ಸಂಘಗಳಲ್ಲಿ ವ್ಯವಸಾಯ ಸಂಬಂಧವಾದ ಸಂಘಗಳೇ ಬಹಳವಾಗಿವೆ ಇವುಗಳ ಸಂಖ್ಯೆಯು ಪ್ರಸಕ್ತವರ್ಷ ೧,೧೩೩ ಆಗಿದ್ದಿತು. ಇವುಗಳಲ್ಲಿ ಒಟ್ಟು ೭೧೧೪೪ ಮಂದಿ ಸದಸ್ಯರಿದ್ದರು ಈ ಸಂಘಗಳ ಪೈಕಿ ೧,೬೦೫ ಸಂಘಗಳು ಲೇವಾದೇವಿ ಸಂಘಗಳಾಗಿದ್ದುವು ವ್ಯವಸಾಯಕ್ಕೆ ಸಂಬಂಧಪಡದ ಸಂಘಗಳು ಉಳಿದ ಇದ್ದುವು ಇವುಗಳಲ್ಲಿ ೭೦,೩೭೦ ಮಂದಿ ಸದಸ್ಯರುಗಳಿದ್ದರು. ಮತ್ತು ಒಟ್ಟು ಕೆಲಸನಡೆಸುವ ಬಂಡವಾಳವು ೯೯.೩೨ ಲಕ್ಷ ರೂಪಾಯಿಗಳಾಗಿದ್ದಿತು. ಈ ಮೊಬಲಗಿನ ಪೈಕಿ ಪಾಲುಗಳ ಬಾಬತು ಬಂದ ಮೊಬಲಗು ೩೧.೨೧ ಲಕ್ಷ ರೂಪಾಯಿಗಳು. ಈ ಸಂಘಗಳಲ್ಲಿ ಜನರು ೪೪.೯೭ ಲಕ್ಷ ರೂಪಾಯಿಗಳ ವರೆಗೆ ರೇವಣಿ ಇಟ್ಟಿದ್ದರು, ೧೨.೯೦ ಲಕ್ಷ ರೂಪಾಯಿಗಳಷ್ಟು ಅಪದ್ಧನವಿದ್ದಿತು ಸಾಮಾನ್ಯಗಳನ್ನು ದಾಸ್ತಾನು ಇಟ್ಟು ವ್ಯಾಪಾರಮಾಡುವ ಸಂಘಗಳು ಪ್ರಸಕ್ತವರ್ಷ ೬೯ ಇದ್ದುವು ಇವುಗಳಲ್ಲಿ ೫೨,೭೩೪ ಮಂದಿ ಸದಸ್ಯರುಗಳಿದ್ದರು. ಇವುಗಳಲ್ಲಿ ಕೆಲಸ ನಡೆಸುವುದಕ್ಕಾಗಿ ಎಲ್ಲ ಒಟ್ಟು ೧೬.೬೯ ಲಕ್ಷ ರೂಪಾಯಿಗಳ ಬಂಡವಾಳವಿದ್ದಿತು. ಇವುಗಳಲ್ಲಿ ಒಟ್ಟು ೧೨.೧೪ ಲಕ್ಷ ರೂಪಾಯಿಗಳು ಬೆಲೆಬಾಳುವ ಆಹಾರ ಸಾಮಗ್ರಿಯೇ ಮೊದಲಾದ ಸಾಮಾನುಗಳನ್ನೂ ಮತ್ತು ಜವಳಿಯನ್ನೂ ಕ್ರಯಕ್ಕೆ ತಂದರು; ಮತ್ತು ೧೩ ಲಕ್ಷ ರೂಪಾಯಿಗಳವರೆಗೆ ಮಾರಾಟ ಮಾಡಿದರು. ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ, ಸಾಲಕೊಡುವ ಸಂಘಗಳಲ್ಲದೆ ಇರತಕ್ಕ ಇತರ ವಿಧದ ಸಂಘಗಳೂ ಇದ್ದುವು. ಇವುಗಳಲ್ಲಿ, ಮನೆ ಕಟ್ಟುವುದಕ್ಕೆ ಸಹಾಯ ಮಾಡುವ ಸಂಘಗಳು ೩೩, ರೇಷ್ಮೆ ಕೈಗಾರಿಕೆಯ ಸಂಘಗಳು ೫೦, ನೆಯ್ಗೆಯವರ ಸಂಘಗಳು ೬೯ ಮತ್ತು ಜಮೀನು ಅಡಮಾನದ ಸಂಘಗಳು ೧೫. ಇನ್ನುಳಿದವು, ಅಡಕ್ಕೆ ಬೆಳೆಯುವವರಿಗೂ, ಗೂಡು ಗರಿಗೂ ಬಂಡಿಗಳನ್ನು ತಯಾರು ಮಾಡುವವರಿಗೂ, ಮತ್ತು ಕುಶಲಕಲಾ ಕೈಗಾರಿಕೆಗಳವರಿಗೂ ಸೇರಿದ ಸಂಘಗಳೇರ್ಪಟ್ಟಿದ್ದುವು ನಿಮ್ನವರ್ಗದ ಜನಗಳ ಸಹಾಯಾರ್ಥವಾಗಿ ಏರ್ಪಟ್ಟ ಸಂಘಗಳು ಪ್ರಸಕ್ತವರ್ಷ ೨೫೦ ಇದ್ದುವು ಇವುಗಳಲ್ಲಿ ೬,೦೬೦ ಮಂದಿ ಸದಸ್ಯರುಗಳಿದ್ದರು; ಪಾಲುಗಳ ಬಾಬತು ಪಾವತಿಯಾದ ಹಣವು ಸ್ವಲ್ಪ ಹೆಚ್ಚು ಕಡಮೆ ಅರ್ಧಲಕ್ಷ ರೂಪಾಯಿಗಳ ವರೆಗೂ ಇದ್ದಿತು. ಈ ಸಂಘಗಳಿಗೆ ಕೆಲಸ ನಡೆಸುವುದಕ್ಕೆ ಬೇಕಾದ ಬಂಡವಾಳಕ್ಕಾಗಿ ಸರ್ಕಾರದವರು ಅರ್ಧಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ವ್ಯವಸಾಯ ಸಂಬಂಧವಾಗಿ ಸ್ಥಾಪಿತವಾಗಿರುವ ಲೇವಾದೇವಿ ಸಂಘಗಳಲ್ಲಿಯೂ, ವ್ಯವಸಾಯಕ್ಕೆ ಸಂಬಂಧವಿಲ್ಲದ ಇತರ ಸಂಘಗಳಲ್ಲಿಯೂ ಕೆಲವು ಸಂಘಗಳ ಹೊರತು ಉಳಿದವುಗಳೆಲ್ಲಾ ತೃಪ್ತಿಕರವಾಗಿ ಕೆಲಸ ಮಾಡಿ ಅಭಿವೃದ್ಧಿ ದೆಸೆಯಲ್ಲಿದ್ದುವು. ನಿಮ್ನ ವರ್ಗದವರಿಗಾಗಿ ಏರ್ಪಡಿಸಿರುವ ಸಂಘಗಳನ್ನು ಪ್ರತ್ಯೇಕ ಸಂಘಗಳಂತೆ ಇಟ್ಟಿರುವುದರಿಂದ ಅವುಗಳು ಸರಿಯಾಗಿ ಕಾರ್ಯಗಳನ್ನು ನಡೆಸುತ್ತಿಲ್ಲವೆಂದು ಪರಸ್ಪರ ಸಹಾಯ ಸಂಘಗಳ 'ರಿಜಿಸ್ಟ್ರಾರ್'ರು ಅಭಿಪ್ರಾಯ ಪಟ್ಟಿದ್ದಾರೆ. ಅವುಗಳನ್ನು ಆಯಾ ಸ್ಥಳದಲ್ಲಿರುವ ಲೇವಾದೇವಿ ಸಂಘಗಳ ಜತೆಗೇ ಸೇರಿಸಿ ಒಟ್ಟುಗೂಡಿಸಬೇಕೆಂದು ಅವರು ಸೂಚಿಸಿದ್ದಾರೆ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿ, ಈ ಸಂಘಗಳ ಕಾರ್ಯಗಳು ಮತ್ತಷ್ಟು ಉತ್ತಮವಾಗಿ ನಡೆಯುವಂತೆ ಏರ್ಪಾಡು ಮಾಡುವ ವಿಷಯದಲ್ಲಿ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಶಾಖೆಯ ಆಡಳಿತವು ಒಟ್ಟಿನಮೇಲೆ ತೃಪ್ತಿಕರವಾಗಿ ನಡೆದಿದೆಯೆಂದೂ, ಆದರೆ ಪರಸ್ಪರ ಸಹಾಯ ಸಂಘಗಳನ್ನು ಶಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಇನ್ನು ಜೆನ್ನಾಗಿಯೂ, ಕ್ರಮವಾಗಿಯೂ, ತನಿಖೆ ಮಾಡುವುದು ಅವಶ್ಯಕವೆಂದೂ ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ ಪರಸ್ಪರ ಸಹಾಯ ಸಂಘಗಳ ಏರ್ಪಾಟು ಅಭಿವೃದ್ಧಿಯಾಗುವುದಕ್ಕೆ ನಾನಾ ವಿಧದಲ್ಲಿ ಕೆಲಸಮಾಡಿ, ದೇಶದಲ್ಲಿ ಸಂಪದಭಿವೃದ್ಧಿಗೆ ಸಹಾಯ ಮಾಡಿರುವ ಖಾಸಗಿ ದೊಡ್ಡ ಮನುಷ್ಯರೆಲ್ಲರಿಗೂ ಸರ್ಕಾರದವರು ತಮ್ಮ ವಂದನೆಗಳನ್ನು ಸೂಚಿಸಿ ವರದಿಯ ವಿಮರ್ಶೆಯನ್ನು ಮುಕ್ತಾಯಗೊಳಿಸಿದ್ದಾರೆ.

ವಿ ವೆಂಕಟವ್ಯಾಸಾಚಾರ್ಯ,
ಮೈಸೂರು ಸರ್ಕಾರದ ಪ್ರಕಟನ ಶಾಖಾಧಿಕಾರಿ.

ಸಂಸ್ಥಾನದ ಕೈಗಾರಿಕೆಗಳು

(೧೯೩೩ನೇ ವಾರ್ಷಿಕ ವರದಿಯ ವಿಮರ್ಶೆ)

ವ್ಯಾಪಾರಗಳ ಮುಗ್ಗಟ್ಟಿನ ದುರವಸ್ಥೆಯು ಪ್ರಸಕ್ತ ಸಾಲಿನಲ್ಲಿಯೂ ಇದ್ದಿತು. ಹೀಗಿದ್ದಾಗ್ಯೂ ಕೈಗಾರಿಕೆಗಳಿಗೆ ಸಂಬಂಧಪಟ್ಟ ೩೩ ಯಂತ್ರಗಳು ಸ್ಥಾಪನೆ ಮಾಡಲ್ಪಟ್ಟುದಾಗಿ ವರದಿಯಿಂದ ಕಂಡುಬರುತ್ತದೆ. ೧೯೩೯-೩೩ನೆಯ ಸಾಲಿನಲ್ಲಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ೩೫ ಯಂತ್ರಗಳು ಮಾತ್ರ ಸ್ಥಾಪನೆಯಾಗಿದ್ದುವು. ಇವುಗಳ ಪೈಕಿ ಒಂಬತ್ತು ಬತ್ತಕುಟ್ಟುವ ಯಂತ್ರಗಳು. ೭ ಪಂಪುಗಳಿಂದ ನೀರೆತ್ತುವ ಯಂತ್ರಗಳು. ಈ ಯಂತ್ರಗಳ ಸ್ಥಾಪನೆಗಳಿಗೆ ಅವಶ್ಯಕವಾದ ಯಂತ್ರ ಜ್ಞಾನದ ಸಹಾಯವನ್ನೂ ಮತ್ತು ಸಲಹೆಗಳನ್ನೂ ಶಾಖೆಯ ಅಧಿಕಾರಿಗಳು ಕೊಟ್ಟರು. ಗ್ರಾಮಾಂತರದಲ್ಲಿಯೂ ಮತ್ತು ಇತರ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಕಾರ್ಯಗಳಿಗೆ ಪ್ರೋತ್ಸಾಹಕೊಡುವುದಕ್ಕಾಗಿ, ಶಾಖೆಯವರು ಯೋಗ್ಯವಾದ ಸಂದರ್ಭಗಳಲ್ಲಿ ಸಾಲವನ್ನು ಮಂಜೂರ್ಮಾಡಿದರು. ಈ ರೀತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ೬೯,೦೦೦ ರೂಪಾಯಿಗಳನ್ನು ಸಾಲವಾಗಿ ಕೊಡಲಾಯಿತು ಖಾಸಗಿ ಕೈಗಾರಿಕೆಗಳ ಮೂಲೀಕರಿಗಳಿಗೆ ಮುಂಗಡವಾಗಿ ಕೊಟ್ಟ ಒಟ್ಟು ೨೮ಲಕ್ಷ ರೂಪಾಯಿಗಳ ಪೈಕಿ, ಉಳಿದ೭೧ ರೂಪಾಯಿಗಳು ವ್ಯಕ್ತ ವರ್ಷ ವಸೂಲಾಹದುವು ಆದರೆ ೨ ಲಕ್ಷ ರೂಪಾಯಿಗಳಷ್ಟು ಮೊಬಲಗು ವಸೂಲಾಗದೆ ಬಾಕಿ ನಿಂತಿರುತ್ತದೆ ಹೀಗೆ ಬಾಕಿ ನಿಂತಿರುವ ಮೊಬಲಗನ್ನು ೨೩ ಜಾಗ್ರತೆಯಾಗಿ ವಸೂಲ್ಮಾಡುವುದಕ್ಕೆ ಕಾರ್ಯಕಾರಿಯಾದ ಕ್ರಮಗಳನ್ನು ಶಾಖಾಧಿಕಾರಿಗಳು ನಡೆಸಬೇಕೆಂದು ಸರ್ಕಾರದವರ ಸೂಚನೆ

ಕೆಲವು ಕೈಗಾರಿಕೆ ಕಾರ್ಖಾನೆಗಳನ್ನು ಹಿಂದಿನ ವರ್ಷಗಳಂತೆಯೇ ಪ್ರಸಕ್ತ ವರ್ಷದಲ್ಲಿಯೂ ಶಾಖೆಯವರೇ ಸ್ವಂತವಾಗಿ ನಡೆಯಿಸಿದರು. ಪ್ರಸಕ್ತ ವರ್ಷ 'ಸೆಂಟ್ರಲ್ ಇಂಡಸ್ಟ್ರಿಯಲ್' ವರ್ಕ್‌ಷಾಪಿನಲ್ಲಿ ೧,೧೨,೫೫೭ ರೂಪಾಯಿಗಳ ಮೊಬಲಗಿನಷ್ಟು ಕೆಲಸವು ನಡೆಯಿತು. 'ಸೆಂಟ್ರಿಫ್ಯೂಗಲ್' ಪಂಪು'ಗಳನ್ನೂ, ಕೈಗಾರಿಕೆ ಪ್ರಯೋಗಶಾಲೆಗೂ ಸರ್ಕಾರದ ಸಾಬೂನ ಕಾರ್ಖಾನೆಗೂ ಅವಶ್ಯವಾದ ಇತರ ಯಂತ್ರ ಸಾಧನಗಳನ್ನೂ ತಯಾರ್ಮಾಡುವ ಪ್ರಯೋಗ ಕಾರ್ಯಗಳಿಗೆ ಬಹಳವಾಗಿ ಗಮನವನ್ನು ಕೊಡಲಾಯಿತು ವ್ಯವಸಾಯದ ಶಾಖೆಯವರ ಕೋರಿಕೆಯ ಮೇರೆಗೆ, ಉತ್ತಮ ರೀತಿಯ ವ್ಯವಸಾಯದ ಮುಟ್ಟುಗಳನ್ನು ಹಿಂದಿನಂತೆಯೇ ಪ್ರಸಕ್ತವರ್ಷವೂ ತಯಾರಿಸಲಾಯಿತು. ಸರ್ಕಾರದ ಸಾಬೂನಿನ ಕಾರ್ಖಾನೆಯಲ್ಲಿ ಹೆಚ್ಚು ಸಾಬೂನುಗಳು ತಯಾರಾದವು. ಇದಲ್ಲದೆ, ಈ ಕಾರ್ಖಾನೆಯಲ್ಲಿ ಅನೇಕ ಶ್ರೇಷ್ಠವಾದ ಸುಗಂಧ ವಸ್ತುಗಳನ್ನು ತಯಾರಿಸಿದರು. ಘನಹೊಂದಿದ ಬರ್ಮಾ ಗವರ್ನರವರು ತಮ್ಮ ಕುಟುಂಬಕ್ಕೆ ಸಾಬೂನುಗಳನ್ನು ಮೈಸೂರು ಸರ್ಕಾರದ ಸಾಬೂನಿನ ಕಾರ್ಖಾನೆಯಿಂದಲೇ ಕೊಳ್ಳುವಂತೆ ಅಜ್ಞಾಪಿಸಿ, ಸಾಬೂನುಗಳನ್ನು ಕಳುಹಿಸಲು ಅಪ್ಪಣೆಯನ್ನು ದಯಪಾಲಿಸಿದ್ದಾರೆ. ಕೈಗಾರಿಕೆಗೆ ಸಂಬಂಧಪಟ್ಟ ಪ್ರಯೋಗ ಶಾಲೆಯನ್ನು ಕೈಗಾರಿಕೆಯ ಮತ್ತು ವಸ್ತು ಪರೀಕ್ಷೆಯ ಪ್ರಯೋಗ ಶಾಲೆಯಾಗಿ ಮಾರ್ಪಡಿಸಿ ಒಂದು ಹೊಸ ಕೆಲಸವನ್ನು ಅದಕ್ಕೆ ವಹಿಸಲಾಯಿತು ಸರ್ಕಾರದ ನಾನಾ ಶಾಖೆಗಳಿಗೂ 'ಸ್ಟೋರ್ಸ್ ಪರ್ಚೇಸ್ ಕಮಿಟಿ'ಯ ಮೂಲಕ ತರಿಸುವ ನಾನಾ ಸಾಮಾನುಗಳ ಮಾದರಿಗಳನ್ನೂ ಅಲ್ಲಿಗೆ ಕಳುಹಿಸಿ. ಮಾರಾಟಗಾರರು ಹೇಳಿರುವಷ್ಟು ಯೋಗ್ಯತೆಯು ಅವಕ್ಕುಂಟೇ—ಎಂಬುದನ್ನು ಪರೀಕ್ಷೆಮಾಡಿಸಿ ನೋಡುವುದೇ ಹಾಗೆ ವಹಿಸಿದ ಹೊಸಕೆಲಸ. ಈ ಪ್ರಯೋಗ ಶಾಲೆಯವರು ೧೨,೪೬೩ ರೂಪಾಯಿ ಬೆಲೆ ಬಾಳುವ ಔಷಧ ವಸ್ತುಗಳನ್ನು ತಯಾರಿಸಿದುದಲ್ಲದೆ, 'ಸ್ಟೋರ್ಸ್ ಪರ್ಚೇಸ್' ಕಮಿಟಿ'ಯವರು ಕಳುಹಿಸಿದ ನಾನಾ ವಸ್ತುಗಳನ್ನೂ ಪರೀಕ್ಷಿಸಿ ನೋಡಿದರು.

ಕೈಮಗ್ಗಗಳ ನೆಯ್ಗೆ ಕೆಲಸಕ್ಕೆ ಎಂದಿನಂತೆಯೇ ಪ್ರಸಕ್ತ ವರ್ಷವೂ ಗಮನಕೊಡಲಾಯಿತು. ಸರ್ಕಾರಿ ನೆಯ್ಗೆಯ ಕಾರ್ಖಾನೆಯಲ್ಲಿ ಶಿಕ್ಷಣಹೊಂದಿದ ವಿದ್ಯಾರ್ಥಿಗಳಿಗೆ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಹಲವು ಗಿರಣಿಗಳಲ್ಲಿ ೬-೬ ತಿಂಗಳುಗಳ ಕಾಲ ರೂತ್ತಿ ಭಾಗದ ಶಿಕ್ಷಣವನ್ನು ಪಡೆಯುವುದಕ್ಕೆ ಏರ್ಪಾಟ್ಗಳನ್ನು ಮಾಡಲಾಗಿದ್ದಿತು. ರೇಷ್ಮೆಯನ್ನು ಹುರಿಮಾಡುವ ಯಂತ್ರವನ್ನೂ ಮತ್ತು ನೆಯ್ಗೆಯ ಯಂತ್ರಗಳನ್ನು ಮತ್ತಷ್ಟು ಉತ್ತಮಗೊಳಿಸುವ ವಿಷಯದಲ್ಲಿಯೂ ಮತ್ತು ವಿದ್ಯುಚ್ಛಕ್ತಿ ಶಾಖೆಯವರಿಗೆ ಬೇಕಾದ ವಿದ್ಯುಚ್ಛಕ್ತಿಯು ಹರಿಯುವ ತಂತಿಗಳಿಗೆ ಸುತ್ತುವ ರೇಷ್ಮೆ ರಿಬ್ಬನುಗಳ ನೆಯ್ಗೆಯ ಯಂತ್ರದ ವಿಷಯದಲ್ಲಿಯೂ ಪ್ರಯೋಗ ಕಾರ್ಯಗಳನ್ನು ನಡೆಸಲಾಯಿತು ಜಿಲ್ಲಾ

ನೆಯ್ಗೆಯ ನಿದರ್ಶನದ ಗುಂಪಿನವರು ೫೯ ನೆಯ್ಗೆಯ ಕೇಂದ್ರಗಳಿಗೆ ಹೋದ್ದರು; ಮತ್ತು ೬,೦೦೦ ರೂಪಾಯಿಗಳು ಬೆಲೆಬಾಳುವ ಉತ್ತಮಪಡಿಸಿದ ನೆಯ್ಗೆಯ ಸಾಮಾನುಗಳನ್ನು ನೆಯ್ಗೆಯವರಿಗೆ ಒದಗಿಸಿದರು. ಮೈಸೂರಿನಲ್ಲಿರುವ ರೇಷ್ಮೆಯ ನೆಯ್ಗೆಯ ಹೊಸ ಕಾರ್ಖಾನೆಯ ನೆಯ್ಗೆಯ ಶಾಲೆಯಲ್ಲಿ ಅತ್ಯುತ್ತಮ ಗುಣದ ರೇಷ್ಮೆಯ ಸೀರೆಗಳು ತಯಾರಾದುವು ಅವುಗಳು ಬಹು ಜಾಗ್ರತೆಯಲ್ಲಿಯೇ ಮಾರಾಟವಾದುವು. ಬಣ್ಣಹಾಕುವ ಮತ್ತು ಹದಗೊಳಿಸುವ ಶಾಖೆಗಳು ಬೆಳವಣಿಗೆಯ ಇಸವಿ ಜುಲೈ ತಿಂಗಳಿನಿಂದ ಕ್ರಮವಾಗಿ ಕೆಲಸಗಳನ್ನಾರಂಭಿಸಿದುವು. ಸರ್ಕಾರಿ ನೆಯ್ಗೆಯ ಶಾಖೆಯಿಂದ ಬಂದ ಸೀರೆಗಳಿಗೆ ಬಣ್ಣಹಾಕಿ ಹದಗೊಳಿಸುವ ಕಾರ್ಯದ ಜತೆಗೆ ಶಾಖೆಯವರು ಸಾರ್ವಜನಿಕ ಸೀರೆಗಳಿಗೂ ಬಣ್ಣ ಹಾಕಿ ಹದಗೊಳಿಸುವ ಕೆಲಸವನ್ನು ಮಾಡಿಕೊಟ್ಟರು.

ಸರ್ಕಾರಿ ಪಿಂಗಾಣಿ ಕಾರ್ಖಾನೆಯವರು ೬,೦೦೦ ವೋಲ್ಟುಗಳ ವಿದ್ಯುಚ್ಛಕ್ತಿಯು ಸಾಗುವ ತಂತಿಗಳಿಗಾಗಿ ೩೧,೪೪೫ ಇನ್ಸುಲೇಟರುಗಳನ್ನೂ ೧,೩೦೦ ವೋಲ್ಟುಗಳ ವಿದ್ಯುಚ್ಛಕ್ತಿಯು ಸಾಗುವ ತಂತಿಗಳಿಗಾಗಿ ೩,೧೭೫ ಇನ್ಸುಲೇಟರುಗಳನ್ನೂ ಮತ್ತು ೫೦೦ ಒಳತಂತಿಯ ಇನ್ಸುಲೇಟರುಗಳನ್ನೂ ತಯಾರಿಸಿದರು. ಚಾವಣಿಯ ಮೇಲಿನಿಂದ ವಿದ್ಯುಚ್ಛಕ್ತಿಯ ತಂತಿಯ ಇಳಿಯಬಿದ್ದಿರುವ ದೀಪಗಳಿಗಾಗಿ ಚಾಂವಣಿಯ ಎಳೆ ಹಾಕುವ ಪಿಂಗಾಣಿ ದುಂಡುಗಳ ಮಾದರಿಯ ಇನ್ಸುಲೇಟರುಗಳನ್ನು (ಕ್ಲೆವಿಸ್ ಮಾದರಿ ಇನ್ಸುಲೇಟರುಗಳನ್ನು) ತಯಾರಿಸುವ ವಿಷಯದಲ್ಲಿ ಪ್ರಯೋಗಗಳು ನಡೆಯುತ್ತಿವೆ.

೧೫,೪೬೬ ರೂಪಾಯಿಗಳ ವೆಚ್ಚದಿಂದ ಯಂತ್ರದಿಂದ ಕೊರೆದ ೧೪೮ ಭಾವಿಗಳನ್ನು ತೆಗೆಸಲಾಯಿತು. ನೀರಾವರಿಗೆ ನೀರನ್ನು ಒದಗಿಸುವುದಕ್ಕೆ ಅನುಕೂಲವಾಗುವಂತೆ ೧೦ ಅಂಗುಲಗಳ ಮತ್ತು ೧೬½ ಅಂಗುಲಗಳ ವ್ಯಾಸ ರೇಖೆಯುಳ್ಳ ೫೪ ಬಾವಿಗಳನ್ನು (ಟ್ಯೂಬ್‌ವೆಲ್) ತೆಗೆಯುವುದಕ್ಕೆ ಪ್ರಯತ್ನಗಳನ್ನು ನಡೆಸಲಾಯಿತು.

ಬದನವಾಳ, ಹಿರಕಣಾಂಬಿ, ಅಜ್ಜಂಪುರ ಮತ್ತು ಏಮಂಗಲದಲ್ಲಿರುವ ನೂಲುವ ಕಾರ್ಯಾಲಯಗಳಲ್ಲಿ ಕೆಲಸವು ಚೆನ್ನಾಗಿ ನಡೆಯುತ್ತಿದೆಯೆಂದು ವರದಿಯಾಗಿದೆ ಈ ಕಾರ್ಯಾಲಯಗಳಲ್ಲಿ ತಯಾರಾದ ಒಟ್ಟಿಗೆಗಳಿಗೆ ಕೂಡಲಿ ಗಿರಾಕಿಯು ದೊರಕುತ್ತಿದ್ದಿತೆಂದು ವರದಿಯಿಂದ ಗೊತ್ತಾಗುತ್ತದೆ.

ವೈದ್ಯ ಮತ್ತು ಕೈಗಾರಿಕೆಯ ವಿದ್ಯಾಭ್ಯಾಸವು 'ಪ್ರಸಕ್ತ'ಸಾಲಿನಲ್ಲಿ ಎಂದಿನಂತೆಯೇ ತೃಪ್ತಿಕರವಾಗಿ ಅಭಿವೃದ್ಧಿ ಹೊಂದಿತು ಈ ಶಾಖೆಯ ಅಡಳಿತದಲ್ಲಿ, ಟೆಕ್ನಿಕಲ್ ಇನ್‌ಸ್ಟಿಟ್ಯೂಟ್'ನ ಜೊತೆಗೆ ಲೈಕೈಗಾರಿಕೆಯ ಪಾಠಶಾಲೆಗಳಿದ್ದುವು. ಇವುಗಳಲ್ಲಿ ಒಟ್ಟು ೭೦೦ ಮಂದಿಗಿಂತ ಹೆಚ್ಚಾಗಿ ವಿದ್ಯಾರ್ಥಿಗಳಿದ್ದರು ಈ ಪಾಠಶಾಲೆಗಳಲ್ಲಿ ದೊರೆಯುವ ಶಿಕ್ಷಣದಿಂದ ಜನರಿಗೆ ಹೆಚ್ಚಾಗಿ ಪ್ರಯೋಜನವುಂಟಾಗುವಂತೆ, ಈ ಸಂಸ್ಥೆಗಳಲ್ಲಿ ಕಲಿಸುವ ಪಾಠಕ್ರಮಗಳನ್ನು ಎಚ್ಚರಿಕೆಯಿಂದ ಪುನರ್ವ್ಯವಸ್ಥೆಮಾಡಿ ಮಾರ್ಪಡಿಸಬೇಕೆಂದು ಸರ್ಕಾರದವರು ಅಭಿಪ್ರಾಯ ಪಡುತ್ತಾರೆ ಇದಲ್ಲದೆ, ವಿರಾಮಕಾಲದಲ್ಲಿ ಮನೆಯಲ್ಲಿ ನಡೆಯಬಹುದಾದ ಕೈಗಾರಿಕೆಗಳನ್ನು ಕಲಿಸುವ ತರಗತಿಗಳು ಬೆಂಗಳೂರು, ಮೈಸೂರು ಮತ್ತು ಚಿಕ್ಕಮಗಳೂರಿನಲ್ಲಿದ್ದುವು. ಇಂಥವು ಹತ್ತು ತರಗತಿಗಳಿದ್ದುವು. ಅವಕ್ಕೆ ಸರ್ಕಾರದಿಂದ ಸಹಾಯ ದ್ರವ್ಯವು ದೊರುತ್ತಿದ್ದಿತು. ಪ್ರಸಕ್ತ ಸಾಲಿನಲ್ಲಿ ಈ ತರಗತಿಗಳಲ್ಲಿ ಒಟ್ಟು ೧೩೪ ಮಂದಿ ಸ್ತ್ರೀಯರು ಶಿಕ್ಷಣವನ್ನು ಪಡೆಯುತ್ತಿದ್ದರು.

ರಫ್ತಾದ ವಸ್ತುಗಳು ಒಟ್ಟು ಪರಿಮಾಣದಲ್ಲಿಯೂ ಮೌಲ್ಯದಲ್ಲಿಯೂ ಕಡಿಮೆಯಾದುದು ಪ್ರಸಕ್ತವರ್ಷದ ವ್ಯಾಪಾರದ ಮುಖ್ಯ ಲಕ್ಷಣವಾಗಿದೆ. ರಫ್ತಾದ ಸಾಮಾನುಗಳ ಕೂಲವು ೫೯,೬೬,೬೬೬ ರೂಪಾಯಿಗಳು. ಅವುಗಳ ಬೆಲೆಯು ಒಂದು ಕೋಟಿ ರೂಪಾಯಿಗಳು ಒಟ್ಟು ೧೧೩ ಲಕ್ಷ ಮಣಾಗಳಷ್ಟು ವಸ್ತುಗಳು ಆಮದಾದುವು. ಆವುಗಳ ಬೆಲೆಯು ಸುಮಾರು ೧೧೧೮ ಕೋಟಿ ರೂಪಾಯಿಗಳು ಆಹಾರ ವಸ್ತುಗಳಲ್ಲಿಯೂ ಮತ್ತು ಬಟ್ಟೆಗಳಲ್ಲಿಯೂ ಕೆಲವಕ್ಕೆ ಧಾರಣೆ ಒಂದೇ ಸಮವಾಗಿದ್ದಿತು; ಮತ್ತೆ ಕೆಲವಕ್ಕೆ ಧಾರಣೆಗಳು ಹೆಚ್ಚುವ ಲಕ್ಷಣಗಳು ಕಂಡುಬಂದುವು. ಎಲ್ಲಕ್ಕಿಂತ ಹೆಚ್ಚಾಗಿ ನಷ್ಟವು ಸಂಭವಿಸಿದ ವಸ್ತುಗಳೆಂದರೆ, ರೇಷ್ಮೆಯು ನೂಲುಮತ್ತು ರೇಷ್ಮೆಯ ಸಾಮಾನುಗಳು; ಜಪಾನು ಮತ್ತು ಚೀನಾ ದೇಶಗಳಿಂದ ಬಹು ಹೆಚ್ಚಾಗಿ ಪೈಪೋಟಿಯುಂಟಾದುದರಿಂದ ಹೀಗೆ ನಷ್ಟಕ್ಕೆ ಕಾರಣವಾಯಿತು. ಈ ರೀತಿ ನಷ್ಟ ತಟ್ಟದಿರುವ ಹಾಗೆ ಮಾಡುವುದಕ್ಕಾಗಿ ವಿದೇಶಗಳಿಂದ ಬರುವ ರೇಷ್ಮೆಗೆ ಸುಂಕವನ್ನು ಹಾಕುವ ವಿಷಯವು ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ವಸ್ತುಗಳಿಗೆ ಸುಂಕದ ವಿಷಯದಲ್ಲಿ ರಿಯಾಯಿತಿಯು ತೋರಿಸಲ್ಪಟ್ಟಿರುವ ಪ್ರಯುಕ್ತ, ಇಂಗ್ಲೆಂಡಿನಲ್ಲಿ ಮೈಸೂರಿನ ಕಲ್ಲುಗಲಿಗೆ ಹೆಚ್ಚು ಗಿರಾಕಿಯಿದ್ದಿತು

ಕೂಲಿಯವರ ಎರಡು ಸಣ್ಣ ಗಲಭೆಗಳು ನಡೆದುವು ಅವುಗಳು ಹೊರತು ಬಂಡವಾಳಗಾರರಿಗೂ ಕೂಲಿಯವರಿಗೂ ಸಂಪೂರ್ಣವಾಗಿ ಸೌಹಾರ್ದಭಾವವೂ ಮೈತ್ರೀಭಾವವೂ ಇದ್ದುವು. ಗಣಿಯ ಕಂಪೆನಿಗಳವರೂ ಮತ್ತು ಕೂಲಿಯವರನ್ನು ಹೆಚ್ಚಾಗಿ ಕೆಲಸಕ್ಕೆ ನೇಮಿಸಿಕೊಳ್ಳುವ ಕೆಲವು ಇತರ ಜನರೂ ಕೂಲಿಯವರ ಕ್ಷೇಮಾರ್ಥವಾಗಿ ಅವರಿಗೆ ಸೌಕರ್ಯಗಳನ್ನು ಕಲ್ಪಿಸುವ ವಿಷಯಕ್ಕೆ ಹೆಚ್ಚು ಗಮನಕೊಡುತ್ತಿದ್ದಾರೆ

ಮೊಹರು ಹಾಕಿ ಸರ್ಕಿಫೈ ಮಾಡಲ್ಪಟ್ಟ ಕೂಳದ ಬಟ್ಟೆಗಳನ್ನೂ ಮತ್ತು ಅಳತೆಯ ಸಾಧನಗಳನ್ನೂ ಕಡ್ಡಾಯವಾಗಿ ಉಪಯೋಗಿಸಬೇಕೆಂಬ ನಿಬಂಧನೆಯನ್ನು ೧೬ ಊರುಗಳಲ್ಲಿ ಆಚರಣೆಗೆ ತರಲಾಯಿತು ತೂಕದ ಬಟ್ಟೆಗಳನ್ನೂ, ಅಳತೆಯ ಸಾಧನಗಳನ್ನೂ ಪರೀಕ್ಷಿಸಿ ಕರಾರ್ವಾಕಾದುವುಗಳೆಂದು ಮೊಹರು ಹಾಕುವುದಕ್ಕಾಗಿ, ಅರ್ಧಾಣೆ ದರದಂತೆ ಹಾಕಿದ್ದ ರುಸುಮನ್ನು ಪ್ರಸಕ್ತ ಸಾಲಿನಲ್ಲಿ ಒಂದು ಆಣೆ ದರಕ್ಕೆ ಹೆಚ್ಚಿಸಲಾಯಿತು.

ಸ್ತ್ರೀಯರ ಪರಿಹಾರದ್ರವ್ಯಕ್ಕೆ ಸಂಬಂಧಪಟ್ಟ ಮೇರೆಗೆ, ಒಟ್ಟು ೫೦೨ ಸಂದರ್ಭಗಳನ್ನು 'ಕಮಿಷನರು' ಗಳು ವ್ಯವಸ್ಥೆ ಮಾಡಬೇಕಾಗಿದ್ದಿತು ಈ ಪೈಕಿ, ೧೯೬ ಸಂದರ್ಭಗಳು ವ್ಯವಸ್ಥೆಯಾದುವು ಗಾಯಗಳಿಗೆ ಗುರಿಯಾದ ಕೆಲಸಗಾರರಿಗೂ, ಮತ್ತು ಗಾಯಗಳಿಂದ ಕೆಲಸಗಾರರು ವ್ಯತಪಟ್ಟ ಸಂದರ್ಭಗಳಲ್ಲಿ ಅವರ ಪೋಷ್ಯ ವರ್ಗದವರಿಗೂ ಕಮಿಷನರುಗಳು ಒಟ್ಟು ೫೬,೬೬೬ ರೂಪಾಯಿಗಳನ್ನು ಪರಿಹಾರದ್ರವ್ಯವಾಗಿ ಕೊಡಿಸಿದರು ಪ್ರಸಕ್ತವರ್ಷದಲ್ಲಿ ಕೈಗಾರಿಕೆಗಳ ಇಲಾಖೆಯ ಕೆಲಸವು ಸಮರ್ಪಕವಾಗಿದ್ದಿತೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ

ವಿ ವೆಂಕಟವ್ಯಾಸಾಚಾರ್ಯ
ಮೈಸೂರು ಸರ್ಕಾರದ ಪ್ರಕಟಣೆಗಳ ಕರ್ತೃ

ವಾಚಕರ ಪತ್ರಗಳು

ಸಂಪಾದಕರ ಉತ್ತರಗಳು

ಕಾಗತಿ

ಶ್ರೀ ಪಟೇಲ್ ರಾಜಾರಾಯರೆಂಬುವರು ಒರೆದ ಒಂದು ಲೇಖನಕ್ಕೆ ಚಿಂತಾಮಣಿಯ ಶ್ರೀ ಕೂರಗಾಯಲ ವೆಂಕಟರಾಯಪ್ಪನವರು ತಿಳಿಸಿರುವ ಮುದ್ರೆ ಹಾಕಿ ಪ್ರಕಟನೆಗಾಗಿ ಕಳಿಸಿದ್ದಾರೆ ಇದರ ಮೇಲೆ ಆದಕ್ಕೆ 'ಪ್ರತ್ಯಕ್ಷದರ್ಶಿ' ಎಂಬ ಗುಪ್ತ ನಾಮಧೇಯ ಬೇರೆ ಇಂತಹ ಪತ್ರಗಳನ್ನು ನಾವು ಪ್ರಕಟಿಸುವುದಿಲ್ಲವೆಂದು ಮೇಲಿಂದ ಮೇಲೆ ಹೇಳುತ್ತಿದ್ದೇವೆ ಆದರೂ ಜನರು ಹಿಂಗೇಕೆ ವರ್ತಿಸುವರೋಂಗೊತ್ತಿಲ್ಲ ಲೇಖನವಾದರೂ ಕಾಗತಿಯ ಶಾಲೆ, ಅಧ್ಯಾಪಕರು, ಇತ್ಯಾದಿಗಳ ಮೇಲಿನ ಟೀಕೆಯಾಗಿದೆ ಇಂತಹ ಪತ್ರಗಳಿಗೆ 'ವಿಶ್ವಕರ್ನಾಟಕ'ದಲ್ಲಿ ಸ್ಥಳ ಸಿಗಲಾರದು

ಶಿವನಗೆರೆ

ಜೋಡೀದಾರ್ ಶ್ರೀ ಹರಿಪ್ರೋತ್ತಮ ರಾಯರಿಗೆ ವೃತ್ತಪತ್ರಿಕಾಕರ್ತರ ಜವಾಬ್ದಾರಿಯ ತಿಳಿವಳಿಕೆ ಹೆಚ್ಚಾಗಿದ್ದಹಾಗೆ ಅವರು ನಮಗೆ ಬರೆದಿರುವ ಪತ್ರದಿಂದ ಸ್ಪಷ್ಟವಾಗುತ್ತದೆ ಹಾಗಾದರೆ ಅವರೇ ಆ ಕೆಲಸ ನಡೆಸಬಹುದಲ್ಲ? 'ವಿಶ್ವಕರ್ನಾಟಕ'ಕ್ಕೆ ಅವರು ಒಯ್ಯುವ ಯೋಗ್ಯತೆಯಿಲ್ಲವೆಂದು ವಿನಯದಿಂದ ನಾವು ಕಾಳಜಿಯಲ್ಲಿವು ನಮ್ಮಮಿತಿ ನಮಗೆ ಗೊತ್ತಿದೆ ರಂಧ್ರಾನ್ವೇಷಣವು ಪತ್ರಿಕಾ ಸೇವೆಯಲ್ಲ. ಒಂದು ಪತ್ರಗಳೆಲ್ಲ ಉತ್ತರ ಕೊಡುತ್ತಿರುವುದು ಪತ್ರಿಕಾಕರ್ತರ ಕೆಲಸವಲ್ಲ ಮಧುಗಿರಿ ಉಪಾಧ್ಯಾಯ ಶ್ರೀ ವಾಸುದೇವಾಚಾರ್ಯರ ವಿಚಾರವಾಗಿ ಶಿಕ್ಷಣ ಶಾಖಾಧಿಕಾರಿಗಳು ವಿಚಾರಣೆ ನಡೆಸುತ್ತಿರುವ ಹಾಗೆ ನಮಗೆ ಪತ್ರ ಒಂದಿದೆ ಮುಂದವರೇನು ಮಾಡುವರೆಂಬುದನ್ನು ನಾವು ಸಹನೆಯಿಂದ ಕಾದು ನೋಡಬೇಕಾಗಿದೆ

ದೇವನಹಳ್ಳಿ

ರಾಗಿ ಒಕ್ಕಣೆ ಮತ್ತು ಕಬ್ಬಿನ ಅಲೆಮನೆ ಕೆಲಸಗಳು ಮಳೆಯಿಲ್ಲದೆ ನಿರಾತಂಕವಾಗಿ ನಡೆಯುತ್ತಿವೆ ಅವರಿಬೇಳೆ ಸುತರಾಂ ಇಲ್ಲ. ಅಲೂಗಡ್ಡೆ ಬೆಳೆಗೆ ಹಿಂದಿನ ವರ್ಷ ಕೀಡೆಹುಳಬಿದ್ದು ನಾಶವಾಗಿತ್ತು ಈವರ್ಷವೂ ಈಜೆಗೆ ೩-೪ ದಿನಗಳಿಂದ ಇದರ ಕಾಟ ಹೆಚ್ಚುತ್ತಿದೆ. ಈ ಕೀಡೆ ಹಳುಗಳಿಗೆ ಔಷಧಿ ಹಾಕಲು ಬೆಂಗಳೂರಿನ ಶ್ರೀ ವರದರಾಜುಲುಯವರು ಬಹಳ ಉತ್ಸಾಹ ಮಾಡು

[೧೧ನೇ ಪುಟವನ್ನು ನೋಡಿ]

ಶ ರೂಗೆ ಶ ಗಡಿಯಾರಗಳೂ ಸಾಮಾನುಗಳೂ
ಇಂತಹ ಸುವರ್ಣ ಸಂಧಿಯನ್ನು ಕಳೆದುಕೊಳ್ಳಬೇಡಿ

ಮೂರು ಫ್ಯಾನ್ಸಿ ಟ್ರೈಬಲ್ ಕೈ ಗಡಿಯಾರಗಳು ಚಿನ್ನಕ್ಕಿಂತ ಮೇರಗು ಹೆಚ್ಚು. ಬಣ್ಣ ೫ ವರ್ಷ ಗ್ಯಾರಂಟಿ. ಬರ್ಮ ಟೈಂಪೀಸ್ ೧೦ ವರ್ಷ ಗ್ಯಾರಂಟಿ ಕೆಸೆಯದು ಲಿವರ್ ವಾಚ್. ಕಲ್ಲುಮೇಲೆ ಹಾಕಿದರೂ ಒಡೆಯದು. ೪ ವರ್ಷ ಗ್ಯಾರಂಟಿ ಜ್ವಲಿರುವ ಒಂದು ಹಂಟಿಂಗ್ ಪಂಜು ಒಂದು ಸ್ವರಾಜ್ಯ ಫೌಂಟಿನ್‌ಪೆನ್ ಚಿನ್ನದ ಮುಳ್ಳು ಸಹಿತ ಇಷ್ಟೆಲ್ಲಿ ೫ ರೂಗಳಿಗೆ ವ್ಯಾಕಿಂಗ್, ಅಂಚೆವೆಚ್ಚ ಬೇರೆ (ಗ್ಯಾರಂಟಿ ಕಾಲ ದಲ್ಲಿ ಪುಕ್ಕಟೆ ರಿಪೇರಿ ಮಾಡಿಕೊಡಲಾಗುತ್ತದೆ ಬೇಡವಾದರೆ ಹಣ ವಾಪಸು.)

ಶರ್ಮ ಬ್ರದರ್ಸ್ ಅಂಡ್ ಕೋ ಪೋ. ಬಾ. ೨೪೧೨ ನೆಕ್ಷ್ಟ್ (೧೦) ಕಲಿಕತ್ತೆ.

ಶ್ರೀ ತಾರಾನಾಥರ ಸತ್ಯದ ವಿಪರ್ಯಾಸ

[ವಿಜಯನಗರ ಸಾಮ್ರಾಜ್ಯ ಕುರಿತು ಆರಂಭವಾಗಿರುವ ಈವಾದ ವಿವಾದಗಳ ಪತ್ರವ್ಯವಹಾರವನ್ನು ಈ ಪತ್ರದಿಂದ ನಾವಾದರೂ ಮುಗಿಸಿರುತ್ತೇವೆ. ಉಭಯಂ ಭಪಕ್ಷದವರ ಹೇಳಿಕೆಗಳಿಗೂ ಅವಕಾಶಕೊಟ್ಟುದಾಯಿತು. ಇನ್ನುಮುಂದೆ 'ವಿಶ್ವಕರ್ಣಾಟಕ'ದಲ್ಲಿ ಈ ವಾದಕ್ಕೆ ಸ್ಥಳ ಸಿಗಲಾರದು. ಸಂ.]

೬–೨–೩೪ನೇ ತಾ|| ದಿನ ಸಂಯುಕ್ತ ಕರ್ಣಾಟಕದಲ್ಲಿ ಶ್ರೀವರ್ಮಾ ಅಲೂರವರು ಪಂ. ತಾರಾನಾಥರಾಯರು ತಮ್ಮ ಇಚ್ಛೆಗೆ ಮನ್ನಣೆಯನ್ನಿತ್ತು ವಿಜಯನಗರ ಸಂಬಂಧವಾದ ವಾದವನ್ನು ಮುಂದೆ ಬೆಳೆಸುವ ದಿಲ್ಲವಾಗಿ ಒಪ್ಪಿಕೊಂಡಿರುವರು; ಆದುದರಿಂದ ಉಭಯ ಪಕ್ಷದವರು ಈ ವಾದವನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಪ್ರಕಟಿಸಿದ್ದಾರೆ. ಈ ಮಾತಿಗೆ ತಪ್ಪಿ ಪಂಡಿತರು ೧೯–೨–೩೪ನೇ ವಿಶ್ವಕರ್ಣಾಟಕದಲ್ಲಿ ಆ ಚರ್ಚೆಯ ಬಗೆ ಪತ್ರವನ್ನು ಸ್ಫುಸಿದ್ಧಿಸಿದ್ದಾರೆ. ಹೀಗೆ ಒಪ್ಪಂದವನ್ನು ಮುರಿದು ಪ್ರಸಿದ್ಧಮಾಡಿದ ಪತ್ರದಲ್ಲಿಯೂ ಕೂಡ ತಾರಾನಾಥರಾಯರು ಸತ್ಯದ ವಿಪರ್ಯಾಸವನ್ನು ಮಾಡಿರುವದರಿಂದ ನಿಜವಿದ್ದುದನ್ನು ಜನತೆಗೆ ತಿಳಿಸುವದು ನಮ್ಮ ಕರ್ತವ್ಯವೆನಿಸಿದ್ದರಿಂದ ಈ ಕೆಳಗಿನ ಮಾತುಗಳನ್ನು ನಾವು ನಿರ್ವಾಹವಿಲ್ಲದೆ ಬರೆಯಬೇಕಾಯಿತು.

ಗತವೈಭವವನ್ನು ಬರೀ ಹೊಗಳುತ್ತ ಅದೇ ನಮ್ಮ ಸರ್ವಸ್ವವೆಂದು ಕುಳಿತುಕೊಳ್ಳುವ ಪ್ರವೃತ್ತಿಯು ಕರ್ಣಾಟಕದಲ್ಲಿ ಬಹಳವಾಗಿರುವದೇನೋ ನಿಜ. ಈ ಮಬ್ಬಿನಿಂದ ಬಡಿದೆಬ್ಬಿಸಿ, ಹಿಂದಿನ ವೈಭವದ ಸಾರವನ್ನು ಹೀರಿ, ಇಂದು ಪುನಃ ವೈಭವವನ್ನು ನಿರ್ಮಾಣ ಮಾಡುವದೇ ತರುಣರ ಕರ್ತವ್ಯವೆಂಬುದು, ನವ-ಕರ್ಣಾಟಕವನ್ನು ಕಾರ್ಯೋನ್ಮುಖವನ್ನಾಗಿ ಮಾಡುವದು ಸದ್ಯದಲ್ಲಿ ಮಾಡಬೇಕಾದ ದೊಡ್ಡ ಕೆಲಸವೆಂಬುದೂ ನಿಜ. ಇಂತಹ ಕೆಲಸವನ್ನು ತಾರಾನಾಥರಂಥ ವ್ಯಕ್ತಿಗಳೇ ಮಾಡಲು ಸಮರ್ಥರೆಂಬುದೂ ನಿಜ ಆದರೆ ಹೀಗೆ ಮಾಡುವಾಗ್ಗೆ ಸತ್ಯದ ವಿಪರ್ಯಾಸೆಯನ್ನು ಮಾಡಿದರೆ ಮಾತ್ರ ಲಾಭಕ್ಕೆಂತ ಹಾನಿಯೇ ಹೆಚ್ಚಾಗುತ್ತದೆಂಬುದನ್ನು ಯಾರೂ ಮರೆಯಲಾಗದು.

ಪಂ. ತಾರಾನಾಥರು ಬರೆದ ತಮ್ಮ ಪತ್ರದ ಅವತರಣಿಕೆಯಲ್ಲಿ ಹಾಕಿಕೊಟ್ಟ "....ಆದರೆ ಸುಖಲೋಲುಪತೆಗಳಿಂದಲೇ ಯಾವ ರಾಜ್ಯವೂ ನೂರಾರು ವರ್ಷಗಳು ಬಾಳಿರದು. ಬಾಳಲಾರದು. ಆದರಲ್ಲಿ ಒಂದು ದೊಡ್ಡ ಶಕ್ತಿ ಇದ್ದೇ ತೀರಬೇಕು ... ..."ಎಂಬ ವಾಕ್ಯವಾಗಲೀ, ಆ ಅರ್ಥದ ಒಂದು ಶಬ್ದವಾಗಲೀ ಅಂದಿನ ಅವರ ಆ ಇಡೀ ವ್ಯಾಖ್ಯಾನದಲ್ಲಿ ಹೊರಟಿಲ್ಲವೆಂದು ಸತ್ಯವನ್ನು ಸ್ಮರಿಸಿ, ಅಂದಿನ ಸಭೆಗೆ ಹೋದವನಾವು ಘಂಟಾಘೋಷವಾಗಿ ಹೇಳುತ್ತೇವೆ. ಇದಕ್ಕೆ ವಿರುದ್ಧವಾಗಿ ವಿಜಯನಗರದಲ್ಲಿ ಏನೂ ಘನತೆ ಇದ್ದಿಲ್ಲವೆಂದು ಸಾಧಿಸುವದೇ ಅವರು ಅಂದಿನ ವ್ಯಾಖ್ಯಾನದಲ್ಲಿ ವಿಜಯನಗರದ ವಿಷಯಕ್ಕೆ ಮಾತನಾಡಿದ ಭಾಗದ ಮೊದಲಿನಿಂದ ಕೊನೆಯವರೆಗಿನ ವಸ್ತುವಿಯಾಗಿತ್ತು. ತಾರಾನಾಥರ ಅಭಿಪ್ರಾಯವು ಈಗ ಬದಲಾಗಿದ್ದರೆ ನಮಗೆ ಸಂತೋಷ. ಅಂದು ಮಾತ್ರ ಈ ಮೇಲಿನ ಅವತರಣಿಕೆಯಲ್ಲಿಯ ಅಭಿಪ್ರಾಯವನ್ನು ಹೇಳಲಿಲ್ಲವೆಂದು ಇನ್ನೊಮ್ಮೆ ನಿರ್ಭಯವಾಗಿ ಹೇಳುತ್ತೇವೆ. ಆ ಅಭಿಪ್ರಾಯದ ಒಂದೇ ಒಂದು ವಾಕ್ಯವನ್ನು ಅದರೂ ಹೇಳಬಿಟ್ಟಿದ್ದರೆ ಇಷ್ಟೆಲ್ಲ ವಾದ ಬೆಳೆಯುತ್ತಲೇ ಇರಲಿಲ್ಲ.

ಬರೀ ಕುಂದುಕೊರತೆಗಳನ್ನು ತೋರಿಸಿಕೊಟ್ಟ ಮಾತ್ರಕ್ಕೇ ಯಾವ 'ವಿಮರ್ಶೆಯನ್ನರಿತ ಕಾಲೇಜಿನ ವಿದ್ಯಾರ್ಥಿಯ' ಮನಸ್ಸು ಕದಡುವದು ಶಕ್ಯವಿಲ್ಲ. ಅದರೊಡನೆ ಇದ್ದ ಗುಣಾಂಶಗಳನ್ನು ಸಾಕಷ್ಟು ಉದಾಹರಣೆಗಳಿಂದ ಹೇಳಿ, ಶ್ರೋತೃವೃಂದದ ಮನಸ್ಸನ್ನು ಸಮತೂಕಕ್ಕೆ ತರದೆ, ಆ ಕುಂದುಕೊರತೆಗಳೇ ನಮ್ಮ ಸರ್ವಸ್ವವೆಂದು ವಸ್ತುಸ್ಥಿತಿಯನ್ನು ವಿಪರ್ಯಾಸ ಮಾಡಿದಾಗ್ಗೆ ಮಾತ್ರ 'ಮಾತಿಗೆ ತಕ್ಕ ಬೆಲೆ ಕಟ್ಟಲರ್ಹರಾದವರು' ಕಳವಳಗೊಳ್ಳುವದು. ವಿಜಯನಗರ ಸಾಮ್ರಾಜ್ಯದಲ್ಲಿ 'ಒಂದು ದೊಡ್ಡ ಶಕ್ತಿ ಇದ್ದೇತೀರಬೇಕು' ಎಂದು ತಾರಾನಾಥರು ತಿಳಿದಿದ್ದೇ ಆದರೆ, ಅದರಂತೆ ಅಂದು ಹೇಳಿದ್ದೇ ಅವರೆ ಆ ಶಕ್ತಿಯು ಅವಿರ್ಭಾವವಾದ ನಾಲ್ಕು ಉದಾಹರಣೆಗಳನ್ನು ಏಕೆ ಕೊಡಲಿಲ್ಲ? ಅವರು ತೆಗೆದುಕೊಂಡ ಇಡೀ ಸಾಮ್ರಾಜ್ಯದಲ್ಲಿಯ ಒಂದು ವ್ಯಕ್ತಿಯ ಹೆಸರಿಂದರೆ ವಿದ್ಯಾರಣ್ಯರೊಬ್ಬರದು ಅದೂ ಒಂದು ಪಂಚದಶೀ ಎಂಬ ಗ್ರಂಥವನ್ನು ಮಾತ್ರ ಬರೆದ, ಬರೀ ಗ್ರಂಥಕಾರನ ವೇಷದಲ್ಲಿಯ ವಿದ್ಯಾರಣ್ಯರದು. ಇವರು ಕೊಟ್ಟ ಎರಡನೆಯ ಮಹಾವಿಭೂತಿಯ ಹೆಸರೆಂದರೆ ತೆನ್ನಾಲಿ ರಾಮಕೃಷ್ಣನದು ಈ ಎರಡು ವ್ಯಕ್ತಿಗಳ ಹೆಸರನ್ನು ಮಾತ್ರ ಬಿಟ್ಟರೆ, ಅವರು ವಿಜಯನಗರದ ಘನತೆಯನ್ನು ತೋರಿಸುವಂತಹ ಯಾವ ತರಹದ ಉದಾಹರಣೆಯನ್ನೂ ಕೊಡಲಿಲ್ಲ. ಇದರಮೇಲೆ ಶ್ರೋತೃವೃಂದವು ಕಟ್ಟಿಕೊಳ್ಳಬೇಕಾದದ್ದು ಏನು?

(೧) ವಿಜಯನಗರದ ಶಕ್ತಿಯನ್ನು ಪ್ರದರ್ಶಿಸುವ ಉದಾಹರಣೆಗಳೇ ಇಲ್ಲವೆಂದು.

(೨) ಅಥವಾ ಇದ್ದುದಾದರೆ ತಾರಾನಾಥರಾಯರಿಗೆ ಗೊತ್ತಿಲ್ಲವೆಂದು

(೩) ಇಲ್ಲವೆ, ತಾರಾನಾಥರಾಯರಿಗೆ ಗೊತ್ತಿದ್ದೂ, ಅಂದಿನ ವ್ಯಾಖ್ಯಾನದ ವಿಷಯವು ಬೇರೆ ಇದ್ದುದರಿಂದ ಅವನ್ನು ಅಪ್ರಸ್ತುತವೆಂದು ಬಿಟ್ಟರೆ ಬೇಕೆಂದು.

ಮೊದಲನೇ ಪಕ್ಷದಲ್ಲಿ ಆ ರಾಜ್ಯದಲ್ಲಿ ಒಂದು ದೊಡ್ಡ ಶಕ್ತಿ ಇರಬೇಕೆಂಬುದು ಸುಳ್ಳಾಗುತ್ತದೆ. ಎರಡನೇ ಪಕ್ಷದಲ್ಲಿ ತಮಗೆ ಸಂಗತಿಗಳು ಗೊತ್ತಿಲ್ಲದ ಸಾಮ್ರಾಜ್ಯದ ಮೇಲೆ ಅಭಿಪ್ರಾಯವನ್ನಿಯಲು ರಾಯರು ಅಧಿಕಾರಿಗಳಾಗುವುದಿಲ್ಲ. ಸಯುಕ್ತಿಕ ವಿಚಾರವನ್ನೇ ಆರಾಧಿಸುವ ತಾರಾನಾಥರು ಎರಡನೇ ರೀತಿಯಲ್ಲಿರುವದು ಶಕ್ಯವಿಲ್ಲ ಮೂರನೆಯ ಪಕ್ಷದಲ್ಲಿ ಯಾವ ರೀತಿಯದೂ ಹೊಣೆಗಾರಿಕೆ ಇಲ್ಲದಂತಹ ವ್ಯಾಖ್ಯಾತೃಗಳ ಮಾಲೆಯಲ್ಲಿ ತಾರಾನಾಥರು ಸೇರಬೇಕಾಗುತ್ತದೆ. ಏಕೆಂದರೆ ವ್ಯಾಖ್ಯಾನದ ಮುಖ್ಯ ವಿಷಯವನ್ನು ಬಿಟ್ಟು, ಉಳಿದ ವಿಷಯಗಳನ್ನು ಅಷ್ಟೊಂದು ಒತ್ತಿ ಎತ್ತಿಗೊಳ್ಳಲೇ ಬಾರದು. ಇಲ್ಲವೇ ಹಾಗೆ ಎತ್ತಿಕೊಂಡ ಮೇಲೆ, ಆ ಅಮೂಲ್ಯ ವಿಷಯದ ಕುಂದುಗಳನ್ನಷ್ಟೇ ಬಹಳಹೊತ್ತು ಹೇಳಿ ಗುಣದ ವಿಷಯಕ್ಕೆ ಸಾಕಷ್ಟು ಮಾತನಾಡದಿದ್ದರೆ, ಶ್ರೋತೃ ಸಮುದಾಯದ ಮೇಲೆ ವಿರುದ್ಧ ಪರಿಣಾಮವಾಗುವದು ಸಹಜ. ಆದರೆ ಇದನ್ನೆನೂ ಲೆಕ್ಕಿಸದ ಬೇಜವಾಬ್ದಾರರ ವರ್ಗಕ್ಕೆ ತಾರಾನಾಥರು ಸೇರುವದೆಂತೂ ಅಸಂಭವ. ಆದುದರಿಂದ ವಿಜಯನಗರವು ನೂರಾರು ವರ್ಷ ಬಾಳಿದರೂ ಅದರಲ್ಲಿ ಏನೊಂದು ದೊಡ್ಡ ಶಕ್ತಿ ಇದ್ದಿಲ್ಲವೆಂದೇ ಅಂದು ಪಂಡಿತರಿಗೆ ಹೇಳಬೇಕಾಗಿತ್ತೆಂದು ಶ್ರೋತೃ ಸಮುದಾಯವು ಅರ್ಥ ಮಾಡಿಕೊಳ್ಳಲೇ ಬೇಕಾಗುತ್ತದೆ. ಅಂದು ಬಹುಜನ ವಿದ್ಯಾರ್ಥಿಗಳು ಕಳವಳಿಗೊಂಡುದೇ ಇದಕ್ಕೆ ಸಾಕ್ಷಿ.

ಹೀಗೇ ಅವರ ಅಂದಿನ ಅಭಿಪ್ರಾಯವಿತ್ತೆಂದು ಹೇಳಲಿಕ್ಕೆ ಅವರು ಗೈದ ಇನ್ನಿತರ ವಿಧಾನಗಳೂ ನಿದರ್ಶನಗಳಾಗಿವೆ. ಉಚ್ಚ ಸಂಸ್ಕೃತಿಯ ಲಕ್ಷಣಗಳ ಅವಶೇಷಗಳು ಇಲ್ಲವೆಂದು ಹೇಳಿದರು; ಎರಡು ಫರ್ಲಾಂಗಿದ್ದ ಸೂಳೆಗೇರಿಯನ್ನು ಎರಡು ಮೈಲೆಂದು ಅತಿಶಯೋಕ್ತಿ ಮಾಡಿದರು; ಪಂಚದಶೀ ಗ್ರಂಥಕರ್ತ ವಿದ್ಯಾರಣ್ಯರ, ಹಾಸ್ಯಕಾರ ತೆನ್ನಾಲಿ ರಾಮಕೃಷ್ಣನ ಹೊರತು ಮಹತ್ವದ ವ್ಯಕ್ತಿಗಳು ವಿಜಯನಗರ ಸಾಮ್ರಾಜ್ಯದಲ್ಲಿ ಇಲ್ಲವೆಂದರು. ಹೀಗಿದ್ದರೂ 'ವಿಜಯನಗರದಲ್ಲಿ ವೈಶಿಷ್ಟ್ಯವಿದ್ದಿಲ್ಲವೆಂದು ನಾನು ಹೇಳಲಿಲ್ಲ' ಎಂದು ರಾಯರು ಯಾವ ಕೈಯಿಂದ ಬರೆದಿದ್ದಾರೆ! ಅವರು ವೈಶಿಷ್ಟ್ಯವದೆ ಎಂದು ಹೇಳಿದ್ದ ಕರ್ಣಾಟಕದ್ದು; ವಿಜಯನಗರದ್ದಲ್ಲ. (ಆದರೆ' ಎಂದು ಒಪ್ಪಿಕೊಂಡ ಕರ್ಣಾಟಕದ 'ತಿರುಳು' ಏನೆಂಬುದನ್ನು ಕೂಡ ಹೇಳಲಿಲ್ಲ. ಅಮಾತು ಬೇರೆ) ಸಂಸ್ಕೃತಿಯ ಲಕ್ಷಣಗಳ ಅವಶೇಷಗಳನ್ನು ಒಪ್ಪಿಕೊಳ್ಳುವಿಕೆಯು, ಕುಂದನ್ನು ಅತಿಶಯೋಕ್ತಿಸಿ, ಇದ್ದ ಗುಣಗಳನ್ನು ಸಾಕಷ್ಟು ವಿದ್ವತ್ಪೂರ್ಣ ಕಡಿಮೆಮಾತ್ರ, ವಿಪರ್ಯಾಸ ಮಾಡಿದುದರ ಅರ್ಥವು 'ವಿಜಯನಗರದಲ್ಲಿ ಏನೂ ಇದ್ದಿಲ್ಲ. ಸೂಳೆಗೇರಿ ಶಕ್ತಿ ಇದ್ದೇ ತೀರಬೇಕು' ಎಂದು ನಮ್ಮ ಶಿಲ್ಪಬುದ್ಧಿಗೆ ಹೊಳೆಯಲಿಲ್ಲ

ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ದೊಡ್ಡ ಶಕ್ತಿ ಇದ್ದೇ ತೀರಬೇಕೆಂದು ತಾರಾನಾಥರು ಮನಸ್ಸಿನಲ್ಲಿ ತಿಳಿದುಕೊಂಡಿರಬಹುದು. ಅಂದಿನ ಸಭೆಯಲ್ಲಿ ಮಾತ್ರ ಅದರ ವಿಷಯದಲ್ಲಿ ಏನನ್ನೂ ಹೇಳಲಿಲ್ಲ ಈ ರೀತಿ ಅವರು ಬೇಕೆಂದು ಮಾಡಿದರೆಂದು ನಾವು ಆರೋಪಿಸುವದಿಲ್ಲ. ಪ್ರಮಾದವಾ ಇರಬಹುದು ಅದರೆ ಅದು ದೊಡ್ಡ ಪ್ರಮಾದವಾಯಿತು ಇದೂ ಅವರು ಅಂದಿನ ಸಭೆಯಲ್ಲಿ ಮಾಡಿದ ಮೊಪಲನ್ಸೇ ತಪ್ಪು ಅವಶೇಷಗಳನ್ನೊಳಗೊಂಡ ಸಕಲ ಐತಿಹಾಸಿಕ ಸಾಧನ ಸಾಮಗ್ರಿಗಳನ್ನು ಸಂಶೋಧಿಸದೆ, ಸುಣ್ಣ ಹೊಡೆಯಲ್ಪಟ್ಟ ಅಳಿದುಳಿದ ಕಲ್ಲುಮಣ್ಣನ್ನು ಮಾತ್ರ ನೋಡಿ, ಸಂಸ್ಕೃತಿಯ ಲಕ್ಷಣಗಳು ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದಿಲ್ಲವೆಂದು ಸಭೆಯಲ್ಲಿ ನಿರ್ಣಯ ಹೇಳಿದ್ದು ಎಷ್ಟು ನೇತಪ್ಪು (ತರುಣರು ಆ ಅವಶೇಷಗಳನ್ನ ಸಂಶೋಧಿಸಬೇಕೆಂದು ಹೇಳುವದು ರಾಯರ ಮನಸ್ಸಿನಲ್ಲಿದ್ದ ದಾದರೆ, 'ಸಂಶೋಧನೆ' ಎಂಬುದೊಂದು ಶಬ್ದವಾದರೂ ಅವರ ಅಂದಿನ ಇಡೀ ವ್ಯಾಖ್ಯಾನದಲ್ಲಿ? ಸಂಶೋಧನೆ ಬುದ್ಧಿಯ ಪ್ರಯೋಜಕಗಳಾದ 'ಇನ್ನೂ ವರೆಗೂ ಅವಶೇಷಗಳು ಸಿಕ್ಕಿಲ್ಲ.' 'ನಮ್ಮ ತರುಣರಲ್ಲಿ ಐತಿಹಾಸಿಕ ಜಿಜ್ಞಾಸೆ ಕಡಿಮೆ ಮುಂತಾವ ಒಂದಾದರೂ ಪದಪ್ರಯೋಗಗಳು? ಅದಕ್ಕೆ ಬದಲು 'ಒಂದಾದರೂ ಕುರುಹುಗಳನ್ನು ತೋರಿಸಬಲ್ಲಿರಾ?' ಎಂಬ ರಾಯರ ಪ್ರಶ್ನೆವು ಏನನ್ನು ಸೂಚಿಸುತ್ತದೆ? ನಾನಸ ಶಾಸ್ತ್ರವನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ ರಾಯರು, ತಾವು ಹೇಳಿದ ಮಾತುಗಳ ಅರ್ಥವು 'ವಿದ್ಯಾರ್ಥಿಗಳು ಸಂಶೋಧನೆ ಮಾಡಲಿ' ಎಂಬುದಿತ್ತೆಂದು ಬರೆದದ್ದು ನೋಡಿದರೆ ಬಹಳ ವಿಷಾದವಾಗುತ್ತದೆ.) ಇದ್ದ ಕುಂದನ್ನು ಅತಿಶಯೋಕ್ತಿ ಮಾಡಿದ್ದು ಮೂರನೇ ತಪ್ಪು. ಈ ಮೂರೂ ತಪ್ಪುಗಳನ್ನು ರಾಯರು ಸಭಾಗ್ರಹವನ್ನು ಬಿಟ್ಟು ಹೊರಗೆ ಬಂದ ಮೇಲೆ ಕೆಲವು ವಿದ್ಯಾರ್ಥಿಗಳ ತೋರಿಸಿಕೊಟ್ಟರೆ ಸಂತೋಷದಿಂದ ಒಪ್ಪಿಕೊಂಡು ಕೂಡಲೇ ಅವುಗಳನ್ನು ತಿದ್ದಿಕೊಳ್ಳದೆ, ಸಿಟ್ಟುಗೆದ್ದು, ತಪ್ಪು ಮಾಡಿದ್ದನ್ನೇ ಸಾಧಿಸಲಿಕ್ಕೆ ಪ್ರಯತ್ನ ಪಟ್ಟುದು ನಾಲ್ಕನೇ ತಪ್ಪು. ಇವೆಲ್ಲಕ್ಕೂ ಹೆಚ್ಚಾಗಿ "ಭಯದಾಕ್ಷಿಣ್ಯನಿಂದಾ ಸ್ತುತಿಗಳಾವಕ್ಕೂ" ಒಳಗಾಗದ ತಾರಾನಾಥರಾಯರು ಮಾನಾಪಮಾನಗಳ ಜಾಲಕ್ಕೆ ಬಿದ್ದು ಸಭೆಯಲ್ಲಿ ಹೇಳದಿದ್ದುದನ್ನು ಹೇಳಿರುತ್ತೇನೆಂದು ಪತ್ರದಲ್ಲಿ ಬರೆದಿರುವದು ಹಿರಿದಾದ ತಪ್ಪು. ತಾರಾನಾಥರಂಥ ಸತ್ಯನಿಷ್ಠರು ಈ ರೀತಿ ಸತ್ಯದ ಕೊಲೆಯನ್ನು ಮಾಡತೊಡಗಿದರೆ ಮುಂದೇನು? ಆದುದರಿಂದ ಶ್ರೀಯುತರು ಸಭೆಯಲ್ಲಿ ಹೇಳಿದುದನ್ನೆಲ್ಲಾ ಚನ್ನಾಗಿ ಸ್ಮರಿಸಿಕೊಂಡು, ದುರಾಗ್ರಹಕ್ಕೆ ಬೀಳದೆ, ಪ್ರಾಮಾಣಿಕತನದಿಂದ, ಸತ್ಯವಿದ್ದುದನ್ನು ಜನರ ಮುಂದೆ ಇಡುವರಾಗಿ ನಮ್ಮ ಭರವಸೆ. ಹೇಳಿದ್ದನ್ನು ಹೇಳಿಲ್ಲವೇದು ಅನ್ನಲಿಕ್ಕೆ ನಮಗೇನೂ ತಾರಾನಾಥರಾಯರ ವಿಷಯದಲ್ಲಿ ಯಾವ ತರದ ದ್ವೇಷಾಸೂಯೆಗಳಿಲ್ಲ. ಸತ್ಯ

[೧೦ನೇ ಪುಟವನ್ನು ನೋಡಿ]

ಸಿದ್ಧಿಮತೀ ದೇವಿ

ಮಹಾತ್ಮಾ ಗಾಂಧಿಯವರ ಸಬರಮತಿ ಸತ್ಯಾಗ್ರಹ ಆಶ್ರಮವಾಸಿಗಳಾಗಿದ್ದು ಕರ್ನಾಟಕದ ಪ್ರಾತಿನಿಧ್ಯವನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉತ್ತಮ ರೀತಿಯಿಂದ ತೋರಿಸಿದ ಬಹುಮಾನವು ಇಬ್ಬರು ಬಾಲವೀರ ಪತಿ ಪತ್ನಿಯರಿಗೆ ಸಲ್ಲುವುದು ಅವರು ಅಚ್ಚ ಕನ್ನಡಿಗರಂದ್ದು ಇದೀಗ ತಾರುಣ್ಯದಲ್ಲಿ ಕಾಲಿಡಹತ್ತಿದ್ದಾರೆ ಅವರ ವಯಸ್ಸು ಕ್ರಮವಾಗಿ ೧೧-೧೬ಕ್ಕೆ ಮಿಾರಿಲ್ಲ ಧಾರವಾಡ ಜಿಲ್ಲೆಗೆ ಸೇರಿದ ಮೋಟೆಬೆನ್ನೂರು ಅವರ ಮೊದಲಿನ ಊರು.

ಮಹಾತ್ಮ ಗಾಂಧಿಯವರ ಸಬರಮತಿ ಆಶ್ರಮವು ಪ್ರಾರಂಭವಾಗಿ ಅದು ಕೊನೆಗಾಣುವದರೊಳಗೆ ಎರಡು ಅತ್ಯಂತ ಮಹತ್ವದ ಸಂಗತಿಗಳು ಅದರ ಜೀವಮಾನದಲ್ಲಿ ಜರುಗಿದವು ೧೯೩೦ರಲ್ಲಿ ೫೯ ಜನ ಆರಿಸಿದ ಆಶ್ರಮ ವಾಸಿಗಳನ್ನೊಡಗೊಂಡು ಉಪ್ಪಿನ ಕಾಯಿದೆ ಭಂಗಕ್ಕಾಗಿ ದಾಂಡೀಯಾತ್ರೆಯನ್ನು ಕೈಕೊಂಡದ್ದು ಜಗತ್ತಿನಲ್ಲಿ ಜರುಗಿದ ಮಹೋತ್ಕರವಾದ ಸಂಗತಿಗಳಲ್ಲೊಂದಾಗಿದೆ ಅದರ ಪರಿಣಾಮವು ವಿದ್ಯುತ್ಪ್ರಭಾವದಿಂದ ವಿಶ್ವಪ್ರಪಂಚದ ಹೃದಯವನ್ನೇ ಸಂಚಲಿಸಿ, ಹೊಸ ಯುಗವನ್ನೇ ನಿರ್ಮಿಸಿದ್ದು ವಿದಿತವಿದೆ ಆದಕ್ಕಿಂತೆಯೇ ಅದಕ್ಕೂ ಮಹತ್ವವಾದ ಆದರೆ ಬಾಹ್ಯ ಜಗತ್ತಿನಲ್ಲಿ ಸರ್ವಸಾಮಾನ್ಯರ ಮೇಲೆ ಅಷ್ಟು ಪರಿಣಾಮಕಾರಕವಾಗದ ಮತ್ತೊಂದು ಮಹೋತ್ಸವ ಸಂಗತಿಯು ಕಳೆದ ವರ್ಷ ಜರುಗಿತ. ಮಹಾತ್ಮಾ ಗಾಂಧಿಯವರು ತಮ್ಮ ಜೀವನದ ಜೀವಾಳದಂತೆ ಕಾಪಾಡಿದ ಆಶ್ರಮವನ್ನು ತ್ಯಜಿಸಿ ರಾಸ್ ಮಹಾಯಾತ್ರೆಗೆ ಹೋದುದು. ಸಮುದಾಯಕ ಶಾಸನ ಭಂಗವನ್ನಿಂತು ವೈಯಕ್ತಿಕ ಕಾರ್ಯಕ್ರಮಗಳು ಪ್ರಾರಂಭವಾಗುವ ಮೊದಲು ಆಶ್ರಮವನ್ನು ತ್ಯಜಿಸಿ ವೈಯಕ್ತಿಕ ಜೀವನದ ಮಹತ್ವವನ್ನೂ ನ್ಯಾಯದ ಪರಮಾವಧಿಯನ್ನೂ ಆದರ್ಶ ಸೇವಾ ಜೀವನದ ಕ್ರಮವನ್ನೂ ಅವರು ಜಗತ್ತಿಗೆ ಕಿತ್ತುಹಾಕಿದರು. ಆಶ್ರಮ ತ್ಯಾಗದ ಪರಿಣಾಮವಾಗಿ ಅಸಂಖ್ಯಾತ ಜೀವಿಗಳ ಜೀವನವು ಹೊಸದಾಗಿ ಮಾರ್ಪಡಲನುವಾಗಿದೆ

ದಾಂಡೀ ಮಹಾಯಾತ್ರೆ, ರಾಸ್ ಮಹಾಯಾತ್ರೆಗಳು ಜಗತ್ತಿನ ಇತಿಹಾಸದಲ್ಲಿ ಕೆಂಪಕ್ಷರಗಳಿಂದ ಬರೆದಿಡತಕ್ಕವುಗಳಾಗಿವೆ. ಅಂಧ ಪ್ರಸಂಗಗಳೆರಡರಲ್ಲಿಯೂ ಕರ್ನಾಟಕ ಬಾಲವೀರರಿಗೆ ಸ್ಥಾನವು ದೊರೆತಿದ್ದು ನಮ್ಮ ಸುದೈವವು. ಆದರಲ್ಲಿಯೂ ಪತಿಗೆ ದಂಡೀ ಯಾತ್ರೆ; ಪತಿಗೆ ಅದಕ್ಕೂ ಮಹತ್ವದ ರಾಸ್‌ಯಾತ್ರೆಯು ಎಸಮಯ. ಪತಿಯ ಹೆಜ್ಜೆಯನ್ನನುಸರಿಸಿದ ಪತ್ನಿ ! ಇವರ ಪೂರ್ವಜನ್ಮದ ಪುಣ್ಯವಿರಬೇಕು. ಆವರೀರ್ವರೂ ಈಗ ಉಗ್ರ ಸತ್ಯಾಗ್ರಹಿಗಳು ಅವರ ಪೂರ್ವದ ಜೀವನವನ್ನರಿತವರಿಗೆ ಆಶ್ಚರ್ಯವಾಗುವುದಿಲ್ಲದೆ, ದೈವೀ ಚಿಚ್ಛೆಯ ಮುಂದೆ ಮಾನವನ ಆಟವೇನೂ ನಡೆಯದೆಂದು ಪ್ರತ್ಯಕ್ಷವಾಗುತ್ತದೆ.

ದಾಂಡೀಯಾತ್ರೆಗೆ ಕರ್ನಾಟಕದ ಪ್ರತಿನಿಧಿಯಾಗಿ ಹೋದ ನಮ್ಮ ಬಾಲವೀರ ಮಹದೇವ ಮಾರ್ತಾಂಡ ಮೈಲಾರ ಇವರ ಪರಿಚಯವು ಕರ್ನಾಟಕಕ್ಕಿದೆ. ಈಗ ನಾಲ್ಕೈದು ವರ್ಷಗಳ ಕೆಳಗೆ ಮಹದೇವನನ್ನ "ಮೂರು ವರ್ಷಗಳ ಕೆಳಗೆ ಈತನ ಪತ್ನಿಯನ್ನು (ಅವರಿನ್ನೂ ಪತಿ-ಪತ್ನಿಗಳ ಭಾವದಿಂದಿರುವುದಿಲ್ಲ) ಕಂಡವರು ಇವರ ಇಂದಿನ ಜೀವನವನ್ನು ಕಂಡು ಬೆರಗಾಗುವರು. ಅವರು ಈ ಜೀವನದಲ್ಲಿಡಿ ಇಟ್ಟಿದ್ದು ಕೇವಲ ಪ್ರಸಂಗ ಮಾತ್ರದಿಂದಲ್ಲ ಅದರಲ್ಲೊಂದು ದೈವೀ ಸಂಕೇತ ವಿದೆ. ಅದು ಪ್ರತ್ಯಕ್ಷ ವ್ಯಕ್ತವಾಗುತ್ತ ನಡೆದಿದೆ. ಕಣ್ಣಿದ್ದವರು ಅದನ್ನರಿಯುತ್ತಿದ್ದಾರೆ ಆಶ್ರಮಕ್ಕೆ ಹೋಗುವ ಪೂರ್ವದಲ್ಲಿದ್ದ ಆ ಮುಗ್ಧೆ ಸಿದ್ಧವ್ವನೂ ಈಗ ಗಾಂಧಿಯವರಿಂದ ಸಿದ್ಧಿಮತಿ ಎಂಬ ಹೆಸರನ್ನು ಪಡೆದಿರುವಳು. " ಇಷ್ಟುದ್ದೇಗ ಇವಳು ಇಷ್ಟೊಂದು ಮೇಲ್ತರ

ಶ್ರೀಮತಿ ಸಿದ್ಧಿವತಿ ದೇವಿಯವರು

ಗತಿಗೆ ಹೋಗಬಹುದೆಂದು ಯಾರೂ ನಿರೀಕ್ಷಿಸಿದ್ದಿಲ್ಲ; ಆವಳು ನಿಜವಾಗಿ ಸಿದ್ಧಿಮತಿಯೇ ಆಗಿದ್ದಾಳೆ " ಎಂದು ಬಾಪೂಜಿಯವರು ನಗುತ್ತ ಹೇಳಿದುದನ್ನು ಕೇಳಿ ಯಾವ ಕರ್ನಾಟಕಾಭಿಮಾನಿಗೆ ಆನಂದವೆನಿಸಲಿಕ್ಕಿಲ್ಲ. " ಈಕೆಯು ದ್ದೊಡ್ಡ ಮನೆತನದಿಂದ ಬಂದಿರಬೇಕು. ಇವಳ ಪ್ರತಿಯೊಂದು ನಡೆನುಡಿಯಲ್ಲಿ ಕರ್ನಾಟಕದ ವಿನಯವೂ ಕರ್ನಾಟಕದ ವಿಶಿಷ್ಟ ಸಂಸ್ಕೃತಿಯೂ ಒಡೆದು ಕಾಣುತ್ತವೆ " ಎಂದು ಆಶ್ರಮದ ಮಹಿಳೆಯರ ವ್ಯವಸ್ಥಾಪಕರಾದ ಪ್ರೇಮಬೆನ್ನರು ಹೇಳುತ್ತಿದ್ದುದನ್ನು ಕೇಳಿದ್ದಾಗಿದೆ. ಅಲ್ಲದೆ " ಅವಳು ಈಗ ಪೂರಾ ಗುಜರಾತಿಯಾಗಿದ್ದರೂ ಕರ್ನಾಟಕದ ವಿನಯವು ಮಾತ್ರ ಅಚ್ಚಳಿಯದೆ ಉಳಿದಿದೆ " ಎಂದು ಅಲ್ಲಿನ ವ್ಯವಸ್ಥಾಪಕರು ಬರೆದದ್ದನ್ನು ನೋಡಿಯಾಗಿದೆ. ಇವುಗಳ ಮೇಲಿಂದ ಕರ್ನಾಟಕಕ್ಕೆ ಅವರೊಂದು ಅಭಿಮಾನಾಸ್ಪದ ವ್ಯಕ್ತಿಗಳೆಂದು ನನ್ನ ಗ್ರಹಿಕೆ. ಅವರ ಪತಿಯು ಇನ್ನೂ ಬೆಳಗಾವಿ ಜೈಲಿನಲ್ಲಿದ್ದಾರೆ. ಅತ್ತೆಯವರು ಸೆರೆಮನೆ ವಾಸವನ್ನು ಪೂರೈಸಿ ಹೊರಗೆ ಬಂದಿದ್ದಾರೆ. ಸಿದ್ಧಮತಿಯವರೂ ಕೂಡ ಸಬರಮತಿ ಜೈಲಿನಿಂದ ಕಳೆದತಿಂಗಳು ಬಿಡುಗಡೆಯಾಗಿ ಮೊನ್ನೆ ಕರ್ನಾಟಕಕ್ಕೆ ಬಂದಿದ್ದಾರೆ. ಅಪ್ತಿಷ್ಟರನ್ನು ಅತ್ತೆಮಾವಂದಿರನ್ನು ನೋಡಿಕೊಂಡು ಮಹಾತ್ಮರ ಕರ್ನಾಟಕ ಸಂಚಾರದಲ್ಲಿ ಅವರೊಡನೆ ಹೋಗಿ ಮುಂದೆ ವಾರ್ಧಾ ಆಶ್ರಮಕ್ಕೆ ಹೋಗತಕ್ಕವರಿದ್ದಾರೆ.

'ಸುಂದರಿ' ನಾಟಕ

೧೧-೩-೩೪ನೇ ಭಾನುವಾರ ಸಂಜೆ ೬ ಘಂಟೆಗೆ ಶ್ರೀ ಶಿವಾನಂದ ನಾಟಕ ಮಂದಿರದಲ್ಲಿ ಬೆಂಗಳೂರಿನ 'ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್' ಕ್ಲಬ್ಬಿನವರು ಮುಲಕನಾಡು ಸಭೆಯವರ ಸಹಾಯಾರ್ಥವಾಗಿ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರ 'ಸುಂದರಿ' ಎಂಬ ಸಾಮಾಜಿಕ ನಾಟಕವನ್ನು ಪ್ರದರ್ಶಿಸಿದರು ನಾಟಕ ಮಂದಿರವು ಪ್ರೇಕ್ಷಕ ವರ್ಗದಿಂದ ತುಂಬಿದ್ದಿತು. ಅದರಲ್ಲೂ ಸ್ತ್ರೀಯರು ತಂಡತಂಡವಾಗಿ ಒಂದು ಸೇರಿದ್ದುದು ಪ್ರಶಂಸನೀಯವಾದ ವಿಷಯ ರಾಜಧರ್ಮ ಪ್ರವೀಣ ಚಂದ್ರಶೇಖರಯ್ಯರ' ಅವರು ಅಧ್ಯಕ್ಷತೆ ವಹಿಸಿದ್ದರು

'ಸುಂದರಿ'ಯು ಬ್ರಾಹ್ಮಣ ಸಮಾಜದಲ್ಲಿ ಬಾಲವಿಧವೆಯರ ಬಾಳಿನ ಗೋಳನ್ನು ಚಿತ್ರಿಸುವ ಸಾಮಾಜಿಕ ನಾಟಕ. ಸುಂದರಿಯ ತಾಯಿ ಇಂದಿರಮ್ಮನು ಮಗಳ ಕಷ್ಟವನ್ನು ತಾಳಲಾರದೆಯೋ ಎಂಬಂತೆ ತಮ್ಮ ಹತ ಭಾಗ್ಯ ಮಗಳನ್ನು ತೀರ ಸಣ್ಣ ವಯಸ್ಸಿನಲ್ಲಿಯೇ ಕೈಬಿಟ್ಟು ತಾವು ತೀರಿಕೊಳ್ಳುವರು. ತಂದೆಯಾದ ರಾಮರಾಯನು ಎರಡನೆಯ ಲಗ್ನ ಮಾಡಿಕೊಂಡು ಸೀತಮ್ಮನೊಡನೆ ಸಂಸಾರ ನಡೆಸುತ್ತಾನೆ. ಆತನ ಅತ್ತೆ ಲಕ್ಷ್ಮಮ್ಮನವರು ಮನೆಯಲ್ಲಿಯೇ ಇದ್ದು ಯಜಮಾನಿಕೆ ವಹಿಸಿರುತ್ತಾರೆ ಈಕೆ ಮಡಿಹೆಂಗಸು ಪಾಪ ಶಕೇತಿಯಾದ ಸುಂದರಮ್ಮನನ್ನ ಪ್ರತಿದಿನವೂ ಪೀಡಿಸುವರು ಅಷ್ಟೇ ಅಲ್ಲ; ಸುಂದರಮ್ಮನು ಬೇಗ ಮಡಿಯಾದರೆ ಎಲ್ಲರಿಗೂ ಅನುಕೂಲವಾಗುವುದೆಂದು ತಮ್ಮ ಅಳಿಯನಿಗೆ ಬೋಧೆ ಮಾಡುವರು ಸುಂದರಮ್ಮನ ಕಣ್ಣನಾದ 'ಕಂರಿ'ಯು (ಶ್ರೀಕಂರಯ್ಯ) ಬೆಂಗಳೂರಿನಲ್ಲಿ ಬಿ ಎ ವರೀಕ್ಷೆಗೆ ಓದುತ್ತಿರುತ್ತಾನೆ.

ನೆರಮನೆ ಕಾವೇರಮ್ಮನವರ ಮನೆಯಲ್ಲಿ ಸಂಕ್ರಾಂತಿ ಹಬ್ಬದ ದಿನ ಮಕ್ಕಳಿಗೆ ಆರತಿ ಅಕ್ಷತೆ ಮುತ್ತೈದೆಯರೆಲ್ಲಾ ಬರುವರು. ಲಕ್ಷ್ಮಮ್ಮನವರೂ ಬರುತ್ತಾರೆ. ಸುಂದರಮ್ಮನು ಇತರ ಮುತ್ತೈದೆಯರೊಡನೆ ಕೂಡ ಹೋಗಲು ಲಕ್ಷ್ಮಮ್ಮನವರು ಆಕೆಯನ್ನು ಮನಸ್ಸಿ ಬೈದು ಮುತ್ತೈದೆಯವರೊಡನೆ ಆಕೆಯು ಕೂಡಲು ಅರ್ಹಳಲ್ಲವೆಂದು ಬೇರೆ ಕಡೆಗೆ ಕೂಡುವಂತೆ ಹೇಳುತ್ತಾರೆ ಆರತಿ ಅಕ್ಷತೆ ಮುಗಿದ ಮೇಲೆ ಕಾವೇರಮ್ಮನ ಯಜಮಾನರಾದ ಶಾಮಣ್ಣನವರೂ ಸುಂದರಿಯ ಸ್ಥಿತಿಯ ವಿಷಯವಾಗಿ ಬಹಳ ಕನಿಕರಪಟ್ಟು ಗೋಳಾಡುವುದಲ್ಲದೆ ಲಕ್ಷ್ಮಮ್ಮನ ವರ್ತನೆಯ ಬಗ್ಗೆ ನೊಂದುಕೊಳ್ಳುತ್ತಾರೆ

ಇವ್ವರಲ್ಲೇ ಊರಿಗೆ ಸ್ವಾಮಿಗಳು ಬರುತ್ತಾರೆಂದೂ ಅವರು ಬರುವವೇಳೆಗೆ ಸುಂದರಮ್ಮನ ಕೇಶವಿಚ್ಛೇದನ ವಾಗಬೇಕೆಂದೂ ಪುರೋಹಿತರೆ ತೀರ್ಮಾನವಾಗುತ್ತದೆ. ತಂದೆಯಾದ ರಾಮರಾಯನು ಸಂಪ್ರದಾಯಗಳನ್ನು

ಮಿರ್ಲಾರಾದೆ, ಮಗಳು ಎರಡು ಮೂರು ವರ್ಷಗಳು ತಡೆಯಬೇಕೆಂದು ಎಷ್ಟು ಅಂಗಲಾಚಿದರೂ ಕೇಳದೆ, ತನ್ನ ಪುರೋಹಿತ ನೀಲಕಂಠಭಟ್ಟನ ಮಾತನ್ನೇ ಅಂಗೀಕರಿಸುತ್ತಾನೆ. ಏಷ್ಟರಲ್ಲಿ ತನ್ನ ಅಣ್ಣನಾದ ಕಂರಿಯು ಬೆಂಗಳೂರಿಂದ ಅಕಸ್ಮಾತ್ತಾಗಿ ಬಂದು ಆಕೆಯನ್ನು ತನ್ನ ಜೊತೆಯಲ್ಲೀ ಕರೆದುಕೊಂಡು ಹೋಗುತ್ತಾನೆ. ತಂದೆಯು ವಿದ್ಯಾಭ್ಯಾಸಕ್ಕೆ ಮಾಡುತ್ತಿದ್ದ ಸಹಾಯವು ನಿಂತುಹೋಗುತ್ತದೆ ಸುಂದರಿಯು ತನ್ನ ಬಾಲ್ಯದಲ್ಲಿ ಕಲಿತಿದ್ದ ಸಂಗೀತದ ಸಹಾಯದಿಂದ ಕೆಲವು ಜನ ಹೆಣ್ಣು ಮಕ್ಕಳಿಗೆ ಪಾಠ ಹೇಳುತ್ತಾ ತನ್ನ ಮತ್ತು ಅಣ್ಣನ ಸಂಸಾರವನ್ನು ಸಾಗಿಸಲು ಸಹಾಯಕಳಾಗುತ್ತಾಳೆ ಇತ್ತರಲ್ಲಿ ಕಂರಿಯು ಹೆಂಡತಿಯೂ ಮನೆಗೆ ಬರುತ್ತಾಳೆ. ಅತ್ತಿಗೆ ನಾದಿನಿಯರು ಅನ್ಯೋನ್ಯವಾಗಿಯೇ ಇರುತ್ತಾರೆ.

ಹೀಗಿರುವಲ್ಲಿ ತನಗೆ ಮೊದಲಿಂದಲೂ ಪರಿಚಿತನಾದ 'ಲೈಫ್ ಇನ್ಷೂರೆನ್ಸ್ ಏಜಂಟು' ಶ್ರೀನಿವಾಸಯ್ಯನು ಈಕೆಯನ್ನು ಮೋಹಿಸಿ ಕಾರಣಾಂತರದಿಂದ ತನ್ನ ಮನೆಗೆ ಬರಮಾಡಿಕೊಂಡು ಆಕೆಯ ಶೀಲವನ್ನು ಅಪಹರಿಸಲು ಪ್ರಯತ್ನಪಡುತ್ತಾನೆ. ಆದರೆ ಆಸ್ಪರಲ್ಲಿ ಆತನ ಹೆಂಡತಿಯಾದ ರಾಜಮ್ಮನವರು ಹರಿಕಥೆಗೆ ಹೋಗುತ್ತೇನೆಂದು ಹೇಳಿದ್ದವರು ತಮ್ಮ ಯಜಮಾನರ ಗುಟ್ಟನ್ನು ತಿಳಿದಿದ್ದುದರಿಂದ ಇವರ ಸಂಭಾಷಣೆಯು ನಡುವೆ ಬಂದು ಸುಂದರಮ್ಮನ "ಮಾನವನ್ನು ಕಾಪಾಡುತ್ತಾರೆ ಕಂರಿಯು ಮಾವನಾದ ಶೇಷಗಿರಿರಾಯನಿಗೆ ಸುಂದರಮ್ಮನು ಶ್ರೀನಿವಾಸಯ್ಯನ ಮನೆಗೆ ಹೋಗಿದ್ದ ವಿಷಯ ತಿಳಿದು ಅಳಿಯನಾದ ಕಂರಿಗೆ ತಂಗಿಯು ದುರ್ವರ್ತನೆಯವಳೆಂದು ಬೇಧಿಸಿ ಅಣ್ಣ ತಂಗಿಯರು ಬೇರೆಯಾಗುವಂತೆ ಮಾಡುತ್ತಾನೆ.

